ಹೊಸದುರ್ಗ ಪರಿಸರದ ದೇವಾಲಯಗಳು

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ

ಸಂಶೋಧಕ

ಮಹಂತೇಶ ಎಸ್.ಎಸ್

ಮಾರ್ಗದರ್ಶಕರು

ಡಾ.ಸಿ.ಎಸ್ ವಾಸುದೇವನ್

ಪ್ರವಾಚಕರು

ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೮

ಹೊಸದುರ್ಗ ಪರಿಸರದ ದೇವಾಲಯಗಳು

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ

ಸಂಶೋಧಕ

ಮಹಂತೇಶ ಎನ್.ಎಸ್

ಮಾರ್ಗದರ್ಶಕರು

ಡಾ.ಸಿ.ಎಸ್ ವಾಸುದೇವನ್

ಪ್ರವಾಚಕರು

ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೮

ಪ್ರಮಾಣ ಪತ್ರ

"ಹೊಸದುರ್ಗ ಪರಿಸರದ ದೇವಾಲಯಗಳು" ಎಂಬ ಶೀರ್ಷಿಕೆಯ ಈ ಸಂಶೋಧನಾ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರವಾಚಕರಾದ ಡಾ. ಸಿ. ಎಸ್ ವಾಸುದೇವನ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಪ್ರಸ್ತುತ ಈ ಸಂಶೋಧನಾ ನಿಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ನಿಬಂಧದ ಯಾವುದೇ ವಿಷಯವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶಕ್ಕಾಗಿ ಅಥವಾ ಪದವಿಗಾಗಿ ಬಳಸಿಕೊಂಡಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 14-10-2008

Mahantesha .N.S.

(ಮಹಂತೇಶ ಎನ್. ಎಸ್)

ಸಂಶೋಧಕ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೃಢೀಕರಣ ಪತ್ರ

ಮಹಂತೇಶ ಎನ್.ಎಸ್ ಅವರು "ಹೊಸದುರ್ಗ ಪರಿಸರದ ದೇವಾಲಯಗಳು" ಎಂಬ ಶೀರ್ಷಿಕೆಯ ಈ ಸಂಶೋಧನಾ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ಸಂಶೋಧನಾ ನಿಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ ನಿಬಂಧದ ಯಾವುದೇ ವಿಷಯವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶಕ್ಕಾಗಿ ಅಥವಾ ಪದವಿಗಾಗಿ ಬಳಸಿಕೊಂಡಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 14.10.2008

C. S. Vasudevan

(ಡಾ.ಸಿ.ಎಸ್ ವಾಸುದೇವನ್)

ಮಾರ್ಗದರ್ಶಕರು ಮತ್ತು ಪ್ರವಾಚಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪರಿವಿಡಿ

ಅಧ್ಯಾಯ ೧ : ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ ೧

ಪ್ರಸ್ತಾವನೆ

ವಿಶಾಲವಾದ ಅರ್ಥದಲ್ಲಿ ಚರಿತ್ರೆಯು ಅಖಂಡವಾದುದು. ಅದು ಇಡೀ ಮಾನವ ಜನಾಂಗದ ಕಥೆ. ಚರಿತ್ರೆಯೆನ್ನುವುದು ಗತಕಾಲದ ಮಾನವ ಸಂಸ್ಕೃತಿಯ ವಿಭಿನ್ನ ಹಂತಗಳನ್ನು ವ್ಯವಸ್ಥಿತವಾಗಿ ಕಟ್ಟಿಕೊಡುವ ಬಹುಮುಖ್ಯ ಶಾಸ್ತ್ರ. ಮಾನವ ಜ್ಞಾನದ ಒಂದು ಅವಿಭಾಜ್ಯ ಅಂಗವಾದ ಚರಿತ್ರೆ ಅಥವಾ ಇತಿಹಾಸ ಎನ್ನುವುದು ಆಕರ್ಷಕವಾದ, ಕತೂಹಲಕಾರಿಯಾದ, ಅರ್ಥಪೂರ್ಣವಾದ ಹಾಗೂ ಬೋಧನೀಯವಾದ ಶಿಸ್ತಾಗಿದೆ. ಇತಿಹಾಸ ಕೇವಲ ಪಾಂಡಿತ್ಯಕ್ಕೆ ಸೀಮಿತವಾದ ವಿಷಯಗಳಲ್ಲಿ ಒಂದಾಗಿರದೆ ನಮ್ಮ ಚಿಂತನಾಮಾರ್ಗಗಳಲ್ಲಿ ಹಾಸುಹೊಕ್ಕಾಗಿದೆ.[೧] ಮಾನವನು ಭೂಮಿಯ ಮೇಲೆ ಕಾಣಿಸಿಕೊಂಡ ಬಳಿಕ ಪ್ರಾರಂಭದಲ್ಲಿ ಅಲೆಮಾರಿಯಾಗಿ ಬದುಕು ಸಾಗಿಸುತ್ತಿದ್ದ. ಇವನ ಬುದ್ಧಿ ವಿಕಾಸವಾದಂತೆಲ್ಲಾ ಒಂದೆಡೆ ನೆಲೆ ನಿಂತು ನಾಗರೀಕ ಜೀವನ ಪ್ರಾರಂಭಿಸಿದ. ಅಲೆಮಾರಿಯಾಗಿದ್ದಾಗ ಅಲ್ಲಲ್ಲಿ ಸಿಗುತ್ತಿದ್ದ ಹಸಿಮಾಂಸದ ಆಹಾರ, ಗೆಡ್ಡೆಗೆಣಸು ತಿಂದು ಜೀವನ ಸಾಗಿಸುತ್ತಿದ್ದ. ಒಂದೆಡೆ ನೆಲೆನಿಂತು ಬದುಕನ್ನು ಪ್ರಾರಂಭಿಸಿದಾಗ ತನಗೆ ಬೇಕಾದ ಆಹಾರ ಪದಾರ್ಥಗಳನ್ನು ತಾನೇ ಬೆಳೆದು ತಿನ್ನಲು ಪ್ರಾರಂಭಿಸಿದ. ಹೀಗೆ ಮಾನವ ವಿಕಾಸ ಹೊಂದಿದಂತೆಲ್ಲಾ ತನ್ನ ಪರಿಸರಕ್ಕೆ ಹಲವು ಸಾಂಸ್ಕೃತಿಕ ಕೊಡುಗೆಗಳನ್ನು ನೀಡಿದನು. ಮಾನವ ಬದುಕಿನ ಅವಶೇಷಗಳು, ಸ್ಮಾರಕಗಳು ಹಾಗೂ ಉಪಯೋಗಿಸಿದ ಹಲವು ವಸ್ತು ವಿಶೇಷತೆಗಳು ಅವನ ಕಾಲದ ಚರಿತ್ರೆ ಹಾಗೂ ಸಂಸ್ಕೃತಿಯನ್ನು ಕಟ್ಟುವ ಬಹುಮುಖ್ಯ ಆಕರ ಸಂಪತ್ತಾಗಿರುತ್ತವೆ.

ಚರಿತ್ರೆಯ ರಚನೆಗೆ ಆಕರಗಳು ಬಹಳ ಮುಖ್ಯ. ಆಕರಗಳಿಲ್ಲದೆ ಚರಿತ್ರೆ ಇಲ್ಲ. ಚರಿತ್ರೆಯ ರಚನೆಗೆ ಸಹಯಕವಾಗಬಲ್ಲ ಆಕರ ಸಂಪತ್ತನ್ನು ಪ್ರಧಾನವಾಗಿ ಎರಡು ಭಾಗಗಳಾಗಿ ನೋಡಬಹುದು.

೧. ಸಾಹಿತ್ಯಿಕ ಆಕರಗಳು ೨. ಪುರಾತತ್ವ ಆಕರಗಳು. ಸಾಹಿತ್ಯಿಕ ಆಕರಗಳಲ್ಲಿ ದೇಶಿಯ ಬರವಣಿಗೆಗಳು : ಅದರಲ್ಲಿ ಐತಿಹಾಸಿಕ ಸಾಹಿತ್ಯ ಕೃತಿಗಳು, ಹಸ್ತಪ್ರತಿಗಳು, ದಾಖಲೆಗಳು, ಕಡತಗಳು, ತಾಳೆಗರಿಗಳು ವಿದೇಶಿಯ ಬರವಣಿಗೆಗಳಲ್ಲಿ ಪ್ರವಾಸ ಕಥನಗಳು, ಪ್ರವಾಸಿಗರ ಬರವಣಿಗೆಗಳು ಮುಂತಾದವುಗಳು ಒಳಗೊಳ್ಳುತ್ತವೆ. ಅದೇ ರೀತಿ ಪುರಾತತ್ವೀಯ ಆಕರಗಳಲ್ಲಿ

ಶಾಸನಗಳು, ನಾಣ್ಯಗಳು, ಸ್ಮಾರಕಗಳು, ಉತ್ಖನನದ ಅವಶೇಷಗಳು ಮುಂತಾದವುಗಳನ್ನು ಕಾಣಬಹುದು. ಇವುಗಳೊಂದಿಗೆ ಮೌಖಿಕ ಚರಿತ್ರೆ, ಜನಪದ ಸಾಹಿತ್ಯ, ಲಾವಣಿಗಳು, ಪುರಾಣ-ಐತಿಹ್ಯಗಳು ಸಹ ಇತಿಹಾಸ ರಚನೆಯ ಆಕರಗಳು. ಆದ್ದರಿಂದ ಮೇಲೆ ತಿಳಿಸಿದ ಈ ಎಲ್ಲಾ ಅಂಶಗಳು ಗತಕಾಲದ ಮಾನವನ ಇತಿಹಾಸ ಮತ್ತು ಸಂಸ್ಕೃತಿಯನ್ನು ವಿಭಿನ್ನ ನೆಲೆಯಲ್ಲಿ ವೈಜ್ಞಾನಿಕವಾಗಿ ಕಟ್ಟುವಲ್ಲಿ ಸಹಾಯಕವಾಗುತ್ತದೆ. ಇದರಿಂದ ಗತಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಕಲೆ, ವಾಸ್ತುಶಿಲ್ಪ ಹಾಗೂ ಇತರೆ ಹಲವು ಸಾಂಸ್ಕೃತಿಕ ಸಂಗತಿಗಳನ್ನು ತಿಳಿಯಬಹುದು.

ಚರಿತ್ರೆಯಲ್ಲಿ ಇದುವರೆಗೂ ಕೇವಲ ಪ್ರಸಿದ್ಧ ಸಾಮ್ರಾಜ್ಯಗಳ, ರಾಜವಂಶಗಳ ಮತ್ತು ರಾಷ್ಟ್ರೀಯ ಚರಿತ್ರೆಯನ್ನೇ ಹೆಚ್ಚಾಗಿ ಅಧ್ಯಯನ ಮಾಡುತ್ತಾ ಬಂದಿದ್ದೇವೆ. ಇದಕ್ಕೆ ಹಲವಾರು ಕಾರಣಗಳಿರಬಹುದು. ಆದರೆ ಕೆಲವು ದಶಕಗಳಿಂದೀಚೆಗೆ ಚರಿತ್ರೆಯ ಅಧ್ಯಯನ ಅಥವಾ ಸಂಶೋಧನೆಯ ದಿಕ್ಕು ಬದಲಾಗಿದೆ. ಇಂದು ಪ್ರಾದೇಶಿಕ ಅಥವಾ ಸ್ಥಳೀಯ ಚರಿತ್ರೆಗೆ ಹೆಚ್ಚು ಮಹತ್ವ ನೀಡಲಾಗುತ್ತಿದೆ. ಸ್ಥಳೀಯ ಚರಿತ್ರೆಯ ಬಗ್ಗೆ ಸೂಕ್ಷ್ಮ ಅಧ್ಯಯನದ ಮೂಲಕ ಸಮಗ್ರ ಅಧ್ಯಯನ ಮಾಡುವಲ್ಲಿ ಹೆಚ್ಚಿನ ಆಸಕ್ತಿ ತೋರಲಾಗುತ್ತಿದೆ. "ಹೊಸ ಹೊಸ ಆಕರಗಳು, ವಿನೂತನ ವಿಧಾನಗಳು, ದೃಷ್ಟಿಕೋನಗಳು ಚರಿತ್ರಕಾರನಿಗೆ ಲಭ್ಯವಾಗಿ ಇತಿಹಾಸದ ಬರವಣಿಗೆ ಅನೇಕ ರೀತಿಯಿಂದ ಪ್ರಗತಿಯನ್ನು ಸಾಧಿಸಿದೆ. ಹಿರಿಯ ಇತಿಹಾಸಕಾರರೂ ಯುವ ಸಂಶೋಧಕರೂ ಹಲವಾರು ಗ್ರಂಥಗಳನ್ನು ಲೇಖನಗಳನ್ನು ಬರೆದು ಪ್ರಾದೇಶಿಕ ಇತಿಹಾಸಕ್ಕೆ ಹೊಸ ಮೆರಗನ್ನು ನೀಡಿದ್ದಾರೆ"[೨]. ಸ್ಥಳೀಯವಾದುದ್ದನ್ನು ಅಥವಾ ಸ್ಥಳೀಯತೆಯನ್ನು 'ದೇಸಿಕರಣ'ವೆಂದು ವ್ಯಾಖ್ಯಾನಿಸುವ ಪ್ರಯತ್ನಗಳು ಕಂಡು ಬರುತ್ತವೆ. ನಮ್ಮನ್ನು ಒಳಗೊಂಡು ನಮ್ಮ ಸುತ್ತಲಿನ ಹಾಗೂ ಇನ್ನೂ ಉಸಿರಾಡುತ್ತಿರುವ ಬದುಕಿನ ವಿವರಗಳುಳ್ಳ ಸ್ಥಳೀಯ ಚರಿತ್ರೆ ವ್ಯಾಪ್ತಿಗೆ ತಂದುಕೊಳ್ಳುವ ಪ್ರಕ್ರಿಯೆಯಲ್ಲಿ ಈ ಬಗೆಯ ಅಧ್ಯಯನದ ಅನನ್ಯತೆಯನ್ನು ಹಿಂದಿನ ಕೆಲವು ದಶಕಗಳಿಂದಲೂ ವಿದ್ವಾಂಸರು ಗಂಭೀರವಾಗಿ ವಿಮರ್ಶಿಸುವ ಪ್ರಯತ್ನ ನಡೆಸಿರುವುದುಂಟು. ಸ್ಥಳೀಯ ಇತಿಹಾಸವು ಚರಿತ್ರೆಯ ಅಧ್ಯಯನದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇತಿಹಾಸ ಶಾಸ್ತ್ರದ ಬೆಳವಣಿಗೆಯ ಪರಿಣಾಮವಾಗಿ ಇತಿಹಾಸಕಾರರಿಂದ ಕಡೆಗಣಿಸಲ್ಪಟ್ಟಿದ್ದ ಸ್ಥಳೀಯ ಇತಿಹಾಸಕ್ಕೆ ಹೆಚ್ಚಿನ ಮಹತ್ವ ದೊರಕಿದೆ.[೩] ಸ್ಥಳೀಯ ಚರಿತ್ರೆ ತನ್ನದೇ ಭೌಗೋಳಿಕ ಮಿತಿಗೊಳಪಟ್ಟರೂ ಸ್ಥಳೀಯ ಸಮುದಾಯಗಳ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಬೌದ್ಧಿಕ, ಇತ್ಯಾದಿ ಸಂಗತಿಗಳ ವಿವರಗಳನ್ನು ಸಂಗ್ರಹಿಸಿಕೊಡುವ ವಿಪುಲ ಅವಕಾಶ ಅದಕ್ಕಿದೆ.[೪] ಒಂದು ಪ್ರದೇಶದ ವಿಶಿಷ್ಟ ಸಾಂಸ್ಕೃತಿಕ ಚರಿತ್ರೆಯನ್ನರಿಯುವ ಪ್ರಯತ್ನವಾಗಿ ಒಂದು ಚೌಕಟ್ಟನ್ನು ಸೃಷ್ಟಿಸಿಕೊಡುತ್ತದೆ ಸ್ಥಳೀಯ ಚರಿತ್ರೆ. ಚರಿತ್ರಾಕಾರನಿಗೆ ಮುಖ್ಯವೆನಿಸುವ

ದಾಖಲೆಗಳು, ವಾಸ್ತು-ಶಿಲ್ಪ, ಉಡುಗೆ-ತೊಡುಗೆ, ಸ್ಥಳೀಯ ಉತ್ಪಾದನಾ ವಸ್ತುಗಳು, ಪರಿಸರ ಇವೆಲ್ಲವೂ ಸ್ಥಳೀಯ ಚರಿತ್ರೆಗೆ ಸಮೀಪವಾದವು. ಎಲ್ಲಾ ವಿಧದ ಚರಿತ್ರೆಯ ಮಾದರಿಗಳನ್ನು, ಅಧ್ಯಯನ ವಿಧಾನಗಳನ್ನು, ಮೌಖಿಕ, ಸಾಂಖ್ಯಿಕ ಮತ್ತು ಸಾಹಿತ್ಯಿಕ ಆಕರಗಳನ್ನು ಒಳಗೊಳ್ಳುತ್ತದೆ ಇದು.[೫]

ಸ್ಥಳೀಯ ಚರಿತ್ರೆಯ ರಚನೆಯಲ್ಲಿ ಸಾಹಿತ್ಯಿಕ ಆಕರಗಳು ಸಹಕಾರಿಯಾದಂತೆ ಸ್ಮಾರಕಗಳು ಸಹ ಬಹುಮುಖ್ಯ ಪಾತ್ರವಹಿಸುತ್ತವೆ. ಸ್ಮಾರಕಗಳು ಗತಕಾಲದ ಮಾನವ ಬದುಕಿನ ವಿಭಿನ್ನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಸ್ಮಾರಕಗಳನ್ನು ಪ್ರಭುತ್ವದ ಸ್ಮಾರಕಗಳು ಹಾಗೂ ಪ್ರಜೆಗಳ ಸ್ಮಾರಕಗಳು ಎಂಬುದಾಗಿ ವಿಂಗಡಿಸಬಹುದು.[೬] ಪ್ರಭುತ್ವದ ಸ್ಮಾರಕಗಳಲ್ಲಿ ಅರಮನೆಗಳು, ದೇವಾಲಯಗಳು, ಕೋಟೆ ಕೊತ್ತಲಗಳು, ಕೆರೆ-ಕಟ್ಟೆಗಳು ಮುಂತಾದವುಗಳು ಬರುತ್ತವೆ. ಅದೇ ರೀತಿ ಪ್ರಜೆಗಳ ಸ್ಮಾರಕಗಳಲ್ಲಿ ಅಂದಿನ ಜನಸಾಮಾನ್ಯರ ಮನೆಗಳು, ಗ್ರಾಮದೇವತೆಗಳ ಗುಡಿಗಳು, ಮರಣ ಸ್ಮಾರಕಗಳು ಮುಂತಾದವುಗಳನ್ನು ಕಾಣಬಹುದು. ರಾಜಪ್ರಭುತ್ವದ ಸಂದರ್ಭದಲ್ಲಿ ನಿರ್ಮಾಣಗೊಂಡ ಸ್ಮಾರಕಗಳು ಚರಿತ್ರೆಯ ಅಧ್ಯಯನಕ್ಕೆ ಬಹುಮುಖ್ಯ ಆಕರಗಳು ಎನ್ನುವುದರಲ್ಲಿ ಎರಡು ಮಾತಿಲ್ಲ. ಕರ್ನಾಟಕವನ್ನಾಳಿದ ವಿವಿಧ ಅರಸುಮನೆತನಗಳ ಚರಿತ್ರೆಯನ್ನೊಮ್ಮೆ ಅವಲೋಕಿಸಿದಾಗ ಪ್ರಭುತ್ವ ಸ್ಮಾರಕಗಳಿರುವ ನೂರಾರು ಪ್ರದೇಶಗಳು ಕಂಡು ಬರುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಬನವಾಸಿ, ತಲಕಾಡು, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಎಲ್ಲೋರ, ಎಲಿಫೆಂಟಾ, ಜೋಗೇಶ್ವರಿ , ಧಾರೇಶ್ವರ, ಸಂಡೂರು, ಸೂಡಿ, ಲಕ್ಕುಂಡಿ, ಬೇಲೂರು, ಹಳೇಬೀಡು, ಸೋಮನಾಥಪುರ, ಹಂಪಿ, ಮೈಸೂರು, ಚಿತ್ರದುರ್ಗ ಮುಂತಾದವು. ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು ಮುಂತಾದ ಪ್ರಮುಖ ಅರಸುಮನತನಗಳಷ್ಟೇ ಅಲ್ಲದೆ ಅವರ ಸಾಮಂತರು, ಅಧಿಕಾರಿವರ್ಗದವರು ಸಹ ಬೃಹತ್ ದೇವಾಲಯಗಳು, ಕೋಟೆಗಳು ಹಾಗೂ ಇನ್ನಿತರ ಸ್ಮಾರಕಗಳನ್ನು ನಿರ್ಮಿಸಿದರು. ಈ ಎಲ್ಲಾ ಸ್ಮಾರಕಗಳು ಪ್ರಭುತ್ವದ ಸ್ಮಾರಕಗಳಾಗಿ ಉಳಿದುಕೊಂಡು ಬಂದು ಅರಸಕೇಂದ್ರಿತ ಚರಿತ್ರೆ ನಿರ್ಮಾಣಕ್ಕೆ ಪೂರಕವಾದ ಸಾಮಗ್ರಿಗಳನ್ನು ಒದಗಿಸಿಕೊಟ್ಟವು. ಇಂಥ ಸ್ಮಾರಕಗಳಲ್ಲಿ ದೇವಾಲಯಗಳ ಸಂಖ್ಯೆಯೇ ಹೆಚ್ಚಿನೆದು.[೭] ಕಲೆ ಮತ್ತು ವಾಸ್ತುಶಿಲ್ಪದ ಹಿನ್ನಲೆಯಿಂದ ಕರ್ನಾಟಕದ ಚರಿತ್ರೆಯನ್ನು ನೋಡಿದಾಗ ಅಸಂಖ್ಯಾತ ದೇವಾಲಯಗಳು ಕಂಡು ಬರುತ್ತವೆ. ಶೈವ, ಶೈವದಲ್ಲೂ ಅನೇಕ ಪಂಗಡಗಳಾದ ಪಾಶುಪತ ಮತ್ತು ಕಾಳಮುಖ, ವೈಷ್ಣವ ದೇವಾಲಯಗಳು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಾಣಗೊಂಡವು. ಬೌದ್ಧ ಮತ್ತು ಜೈನಧರ್ಮಗಳು ಈ ನಿರ್ಮಾಣ ಕಾರ್ಯದಲ್ಲಿ ಹಿಂದೆ ಬಿದ್ದಿರಲಿಲ್ಲ. ಅಂದು ವಾಸ್ತುಶಿಲ್ಪವೆಂದರೆ ಅದು ದೇವಾಲಯಗಳ ನಿರ್ಮಾಣ ಎಂಬ ಅರ್ಥವನ್ನು ಪಡೆದುಕೊಂಡಿತು. ಹೀಗೆ ದೇವಾಲಯಗಳ

ಅಧ್ಯಯನದಿಂದ ಆಯಾ ಪ್ರದೇಶದ ಸ್ಥಳೀಯ ಚರಿತ್ರೆಯಲ್ಲಿ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ, ಮೂರ್ತಿಶಿಲ್ಪ ಹಾಗೂ ಶಾಸನಗಳಲ್ಲಿ ದೇವಾಲಯಗಳಿಗೆ ಸಂಬಂಧಿಸಿದ ವಿಚಾರಗಳನ್ನು ಗುರುತಿಸಿ ಅವುಗಳನ್ನು ವಿಶ್ಲೇಷಿಸಿದಾಗ ಆ ಪರಿಸರದ ಚರಿತ್ರೆ ಹಾಗೂ ಸಂಸ್ಕೃತಿಯನ್ನು ಕಟ್ಟಿದಂತಾಗುವುದು. ಒಟ್ಟಾರೆಯಾಗಿ ಸ್ಥಳೀಯ ಚರಿತ್ರೆಯ ರಚನೆಯಲ್ಲಿ ಅಲ್ಲಿನ ಸ್ಮಾರಕಗಳು ಅದರಲ್ಲೂ ಅಸಂಖ್ಯಾತ ದೇವಾಲಯಗಳು ಬಹು ಮುಖ್ಯವಾಗಿವೆ ಎಂದು ಹೇಳಬಹುದು.

ಪ್ರಸ್ತುತ 'ಹೊಸದುರ್ಗ ಪರಿಸರದ ದೇವಾಲಯಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ಅಧ್ಯಯನ ಕೈಗೊಂಡು ಹೊಸದುರ್ಗ ಪರಿಸರದ ಪ್ರಾಚೀನ ದೇವಾಲಯಗಳನ್ನು ಕುರಿತು ಶಾಸ್ತ್ರೀಯವಾಗಿ ಮತ್ತು ವ್ಯವಸ್ಥಿತವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಕರ್ನಾಟಕದ ಚರಿತ್ರೆ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿರುವ ಚಿತ್ರದುರ್ಗ ಜಿಲ್ಲೆ ಸ್ಥಳೀಯ ಚರಿತ್ರೆಯ ದೃಷ್ಟಿಯಿಂದ ಬಹುಮುಖ್ಯವಾದುದು. ಕಾರಣ ಇಲ್ಲಿನ ಎಲ್ಲಾ ಕ್ಷೇತ್ರಗಳಲ್ಲೂ ಎಲ್ಲಾ ದೃಷ್ಟಿಕೋನಗಳಿಂದಲೂ ಹಿರಿಯ ಹಾಗೂ ಯುವ ಸಂಶೋಧಕರಿಂದ ಸಂಶೋಧನೆಗಳು ನಡೆದು ಹೊಸ ಸಂಗತಿಗಳು ಬೆಳಕಿಗೆ ಬರುತ್ತಿವೆ. ಜಿಲ್ಲೆಯಲ್ಲಿ ಕಂಡು ಬರುವ ಅಸಂಖ್ಯಾತ ದೇವಾಲಯಗಳು ಚರಿತ್ರೆಯ ರಚನೆಗೆ ಬಹುಮುಖ್ಯ ಆಕಾರ ಸಂಪತ್ತಾಗಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು ೬ ತಾಲ್ಲೂಕುಗಳಿದ್ದು ಅವುಗಳಲ್ಲಿ ಹೊಸದುರ್ಗ ತಾಲ್ಲೂಕು ಒಂದಾಗಿದೆ. ಜಿಲ್ಲೆಯ ಪ್ರತಿಯೊಂದು ತಾಲ್ಲೂಕು ಇತಿಹಾಸದ ಕಣಜವೆಂದೇ ಹೇಳಬೇಕು. ಚಿತ್ರದುರ್ಗಕ್ಕಿಂತಲೂ ಹೊಸದುರ್ಗ ಪ್ರಾಂತ್ಯದ ಭೌಗೋಳಿಕ ಲಕ್ಷಣ ವಿಶಿಷ್ಟವಾದುದು. ಇತ್ತ ಬಯಲು ಸೀಮೆಯು ಅಲ್ಲದ ಅತ್ತ ಮಲೆನಾಡು ಅಲ್ಲದ ಹೊಸದುರ್ಗ ತಾಲ್ಲೂಕು ಅರೆಮಲೆನಾಡು ಭಾಗವಾಗಿದ್ದು ಜನಜೀವನಕ್ಕೆ ಅತ್ಯಂತ ಉಪಯುಕ್ತವಾಗಿದೆ. ಹೊಸದುರ್ಗ ಈ ತಾಲ್ಲೂಕಿನ ಆಡಳಿತ ಕೇಂದ್ರ. ಇದು ಚಿತ್ರದುರ್ಗಕ್ಕೆ ನೈಋತ್ಯದಲ್ಲಿ ೬೪ ಕಿ.ಮೀ. ದೂರದಲ್ಲಿದೆ. ಮೌರ್ಯರ ಕಾಲದಿಂದ ಬ್ರಿಟೀಷರ ಕಾಲದವರೆಗೂ ಅಭೂತಪೂರ್ವ ಇತಿಹಾಸವನ್ನು ಹೊಂದಿರುವ ಚಿತ್ರದುರ್ಗ ಜಿಲ್ಲೆಯಲ್ಲೇ ಹೊಸದುರ್ಗ ಪರಿಸರವಿದ್ದು ಈ ಭಾಗದಲ್ಲಿ ನೊಳಂಬರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಬೂದಿಹಾಳು–ಮತ್ತೋಡು–ಬೇಲೂರು–ಸಂತೇಬೆನ್ನೂರು – ಚಿತ್ರದುರ್ಗ ಪಾಳೆಯಗಾರರು, ಮೈಸೂರು ಒಡೆಯರು, ಬ್ರಿಟೀಷರು ಹೀಗೆ ವಿವಿಧ ರಾಜಸಂತತಿಗಳು ಆಳ್ವಿಕೆ ನಡೆಸಿರುವ ಕುರುಹುಗಳು ಗೋಚರಿಸುತ್ತವೆ. ಪ್ರಾಚೀನ ಕಾಲದ ಹಲವು ಆಡಳಿತ ವಿಭಾಗಗಳು ಈ ತಾಲ್ಲೂಕಿನಲ್ಲಿ ಕಂಡು ಬರುತ್ತವೆ. ಕ್ರಿ.ಶ. ೮ನೇ ಶತಮಾನದಿಂದ ಕರ್ನಾಟಕದಲ್ಲಿ ಸುಮಾರು ೩ ಶತಮಾನಗಳವರೆಗೆ ಆಳಿದ ನೊಳಂಬ–ಪಲ್ಲವರು ತಮ್ಮ ಆಡಳಿತದ ಅನುಕೂಲಕ್ಕಾಗಿ ಹಲವು ಆಡಳಿತ ವಿಭಾಗಗಳನ್ನು ಹೊಂದಿದ್ದರು.

ಅವುಗಳಲ್ಲಿ 'ನಿರ್ಗುಂದನಾಡು' ಎಂಬ ಪ್ರಾಚೀನ ಆಡಳಿತ ವಿಭಾಗವು ಹೊಸದುರ್ಗ ತಾಲ್ಲೂಕಿನ ನೀರಗುಂದ ಹಾಗೂ ಸುತ್ತಮುತ್ತಲಿನ ಹಲವು ಗ್ರಾಮಗಳನ್ನು ಒಳಗೊಂಡಿತ್ತು.[೮] ಅದೇ ರೀತಿ ಬಾಗೂರು ಎಂಬುದು ಪ್ರಾಚೀನ ಕಾಲದಲ್ಲಿ ಮತ್ತೊಂದು ಆಡಳಿತ ವಿಭಾಗವಾಗಿತ್ತು. ಶಾಸನಗಳಲ್ಲಿ ಭಾಗ್ಯಪುರ, ಬಾಗೂರು ಎಂಬ ಉಲ್ಲೇಖಗಳಿವೆ. ಹೊಸದುರ್ಗ ಹಾಗೂ ಹೊಳಲ್ಕೆರೆ ತಾಲ್ಲೂಕಿನಲ್ಲಿ ದೊರೆತಿರುವ ಹಲವು ಶಾಸನಗಳಲ್ಲಿ ಈ ಗ್ರಾಮದ ಪ್ರಸ್ತಾಪ ಬರುತ್ತದೆ. ಇದು ವಿಜಯನಗರ ಕಾಲದ ಆಡಳಿತ ವಿಭಾಗವಾಗಿತ್ತು. ಅದೇ ರೀತಿ ಮತ್ತೋಡು ಎಂಬ ಇಂದಿನ ಹೋಬಳಿ ಕೇಂದ್ರ ಹಾಗೂ ಸುತ್ತಲಿನ ಹಲವು ಪ್ರದೇಶವು ವಿಜಯನಗರ ಕಾಲದಲ್ಲಿ 'ಮತ್ತನಡುವಿನ ಸೀಮೆ' ಎಂಬ ಆಡಳಿತ ವಿಭಾಗವಾಗಿತ್ತು ಹೀಗೆ ಪ್ರಾಚೀನ ಕಾಲದಿಂದ ಹಲವು ಆಡಳಿತ ವಿಭಾಗಗಳನ್ನು ಹೊಸದುರ್ಗ ತಾಲ್ಲೂಕು ಹೊಂದಿದೆ. ಅಲ್ಲದೆ ಈ ತಾಲ್ಲೂಕಿನಲ್ಲಿ ಹೊಸದುರ್ಗನಗರ, ಬಾಗೂರು, ನೀರಗುಂದ , ಹೆಗ್ಗೆರೆ, ಶಿವನೇಕಟ್ಟೆ, ಹಾಲುರಾಮೇಶ್ವರ, ಗವಿರಂಗಾಪುರ, ಬೂದಿಹಾಳು, ಮತ್ತೋಡು, ಶೆಟ್ಟಿಹಳ್ಳಿ, ಮಧುರೆ, ಬೆಲಗೂರು, ಬೋಕಿಕೆರೆ, ಸಿದ್ದಪ್ಪನ ಬೆಟ್ಟ, ಭೈರವನ ಬೆಟ್ಟ, ಕಂಗುವಳ್ಳಿ, ಕಬ್ಬಳ, ಕಲ್ಲೇದೇವರಕಟ್ಟೆ ಮುಂತದೆಡೆಗಳಲ್ಲಿ ರಾಷ್ಟ್ರಕೂಟರ ಕಾಲದಿಂದ ಹಿಡಿದು ವಿಜಯನಗರೋತ್ತರ ಕಾಲದವರೆಗಿನ ದೇವಾಲಯಗಳಿವೆ. ಅಲ್ಲದೆ ಇಲ್ಲಿ ಪ್ರಾಚೀನ ಕಾಲದಿಂದ ಜೈನ, ಶಾಕ್ತ, ಶೈವ, ನಾಥ, ವೈಷ್ಣವ, ಶ್ರೀವೈಷ್ಣವ ಮುಂತಾದ ಧಾರ್ಮಿಕ ಪಂಥಗಳ ಕುರುಹುಗಳು ಇಲ್ಲಿನ ದೇವಾಲಯಗಳು ಹಾಗೂ ಹಲವು ಸ್ಮಾರಕಗಳ ಮೂಲಕ ಉಳಿದುಕೊಂಡು ಬಂದಿವೆ.

೧.೧ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧.೧ ಅಧ್ಯಯನದ ಉದ್ದೇಶ

'ಸಂಶೋಧನೆಯ ಉದ್ದೇಶಗಳು ಒಂದು ನಿರ್ದಿಷ್ಟ ಸಂಶೋಧನಾ ಯೋಜನೆಯಡಿಯಲ್ಲಿ ಬರುವ ಒಟ್ಟು ಕೆಲಸಗಳ ಒಂದು ಸ್ಥೂಲ ಚಿತ್ರಣವನ್ನು ಕೊಡುತ್ತದೆ. ಸಮಸ್ಯೆ ರೂಪದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ಉದ್ದೇಶ ಸೂಚಿಸುತ್ತದೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಅಧ್ಯಯನ ಏನನ್ನು ಶೋಧಿಸಲು ಅಥವಾ ಪರೀಕ್ಷಿಸಲು ಅಥವಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಎನ್ನುವುದನ್ನು ಉದ್ದೇಶ ಹೇಳುತ್ತದೆ. ಅಧ್ಯಯನದ ಉದ್ದೇಶಗಳು ಸಂಶೋಧನಾ ಕೆಲಸಕ್ಕೆ ಒಂದು ಮಾರ್ಗಸೂಚಿಯಂತೆ ಕೆಲಸ ಮಾಡುತ್ತದೆ.[೯] ಆದ್ದರಿಂದ ಕೆಲವೊಂದು ನಿರ್ದಿಷ್ಟ ಉದ್ದೇಶಗಳನ್ನಿಟ್ಟುಕೊಂಡು ಅಧ್ಯಯನ ಅಥವಾ ಸಂಶೋಧನೆಯನ್ನು ಕೈಗೊಂಡು ಕಾರ್ಯನಿರ್ವಹಿಸಿದಾಗ ಅದು ಪರಿಪೂರ್ಣವೆನಿಸುತ್ತದೆ. ಪ್ರಸ್ತುತ ಅಧ್ಯಯನದ ಶೀರ್ಷಿಕೆ "ಹೊಸದುರ್ಗ ಪರಿಸರದ ದೇವಾಲಯಗಳು" ಎಂಬುದಾಗಿದ್ದು

ಅಜ್ಞಾತವಾಗಿರುವ ಹೊಸದುರ್ಗ ಪರಿಸರದ ಪ್ರಾಚೀನ ದೇವಾಲಯಗಳನ್ನು ಈ ಅಧ್ಯಯನದ ಮೂಲಕ ಬೆಳಕಿಗೆ ತರುವುದು ಇದರ ಮುಖ್ಯ ಉದ್ದೇಶವಾಗಿದೆ. ಅಲ್ಲದೆ ಇಲ್ಲಿನ ದೇವಾಲಯಗಳ ಕಲೆ, ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವುದು. ಈ ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳನ್ನು ಪರಾಮರ್ಶಿಸಿ ಅದಕ್ಕೆ ಪೂರಕವಾಗಿ ಬಳಸಿಕೊಳ್ಳುವುದು ಒಟ್ಟಾರೆ ಹೊಸದುರ್ಗ ಪರಿಸರದ ಪ್ರಾಚೀನ ದೇವಾಲಯಗಳನ್ನು ಕುರಿತು ಒಂದು ಸಮಗ್ರ ಚಿತ್ರಣವನ್ನು ನೀಡುವುದೇ ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

೧.೧.೨. ಇದುವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ :-

ಹೊಸದುರ್ಗ, ಹೊಸದುರ್ಗ ತಾಲ್ಲೂಕು, ಅಲ್ಲಿನ ಪ್ರಾಚೀನತೆ, ರಾಜಕೀಯ ಚರಿತ್ರೆ, ಐತಿಹಾಸಿಕ ಸ್ಥಳಗಳ ಪರಿಚಯ ಮತ್ತು ಜನಪದ ಸಾಹಿತ್ಯ ಮುಂತಾದ ವಿಷಯಗಳನ್ನು ಕುರಿತಂತೆ ಕೆಲವು ಅಧ್ಯಯನಗಳು ನಡೆದಿರುವುದನ್ನು ಗಮನಿಸಬಹುದು.

ಹೊಸದುರ್ಗ ಪರಿಸರದ ರಾಜಕೀಯ ಚರಿತ್ರೆಗೆ ಸಂಬಂಧಿಸಿದಂತೆ ಹುಲ್ಲೂರು ಶ್ರೀನಿವಾಸ ಜೋಯಿಸರು ಬರೆದ 'ಸಿರುಮನೃಪಾಲ' ಎಂಬುವ ಕೃತಿಯು ಬೂದಿಹಾಳು ಪಾಳೆಯಗಾರರಿಗೆ ಸಂಬಂಧಿಸಿದಂತೆ ಮಾಹಿತಿ ನೀಡುತ್ತದೆ. ಇದರಲ್ಲಿ ಸಿರುಮಣ ನಾಯಕನ ಬಗ್ಗೆ, ಬೂದಿಹಾಳು ಪರಿಸರದ ಬಗ್ಗೆ ಹಲವು ಚಾರಿತ್ರಿಕ ಸಂಗತಿಗಳನ್ನು ಕುರಿತು ತಿಳಿಯಲು ಸಹಾಯಕವಾಗಿದೆ.

ಬಿ.ರಾಜಶೇಖರಪ್ಪನವರು ತಮ್ಮ 'ಇತಿಹಾಸ ಕಥನ' ಎಂಬ ಕೃತಿಯಲ್ಲಿ ಬೂದಿಹಾಳು ಪಾಳೆಯಗಾರರು ಹಾಗೂ ಅವರ ರಾಜಗುರುಗಳ ಬಗ್ಗೆ ಚರ್ಚಿಸಿದ್ದಾರೆ. ಅದೇ ರೀತಿ ಶ್ರೀಮತಿ ಪಿ ಯಶೋಧ ರಾಜಶೇಖರಪ್ಪನವರು ಮತ್ತೋಡು ಪಾಳೆಯಗಾರರನ್ನು ಕುರಿತು ಚರ್ಚಿಸಿದ್ದು ಅದು 'ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಹಾಗೂ 'ದಕ್ಷಿಣ ಕರ್ನಾಟಕದ ಅರಸು ಮನೆತನಗಳು' ಎಂಬ ಸಂಪಾದಿತ ಕೃತಿಗಳಲ್ಲಿ ಪ್ರಕಟಗೊಂಡಿದೆ. ಮತ್ತೋಡು ಪಾಳೆಯಗಾರರ ಮೂಲ, ರಾಜಕೀಯ ಚರಿತ್ರೆ, ಧಾರ್ಮಿಕತೆ ಮತ್ತು ಆರ್ಥಿಕ ವಿಚಾರಗಳನ್ನು ಕುರಿತು ಪಿ. ಯಶೋಧ ರಾಜಶೇಖರಪ್ಪ ಅವರು ವಿಶದವಾಗಿ ಚರ್ಚಿಸಿದ್ದಾರೆ. ಲಕ್ಷ್ಮಣ್ ತೆಲಗಾವಿ ಹಾಗೂ ಎಂ.ವಿ ಶ್ರೀನಿವಾಸ್ ಅವರು ಸಂಪಾದಿಸಿರುವ 'ಚಂದ್ರವಳ್ಳಿ' ಎಂಬ ಕೃತಿಯಲ್ಲಿ ಹೊಸದುರ್ಗದ ರಾಜಕೀಯ ಚರಿತ್ರೆಯನ್ನು ಕುರಿತು ಹಲವು ಲೇಖನಗಳಿವೆ. ಅವುಗಳಲ್ಲಿ ಬೂದಿಹಾಳಿನ ಇತಿಹಾಸ ಮತ್ತು ಮತ್ತೋಡಿನ ಇತಿಹಾಸ ಎಂಬ ಎರಡು ಲೇಖನಗಳು ಹೊಸದುರ್ಗದ ರಾಜಕೀಯ ಚರಿತ್ರೆಯನ್ನು ಕುರಿತು ಚರ್ಚಿಸಲು ಸಹಾಯಕವಾಗಿವೆ. ಲಕ್ಷ್ಮಣ್ ತೆಲಗಾವಿಯವರ 'ಮತ್ತೋಡು ಪಾಳೆಯಗಾರ ವಂಶಜರ ಒಂದು ಪತ್ರ (೧೮೮೨)' ಎಂಬ ಲೇಖನ Studies in Karnataka

History and culture (೨೦೦೭) ನಲ್ಲಿ ಪ್ರಕಟಗೊಂಡಿದೆ. ಶೈಲಜಾ ಹೊಸಳ್ಳೆರ ಅವರು 'ಸಿರುಮನ ಸಾಂಗತ್ಯಗಳು : ಒಂದು ಅಧ್ಯಯನ' ಎಂಬ ವಿಷಯದಲ್ಲಿ ಪಿಎಚ್.ಡಿ. ಮಹಾಪ್ರಬಂಧ ರಚಿಸಿದ್ದಾರೆ. ಇವರೇ ಬರೆದಿರುವ 'ಬಾಗೂರು-ಬೂದಿಹಾಳು ಪಾಳೆಯಪಟ್ಟುಗಳ ಸಂಬಂಧ ಎಂಬ ಲೇಖನ Studies in Karnataka History and culture (vol-I) (೨೦೦೫) ನಲ್ಲಿ ಪ್ರಕಟಗೊಂಡಿದೆ. ಹೀಗೆ ಇಲ್ಲಿನ ರಾಜಕೀಯ ಚರಿತ್ರೆಯನ್ನು ಕುರಿತಂತೆ ಕೆಲವೇ ಅಧ್ಯಯನಗಳು ನಡೆದಿವೆ.

ಇನ್ನೂ ತಾಲ್ಲೂಕಿನ ಐತಿಹಾಸಿಕ ಸ್ಥಳಗಳನ್ನು ಪರಿಚಯಿಸುವ ದೃಷ್ಟಿಯಿಂದ ಬಾಗೂರು ಆರ್. ನಾಗರಾಜಪ್ಪ ಅವರು ಕೆಲವು ಕೈಪಿಡಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಹೊಸದುರ್ಗದ ಸುತ್ತ', 'ಹೊಸದುರ್ಗ ತಾಲ್ಲೂಕು ದರ್ಶನ', 'ಹೆಗ್ಗೆರೆ ಬಸದಿ: ಒಂದು ಪರಿಚಯ' ಮುಂತಾದವುಗಳನ್ನು ಹೆಸರಿಸಬಹುದು. ಅದರೊಂದಿಗೆ ಇವರು ಹೊಸದುರ್ಗ ತಾಲ್ಲೂಕಿನ ಜಾನಪದ ಸಂಸ್ಕೃತಿಯನ್ನು ಅಧ್ಯಯನ ಮಾಡಿ 'ಹೊಸದುರ್ಗ ಸೀಮೆ ಜಾನಪದ' ಎಂಬ ಪುಸ್ತಕ ಬರೆದಿದ್ದು ತಾಲ್ಲೂಕಿನ ಜಾತ್ರೆಗಳು ಹಾಗೂ ಉತ್ಸವಗಳ ಬಗ್ಗೆ ತಿಳಿಯಬಹುದಾಗಿದೆ.

ಇವರು ಹಾಗು ಬಸವರಾಜಶಿವಪುರ ಸಂಪಾದಿಸಿರುವ ಕಲ್ಪಾದ್ರಿ ಯಲ್ಲಿ ಚಿತ್ರದುರ್ಗ ಜಿಲ್ಲೆ ಹಾಗು ಹೊಸದುರ್ಗ ತಾಲ್ಲೂಕಿನ ಚರಿತ್ರೆ, ಸಾಹಿತ್ಯ, ಶಾಸನಗಳು ಮುಂತಾದ ವಿಷಯಗಳನ್ನು ಕುರಿತು ಹಲವು ಲೇಖನಗಳು ಪ್ರಕಟಗೊಂಡಿವೆ.

ಟಿ.ಗಿರಿಜಾ ಅವರು ಬರೆದಿರುವ 'ಚಿತ್ರದುರ್ಗ ಜಿಲ್ಲಾ ದರ್ಶಿನಿ' (೧೯೯೧) ಕೃತಿಯಲ್ಲಿ ಹೊಸದುರ್ಗ ತಾಲ್ಲೂಕಿನ ಬಗ್ಗೆ ಹಲವು ಮಾಹಿತಿಗಳನ್ನು ನೀಡಿದ್ದಾರೆ.

ಇನ್ನೂ ಈ ಜಿಲ್ಲೆಯಲ್ಲಿರುವ ಪ್ರಾಚೀನ ದೇವಾಲಯಗಳನ್ನು ಕುರಿತು ನಡೆದ ಅಧ್ಯಯನಗಳನ್ನು ಗಮನಿಸಿದಾಗ ಅವುಗಳು ಸಂಶೋಧನಾ ಲೇಖನಗಳ ರೂಪದಲ್ಲಿ, ಸಂಪಾದಿತ ಕೃತಿಗಳಲ್ಲಿ ಪ್ರಕಟಗೊಂಡಿವೆ. ಬಿ.ಸುರೇಶ ಅವರು ಬಾಗೂರಿನ ಚನ್ನಕೇಶವ ದೇವಾಲಯದ ಬಗ್ಗೆ ಒಂದು ಲೇಖನ ಬರೆದಿದ್ದು ಅದು Studies in Karnataka History and Culture ಎಂಬುದರಲ್ಲಿ ಪ್ರಕಟಗೊಂಡಿದೆ. ಚಿತ್ರದುರ್ಗ ಜಿಲ್ಲೆಯ ಐತಿಹಾಸ ಮತ್ತು ಪುರಾತತ್ವ ಎಂಬ ಸಂಪಾದಿತ ಕೃತಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಕೆಲವೇ ದೇವಾಲಯಗಳನ್ನು ಕುರಿತಂತೆ ಅಧ್ಯಯನ ಮಾಡಿದ್ದು ಅವುಗಳು ಲೇಖನಗಳ ರೂಪದಲ್ಲಿವೆ. ಆದರೆ ಅವುಗಳಲ್ಲಿ ಚಿತ್ರದುರ್ಗದ ಪ್ರಾಚೀನ ದೇವಾಲಯಗಳನ್ನೇ ಒತ್ತು ನೀಡಿ ಅಧ್ಯಯನ ಮಾಡಿದ್ದಾರೆ. ಇದರೊಂದಿಗೆ ಎನ್.ಎಸ್ ಮಹಂತೇಶ ಅವರು ಚಿತ್ರದುರ್ಗದ ಪ್ರಾಚೀನ ದೇವಾಲಯಗಳನ್ನೇ ಕುರಿತು ಅಧ್ಯಯನ ಮಾಡಿ 'ಚಿತ್ರದುರ್ಗದ ಕೋಟೆ ಪರಿಸರದ ದೇವಾಲಯಗಳು: ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ

ಸಂಶೋಧನಾ ಕೃತಿಯನ್ನು ಬರೆದಿದ್ದಾರೆ. ಇದು ಚಿತ್ರದುರ್ಗದ ಕೋಟೆ ಪರಿಸರದ ಪ್ರಾಚೀನ ದೇವಾಲಯಗಳನ್ನು ಕುರಿತಂತೆ ಮಾಹಿತಿ ನೀಡುತ್ತದೆ. ಹೀಗೆ ನಾನು ಸಮೀಕ್ಷೆ ಮಾಡಿದಂತೆ ಹೊಸದುರ್ಗ ತಾಲ್ಲೂಕಿನಲ್ಲಿನ ರಾಜಕೀಯ ಚರಿತ್ರೆ, ಜಾನಪದ ಸಾಹಿತ್ಯ, ಐತಿಹಾಸಿಕ ಸ್ಥಳಗಳನ್ನು ಕುರಿತು ಪರಿಚಯಿಸುವ ನಿಟ್ಟಿನಲ್ಲಿ ಅಧ್ಯಯನಗಳು ನಡೆದಿವೆಯೆ ಹೊರತು. ಹೊಸದುರ್ಗ ಪರಿಸರದ ಪ್ರಾಚೀನ ದೇವಾಲಯಗಳು, ಮೂರ್ತಿಶಿಲ್ಪಗಳು, ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳು ಮುಂತಾದವುಗಳನ್ನು ಕುರಿತ ಪುರಾತತ್ವೀಯ ಅಧ್ಯಯನ, ಶಾಸ್ತ್ರೀಯ ಹಾಗೂ ಶಿಸ್ತುಬದ್ಧ ಅಧ್ಯಯನ ಇದುವರೆಗೂ ನಡೆದಿಲ್ಲವೆಂದೇ ಹೇಳಬಹುದು. ಆದುದರಿಂದ ಪ್ರಸ್ತುತ ಅಧ್ಯಯನದಲ್ಲಿ ಹೊಸದುರ್ಗ ಪರಿಸರದ ಪ್ರಾಚೀನ ದೇವಾಲಯಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡಲಾಗಿದೆ.

೧.೧.೩. ಅಧ್ಯಯನದ ವ್ಯಾಪ್ತಿ.

ಪ್ರಾಚೀನ ಆಡಳಿತ ವಿಭಾಗಗಳಾದ ನಿರ್ಗುಂದನಾಡು ಮತ್ತು ಬಾಗೂರು ಸೀಮೆಯ ಹಲವು ಗ್ರಾಮಗಳನ್ನು ಒಳಗೊಂಡಂತೆ ಹಾಗೂ ಹೊಸದುರ್ಗ ನಗರವನ್ನು ಒಳಗೊಂಡಂತೆ ಇರುವ ಕಸಬಾ ಹೊಬಳಿಯು ಪ್ರಸ್ತುತ ನನ್ನ ಅಧ್ಯಯನದ ವ್ಯಾಪ್ತಿಯಾಗಿದೆ. ಕಸಬಾ ಹೋಬಳಿಯಲ್ಲಿ ಬರುವ ಹೊಸದುರ್ಗ ನಗರ, ಬಾಗೂರು, ನೀರಗುಂದ, ಕಲ್ಲೇದೇವರಕಟ್ಟೆ, ಶಿವನೇಕಟ್ಟೆ, ಸಿದ್ಧಪ್ಪನಬೆಟ್ಟ, ಮಧುರೆ, ಸಾಣಿಹಳ್ಳಿ, ಕೆಲ್ಲೋಡು, ಮಧುರೆ, ಬೋಕಿಕೆರೆ, ಕಂಗುವಳ್ಳಿ, ಕಬ್ಬಳ, ಲಿಂಗದಹಳ್ಳಿ, ಅತ್ತಿಗಟ್ಟ, ಚಿಕ್ಕಯ್ಯಗಟ್ಟ, ಭೈರವನ ಬೆಟ್ಟ ಸೇರಿದಂತೆ ಹಲವು ಪ್ರದೇಶಗಳು ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಬರುತ್ತವೆ. ಈ ಪ್ರದೇಶಗಳಲ್ಲಿ ಕಂಡುಬರುವ ರಾಷ್ಟ್ರಕೂಟರ ಕಾಲದಿಂದ ವಿಜಯನಗರೋತ್ತರ ಪಾಳೆಯಗಾರರ ಕಾಲದವರೆಗಿನ ದೇವಾಲಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಪ್ರಸ್ತುತ ಅಧ್ಯಯನವನ್ನು ಅಧ್ಯಯನದ ಅನುಕೂಲಕ್ಕಾಗಿ ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

ಮೊದಲನೆ ಅಧ್ಯಾಯವು ಪ್ರಸ್ತಾವನೆ, ಅಧ್ಯಯನದ ಉದ್ದೇಶ, ಅಧ್ಯಯನದ ಸಮೀಕ್ಷೆ, ಅಧ್ಯಯನದ ವ್ಯಾಪ್ತಿ ಮತ್ತು ಅಧ್ಯಯನದ ವಿಧಾನವನ್ನು ಒಳಗೊಂಡಿದ್ದು ಅಧ್ಯಯನದ ಒಟ್ಟಾರೆ ರೂಪರೇಷೆಯನ್ನು ಕುರಿತು ಚರ್ಚಿಸುತ್ತದೆ.

ಎರಡನೆ ಅಧ್ಯಾಯವು ಭೌಗೋಳಿಕ ಹಿನ್ನೆಲೆ ಹಾಗು ಚಾರಿತ್ರಿಕ ಹಿನ್ನೆಲೆಯನ್ನು ಒಳಗೊಂಡಿದೆ. ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಪರಿಸರ, ಹೊಸದುರ್ಗ ತಾಲ್ಲೂಕಿನ ಭೌಗೋಳಿಕ ಪರಿಸರ, ಈ ಪರಿಸರದಲ್ಲಿ ಕಂಡು ಬಂದಿರುವ ಪ್ರಾಗಿತಿಹಾಸ, ಮೌರ್ಯರು,

ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು, ಉಚ್ಚಂಗಿ ಪಾಂಡ್ಯರು, ಹೊಯ್ಸಳರು, ವಿಜಯನಗರದ ಅರಸರು, ಪಾಳೆಯಗಾರರನ್ನು, ಒಳಗೊಂಡಂತೆ ಹಲವು ಚಾರಿತ್ರಿಕ ಕುರುಹುಗಳ ಬಗ್ಗೆ ಚರ್ಚಿಸಲಾಗಿದೆ. ಮೂರನೆ ಅಧ್ಯಾಯದಲ್ಲಿ ದೇವಾಲಯಗಳ ಉಗಮ ಮತ್ತು ವಿಕಾಸವನ್ನು ಕುರಿತು ಚರ್ಚಿಸಲಾಗಿದೆ.

ನಾಲ್ಕನೆ ಅಧ್ಯಾಯದಲ್ಲಿ ಹೊಸದುರ್ಗ ಪರಿಸರದ ದೇವಾಲಯಗಳನ್ನು ಕುರಿತು ಚರ್ಚಿಸಲಾಗಿದೆ. ಆಯ್ಕೆಮಾಡಿಕೊಂಡ ವ್ಯಾಪ್ತಿಗೆ ಅನುಗುಣವಾಗಿ ಇಲ್ಲಿ ಕಂಡುಬಂದ ದೇವಾಲಯಗಳನ್ನು ಶೈವ ದೇವಾಲಯಗಳು, ವೈಷ್ಣವ ದೇವಾಲಯಗಳು ಹಾಗೂ ಶಾಕ್ತ ದೇವಾಲಯಗಳು ಎಂದು ವಿಂಗಡಿಸಿ ಚರ್ಚಿಸಲಾಗಿದೆ. ಇಲ್ಲಿನ ಪ್ರತಿಯೊಂದು ದೇವಾಲಯವನ್ನು ಕುರಿತು ವಿವರವಾದ ಅಧ್ಯಯನವನ್ನು ಮಾಡಲಾಗಿದೆ. ಆಯಾ ಪರಿಸರದ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ವ್ಯವಸ್ಥಿತವಾಗಿ ಹಾಗು ವೈಜ್ಞಾನಿಕವಾಗಿ ವಿಶ್ಲೇಷಿಸಲಾಗಿದೆ.

ಐದನೆ ಅಧ್ಯಾಯದಲ್ಲಿ ಮೂರ್ತಿಶಿಲ್ಪಗಳನ್ನು ಕುರಿತು ಚರ್ಚಿಸಲಾಗಿದೆ. ಹೊಸದುರ್ಗ ಪರಿಸರದ ದೇವಾಲಯಗಳಲ್ಲಿನ ಮೂರ್ತಿಶಿಲ್ಪಗಳು, ಅವುಗಳ ಶೈಲಿ, ಪಂಥ, ಪ್ರತಿಮಾ ಲಕ್ಷಣ ಮುಂತಾದ ಅಂಶಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಆರನೆ ಅಧ್ಯಾಯದಲ್ಲಿ ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಇಲ್ಲಿನ ಶಾಸನಗಳು ದೇವಾಲಯಗಳಿಗೆ ಸಂಬಂಧಿಸಿದಂತೆ ಯಾವ ವಿಚಾರಗಳನ್ನು ಕುರಿತು ಹೇಳುತ್ತವೆ ಎಂಬುದನ್ನು ವಿವರವಾಗಿ ಚರ್ಚಿಸಲಾಗಿದೆ. ಒಟ್ಟಾರೆ ಈ ಅಧ್ಯಾಯದಲ್ಲಿ ಈಗಾಗಲೇ ಪ್ರಕಟಗೊಂಡ ಶಾಸನಗಳಿಂದ ದೇವಾಲಯಗಳಿಗೆ ಸಂಬಂಧಿಸಿದ ಹಲವು ಸಂಗತಿಗಳನ್ನು ವಿಶ್ಲೇಷಿಸಲಾಗಿದೆ.

ಏಳನೆ ಅಧ್ಯಾಯವು ಸಮಾರೋಪವಾಗಿದ್ದು ಇದು ಇಡೀ ಅಧ್ಯಯನದಲ್ಲಿ ಕಂಡುಕೊಂಡ ಒಟ್ಟಾರೆ ಸಂಶೋಧನೆಯ ಫಲಿತಾಂಶವನ್ನು ಒಳಗೊಂಡಿದೆ. ಅದರೊಂದಿಗೆ ಇಡೀ ಅಧ್ಯಾಯಗಳ ಸಂಕ್ಷಿಪ್ತ ರೂಪವನ್ನು ಸಹ ಇಲ್ಲಿ ಕಾಣಬಹುದು.

ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ಕೃತಿಗಳು, ಲೇಖನಗಳು, ಶಾಸನ ಸಂಪುಟಗಳು, ಅಪ್ರಕಟಿತ ಸಂಶೋಧನಾ ಪ್ರಬಂಧಗಳು ಮುಂತಾದವುಗಳ ವಿವರವನ್ನು ಗ್ರಂಥಋಣದಲ್ಲಿ ನೀಡಲಾಗಿದೆ. ದೇವಾಲಯಗಳಿಗೆ ಸಂಬಂಧಿಸಿದ ಛಾಯಚಿತ್ರಗಳು, ಛಾಯಚಿತ್ರಗಳ ವಿವರವನ್ನು, ಅಗತ್ಯ ನಕ್ಷೆಗಳನ್ನು ಅನುಬಂಧದಲ್ಲಿ ಅಳವಡಿಸಲಾಗಿದೆ.

೧.೧.೪. ಅಧ್ಯಯನದ ವಿಧಾನ.

ಪ್ರಸ್ತುತ ಅಧ್ಯಯನದ ವಿಧಾನವು ಬಹುತೇಕವಾಗಿ ಕ್ಷೇತ್ರಕಾರ್ಯ ಆಧಾರಿತ ವಿಧಾನವಾಗಿದೆ. ಈ ಅಧ್ಯಯನದಲ್ಲಿ ಹೊಸದುರ್ಗ ಕಸಬಾ ಹೋಬಳಿಯ ಗ್ರಾಮವಾರು ಕ್ಷೇತ್ರಕಾರ್ಯ ಮಾಡುವುದರ ಮೂಲಕ ಅಲ್ಲಿನ ಪ್ರಾಚೀನ ದೇವಾಲಯಗಳನ್ನು ದಾಖಲೀಕರಣ ಮಾಡಿಕೊಳ್ಳಲಾಗಿದೆ ಪ್ರತಿ ದೇವಾಲಯದ ಸ್ಥಳ ನಿರ್ದೇಶನದೊಂದಿಗೆ, ಅದು ಇರುವ ಗ್ರಾಮ, ದೇವಾಲಯದ ಅಭಿಮುಖ, ದೇವಾಲಯದ ಪಂಥ, ದೇವಾಲಯದ ನಿರ್ಮಾಣಕ್ಕೆ ಬಳಸಿರುವ ವಸ್ತು, ಅದರ ನಿರ್ಮಾಣ ಶೈಲಿ, ದೇವಾಲಯದಲ್ಲಿರುವ ಮೂರ್ತಿಶಿಲ್ಪಗಳು, ದೇವಾಲಯದ ಪರಿಸರದ ಶಾಸನಗಳು, ದೇವಾಲಯದ ತಲನಕ್ಷೆ ಮುಂತಾದವುಗಳ ಮೂಲಕ ದೇವಾಲಯಗಳಿಗೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ದಾಖಲೀಕರಣ ಮಾಡಿಕೊಳ್ಳಲಾಗಿದೆ. ಅದರೊಂದಿಗೆ ದೇವಾಲಯಗಳು ಹಾಗು ಮೂರ್ತಿಶಿಲ್ಪಗಳಿಗೆ ಸಂಬಂಧಿಸಿದಂತೆ ಛಾಯಚಿತ್ರಗಳನ್ನು ತೆಗೆಯಲಾಗಿದೆ. ದೇವಾಲಯಗಳಿಗೆ ಸಂಬಂಧಿಸಿದಂತೆ ಅಲ್ಲಿನ ಮೌಖಿಕ ಪರಂಪರೆಯನ್ನು ಜನರ ಮಾಹಿತಿಯಿಂದ ಸಂಗ್ರಹಿಸಲಾಗಿದೆ. ಒಟ್ಟಾರೆಯಾಗಿ ಪ್ರಾಥಮಿಕವಾದ ಕ್ಷೇತ್ರಕಾರ್ಯದ ಮೂಲಕ ಹೊಸದುರ್ಗ ಪರಿಸರದ ದೇವಾಲಯಗಳನ್ನು ಬೆಳಕಿಗೆ ತರಲಾಗುತ್ತಿದೆ. ಕ್ಷೇತ್ರಕಾರ್ಯದ ಪ್ರಾಥಮಿಕ ಮಾಹಿತಿಯೊಂದಿಗೆ ಅದಕ್ಕೆ ಪೂರಕವಾಗಿ ಆನುಷಂಗಿಕ ಆಕರಗಳನ್ನು (ಸಾಹಿತ್ಯಿಕ ಆಕರಗಳು) ಬಳಸಿಕೊಳ್ಳಲಾಗಿದೆ.

ಟಿಪ್ಪಣಿಗಳು:

೧. ಶ್ರೀನಿವಾಸ ಮೂರ್ತಿ ಎಚ್.ವಿ., ಚರಿತ್ರೆ ಸಂಶೋಧನೆ ಮತ್ತು ಚರಿತ್ರೆ ಲೇಖನ. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೪, ಚರಿತ್ರೆ, ತಂಬಂಡ ವಿಜಯ ಪೂಣಚ್ಚ (ಸಂ), ಪು.೩

೨. ಶ್ರೀನಿವಾಸ್ ಎಂ.ವಿ., ಪ್ರಾದೇಶಿಕ ಐತಿಹಾಸ ಅಧ್ಯಯನ : ಒಂದು ಸಮೀಕ್ಷೆ, ಹರತಿಸಿರಿ, ಲಕ್ಷ್ಮಣ್ ತೆಲಗಾವಿ (ಸಂ), ಪು.೫೮೨.

೩. ಶ್ರೀನಿವಾಸ್ ಎಂ.ವಿ., ಪೂರ್ವೋಕ್ತ, ಪು.೫೯

೪. ಲಕ್ಷ್ಮಣ್ ತೆಲಗಾವಿ., ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವೀಕತೆ ಮತ್ತು ಸ್ವರೂಪ, ಪು.೬

೫. ಅದೇ

೬. ಮೋಹನ್ ಕೃಷ್ಣ ರೈ., ಸ್ಮಾರಕಗಳು ಮತ್ತು ಸಾಮಾಜಿಕ ವಾಸ್ತವತೆ, ಚರಿತ್ರೆ ಅಧ್ಯಯನ, ಸಂಪುಟ ೧, ಸಂಚಿಕೆ ೧, ಲಕ್ಷ್ಮಣ್ ತೆಲಗಾವಿ (ಸಂ), ಪು.೧೫೦.

೭. ಅದೇ, ಪು.೧೫೦-೧೫೧

೮. ಕೃಷ್ಣಮೂರ್ತಿ ಎಂ.ಎಸ್., ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು, ಹರತಿಸಿರಿ, ಲಕ್ಷ್ಮಣ್ ತೆಲಗಾವಿ (ಸಂ), ಪು.೩೭೨

೯. ಚಂದ್ರ ಪೂಜಾರಿ ಎಂ., ಸಂಶೋಧನಾ ಪ್ರಸ್ತಾವ, ಪು.೧೯-೨೦

ಅಧ್ಯಾಯ ೨ : ಹಿನ್ನಲೆ

೨.೧. ಭೌಗೋಳಿಕ ಹಿನ್ನಲೆ

೨.೨. ಚಾರಿತ್ರಿಕ ಹಿನ್ನಲೆ

ಅಧ್ಯಾಯ. ೨

ಹಿನ್ನಲೆ

೨.೧. ಭೌಗೋಳಿಕ ಹಿನ್ನಲೆ

ಅಧ್ಯಯನಕ್ಕಾಗಿ ಆಯ್ದುಕೊಂಡ ಪ್ರದೇಶದ ಭೌಗೋಳಿಕ ವಿವರಗಳನ್ನು ಅರಿತುಕೊಳ್ಳುವುದು ಅತ್ಯಂತ ಅವಶ್ಯಕ. ಐತಿಹಾಸಿಕ ಪ್ರಕ್ರಿಯೆ ಮತ್ತು ಭೌಗೋಳಿಕ ಸನ್ನಿವೇಶಗಳ ಪರಂಪರೆ ನಿಕಟ ಸಂಬಂಧ ಹೊಂದಿದ್ದು ಭೌಗೋಳಿಕ ವೈಶಿಷ್ಟ್ಯಗಳನ್ನು ಮರೆತು ಚರಿತ್ರೆ ಬರೆಯಲು ಸಾಧ್ಯವಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಭೂಗೋಳ ಮತ್ತು ಚರಿತ್ರೆ ಅತ್ಯಂತ ನಿಕಟ ಸಂಪರ್ಕವನ್ನು ಹೊಂದಿವೆ. ಭೂಗೋಳದ ಅರಿವಿಲ್ಲದೆ ಚರಿತ್ರೆ ಬರೆಯುವುದು ಕಷ್ಟಸಾಧ್ಯ. ಪ್ರತಿಯೊಂದು ಚಾರಿತ್ರಿಕ ಸನ್ನಿವೇಶಗಳು, ಸ್ಮಾರಕಗಳು ಹಾಗೂ ಅವಶೇಷಗಳ ಮೇಲೆ ಭೂಗೋಳದ ಪ್ರಭಾವ ಇದ್ದೇ ಇರುತ್ತದೆ. ಒಂದು ದೇಶದ ಸರ್ವತೋಮುಖ ಬೆಳವಣಿಗೆಗೆ ಅಲ್ಲಿನ ಭೌಗೋಳಿಕ ಅಂಶಗಳು ಬಹುಮುಖ್ಯವಾಗಿರುತ್ತವೆ. ಯಾವ ದೇಶಕ್ಕೆ ಹೆಚ್ಚು ಪ್ರಕೃತಿಯ ಸಹಾಯವಿರುತ್ತದೆಯೋ, ಆ ದೇಶ ಬಹುಬೇಗ ಅಭಿವೃದ್ಧಿಯನ್ನು ಸಾಧಿಸುತ್ತದೆ. ಒಂದು ಪ್ರದೇಶದ ಪರ್ವತಶ್ರೇಣಿ, ಬೆಟ್ಟಗುಡ್ಡ, ನದಿ, ನದಿಯ ಬಯಲು, ತೀರಪ್ರದೇಶ, ಬಂದರು, ಮಣ್ಣಿನ ರಚನೆ, ಹವಾಮಾನ, ಉಷ್ಣಾಂಶ, ರೇಖಾಂಶ ಮುಂತಾದ ಭೌಗೋಳಿಕ ಅಂಶಗಳು ಮಾನವನನ್ನು ಆ ಪ್ರದೇಶದಲ್ಲಿ ವಾಸಿಸುವಂತೆ ಅನುವು ಮಾಡಿಕೊಡುತ್ತದೆ. ಉತ್ತಮ ಭೌಗೋಳಿಕ ಪರಿಸರ ಆ ಪ್ರದೇಶದ ನೈಸರ್ಗಿಕ ಸಂಪತ್ತನ್ನು ಹೆಚ್ಚಿಸಿ, ಜನಜೀವನ, ನಾಗರೀಕತೆ, ಸಂಸ್ಕೃತಿ, ಕಲೆ ಮತ್ತು ಸಾಹಿತ್ಯದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಆ ಪ್ರದೇಶ ತನ್ನದೇ ಆದ ಇತಿಹಾಸ ಮತ್ತು ಸಂಸ್ಕೃತಿಯನ್ನು ಹೊಂದಲು ಭೌಗೋಳಿಕ ಪರಿಸರ ಬಹಳ ಮುಖ್ಯವಾಗಿದೆ. ಆಯಾ ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೀಗೆ ನಿರ್ಮಾಣಗೊಂಡ ಸ್ಮಾರಕಗಳಲ್ಲಿ ಕೋಟೆಕೊತ್ತಲಗಳು, ಅರಮನೆ ಅವಶೇಷಗಳು, ನಗರ ನಿವೇಶನಗಳು, ಕೆರೆಕಟ್ಟೆಗಳು ಹಾಗೂ ದೇವಾಲಯಗಳು ಮುಂತಾದವುಗಳನ್ನು ಕಾಣಬಹುದು.

ಇವುಗಳು ಆಯಾ ಭೌಗೋಳಿಕ ಪರಿಸರದ ಚರಿತ್ರೆ ಮತ್ತು ಅಂದಿನ ಸಂಸ್ಕೃತಿಯನ್ನು ಸಾರುವ ಸ್ಮಾರಕಗಳಾಗಿ ಕಂಡುಬರುತ್ತವೆ.

ಪ್ರಾಚೀನ ಕಾಲದಿಂದಲೂ ಮಾನವನು ಭಕ್ತಿ ಹಾಗೂ ಸಂಸ್ಕೃತಿಯ ಸಂಕೇತವಾಗಿ ದೇವರು ಹಾಗೂ ದೇವಾಲಯ ಸಂಸ್ಕೃತಿಯನ್ನು ಬೆಳಸಿಕೊಂಡು ಬಂದಿದ್ದು ಅವುಗಳ ನಿರ್ಮಾಣದಲ್ಲಿ ಭೌಗೋಳಿಕ ವಾತಾವರಣವು ತುಂಬಾ ಸಹಾಯಕವಾಗಿದೆ. ದೇವಾಲಯವನ್ನು ಯಾವ ಪ್ರದೇಶದಲ್ಲಿ, ಯಾವ ಮಾದರಿ ವಸ್ತುಗಳನ್ನು ಬಳಸಿ ನಿರ್ಮಿಸಿದ್ದಾರೆ? ಅದು ಯಾವ ಭೌಗೋಳಿಕ ಪರಿಸರದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಮುಂತಾದವು ದೇವಾಲಯಗಳ ನಿರ್ಮಾಣಕ್ಕೆ ಯೋಗ್ಯವಾದವುಗಳು. ಅದರೊಂದಿಗೆ ಆ ಪ್ರದೇಶದ ಭೌಗೋಳಿಕ ಅಂಶಗಳನ್ನು ಕುರಿತು ತಿಳಿಯುವುದು ಅತ್ಯಂತ ಅವಶ್ಯಕ. ಪ್ರಸ್ತುತ ಹೊಸದುರ್ಗ ಪರಿಸರದ ದೇವಾಲಯಗಳನ್ನು ಅಧ್ಯಯನ ಮಾಡುವುದಕ್ಕೂ ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆ ಹಾಗು ಹೊಸದುರ್ಗ ತಾಲ್ಲೂಕಿನ ಭೌಗೋಳಿಕ ಲಕ್ಷಣಗಳನ್ನು ಕುರಿತು ಅರಿಯುವುದು ಬಹುಮುಖ್ಯವಾದುದು.

೨.೧.೧. ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಅಂಶಗಳು:-

ದಕ್ಷಿಣ ಭಾರತದ ಒಂದು ಆಯಕಟ್ಟಿನ ಸ್ಥಳದಲ್ಲಿರುವ ಚಿತ್ರದುರ್ಗ ಜಿಲ್ಲೆಯು ಪ್ರಾಕೃತಿಕವಾಗಿ ಸಂಪದ್ಭರಿತವಾಗಿದ್ದು, ಭೌಗೋಳಿಕವಾಗಿಯು ಹಲವಾರು ವಿಶಿಷ್ಟತೆಗಳನ್ನೊಳಗೊಂಡಿದೆ.[೧] ಜಿಲ್ಲೆಯ ಈಶಾನ್ಯಕ್ಕೆ ಬಳ್ಳಾರಿ ಜಿಲ್ಲೆ, ಆಗ್ನೇಯಕ್ಕೆ ತುಮಕೂರು ಜಿಲ್ಲೆ, ಪೂರ್ವಕ್ಕೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ನೈರುತ್ಯಕ್ಕೆ ಚಿಕ್ಕಮಗಳೂರು ಜಿಲ್ಲೆ, ಪಶ್ಚಿಮಕ್ಕೆ ಶಿವಮೊಗ್ಗ ಜಿಲ್ಲೆಗಳನ್ನೊಳಗೊಂಡಿದೆ.[೨] ಒಟ್ಟು ೬ ತಾಲ್ಲೂಕುಗಳಿದ್ದು ಅವುಗಳಲ್ಲಿ ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ ತಾಲ್ಲೂಕುಗಳನ್ನು ಕಾಣಬಹುದು. ೨೨ ಹೋಬಳಿಗಳನ್ನು ಹಾಗೂ ೧೮೫ ಗ್ರಾಮ ಪಂಚಾಯಿತಿಗಳನ್ನು ಹೊಂದಿದೆ.[೩] ಜಿಲ್ಲೆಯ ವಿಸ್ತೀರ್ಣ ೮,೩೮೮ ಚ.ಕಿ.ಮೀ, ೯೩೨ ಜನವಸತಿ ಗ್ರಾಮಗಳು ಹಾಗೂ ಜನಸಂಖ್ಯೆ ೧೫,೧೦,೨೨೭ ಎಂದು ಕಾಣಬಹುದು.[೪] ಈ ಜಿಲ್ಲೆಯ ವಾಸ್ತವಿಕ ಭೌಗೋಳಿಕ ನೆಲೆಯು ಉತ್ತರ ಅಕ್ಷಾಂಶ ೧೩°.೧೫° ರಿಂದ ೧೫°.೨೦° ಮತ್ತು ಪೂರ್ವ ರೇಖಾಂಶ ೭೬°.೨೪° ರಿಂದ ೭೭°.೦° ರಲ್ಲಿದೆ. ಈ ಜಿಲ್ಲೆಯು ದಖ್ಖನ್ ಪ್ರಸ್ಥಭೂಮಿಯಾಗಿದ್ದು ರಾಜ್ಯದಲ್ಲೇ ಕಡಿಮೆ ಮಳೆ ಬೀಳುವಲ್ಲಿ ಇದು ಎರಡನೇ ಸ್ಥಾನದಲ್ಲಿದೆ.

ಜಿಲ್ಲೆಯ ಹೆಚ್ಚು ಭಾಗ ತಗ್ಗಾದ ಕಣಶಿಲೆಯ ಬೋಳು ಬೆಟ್ಟಗಳಿಂದಲೂ, ಮಧ್ಯೆ ಇರುವ ಸ್ವಲ್ಪ ಮಟ್ಟಸವಾದ ಕಣಿವೆಗಳಿಂದಲೂ ಕೂಡಿದೆ. ಮುಖ್ಯವಾದ ಬೆಟ್ಟಸಾಲುಗಳು ದಕ್ಷಿಣ ಆಗ್ನೇಯದಿಂದ ಉತ್ತರ ವಾಯವ್ಯದ ಕಡೆಗೆ ಸಮನಾಂತರದಲ್ಲಿ ಸಾಗುತ್ತವೆ.[೫] ಪೂರ್ವ ಸಾಲು ಹಿರಿಯೂರಿನ ಪಶ್ಚಿಮದಿಂದ ಚಿತ್ರದುರ್ಗದ(೯೮೪ ಮೀ.) ಪರ್ಯಂತ ಹಬ್ಬಿ, ಮುಂದೆ ಸ್ವಲ್ಪ

ದೂರ ಬಿಟ್ಟು ವಾಯುವ್ಯದಲ್ಲಿ ಕಣಕುಪ್ಪೆ ಬೆಟ್ಟದಲ್ಲಿ (೮೩೯ ಮೀ.) ಮುಂದುವರೆದು ಜಿಲ್ಲೆಯ ಎಲ್ಲೆಯವರೆಗೂ ಸಾಗುತ್ತದೆ. ಚಿತ್ರದುರ್ಗದ ದಕ್ಷಿಣಕ್ಕಿರುವ ಜೋಗಿಮರಡಿ(೧,೧೩೯ ಮೀ), ಐಚಲದುರ್ಗ (೧,೧೬೦ ಮೀ) ಮತ್ತು ಬೀರನಕಲ್ಲು ದುರ್ಗ(೧,೧೭೭ ಮೀ) ಈ ಸಾಲೀನ ಉನ್ನತ ಶಿಖರಗಳು. ಮೊಳಕಾಲ್ಮೂರಿನ ಬಳಿಯಲ್ಲಿ ಕೆಲವು ಬೆಟ್ಟಗಳುಂಟು. ಇವುಗಳಲ್ಲಿ ಮುಖ್ಯವಾದವು ನುಂಕೆ ಭೈರವ (೯೨೧ ಮೀ), ಜಟಂಗ ರಾಮೇಶ್ವರ (೧,೦೫೭ ಮೀ) ಮತ್ತು ಶಾಂತಿಗುಡ್ಡ (೭೯೧ ಮೀ). ಈ ಪ್ರದೇಶ ವಿಶಿಷ್ಟ ಸೌಂದರ್ಯದಿಂದ ಕೂಡಿದ್ದೆಂದು ಬ್ರೂಸ್‌ಫೂಟ್ ಬರೆದಿದ್ದಾರೆ[೭]. ಚಿತ್ರದುರ್ಗ ಜಿಲ್ಲೆ ಸಮುದ್ರ ಮಟ್ಟದಿಂದ ಸಾಮಾನ್ಯವಾಗಿ ೬೦೦ ಮೀ ಎತ್ತರದಲ್ಲಿದೆ.[೮]

ಕೆರೆ, ಕಟ್ಟೆ, ಬಾವಿಗಳು ಹಾಗೂ ಚಿಕ್ಕಪುಟ್ಟ ತೊರೆ, ಹಳ್ಳಗಳು, ನದಿಗಳು ಈ ಜಿಲ್ಲೆಯ ನೀರಾವರಿಯ ಮುಖ್ಯ ಮೂಲಗಳು. ಜಿಲ್ಲೆಯ ಪ್ರಮುಖ ನದಿ ವೇದಾವತಿಯಾಗಿದೆ.[೯] ಸ್ವರ್ಣಮುಖಿ ನದಿ ತುಮಕೂರು ಜಿಲ್ಲೆಯಲ್ಲಿ ಹುಟ್ಟಿ ಹಿರಿಯೂರು ತಾಲ್ಲೂಕಿನ ಇಕ್ಕನೂರು ಬಳಿ ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸಿ ೧೧ ಕಿ.ಮೀ ದೂರ ಹರಿದು ವೇದಾವತಿಯನ್ನು ಸೇರುತ್ತದೆ.[೧೦] ಹೊಳಲ್ಕೆರೆಯ ಪಶ್ಚಿಮ ಭಾಗದ ಬೆಟ್ಟಗಳಲ್ಲಿ ಹುಟ್ಟಿ, ಚಿತ್ರದುರ್ಗ ಜಿಲ್ಲೆಯಲ್ಲಿ ೭೨ ಕಿ.ಮೀ. ದೂರ ಹರಿದು ತುಂಗಭದ್ರಾ ನದಿಯನ್ನು ಸೇರುವ ತೆರೆಸ್ಯಾಗೆಲಹಳ್ಳಿ, ಈ ಜಿಲ್ಲೆಯಲ್ಲಿ ಹರಿಯುವ ಗರಣಿ ಮತ್ತು ನಾಯಕನಹಟ್ಟಿ ತೊರೆಗಳು ಹಿರಿಯೂರಿಗೆ ೧೧ ಕಿ.ಮೀ. ದೂರದಲ್ಲಿ ವೇದಾವತಿಯನ್ನು ಸೇರುತ್ತದೆ.[೧೧] ಜಿನಗಿಹಳ್ಳ (ಚಿಕ್ಕಹಗರಿ) ಎಂಬುದು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕುಗಳಲ್ಲಿ ಹರಿದು ವೇದಾವತಿಯನ್ನು ಸೇರುತ್ತದೆ.[೧೨] ಜಿನಗಿಹಳ್ಳಕ್ಕೆ ಅಡ್ಡಲಾಗಿ ಭಟ್ಟರಹಳ್ಳಿ, ಮಲ್ಲಳ್ಳಿ ಮತ್ತು ದೇವಸಮುದ್ರ ಕೆರೆಗಳನ್ನು ಕಟ್ಟಲಾಗಿದೆ. ಚಿತ್ರದುರ್ಗ ತಾಲ್ಲೂಕಿನ ಭೀಮಸಮುದ್ರ, ಚಳ್ಳಕೆರೆ ತಾಲ್ಲೂಕಿನ ಧರ್ಮಪುರ ಕೆರೆ, ಹೊಳಲ್ಕೆರೆ ತಾಲ್ಲೂಕಿನ ಮುತ್ತುಗದೂರು ಮುಂತಾದವುಗಳನ್ನು ಕಾಣಬಹುದು.[೧೩]

ಚಿತ್ರದುರ್ಗ ಜಿಲ್ಲೆಯ ಬಹುಭಾಗ ಕಪ್ಪು ಎರೆಮಣ್ಣು[೧೪] ಉಳಿದಂತೆ ಕೆಂಪುಮಣ್ಣನ್ನು ಕಾಣಬಹುದು. ಜಿಲ್ಲೆಯ ಮುಖ್ಯ ಬೆಳೆಗಳು ರಾಗಿ ಮತ್ತು ಜೋಳ. ಇತರೆ ಬೆಳೆಗಳಾಗಿ ಹತ್ತಿ, ಭತ್ತ, ಕಬ್ಬು, ಕಡಲೆಕಾಯಿ, ಎಣ್ಣೆ ಬೀಜಗಳು, ಹೊಗೆಸೊಪ್ಪು, ತೊಗರಿ, ನವಣೆ, ಸಾಸುವೆ, ಬಾಳೆ, ಅಡಕೆ, ತೆಂಗು, ಈರುಳ್ಳಿ, ಮೆಣಸಿನಕಾಯಿ ಇತರೆ ತರಕಾರಿಗಳು ಹಾಗೂ ವಿವಿಧ ಹಣ್ಣುಗಳನ್ನು ಬೆಳೆಯಲಾಗುವುದು.[೧೫]

ಚಿತ್ರದುರ್ಗ ಜಿಲ್ಲೆಯಲ್ಲಿ ವಿವಿಧ ಖನಿಜ ಸಂಪತ್ತುಗಳಿರುವುದನ್ನು ಗಮನಿಸಬಹುದು. ಅವುಗಳಲ್ಲಿ ಬಹುಮುಖ್ಯವಾಗಿ ತಾಮ್ರ, ಕಬ್ಬಿಣ, ಮ್ಯಾಂಗನೀಸ್, ಸೀಸ, ಚಿನ್ನ, ಆಂಟಿಮೋನಿ ಮತ್ತು ಕ್ರೋಮೈಟ್ ಲೋಹದ ಅದಿರುಗಳು, ಅಲೋಹದ ಅದಿರುಗಳಾದ ಬೆಕೈಟಿಸ್, ಕಯನೈಟ್,

ಸುಣ್ಣಶಿಲೆ, ಬಣ್ಣದ ಮಣ್ಣುಗಳನ್ನು ಹಲವಾರು ಪ್ರದೇಶಗಳಲ್ಲಿ ಕಾಣಬಹುದು.[೧೬] ಚಿತ್ರದುರ್ಗದ ಸುತ್ತಮುತ್ತಲ ಕೆಲವು ಹಳ್ಳಿಗಳಲ್ಲಿ ಚಿನ್ನದ ಹಳೆಯ ಗಣಿಗಳನ್ನು ನೋಡಬಹುದು. ಜಾವನಹಳ್ಳಿ, ಆನೆಸಿದ್ಧಿ, ದಿಂಡಾವರ, ಕೋಟೆಮರಡಿ, ಬಂಡಿಮರಡಿ, ಗುಡ್ಡದರಂಗವ್ವನಹಳ್ಳಿ, ಹಳೇಕಲ್ ಮತ್ತು ಹೊನ್ನೇಮರಡಿಗಳಲ್ಲಿ ಕಾಣಬಹುದಾಗಿದೆ.[೧೭] ಉತ್ತಮ ಮಟ್ಟದ ತಾಮ್ರದ ಅದಿರು ಈ ಜಿಲ್ಲೆಯ ಇಂಗಳದಾಳು ಮತ್ತು ಕುಂಚಿಗನಾಳು ಪ್ರದೇಶಗಳಲ್ಲಿ ಅಗ್ನಿಶಿಲೆಗಳಲ್ಲಿಯ ಬೆಣಚು ಶಿರಬಳ್ಳಿಗಳಲ್ಲಿ ಚಾಲ್ಕೋಪಿರೈಟ್ ಎಂಬ ತಾಮ್ರದ ಅದಿರು ರೂಪದಲ್ಲಿ ದೊರೆಯುತ್ತದೆ.[೧೮] ಶ್ರೇಷ್ಠಮಟ್ಟದ ಕಬ್ಬಿಣದ ಅದಿರನ್ನು ಲಕ್ಕಿಹಳ್ಳಿ, ಕರೇಕಲ್ಲುಗುಡ್ಡ, ಬೋಡಿಮರಡಿ, ಮೆದಕೇರಿಪುರ, ಹನುಮನಕಟ್ಟೆ ಮತ್ತು ಭೀಮಸಮುದ್ರ ಪ್ರದೇಶಗಳಲ್ಲಿ ಕಾಣಬಹುದು.[೧೯] ಕುದುರೆಕಣಿವೆಯ ವನ್ಯ ಪ್ರದೇಶದಲ್ಲಿ ಸುಣ್ಣಶಿಲೆಯ ಸ್ತರಗಳು ಚಿಕ್ಕ ಬೈಲಕೆರೆ, ಬೋಡಿಮರಡಿ, ಹೊರಕೆರೆದೇವಪುರ, ಪಿಟ್ಲಾಳಿ ಹಾಗೂ ಜವಗೊಂಡನ ಹಳ್ಳಿಗಳಲ್ಲಿ ಹೆಚ್ಚು ಕ್ಯಾಲ್ಸಿಯಂಯುಕ್ತ ಸುಣ್ಣಶಿಲೆಯು ಕಂಡು ಬರುತ್ತವೆ.[೨೦] ಈ ಸ್ಥಳಗಳಲ್ಲೆ ಅಲ್ಲದೆ ಮಲ್ಲಾಪುರ, ಮತ್ತೋಡು, ಕಂಚಿಪುರ ಹಾಗೂ ಇಟ್ಟಿಗೆ ಹಳ್ಳಿಗಳಲ್ಲೂ ಮುದ್ದೆಯಂತಿರುವ ಸುಣ್ಣಶಿಲೆಯು ದೊರೆಯುತ್ತದೆ. ಈ ರೀತಿಯಾದ ಹಲವು ಖನಿಜವರ್ಗಗಳನ್ನು ಕಾಣಬಹುದು.

ಅರಣ್ಯ ಸಂಪತ್ತಿನಲ್ಲಿ ಚಿತ್ರದುರ್ಗ ಜಿಲ್ಲೆ ಹಿಂದುಳಿದಿದೆ. ಬಯಲು ಸೀಮೆಯಾಗಿರುವ ಚಿತ್ರದುರ್ಗ ಜಿಲ್ಲೆಯು ಮಳೆಯ ಪ್ರಮಾಣವನ್ನು ಕಡಿಮೆ ಹೊಂದಿದ್ದು ಅರಣ್ಯ ಸಂಪತ್ತನ್ನು ಕಡಿಮೆ ಹೊಂದಿದೆ. ಜಿಲ್ಲೆಯಲ್ಲಿ ಒಟ್ಟು ೭೩.೭೧೯ ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಜಿಲ್ಲೆಯಲ್ಲಿ ಕುರುಚಲು ಕಾಡುಗಳೇ ಹೆಚ್ಚು. ಮಳೆ ಹೆಚ್ಚಾಗಿಲ್ಲದ ಭಾಗಗಳಲ್ಲಿ ಹುಣಸೆ, ಮಾವು, ಹಿಪ್ಪೆ ಮರಗಳು, ಜಾಲಿ ಜಾತಿಯ ಗಿಡಗಳು ಮತ್ತು ಸೀತಾಫಲ ಬೆಳೆಯುತ್ತವೆ.[೨೧] ಜೋಗಿಮಟ್ಟಿ ಬೆಟ್ಟಗಳ ಬಳಿ ಬಿದಿರು ಮೆಳೆಗಳು ಉಂಟು. ಚೌಬೀನೆಗೆ ಯೋಗ್ಯವಾದ ಕಮ್ಮರ, ಸೋಮೆ, ಕೆಂಪುಖೈರ ಮರಗಳು ಅಲ್ಲಿ ಬೆಳೆಯುತ್ತವೆ. ದಿಂಡಿಗ, ಬೇವು, ಕಕ್ಕಿ, ಚುಜ್ಜಲು, ತಂಗಡಿ ಇತರೆ ಮರಗಳು ಕಂಡುಬರುತ್ತವೆ.[೨೨]

ಜಿಲ್ಲೆಯ ಪ್ರಾಣಿ ಪಕ್ಷಿ ಸಂಪತ್ತನ್ನು ಗಮನಿಸಿದಾಗ ವಿವಿಧ ಪ್ರಾಣಿ ಪಕ್ಷಿ ವರ್ಗಗಳನ್ನು ಕಾಣಬಹುದು. ಚಿರತೆ, ಕತ್ತೆಕಿರುಬ, ಕರಡಿ, ಕಾಡುಹಂದಿಗಳಿವೆ. ಹುಲಿಗಳು, ಜಿಂಕೆಗಳು ಚಿತ್ರದುರ್ಗ, ಹಿರಿಯೂರು, ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಹೆಚ್ಚು.[೨೩] ನಾಗರಹಾವು, ಮಂಡಲದ ಹಾವು, ಮಂಡರಗಪ್ಪೆ ಮತ್ತು ಇತರ ಬಗೆಯ ಚೇಳುಗಳಿವೆ.[೨೪] ಕಾಡುಕಾಗೆ, ಮೈನ, ಮರಕುಟಿಗ, ಕಾಡು ಪಾರಿವಾಳ, ಕಾಡುಕೋಳಿ, ಕವುಜಗ, ನೀರುಕೋಳಿ, ಕೋಗಿಲೆ, ಬಾನಾಡಿ ಇವು ಜಿಲ್ಲೆಯಲ್ಲಿರುವ ಪಕ್ಷಿಗಳಲ್ಲಿ ಮುಖ್ಯವಾದವು.[೨೫]

೨.೧.೨. ಹೊಸದುರ್ಗ ತಾಲ್ಲೂಕಿನ ಭೌಗೋಳಿಕ ಅಂಶಗಳು.

ಚಿತ್ರದುರ್ಗ ಜಿಲ್ಲೆಯ ೬ ತಾಲ್ಲೂಕುಗಳಲ್ಲಿ ಹೊಸದುರ್ಗವು ಒಂದಾಗಿದೆ. ಆದಿ ಮಾನವನಿಂದ ಹಿಡಿದು ಮೌರ್ಯರು, ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಬೂದಿಹಾಳು-ಮತ್ತೋಡು-ಚಿತ್ರದುರ್ಗ-ಸಂತೇಬೆನ್ನೂರು ಪಾಳೆಯಗಾರರು, ಮೈಸೂರು ಒಡೆಯರು ಹೀಗೆ ಹಲವು ರಾಜವಂಶಗಳ ಚಾರಿತ್ರಿಕ ಕುರುಹುಗಳು ಹೊಸದುರ್ಗ ಪರಿಸರದಲ್ಲಿ ಕಂಡು ಬರುತ್ತವೆ. "ಹೊಸದುರ್ಗ ತಾಲ್ಲೂಕು ಭೌಗೋಳಿಕವಾಗಿ ಹಾಗೂ ಚಾರಿತ್ರಿಕವಾಗಿ ಬಹಳ ಮಹತ್ವ ಪಡೆದ ಸ್ಥಳವೆಂದರೆ ತಪ್ಪಾಗಲಾರದು. ಚಿತ್ರದುರ್ಗಕ್ಕಿಂತಲೂ ಹೊಸದುರ್ಗ ಪ್ರಾಂತ್ಯದ ಭೌಗೋಳಿಕ ಲಕ್ಷಣ ವಿಶಿಷ್ಟವಾದುದು. ಇತ್ತ ಬಯಲು ಸೀಮೆಯೂ ಅಲ್ಲದ ಅತ್ತ ಮಲೆನಾಡು ಅಲ್ಲದ ಹೊಸದುರ್ಗ ತಾಲ್ಲೂಕು ಅರೆ ಮಲೆನಾಡು ಭಾಗವಾಗಿದ್ದು ಜನಜೀವನಕ್ಕೆ ಅತ್ಯಂತ ಉಪಯೋಗವಾದ ಪ್ರದೇಶವಾಗಿದೆ.[೨೬] ಈ ತಾಲ್ಲೂಕು ಉತ್ತರದಲ್ಲಿ ಹೊಳಲ್ಕೆರೆ, ಪೂರ್ವದಲ್ಲಿ ಹಿರಿಯೂರು, ಪಶ್ಚಿಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ದಕ್ಷಿಣದಲ್ಲಿ ಸ್ವಲ್ಪ ಭಾಗ ಕಡೂರು ಹೆಚ್ಚು ಭಾಗ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಿಂದ ಸುತ್ತುವರೆಯಲ್ಪಟ್ಟಿದೆ.[೨೭] ಭೌಗೋಳಿಕವಾಗಿ ೧,೨೩,೮೩೪.೬೦ ಹೆಕ್ಟೇರ್ ಭೂಮಿ ಈ ತಾಲ್ಲೂಕಿನಲ್ಲಿದೆ. ಹೊಸದುರ್ಗ (ಕಸಬಾ), ಮತ್ತೋಡು, ಶ್ರೀರಾಂಪುರ ಹಾಗೂ ಮಾಡದಕೆರೆ ಎಂಬ ನಾಲ್ಕು ಹೋಬಳಿಗಳು ಹಾಗೂ ೨೨೪ ಗ್ರಾಮಗಳು ಅದರಲ್ಲಿ ಸು ೧೮೬ ಚರಾಕ್ ಗ್ರಾಮಗಳು ಕಂಡು ಬರುತ್ತವೆ.[೨೮]

ಪ್ರಾಕೃತಿಕವಾಗಿ ಹೆಚ್ಚು ಕಣಶಿಲೆಯ ಬೆಟ್ಟಗಳನ್ನು ಹೊಸದುರ್ಗ ತಾಲ್ಲೂಕು ಹೊಂದಿದೆ. ಬೆಟ್ಟ ಶ್ರೇಣಿಗಳ ಹೆಚ್ಚಿನ ಭಾಗ ಹೊಸದುರ್ಗ ತಾಲ್ಲೂಕನ್ನು ಒಳಗೊಂಡಂತೆ ಹಿರಿಯೂರು ಹಾಗೂ ಚಿತ್ರದುರ್ಗ ತಾಲ್ಲೂಕುಗಳಲ್ಲೂ ಕಂಡುಬರುತ್ತವೆ.[೨೯] ಪಶ್ಚಿಮ ಶ್ರೇಣಿ ಹೊಸದುರ್ಗದಲ್ಲಿ (೯೮೩ ಮೀ) ಆರಂಭವಾಗಿ, ಮಾಯಕೊಂಡದ ಮೂಲಕ ಅಣಜಿ ಕಡೆ ಹಬ್ಬಿದೆ. ಈ ತಾಲ್ಲೂಕಿನಲ್ಲಿರುವ ಹಾಲುರಾಮೇಶ್ವರಗುಡ್ಡ (೧.೮೧ಮೀ) ಜಿಲ್ಲೆಯ ಅತ್ಯಂತ ಎತ್ತರದ ಬೆಟ್ಟ.[೩೦] ಇವುಗಳೊಂದಿಗೆ ನೀರಗುಡ್ಡ ಬೆಟ್ಟಶ್ರೇಣಿ, ಕೋಟೆಕಲ್ಲುಗುಡ್ಡ, ದೊಡ್ಡರಸಿಗುಡ್ಡ, ತಿರುಮಲದೇವರಗುಡ್ಡ ಮುಖ್ಯವಾದವುಗಳು ಎಂದು ಹೇಳಬಹುದು. ಈ ಬೆಟ್ಟ ಶ್ರೇಣಿಗಳಲ್ಲಿ ಪ್ರಾಚೀನ ಕಾಲದ ಹಲವು ಸ್ಮಾರಕಗಳು ಮತ್ತು ದೇವಾಲಯಗಳು ನಿರ್ಮಾಣವಾಗಿರುವುದನ್ನು ಕಾಣಬಹುದು.

ಹೊಸದುರ್ಗ ತಾಲ್ಲೂಕಿನಲ್ಲಿ ಸರಾಸರಿ ೫೧೧.೯೮ಮಿ.ಮೀ ಮಳೆಯಾಗುತ್ತದೆ. ವೇದಾವತಿ ತಾಲ್ಲೂಕಿನ ಪ್ರಮುಖ ನದಿಯಾಗಿದೆ. ವೇದ ಮತ್ತು ಅವತಿ ಎರಡು ಹೊಳೆಗಳು ಸೇರಿ ವೇದಾವತಿಯಾಗಿದೆ. ಈ ಜಿಲ್ಲೆಯಲ್ಲಿ ೬೦ ರಿಂದ ೭೦ಕಿ.ಮೀ. ಹರಿಯುವ ಈ ನದಿಯು

ಚಳ್ಳಕೆರೆ ಭಾಗದಲ್ಲಿ ಜನರಿಗೆ ಆಶಕಿರಣವಾಗಿದೆ. ಹಿರಿಯೂರು ತಾಲ್ಲೂಕಿನ ಗಡಿಯಲ್ಲಿ ಆಣೆಕಟ್ಟನ್ನು ನಿರ್ಮಿಸಲಾಗಿದ್ದು ಇದನ್ನು ಮಾರಿಕಣಿವೆ ಜಲಾಶಯ ಎಂದು ಕರೆಯಲಾಗಿದೆ.[೩೧] ಸುಮಾರು ೫೦ ಕೆರೆಗಳು ಈ ತಾಲ್ಲೂಕಿನಲ್ಲಿವೆ. ಅವುಗಳಲ್ಲಿ ಗುಡ್ಡದ ನೆರಲಕೆರೆ, ಬಾಗೂರು ಮೂಡಲ ಕೆರೆ, ದೇವಪುರ ಕೆರೆ, ಹೆಗ್ಗೆರೆಯ ಗೌಡನಕೆರೆ, ಸೂಜಿಕಲ್ ಅಮಾನಿಕೆರೆ, ಕಗ್ಗಲಕಟ್ಟೆ, ಹೊಸಕೆರೆ, ಬೆಲಗೂರು ಕೆರೆ, ಗಂಜಿಕರೆ ಹೀಗೆ ಮುಂತಾದ ಪ್ರಮುಖ ಕೆರೆಗಳು ಕಂಡುಬರುತ್ತವೆ.[೩೨] ಇವುಗಳು ಈ ಪರಿಸರದ ಬಹುಮುಖ್ಯ ನೀರಾವರಿ ಮೂಲಗಳಾಗಿವೆ. ಈ ತಾಲ್ಲೂಕಿನಲ್ಲಿ ಚೌಳುಮಣ್ಣು, ಕಪ್ಪುಮಣ್ಣು, ಮರಳು ಮಿಶ್ರಿತ ಕೆಂಪು ಮಣ್ಣು, ಮರಬು ಮಣ್ಣು ಮುಂತಾದ ಮಣ್ಣಿನ ವಿಧಗಳನ್ನು ಕಾಣಬಹುದು. ರಾಗಿ, ಜೋಳ, ನವಣೆ, ಸಾಸಿವೆ, ಸಜ್ಜೆ, ಹೆಸರು, ಅಲಸಂದಿ, ಉದ್ದು, ತೊಗರಿ, ಹುರುಳಿ, ಅವರೆ, ಶೇಂಗಾ, ಸೂರ್ಯಕಾಂತಿ, ಎಳ್ಳು, ಹರಳು, ಸಾಸಿವೆ, ಹತ್ತಿ, ಈರುಳ್ಳಿ ಮತ್ತು ಕಬ್ಬು ಮುಂತಾದ ಬೆಳೆಗಳನ್ನು ಕಾಣಬಹುದು.[೩೩]

ಹೊಸದುರ್ಗ ತಾಲ್ಲೂಕಿನಲ್ಲಿ ೪೬.೨೪೨ ಎಕರೆ ಅರಣ್ಯ ಇದೆ.[೩೪] ದೇವರಗುಡ್ಡ ಅರಣ್ಯ (೫೪೭೨ ಎಕರೆ), ಜಾನಕಲ್ ಅರಣ್ಯ (೪೯೭೩ ಎಕರೆ), ಲಕ್ಕಿಹಳ್ಳಿ ಅರಣ್ಯ (೭೨೭೪ ಎಕರೆ), ಮಾರಿಕಣಿವೆ ಅರಣ್ಯ (೧೦.೩೩೩ ಎಕರೆ), ಕುದುರೆ ಕಣಿವೆ ಅರಣ್ಯ (೫೪೫೬ ಎಕರೆ) ಇದೆ. ದೇವರಗುಡ್ಡ ಕಾಡಿನಲ್ಲಿ ಶ್ರೀಗಂಧ, ಜಾನಕಲ್ ಕಾಡಿನಲ್ಲಿ ಮತ್ತಿ, ಲಕ್ಕಿಹಳ್ಳಿ ಮಾರಿಕಣಿವೆ ಅರಣ್ಯದಲ್ಲಿ ಕಮರದ ಮರಗಳು ಹೇರಳವಾಗಿ ದೊರೆಯುತ್ತವೆ. ಉಳಿದಂತೆ ಕಾಡು ಜಾತಿಮುಳ್ಳು ಜಾತಿ ಗಿಡಗಳಿದ್ದು ಬಂಜರು ಪ್ರದೇಶದಲ್ಲಿ ನೀಲಗಿರಿ ಮಾಮೂಲಾಗಿದೆ.[೩೫]

ಹೊಸದುರ್ಗ ತಾಲ್ಲೂಕಿನ ಶಿಲೆಗಳು, ಖನಿಜ ಸಂಪತ್ತಿನ ಬಗ್ಗೆ ಗಮನ ಹರಿಸಿದಾಗ, ಬೂದಿಹಾಳು, ಗಂಜಿಕೆರೆಗಳಲ್ಲಿ ಕಲ್ನಾರು ದೊರೆಯುತ್ತದೆ. ಬೂದಿಮರಡಿ ಎಂಬಲ್ಲಿ ಪ್ರಾಚೀನ ಕಾಲದಲ್ಲಿ ಚಿನ್ನವನ್ನು ತೆಗೆಯುತ್ತಿದ್ದ ಬಗ್ಗೆ ಸೂಚನೆಗಳಿವೆ.[೩೬] ತಾಲ್ಲೂಕಿನ ಹಲವೆಡೆ ಕಬ್ಬಿಣದ ಅದುರಿನ ಕುರುಹುಗಳಿವೆ. ಹೊಸದುರ್ಗ ತಾಲ್ಲೂಕಿನ ಮಾರಿಕಣಿವೆ, ಮಾಡದಕೆರೆ ಮತ್ತು ಕಂಚಿಪುರ ಇವುಗಳು ಸ್ಫಟಿಕ ಜಾತಿಯ ಸುಣ್ಣಕಲ್ಲಿನ ಪದರಗಳು ಕಂಡುಬರುತ್ತವೆ.[೩೭] ಮ್ಯಾಂಗನೀಸ್ ಮತ್ತು ಉತ್ತಮವಾದ ವಿವಿಧ ಬಣ್ಣದ ಸುದ್ದೆ ಮಣ್ಣುಗಳು ಈ ಭಾಗದಲ್ಲಿವೆ.[೩೮]

ಈ ರೀತಿಯಾಗಿ ಹೊಸದುರ್ಗ ತಾಲ್ಲೂಕನ್ನು ಒಳಗೊಂಡಂತೆ ಇಡೀ ಚಿತ್ರದುರ್ಗ ಜಿಲ್ಲೆಯು ಭೌಗೋಳಿಕವಾಗಿ ಸಮೃದ್ಧಿಯಿಂದ ಕೂಡಿದೆ.

೨.೨ ಚಾರಿತ್ರಿಕ ಹಿನ್ನಲೆ

ಅಪಾರವಾದ ಚಾರಿತ್ರಿಕ ಕುರುಹುಗಳನ್ನು ಹೊಂದಿರುವ ಹೊಸದುರ್ಗ ಪರಿಸರ ಚಿತ್ರದುರ್ಗ ಜಿಲ್ಲೆಯಲ್ಲೆ ಬಹುಮುಖ್ಯವಾದುದು. ಹೊಸದುರ್ಗ ಪರಿಸರವು ಬಹುಮುಖ್ಯವಾಗಿ

ಮತ್ತೋಡು, ಬೂದಿಹಾಳು ಹಾಗು ಚಿತ್ರದುರ್ಗ ಪಾಳೆಯಗಾರರಿಂದ ಗುರುತಿಸಿಕೊಂಡಿದೆ. ಆದರೂ ಇಲ್ಲಿನ ಪ್ರಾಚೀನತೆಯನ್ನು ಪ್ರಾಗೈತಿಹಾಸದಿಂದ ಗುರುತಿಸಬಹುದು. ಚಿತ್ರದುರ್ಗ ಜಿಲ್ಲೆಯು ಶಿಲಾಯುಗ ಕಾಲದಿಂದಲೂ ಮಾನವನಿಗೆ ಆಶ್ರಯತಾಣವಾಗಿದ್ದಿತೆಂಬುದನ್ನು ಜಿಲ್ಲೆಯಾದ್ಯಂತ ಇದುವರೆಗೆ ಪತ್ತೆಯಾಗಿರುವ ಸುಮಾರು ೫೦ಕ್ಕೂ ಹೆಚ್ಚು ಪುರಾತತ್ವ ನೆಲೆಗಳು ಸಾಕ್ಷಿಗಳಾಗಿವೆ.[೩೯] ಜಿಲ್ಲೆಯಲ್ಲಿ ಆದಿ ಹಳೇ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ ಸಂಸ್ಕೃತಿಗಳ ನೆಲೆಗಳು ದೊರೆತಿವೆ.[೪೦] ಹೊಸದುರ್ಗ ತಾಲ್ಲೂಕು ಹಾಗೂ ಸುತ್ತಮುತ್ತಲ ಪ್ರದೇಶಗಳ ಪುರಾತತ್ವ ನೆಲೆಗಳನ್ನು ಗಮನಿಸಿದಾಗ ಆದಿಹಳೇಶಿಲಾಯುಗ ಸಂಸ್ಕೃತಿಯ ಕುರುಹುಗಳು ಗೋಚರಿಸಿವೆ. ಹೊಸದುರ್ಗ ತಾಲ್ಲೂಕು ಪರಿಸರದಲ್ಲಿ ಮೈದುಂಬಿ ಹರಿಯುವ ವೇದಾವತಿ ನದಿ ಪರಿಸರವು ಆದಿ ಹಳೇಶಿಲಾಯುಗ ಸಂಸ್ಕೃತಿಯ ಹಲವು ನೆಲೆಗಳನ್ನು ಹೊಂದಿದೆ. ಅವುಗಳಲ್ಲಿ ಬಹುಮುಖ್ಯವಾಗಿ ಹೊಸದುರ್ಗ ತಾಲ್ಲೂಕಿನ ಜಾನಕಲ್ಲು ಹಾಗೂ ಸುತ್ತಲಿನ ಹೊಳಲ್ಕೆರೆ ತಾಲ್ಲೂಕಿನ ತಾಳ್ಯಗಳನ್ನು ಗಮನಿಸಬಹುದು. ಜಾನಕಲ್ಲಿನಲ್ಲಿ ೨ಆದಿ ಹಳೇ ಶಿಲಾಯುಗದ ಆಯಧಗಳು ಹಾಗೂ ತಾಳ್ಯದಲ್ಲಿ ಮೂರು ಆಯುಧಗಳು ದೊರೆತಿವೆ.[೪೧] ಇವುಗಳನ್ನು ಕ್ವಾರ್ಟ್ಸೈಟ್ ಶಿಲೆಯಲ್ಲಿ ರೂಪಿಸಲಾಗಿದೆ. ಇವುಗಳಲ್ಲಿ ಎರಡು ಕೈಗೊಡಲಿಗಳು, ಒಂದು ಮಚ್ಚುಗತ್ತಿ ಹಾಗೂ ಒಂದು ಅಂಡಾಕಾರದ ಉಪಕರಣ.[೪೨] ಇಂತಹ ಉಪಕರಣಗಳನ್ನು ವಿವಿಧ ರೀತಿಯಲ್ಲಿ ಬಳಸಲಾಗುತ್ತಿತ್ತೆಂದು ತಿಳಿಯುತ್ತದೆ. ಅದೇ ರೀತಿ ಚಿತ್ರದುರ್ಗದ ಚಂದ್ರವಳ್ಳಿ ಹಾಗೂ ಸಂಗೇನಹಳ್ಳಿ ಪರಿಸರಗಳು ನೂತನ ಶಿಲಾಯುಗದ ಸಂಸ್ಕೃತಿಯನ್ನು ಕುರಿತು ಹೇಳುತ್ತವೆ.[೪೩] ನೂತನ ಶಿಲಾಯುಗದ ಉಪಕರಣಗಳು, ಮಡಿಕೆ ಚೂರುಗಳು ಹಾಗೂ ಸಂಗೇನಹಳ್ಳಿಯಲ್ಲಿ ಬೂದಿದಿಬ್ಬವನ್ನು ಗುರುತಿಸಲಾಗಿದೆ.[೪೪] ಚಿತ್ರದುರ್ಗ ಜಿಲ್ಲೆಯ ಬಹುಭಾಗದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿ ಕಂಡುಬಂದಿದೆ. ಅದರಲ್ಲಿ ಹೊಸದುರ್ಗ ತಾಲ್ಲೂಕು ಸುತ್ತಮುತ್ತಲ ಪರಿಸರವನ್ನು ಗಮನಿಸಿದಾಗ ಚಿತ್ರದುರ್ಗ ತಾಲ್ಲೂಕಿನ ನೇರಲಗೊಂದಿ, ಬಾರಲಗೊಂದಿ, ಇಂಗಳದಾಳು, ಕೂನಬೇವು, ಚಂದ್ರವಳ್ಳಿ, ಚಿತ್ರದುರ್ಗ, ಚಿಪ್ಪಿನಕೆರೆ, ತಮಟಕಲ್ಲು, ಜಂಪಣ್ಣನಾಯಕನ ಕೋಟೆ ಹಾಗೂ ಹೊಳಲ್ಕೆರೆ ತಾಲ್ಲೂಕಿನ ಗಂಜಿಗುಂಟೆ, ತಾಳ್ಯ, ನಂದನ ಹೊಸೂರು ಒಳಗೊಂಡಂತೆ ಹಲವು ಭಾಗಗಳಲ್ಲಿ ಬೃಹತ್ ಶಿಲಾಗೋರಿಗಳು ಪತ್ತೆಯಾಗಿವೆ.[೪೫] ಹೊಸದುರ್ಗ ತಾಲ್ಲೂಕಿನ ಹಲವು ಭಾಗಗಳಲ್ಲಿ ಬೃಹತ್ ಶಿಲಾಗೋರಿಗಳು ಪತ್ತೆಯಾಗಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ, ಶಿಲಾಯುಗದ ಮಾನವನ ಬದುಕನ್ನು ನಿರೂಪಿಸುವ ವ್ಯಾಖ್ಯಾನಿಸುವ ಸಂದರ್ಭದಲ್ಲಿ ಅನಿವಾರ್ಯವಾಗಿ ಬಳಕೆಯಾಗುವ ಸಾಕ್ಷ್ಯಧಾರಗಳಲ್ಲಿ ಆ ಕಾಲದ ಗುಹಾಚಿತ್ರಗಳು ಮಹತ್ವಪೂರ್ಣವಾದವು.[೪೬] ಚಿತ್ರದುರ್ಗ ಜಿಲ್ಲೆಯ ಬಹುಭಾಗಗಳಲ್ಲಿ ಪ್ರಾಗೈತಿಹಾಸಿಕ ಚಿತ್ರಕಲೆಗಳು ಬೆಳಕಿಗೆ ಬಂದಿವೆ. ಲಕ್ಷ್ಮಣ್ ತೆಲಗಾವಿ, ಎಚ್. ಶ್ರೀಶೈಲ ಆರಾಧ್ಯ

ಸೇರಿದಂತೆ ಹಲವು ವಿದ್ವಾಂಸರು ಜಿಲ್ಲೆಯ ಹಲವೆಡೆ ಪ್ರಾಗೈತಿಹಾಸಿಕ ಚಿತ್ರಕಲೆಯನ್ನು ಕುರಿತು ಕೆಲಸಮಾಡಿದ್ದಾರೆ.[೪೭] ಹೊಸದುರ್ಗ ತಾಲ್ಲೂಕಿನ ಜಾನಕಲ್ಲು ಹಾಗೂ ತಣಿಗೆಕಲ್ಲುಗಳಲ್ಲಿ ಬಯಲು ಬಂಡೆ ರೇಖಾಕೃತಿಗಳು ಬೆಳಕಿಗೆ ಬಂದಿವೆ. ಜಾನಕಲ್ಲು ಪರಿಸರದಲ್ಲಿ ಕುಳಿಗಳು, ಕುಳಿ ವಿನ್ಯಾಸಗಳು ಸಾಕಷ್ಟು ಪ್ರಮಾಣದಲ್ಲಿವೆ.[೪೮] ಹೀಗೆ ಹೊಸದುರ್ಗ ತಾಲ್ಲೂಕು ಹಾಗೂ ಸುತ್ತಮುತ್ತಲ ಹಲವು ಭಾಗಗಳು ಪ್ರಾಗೈತಿಹಾಸಿಕ ಕಾಲದ ಹಲವು ಸಂಗತಿಗಳನ್ನು ಕುರಿತು ಹೇಳುತ್ತವೆ.

೨.೨.೧ ಮೌರ್ಯರು:

ಕರ್ನಾಟಕ ತನ್ನ ಚಾರಿತ್ರಿಕ ಘಟ್ಟವನ್ನು ಗುರುತಿಸಿಕೊಳ್ಳುವುದು ಮೌರ್ಯರ ಕಾಲದಿಂದ ; ಮುಖ್ಯವಾಗಿ ಅಶೋಕ ಸಾಮ್ರಾಟನ (ಕ್ರಿ.ಪೂ.೨೭೩-೨೩೨) ಆಳ್ವಿಕೆಯ ಅವಧಿಯಿಂದ ಅಶೋಕನ ಶಾಸನಗಳು ದೊರೆತಿರುವ ಎಡೆಗಳೆಲ್ಲವೂ ಮೌರ್ಯಕಾಲೀನ ಸಂಸ್ಕೃತಿ ನೆಲೆಗೊಂಡಿದ್ದ ನಿವೇಶನಗಳೇ ಆಗಿವೆಯೆನ್ನುವುದು ಗಮನಾರ್ಹ.[೪೯] ಹೊಸದುರ್ಗ ತಾಲ್ಲೂಕನ್ನು ಒಳಗೊಂಡಂತೆ ಇರುವ ಚಿತ್ರದುರ್ಗ ಜಿಲ್ಲೆಯ ಬಹುಭಾಗವು ಮೌರ್ಯರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿತ್ತು. ಕುಂತಲವು ಅಶೋಕನ ಆಳ್ವಿಕೆಗೆ ಮೊದಲೇ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದಿತೆಂಬುದು ನಿರ್ವಿವಾದ ವಿಷಯವಾಗಿದೆ. ಕುಂತಲ ಸೀಮೆಯು ಭೀಮ ಮತ್ತು ವೇದಾವತಿ ನದಿಗಳ ಮಧ್ಯದಲ್ಲಿದ್ದು ಪಶ್ಚಿಮ ಘಟ್ಟಗಳನ್ನು ಸರಹದ್ದನ್ನಾಗಿ ಹೊಂದಿತ್ತು.[೫೦] ವೇದಾವತಿ ನದಿ ಪರಿಸರದಲ್ಲಿ ಬರುವ ಹೊಸದುರ್ಗ ಪರಿಸರ ಹಾಗೂ ಚಿತ್ರದುರ್ಗ ಪರಿಸರವು ಕುಂತಲದಲ್ಲಿ ಸೇರಿದ್ದಿತು. ಚಿತ್ರದುರ್ಗ ಅದರ ಸುತ್ತಮುತ್ತಲೂ ಇದ್ದ ಪ್ರದೇಶಗಳು ಕ್ರಿ.ಪೂ. ೬ನೇಯ ಶತಮಾನದಿಂದಲೂ ಔತ್ತರೆಯರ ಆಳ್ವಿಕೆಗೆ ಒಳಪಟ್ಟಿದ್ದವೆಂದು ಹೇಳಬಹುದು. ನಂದರ ಉತ್ತರಾಧಿಕಾರಿಗಳಾದ ಮೌರ್ಯರು ಅನುಕ್ರಮವಾಗಿ ಈ ಭಾಗದ ಒಡೆಯರಾದರು.[೫೧] ಚಿತ್ರದುರ್ಗ ಜಿಲ್ಲೆಯ ಉತ್ತರ ಭಾಗದಲ್ಲಿ ದೊರೆತಿರುವ ಆಶೋಕನ ಶಾಸನಗಳು ಮೌರ್ಯರ ಆಳ್ವಿಕೆಯನ್ನು ಅಧಿಕೃತವಾಗಿ ಸ್ಪಷ್ಟಪಡಿಸುವ ಆಧಾರಗಳಾಗಿವೆ. ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟಿಂಗ ರಾಮೇಶ್ವರಗಳಲ್ಲಿಯ ಮೌರ್ಯ ಚಕ್ರವರ್ತಿ ಆಶೋಕನ ಶಾಸನಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಮೌರ್ಯ ಸಾಮ್ರಾಜ್ಯದ ಆಳ್ವಿಕೆಯನ್ನು ಕುರಿತು ಹೇಳುತ್ತವೆ. ಇತ್ತೀಚೆಗೆ ನಡೆದ ಸಂಶೋಧನೆಗಳಿಂದ ಮೌರ್ಯ ಸಾಮ್ರಾಜ್ಯವು ಜಿಲ್ಲೆಯ ಪೂರ್ಣಭಾಗವನ್ನು ಒಳಗೊಂಡಿತ್ತು ಎಂದು ತಿಳಿಯಲು ಹಲವು ಸಾಕ್ಷಾಧಾರಗಳು ದೊರೆತಿವೆ. ಮೌರ್ಯರ ಮನೆಗಳೆಂದು ಕರೆಯಲ್ಪಡುವ ಪ್ರಾಚೀನ ಅವಶೇಷಗಳು ಜಿಲ್ಲೆಯ ಅನೇಕ ಕಡೆ ದೊರಕಿರುವುದು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ. ಹೊಸದುರ್ಗ ತಾಲೂಕಿನ ಹಲವು ಕಡೆ ಇವುಗಳು ಕಂಡು ಬಂದಿವೆ. ಜಿಲ್ಲೆಯ ಅನೇಕ ಭಾಗಗಳಲ್ಲಿ ಸಿಕ್ಕಿರುವ

ಆಧಾರಗಳಿಂದ ಮೌರ್ಯ ಸಾಮ್ರಜ್ಯವು ೧೪° ಅಕ್ಷಾಂಶಕ್ಕೆ ಮಾತ್ರ ಸೀಮಿತವಾಗಿರದೆ ೧೨° ಅಕ್ಷಾಂಶದವರೆಗೂ ವಿಸ್ತರಿಸಿತ್ತೆಂಬುದಾಗಿ ತಿಳಿದುಬಂದಿದೆ.[೩೨] ಒಟ್ಟಿನಲ್ಲಿ ಮೇಲಿನ ಎಲ್ಲಾ ಆಧಾರಗಳಿಂದಾಗಿ ಚಿತ್ರದುರ್ಗ ಜಿಲ್ಲೆಯು (ಹೊಸದುರ್ಗ ತಾಲ್ಲೂಕನ್ನು ಒಳಗೊಂಡಂತೆ) ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದು ಮೌರ್ಯರ ಸಾಂಸ್ಕೃತಿಕ ಪರಂಪರೆಯ ವ್ಯಾಪ್ತಿಗೆ ಒಳಗಾಯಿತು.

೨.೨.೨ ಶಾತವಾಹನರು

ಕರ್ನಾಟಕದ ಬಹುಭಾಗವನ್ನಾಳಿದ ಮೊಟ್ಟಮೊದಲನೆಯ ಪ್ರಮುಖ ರಾಜವಂಶದವರಾದ ಶಾತವಾಹನರು ತಮ್ಮನ್ನು ಕುಂತಳಸ್ವಾಮಿಗಳೆಂದು ಕರೆದುಕೊಂಡದ್ದುಂಟು. ಮೌರ್ಯ ಸಾಮ್ರಾಜ್ಯದ ಪಥನದ ಬಳಿಕ ದಕ್ಷಿಣಾಪಥದ ಒಡೆಯರಾದ ಇವರಿಗೆ ಆಂಧ್ರರು, ಆಂಧಭೃತ್ಯರು, ಶಾತಕರ್ಣಿಗಳು ಮುಂತಾದ ಹೆಸರುಗಳೂ ರೂಢಿಯಲ್ಲಿದ್ದವು.[೩೩] ಚಿತ್ರದುರ್ಗ ಜಿಲ್ಲೆಯಲ್ಲಿ ಶಾತವಾಹನರ ಶಾಸನಗಳು ದೊರೆತಿಲ್ಲ. ಆದರೆ ಶಾಸನೇತರವಾದ ಇತರೆ ಪುರಾತತ್ವ ವಸ್ತುವಿಶೇಷತೆಗಳು ಶಾತವಾಹನರ ಕಾಲದ ಸಂಸ್ಕೃತಿಯನ್ನು ಕುರಿತು ಹೇಳುವಲ್ಲಿ ಸಹಾಯಕವಾಗಿವೆ. ಕೆಲವು ದಶಕಗಳ ಹಿಂದೆ ಚಂದ್ರವಳ್ಳಿ ಕಣಿವೆಯಿಂದ ಹರಿಯುವ ಮಳೆನೀರನ್ನು ಒಂದು ಕೆರೆಗೆ ಕೊಂಡೊಯ್ಯಲು ಕಾಲುವೆ ತೊಡುತ್ತಿದ್ದಾಗ ಅನೇಕ ಸೀಸದ ನಾಣ್ಯಗಳು ದೊರೆತವು. ಇ.ಜೆ.ರ್‍ಯಾಪ್ಸನ್ ಎಂಬ ಪ್ರಸಿದ್ಧ ನಾಣ್ಯಶಾಸ್ತ್ರಜ್ಞನು ಅವುಗಳನ್ನು ಪರೀಕ್ಷಿಸಿ ೧೮೦೦ ವರ್ಷಗಳ ಹಿಂದೆ ಚಂದ್ರವಳ್ಳಿ ಪ್ರದೇಶವನ್ನು ಆಳುತ್ತಿದ್ದ ಶಾತವಾಹನ ಮಾಂಡಳಿಕ ಅರಸರ ನಾಣ್ಯಗಳೆಂದು ತೋರಿಸಿಕೊಟ್ಟ.[೩೪] ಆ ನಂತರ ೧೯೨೮ರಲ್ಲಿ ಎಂ.ಎಚ್. ಕೃಷ್ಣರವರು ನಡೆಸಿದ ಉತ್ಖನನದಿಂದ ೧೫ನೇ ಸಂಖ್ಯೆಯ ಗುಂಡಿಯಲ್ಲಿ ಒಂದು ಮನೆಯ ನೆಲಗಟ್ಟು, ಶಾತವಾಹನ ದೊರೆ ಯಜ್ಞ ಶ್ರೀ ಶಾತಕರ್ಣಿಯ ಹೆಸರುಳ್ಳ ನಾಣ್ಯ ಸಿಕ್ಕಿತು.[೩೫] ಅಲ್ಲದೆ ಮುದಾನಂದ, ಗೌತಮಿ ಪುತ್ರ ವಿಳನಾಯಕ ಕುರ, ಮಹಾರತಿ ಸದಕಣ ಕುಳಲಾಯ ಮತ್ತು ರೋಮನ್ ಚಕ್ರವರ್ತಿಯಾದ ಅಗಸ್ಟಸ್‌ನ ನಾಣ್ಯಗಳು, ಟೈಬೀರಿಯಸ್‌ನ ನಾಣ್ಯಗಳು, ರೌಲೆಟೆಡ್ ಹಾಗೂ ಬಿಳಿಬಣ್ಣದ ಚಿತ್ರಗಳುಳ್ಳ ಮಣ್ಣಿನ ಪಾತ್ರೆಗಳು ದೊರೆತವು.[೩೬] ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿಯಲ್ಲೂ ಶಾತವಾಪನ ಕುರುಹುಗಳು ದೊರೆತು ದಾಖಲಾಗಿವೆ. ಒಟ್ಟಿನಲ್ಲಿ ಚಿತ್ರದುರ್ಗ ಜಿಲ್ಲೆ ಶಾತವಾಹನರ ಆಳ್ವಿಕೆಗೊಳಪಟ್ಟಿದ್ದು ಕ್ರಿ.ಶ. ೨೦೦ರ ತರುವಾಯ.[೩೭] ಈ ಜಿಲ್ಲೆಯ ಚಂದ್ರವಳ್ಳಿಯನ್ನು ಅವರು ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದಿರಬಹುದೆಂದು ಹೇಳಬಹುದು. ಶಾತವಾಹನರ ಸಾಂಸ್ಕೃತಿಕ ಅವಶೇಷಗಳು ದೊರೆತ ಪ್ರಮಾಣವನ್ನು ಗಮನಿಸಿದರೆ ಚಂದ್ರವಳ್ಳಿ

ಅವರ ರಾಜಧಾನಿಗಳಲ್ಲಿ ಒಂದಾಗಿತ್ತೆಂದು ಊಹಿಸಬಹುದು.[೫೮] ಬನವಾಸಿಯಂತೆ ಚಂದ್ರವಳ್ಳಿಯು ಆ ಕಾಲದ ವಾಣಿಜ್ಯ ಕೇಂದ್ರವಾಗಿದ್ದಿರಬಹುದು. ಚಂದ್ರವಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು ಜಿಲ್ಲೆಯ ಬಹುಭಾಗಗಳಲ್ಲಿ (ಹೊಸದುರ್ಗ ಪರಿಸರ ಸೇರಿದಂತೆ) ಶಾತವಾಹನರ ಆಳ್ವಿಕೆ ಇತ್ತೆಂದು ಹೇಳಬಹುದು. ಕಾರಣ ಹೊಸದುರ್ಗದ ತಣಿಗೆಕಲ್ಲು ಎಂಬಲ್ಲಿ ಶಾತವಾಹನ ಕಾಲೀನ ಹಲವು ಅವಶೇಷಗಳು ದೊರೆತಿದ್ದು, ಅವುಗಳಲ್ಲಿ ಬಹುಮುಖ್ಯವಾಗಿ ಶಾತವಾಹನ ಕಾಲೀನ ನಯವಾದ ಹೊಳೆಯುವ ಮಡಿಕೆ ಚೂರುಗಳು ದೊರೆತಿವೆ.[೫೯] ಆದ್ದರಿಂದ ಹೊಸದುರ್ಗ ಪರಿಸರವನ್ನು ಒಳಗೊಂಡಂತೆ ಚಿತ್ರದುರ್ಗ ಜಿಲ್ಲೆಯ ಬಹುಭಾಗವು ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬಹುದು.

೨.೨.೩. ಕದಂಬರು:

ಕದಂಬರ ಆಳ್ವಿಕೆಯನ್ನು ಗುರುತಿಸಲು ಕದಂಬರ ಕಾಲದ ಕೆಲವು ಶಾಸನಗಳು ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿವೆ. ಚಂದ್ರವಳ್ಳಿಯಲ್ಲಿರುವ ಮಯೂರವರ್ಮನ ಶಾಸನವು ಹೇಳುವಂತೆ ಮಯೂರ ವರ್ಮನು ಇಲ್ಲಿದ್ದ ಕೆರೆಯನ್ನು ದೃಢಕೃತ ಮಾಡಿದನು. ಕಾಡಿನವಾಸದ ನೆಲೆಯನ್ನು ಸ್ಥಾಪಿಸಿಕೊಂಡಿದ್ದನು ಎಂದು ತಿಳಿದುಬರುತ್ತದೆ. ಮಯೂರವರ್ಮನು ಕಂಚಿಯಲ್ಲಿ ಪಲ್ಲವರಿಂದ ಅವಮಾನಗೊಂಡು ತರುವಾಯದಲ್ಲಿ ತನ್ನ ಬ್ರಾಹ್ಮಣತ್ವ ತ್ಯಜಿಸಿ ಕ್ಷತ್ರಿಯತ್ವ ಸ್ವೀಕರಿಸಿ, ತನ್ನದೇ ರಾಜ್ಯ ಕಟ್ಟುವ ಪೂರ್ವದಲ್ಲಿ ದುರ್ಗಮವಾದ ಒಂದು ಪರ್ವತಾರಣ್ಯದಲ್ಲಿ ವಾಸವಾಗಿದ್ದ ಎಂದು ತಾಳಗುಂದದ ಶಾಸನ ಹೇಳುತ್ತಿದ್ದು, ಅದು ಚಿತ್ರದುರ್ಗದ ಚಂದ್ರವಳ್ಳಿಯ ಬಳಿಯ ಧವಳಪ್ಪನ ಗುಡ್ಡದ ಸುತ್ತಮುತ್ತಲ ಪ್ರದೇಶವೇ ಎಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ[೬೦] ಎಂದು ಬಿ. ರಾಜಶೇಖರಪ್ಪನವರು ಅಭಿಪ್ರಾಯಪಟ್ಟಿದ್ದಾರೆ. ಕದಂಬರ ಆಳ್ವಿಕೆಯಲ್ಲಿ ಬರುವ ರವಿವರ್ಮ ಮಹಾರಾಜನು ಬರೆಯಿಸಿದ ಕಾಶೀಪುರದ ಶಾಸನದಲ್ಲಿ ಇವನು ಕೊಟ್ಟ ವತ್ತಿದುಮಾ್ಯ ಎಂಬ ಹಳ್ಳಿಯಲ್ಲಿ ಆಸಂಧಿ ವಿಷಯ ಕರಂಜ ಎಂಬ ಗ್ರಾಮದಲ್ಲಿ ಆಳವೂರಿನಲ್ಲಿ ಮತ್ತು ಆನೆಗಲ್ಲಿಯಲ್ಲಿ ಇದ್ದವು ಈ ದಮಾ್ಯ ಎಂಬ ಗ್ರಾಮವು ಬಹುಶಃ ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ದುಮ್ಮಿ ಆಗಿರಬೇಕು.[೬೧] ಆಸಂದಿ ವಿಷಯ ಚಿತ್ರದುರ್ಗ ಜಿಲ್ಲೆಯ ದಕ್ಷಿಣದ ಭಾಗಗಳನ್ನು ಕಡೂರು ತಾಲ್ಲೂಕಿನ ಭಾಗಗಳನ್ನು ಒಳಗೊಂಡಿತ್ತು.[೬೨] ಅಂದರೆ ಇಂದಿನ ಹೊಸದುರ್ಗ ತಾಲ್ಲೂಕು ಹಾಗೂ ಸುತ್ತಲ ಹಲವು ಪ್ರದೇಶಗಳು ಕದಂಬರ ಆಳ್ವಿಕೆಗೆ ಒಳಪಟ್ಟಿದ್ದವು ಎಂದು ಇದರಿಂದ ತಿಳಿದು ಬರುತ್ತದೆ. ಕದಂಬರ ಆಳ್ವಿಕೆಯ ಭಾಗವಾದ ಕದಂಬಳಿಗೆ ಸಾಸಿರ ಎಂಬುದು ಚಿತ್ರದುರ್ಗ ಜಿಲ್ಲೆಯ ಬಹುಭಾಗವನ್ನು ವ್ಯಾಪಿಸಿತ್ತು.[೬೩] ಈ

ಭಾಗದಲ್ಲಿ ಹೊಸದುರ್ಗ ಪ್ರಾಂತ್ಯವನ್ನು ಗುರುತಿಸಬಹುದು. ಒಟ್ಟಾರೆಯಾಗಿ ಹೊಸದುರ್ಗ ತಾಲ್ಲೂಕು ಪರಿಸರವು ಕದಂಬರ ಆಳ್ವಿಕೆಗೆ ಒಳಪಟ್ಟಿದ್ದ ಭಾಗವೆಂದು ಹೇಳಬಹುದು.

೨.೨.೪ ಚಾಲುಕ್ಯರು:

ಹೊಸದುರ್ಗ ತಾಲ್ಲೂಕು ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ಚಾಲುಕ್ಯರ ಆಳ್ವಿಕೆಯನ್ನು ಗುರುತಿಸುವ ಹಲವು ಗುರುತುಗಳಿವೆ. ಚಾಲುಕ್ಯರಲ್ಲಿ ಮೂರು ಶಾಖೆಗಳುಂಟು. ಬಾದಾಮಿ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು ಮತ್ತು ವೆಂಗಿಯ ಚಾಲುಕ್ಯರು.[೬೪] ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ನೊಳಂಬವಾಡಿ ೩೨೦೦೦ ಪ್ರಾಂತ್ಯವೆಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ಚಿತ್ರದುರ್ಗ ಜಿಲ್ಲೆಯು ಕಲಹಕ್ಕೆ ಕಾರಣವಾಗಿದ್ದ ಪ್ರದೇಶವಾಗಿತ್ತು. ಬಾದಾಮಿ ಚಾಲುಕ್ಯರಿಗೆ ಪಲ್ಲವರು ವೈರಿಗಳಾಗಿದ್ದರೆ ಕಲ್ಯಾಣಿ ಚಾಲುಕ್ಯರಿಗೆ ಚೋಳರು ವೈರಿಗಳಾಗಿದ್ದರು. ಚೋಳ ಮತ್ತು ಚಾಲುಕ್ಯ ರಾಜ್ಯಗಳ ನಡುವೆ ಅನೇಕ ಬಾರಿ ಯುದ್ಧಗಳು ನಡೆದವು.[೬೫] ಇದೇ ಕಾಲದಲ್ಲಿ ಚಾಲುಕ್ಯರ ಸಾಮಂತರಾಗಿ ಈ ಪ್ರಾಂತ್ಯವನ್ನು ಆಳಿಕೊಂಡು ಹೋಗುತ್ತಿದ್ದ ಮುಖ್ಯಮನೆತನಗಳೆಂದರೆ ಹಂಜೇರಿನ ನೊಳಂಬರು (ಕ್ರಿ.ಶ. ೭೦೦- ಕ್ರಿ.ಶ.೧೦೫೦) ಮತ್ತು ಉಚ್ಚಂಗಿಯ ಪಾಂಡ್ಯರು (ಕ್ರಿ.ಶ.೧೦೭೩- ಕ್ರಿ.ಶ೧೧೮೩) ಈ ಕಾಲದ ಶಾಸನಗಳಲ್ಲಿ ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳನ್ನು ಕದಂಬಳಿಗೆ ಮತ್ತು ನೊಳಂಬಳಿಗೆ ಎಂದು ಕರೆಯಲಾಗಿದೆ.[೬೬] ನೊಳಂಬವಾಡಿ-೩೨೦೦೦ ಪ್ರಾಂತ್ಯವು ಹೊಸದುರ್ಗ ಪ್ರಾಂತ್ಯವನ್ನು ಒಳಗೊಂಡಿತ್ತು. ೨ನೇಯ ಜಯಸಿಂಹ ದೊರೆಯ ಎರಡು ಶಾಸನಗಳು ಚಳ್ಳಕೆರೆ ತಾಲ್ಲೂಕಿನಲ್ಲಿದ್ದು ಇವುಗಳಿಂದ ಇವನು ರೊಡ್ಡಾ, ಶಿರಾ, ನೊಳಂಬವಾಡಿ ಹಾಗೂ ಕದಂಬಳಿಗೆ ಮುಂತಾದ ಇತರೆ ಪ್ರಾಂತ್ಯಗಳನ್ನು ಆಳುತ್ತಿದ್ದನೆಂದು ತೋರಿಬರುವುದು.[೬೭] ದಾವಣಗೆರೆಯ ಬಳಿ ಹದಡಿಯಲ್ಲಿನ ಕ್ರಿ.ಶ.೧೦೪೨ರ ಶಾಸನವು ತ್ರೈಲೋಕ್ಯಮಲ್ಲನು ಕದಂಬಳಿಗೆಯನ್ನು ಆಳುತ್ತಿದ್ದನೆಂಬುದಾಗಿ ಹೇಳುತ್ತದೆ.[೬೮] ಸೋಮೇಶ್ವರನ ಮಕ್ಕಳಲ್ಲಿ ಒಬ್ಬನಾದ ವಿಷ್ಣುವರ್ಧನನು ಕ್ರಿ.ಶ.೧೦೬೪ ರಿಂದ ಕ್ರಿ.ಶ.೧೦೬೬ರವರೆಗೆ ನೊಳಂಬವಾಡಿ ಪ್ರಾಂತ್ಯವನ್ನಾಳುತ್ತಿದ್ದನೆಂದು ಹಲವು ಶಾಸನಗಳಿಂದ ತಿಳಿದುಬರುವುದು.[೬೯] ಕ್ರಿ.ಶ.೧೦೮೩ರಲ್ಲಿ ತ್ರಿಭುವನಮಲ್ಲ ಪಾಂಡ್ಯದೇವನು ನೊಳಂಬವಾಡಿಗೆ ಮಹಾಮಂಡಲೇಶ್ವರನಾಗಿದ್ದನೆಂದು ಶಿವಮೊಗ್ಗ ಜಿಲ್ಲೆಯ ಶಾಸನವೊಂದರಿಂದ ಗೊತ್ತಾಗುತ್ತದೆ.[೭೦]

೨.೨.೫ ರಾಷ್ಟ್ರಕೂಟರು

ಹೊಸದುರ್ಗವನ್ನು ಒಳಗೊಂಡಂತೆ ಚಿತ್ರದುರ್ಗ ಜಿಲ್ಲೆಯ ಬಹುಭಾಗ ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿದ್ದಿತು ಎಂಬುದಕ್ಕೆ ಕೆಲವು ಶಾಸನಗಳು ಮಾಹಿತಿ ನೀಡುತ್ತವೆ. ರಾಷ್ಟ್ರಕೂಟರ

ಚರಿತ್ರೆ ನಾಡಿನ ಬಹುಭಾಗ ವ್ಯಾಪಿಸುವಂತೆ ಮಾಡಿದ ಕೀರ್ತಿ ಈ ಮನೆತನದ ೩ನೇ ಗೋವಿಂದನಿಗೆ ಸಲ್ಲುತ್ತದೆ. ಇವರ ಕಾಲದಲ್ಲಿ ೩ನೇ ಗೋವಿಂದನ ಸಾಮಂತನಾಗಿ ನೊಳಂಬ ರಾಜನಾದ 'ಚಾರುಪೊನ್ನೇರ ಜಗತ್ತುಂಗ ಪ್ರಭೂತ ವರ್ಷ' ಎಂಬುವವನು 'ಸುಳುಂಗಲ್-೭೦' ಅಥವಾ 'ಸುಲಗಲ್-೭೦'ರ ಸಾಮಂತನಾಗಿ ಆಳಿದ್ದನು.[೨೧] ಅವುಗಳೊಂದಿಗೆ ಕದಂಬಳಿಗೆ-೧೦೦೦, ಮಂಡಳಿ-೧೦೦೦ ಗಳು ನೊಳಂಬವಾಡಿ- ೩೨೦೦೦ದಲ್ಲಿ ಅಂತರ್ಗತವಾಗಿದ್ದು ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿದ್ದವು.[೨೨] ಹೀಗೆ ನಾವು ಈ ಭಾಗದಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಗುರುತಿಸಬಹುದು.

೨.೨.೬. ನೊಳಂಬರು

ನೊಳಂಬ ಅಥವಾ ನೊಳಂಬಪಲ್ಲವರ ಮನೆತನವು ಕರ್ನಾಟಕದಲ್ಲಿ ಆಳಿದ ಅನೇಕ ಪ್ರಮುಖ ರಾಜಮನೆತನಗಳಲ್ಲಿ ಒಂದು. ಕ್ರಿ.ಶ.೮ನೇ ಶತಮಾನದಿಂದ ಸುಮಾರು ೩ ಶತಮಾನಗಳ ಕಾಲ ಕರ್ನಾಟಕದ ಹಲವು ಭಾಗಗಳಲ್ಲಿ ಆಳಿದ ನೊಳಂಬರು ಕಂಚಿಯ ಪಲ್ಲವರ ವಂಶದೊಂದಿಗೆ ಮೂಲವನ್ನು ಕಲ್ಪಿಸಿಕೊಳ್ಳುತ್ತಾರೆ.[೨೩] ಚಿತ್ರದುರ್ಗ ಜಿಲ್ಲೆಯಲ್ಲಿ ಹಲವು ಶತಮಾನಗಳವರೆಗೆ ಗಂಗ, ಚಾಲುಕ್ಯ, ಚೋಳ ಮತ್ತು ಹೊಯ್ಸಳರ ಮಹಾಸಾಮಂತರಾಗಿ ಆಳಿದ ನೊಳಂಬರು ಅಪಾರ ಖ್ಯಾತಿವೆತ್ತ ಸಾಮಂತ ಕುಲದವರು. ಹೊಸದುರ್ಗ ಪರಿಸರದಲ್ಲಿ ನೊಳಂಬರ ಆಳ್ವಿಕೆ ಇದ್ದಿತು. 'ನೊಳಂಬಳಿಗೆ-೧೦೦೦ ವನ್ನು ಆಳ್ವಿಕೆ ಮಾಡಲಾರಂಭಿಸಿದ ಮುಖ್ಯವಾದ ರಾಜಮನೆತನವೆಂದರೆ ನೊಳಂಬ ಪಲ್ಲವರದು. ಇವರ ರಾಜಧಾನಿ ಪಂಜೇರು ಅಥವಾ ಹಂಜೇರು. ಮೊದಲು ನೊಳಂಬಳಿಗೆ ಸಾವಿರವಾಗಿದ್ದ ಇವರ ರಾಜ್ಯ ಮುಂದೆ ನೊಳಂಬವಾಡಿ-೩೨೦೦೦ ರಾಜ್ಯವಾಯಿತು. ನೊಳಂಬರು ಕೆಲವು ಕಾಲ ಗಂಗರ ಸಾಮಂತರಾಗಿಯೂ ಮತ್ತೆ ಕೆಲವು ಕಾಲ ರಾಷ್ಟ್ರಕೂಟರ ಸಾಮಂತರಾಗಿಯೂ ಸ್ವತಂತ್ರ ರಾಜರಂತೆಯೂ ಆಳ್ವಿಕೆ ಮಾಡಿದರು. ಚಿತ್ರದುರ್ಗ ಜಿಲ್ಲೆಯ ತೀರ ದಕ್ಷಿಣಕ್ಕಿದ್ದ ನೀರ್ಗುಂದ-೩೦೦ ಪ್ರಾಂತ್ಯವು ನೊಳಂಬರ ಅಧೀನದಲ್ಲಿತ್ತು.[೨೪] ಈ ನೀರ್ಗುಂದ-೩೦೦ ಪ್ರಾಂತ್ಯವು ಇಂದು ಹೊಸದುರ್ಗ ತಾಲ್ಲೂಕಿನಲ್ಲಿದೆ. ಚಳ್ಳಕೆರೆ ತಾಲ್ಲೂಕು ಚಿಕ್ಕಮಧುರೆ ಗ್ರಾಮದ ಮಲ್ಲೇಶ್ವರ ದೇವಾಲಯದ ಕ್ರಿ.ಶ.೮೧೫ಕ್ಕೆ ಸಂಬಂಧಿಸಿದ ಸ್ಥಂಭ ಶಾಸನಗಳಲ್ಲಿ ಮೊದಲನೆಯದು ಜಗತುಂಗ ಪ್ರಭುವರ್ಷ ಪ್ರತಾಪಾವ ಲೋಕ ಶ್ರೀವಲ್ಲಹ ತನ್ನ ಚಕ್ರಾಧಿಪತ್ಯವನ್ನಾಳುತ್ತಿರಲು, ಪರಮೇಶ್ವರ ಪಲ್ಲವಾಧಿ ನೊಳಂಬಳಿಗೆ-೧೦೦೦ ಮತ್ತು ನೀರ್ಗುಂದ-೩೦೦ ನಾಡುಗಳನ್ನು ಸಾಮಂತನಾಗಿ ಆಳುತ್ತಿದ್ದ ಅಂಶ ತಿಳಿದು ಬರುವುದು.[೨೫] ಬಾಗೇನುಹಾಳುವಿನ ಹಾಳುಬಿದ್ದಿರುವ ಈಶ್ವರ ದೇವಾಲಯದ ಕ್ರಿ.ಶ.೯೧೮ರ ಶಾಸನವು[೨೬] ಮತ್ತು ಮುಷ್ಠೂರಿನ ಕಲ್ಲೇಶ್ವರ ದೇವಾಲಯದ ಕ್ರಿ.ಶ.

೯೨೦ರ ಶಾಸನವು[೨೭] ನೊಳಂಬಾಧಿರಾಜ ಅಯ್ಯಪ್ಪದೇವ ನೊಳಂಬವಾಡಿ ಮತ್ತಿತರ ನಾಡುಗಳನ್ನು ಆಳುತ್ತಿದ್ದನೆಂದು ತಿಳಿಸುತ್ತವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಹಲವು ಶತಮಾನಗಳವರೆಗೆ ವೈಭವದಿಂದ ಆಳಿದ ನೊಳಂಬರು ಕರ್ನಾಟಕ ಸಾಮಂತ ಮನೆಗಳಲ್ಲಿ ಮಹತ್ವದ ಸ್ಥಾನ ಪಡೆದಿದ್ದರು. ಚಿತ್ರದುರ್ಗ ಜಿಲ್ಲೆಯ ಸಾಂಸ್ಕೃತಿಕ ಮುನ್ನಡೆ ಕಾರ್ಯದಲ್ಲಿ ಇವರ ಸೇವೆ ಗಣನೀಯವಾದುದು.

೨.೨.೭. ಉಚ್ಚಂಗಿ ಪಾಂಡ್ಯರು

ಹೊಸದುರ್ಗ ತಾಲ್ಲೂಕು ಪರಿಸರವನ್ನು ಒಳಗೊಂಡಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಉಚ್ಚಂಗಿ ಪಾಂಡ್ಯರ ಆಳ್ವಿಕೆಯನ್ನು ಗುರುತಿಸಬಹುದು. ಚಿತ್ರದುರ್ಗ ಜಿಲ್ಲೆಯಲ್ಲಿ ಇದುವರೆಗೂ ಉಚ್ಚಂಗಿ ಪಾಂಡ್ಯರ ಶಾಸನಗಳು ಸುಮಾರು ೪೨ ಕ್ಕೂ ಹೆಚ್ಚು ದೊರೆತಿವೆ.[೨೮] ಇವರು ಕ್ರಿ.ಶ.೧೧ನೇ ಶತಮಾನದಿಂದ ಕ್ರಿ.ಶ.೧೩ನೇ ಶತಮಾನದವರೆಗೆ ಆಳುತ್ತಿದ್ದರೆಂಬ ಅಂಶ ಸ್ಪಷ್ಟವಾಗಿದೆ. ಇವರು ಪ್ರಸಿದ್ಧ ಚಂದ್ರವಂಶದವರೆಂದು ಅಲ್ಲದೆ ಯಾದವ ಕುಲಮಣಿಗಳು, ಕುಲಶಿರೋಮಣಿಗಳೆಂದು ಕರೆಯಲ್ಪಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ, ಹೊಸದುರ್ಗ, ದಾವಣಗೆರೆ ಜಿಲ್ಲೆಯ ದಾವಣಗೆರೆ, ಹರಿಹರ ಮತ್ತು ಜಗಲೂರು ತಾಲ್ಲೂಕುಗಳನ್ನು ಒಳಗೊಂಡ ಪ್ರದೇಶವು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನೊಳಂಬವಾಡಿ–೩೨,೦೦೦ ಪ್ರಾದೇಶಿಕ ವಿಭಾಗದ ಭಾಗವಾಗಿದ್ದಿತು. ಈ ಭಾಗವನ್ನು ಮಹಾಮಂಡಳೇಶ್ವರನಾದ ತ್ರಿಭುವನಮಲ್ಲ ವೀರಪಾಂಡ್ಯದೇವನು ಕ್ರಿ.ಶ.೧೧೦೫ ರಿಂದ ೧೧೪೫ರವರೆಗೂ ಅನಂತರ ವಿಜಯಪಾಂಡ್ಯದೇವನು ಸು.೧೨೦೦ರ ವರೆಗೂ ಆಳಿದ ಕಾರಣದಿಂದಾಗಿ, ಆನಂತರ ಬಂದ ಹೊಯ್ಸಳರು ಈ ಪ್ರದೇಶವನ್ನು ಪಾಂಡ್ಯದೇಶವೆಂದು ಕರೆದರು.[೨೯] ಉಚ್ಚಂಗಿ ಪಾಂಡ್ಯರ ತ್ರಿಭುವನಮಲ್ಲ ಪಾಂಡ್ಯನನ್ನು ಇರುಕ್ಕವೇಲ ಎಂದು ಕರೆಯುತ್ತಿದ್ದರು. ಇವನು ಪ್ರಾರಂಭದಲ್ಲಿ ನೊಳಂಬವಾಡಿ ಸಾಸಿರವನ್ನು ಆಳುತ್ತಿದ್ದವನು ನಂತರ ನೊಳಂಬವಾಡಿ–೩೨೦೦೦ ಪ್ರಾಂತ್ಯಕ್ಕೆ ರಾಜ್ಯಭಾರ ವಿಸ್ತರಿಸದನೆಂದು ಚೆನ್ನಗಿರಿಯ ಕ್ರಿ.ಶ. ೧೦೮೩ರ ಶಾಸನದಿಂದ ತಿಳಿದು ಬರುವುದು.[೩೦] ಚಿತ್ರದುರ್ಗದ ಗಾರೇಹಟ್ಟಿಯ ಕ್ರಿ.ಶ. ೧೧೨೪ರ ಶಾಸನದ ಪ್ರಕಾರ ಇರುಕ್ಕವೇಲನು "ಶೌಚಗಾಂಗೆಯಮ್ । ಕಾಯ್ವರ ಭೀಮಮ್, ಸಂಗ್ರಾಮ ರಾಮಮ್, ಅಳಿಂಗ ಬಳಂಜಿಗಮ್, ನೊಳಂಬನಾಗರುಡಮ್ । ಮಾರ್ತಾಂಡದೇವ ಪಾಧಾರಾಧಕಂ । ರಣಮೂರ್ಖ ಕುಳಪ್ರದೀಪಂ, ಚೋಳೇಶ್ವರ ದೇವಲಬ್ಧ ವರಪ್ರಸಾದಮ್" ಇತ್ಯಾದಿ ಪ್ರಶಸ್ತಿಗಳನ್ನು ಹೊಂದಿದ್ದನು ಎಂಬುದಾಗಿ ಅದು ಹೇಳುತ್ತದೆ.[೩೧] ಹೊಳಲ್ಕೆರೆ ತಾಲ್ಲೂಕಿನ ಗುಂಜಗನೂರು ಗ್ರಾಮದ ಕ್ರಿ.ಶ.೧೧೨೭ರ ಶಾಸನವೇ ತ್ರಿಭುವನಮಲ್ಲ ಪಾಂಡ್ಯನ ಆಳ್ವಿಕೆಯ ಕಟ್ಟಕಡೆಯ ಶಾಸನವಾಗಿದೆ.[೩೨]

ತ್ರಿಭುವನ ಪಾಂಡ್ಯನ ಆ ನಂತರ ಅವನ ಮಗ ರಾಯಪಾಂಡ್ಯನು ನೊಳಂಬವಾಡಿ-೩೨೦೦೦, ಸಾಂತಳಿಗೆ-೧೦೦೦ವನ್ನು ಆಳುತ್ತಿದ್ದನೆಂದು ತಿಳಿದುಬರುವುದು.[೮೩] ಕ್ರಿ.ಶ.೧೧೨೫ರ ಜಿಗಳಿ ಶಾಸನದ ಪ್ರಕಾರ ಮಹಾಮಂಡಳೇಶ್ವರ ರಾಯಪಾಂಡ್ಯನು ಕದಂಬಳಿಗೆ ಪ್ರಾಂತ್ಯವನ್ನು ಆಳುತ್ತಿದ್ದನೆಂಬುದಾಗಿ ಮಾಹಿತಿ ನೀಡುತ್ತದೆ. ಒಟ್ಟಾರೆ ಉಚ್ಚಂಗಿ ಪಾಂಡ್ಯರ ಆಳ್ವಿಕೆಯ ಕಾಲದಲ್ಲಿ ನೊಳಂಬವಾಡಿ-೩೨೦೦೦, ಕದಂಬಳಿಗೆ ಎಂಬ ಪ್ರಾಂತ್ಯಗಳಿಗೆ ಅವರ ಆಳ್ವಿಕೆಯ ವ್ಯಾಪ್ತಿಗೆ ಸೇರಿದ್ದವು ಎಂಬುದನ್ನು ಮೇಲಿನ ಹಲವು ವಿಚಾರಗಳಿಂದ ತಿಳಿಯಬಹುದು.

೨.೨.೮. ಹೊಯ್ಸಳರು

ಕರ್ನಾಟಕವನ್ನಾಳಿದ ಬಹುಮುಖ್ಯ ರಾಜಮನೆತನಗಳಲ್ಲಿ ಹೊಯ್ಸಳ ವಂಶವು ಪ್ರಮುಖವಾಗಿದೆ. ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ತನ್ನದೇ ಆದ ಸ್ಥಾನವನ್ನು ಹೊಂದಿರುವ ಹೊಯ್ಸಳ ಮನೆತನವು ಕ್ರಿ.ಶ.೧೧ನೇ ಶತಮಾನದಿಂದ ೧೪ನೇ ಶತಮಾನದ ಮಧ್ಯಕಾಲದವರೆಗೂ ಕರ್ನಾಟಕ ಮಾತ್ರವಲ್ಲದೆ ದಕ್ಷಿಣದ ಬಹುಭಾಗಗಳಲ್ಲಿ ಆಳ್ವಿಕೆ ನಡೆಸಿತು. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯಿಕ ಮತ್ತು ಶಿಲ್ಪಕಲೆಗಳ ದೃಷ್ಠಿಯಿಂದ ಹೊಯ್ಸಳರ ಆಳ್ವಿಕೆಯ ಅವಧಿ ಅತ್ಯಂತ ಪ್ರಭಾವಯುತವಾದುದು. ಪ್ರಸ್ತುತ ಹೊಸದುರ್ಗ ತಾಲ್ಲೂಕನ್ನು ಒಳಗೊಂಡಂತೆ ಇಡೀ ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳರ ಆಳ್ವಿಕೆಯನ್ನು ಚಿತ್ರಿಸಲು ಸಹಾಯಕವಾಗಿ ಐವತ್ತಕ್ಕೂ ಹೆಚ್ಚು ಶಾಸನಗಳಿವೆ.[೮೪] ಅವುಗಳ ಅಧ್ಯಯನದಿಂದ ನಮಗೆ ತಿಳಿದು ಬರುವುದೇನೆಂದರೆ ಹೊಯ್ಸಳರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಇಡೀ ಜಿಲ್ಲೆಯನ್ನು ಆಕ್ರಮಿಸಿಕೊಂಡು ಇಲ್ಲಿ ಆಳ್ವಿಕೆ ನಡೆಸಿದರೆಂದು ಮನಗಾಣುತ್ತೇವೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಕೆರೆ-ಕಾಲುವೆ, ದೇವಾಲಯ, ಅಗ್ರಹಾರ ಇತ್ಯಾದಿಗಳನ್ನು ಕುರಿತು ಈ ಪ್ರದೇಶದಲ್ಲಿ ಸಿಕ್ಕ ಶಾಸನಗಳು ಸಾರುತ್ತವೆ.[೮೫] ಕೇವಲ ರಾಜಕೀಯವಾಗಿ ಅಲ್ಲದೆ ಈ ಜಿಲ್ಲೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ ಇತರ ರಾಜಮನೆತನಗಳಂತೆ ಹೊಯ್ಸಳರ ಕೊಡುಗೆಯೂ ಮಹತ್ವವಾದುದೆಂಬುದು ಇವೇ ಶಾಸಗಳಿಂದ ವ್ಯಕ್ತಪಡುತ್ತವೆ. ಕ್ರಿ.ಶ. ೧೧೯೩ರ ಹೊಯ್ಸಳ ಪ್ರಭು ಇಮ್ಮಡಿ ಬಲ್ಲಾಳನ ಶಾಸನವೇ ಈ ಜಿಲ್ಲೆಯಲ್ಲಿ ದೊರೆತ ಹೊಯ್ಸಳ ಮನೆತನದ ಪ್ರಥಮ ಶಾಸನ . ಇಮ್ಮಡಿ ಬಲ್ಲಾಳನಿಂದ ಮೊದಲ್ಗೊಂಡು ಮುಮ್ಮಡಿ ಬಲ್ಲಾಳನ ಕಾಲದವರೆಗಿನ ಶಾಸನಗಳೂ ಇಲ್ಲಿ ದೊರೆತಿವೆ.[೮೬] ಹೊಳಲ್ಕೆರೆ ತಾಲ್ಲೂಕು ಹಿರೇಎಮ್ಮಿಗನೂರು ಕಲ್ಲೇಶ್ವರ ದೇವಾಲಯದದಲ್ಲಿರುವ ಕ್ರಿ.ಶ. ೧೨೨೦ರ ಶಾಸನವು ಈ ಪ್ರದೇಶದಲ್ಲಿ ಆಳಿದ ಚಾಳುಕ್ಯರನ್ನು, ಕಳಚೂರ್ಯನ್ನು, ಪಾಂಡ್ಯರನ್ನು ಸಂಬೋಧಿಸಿ, ಪಾಂಡ್ಯರ ಅಧೀನದಲ್ಲಿದ್ದ ನೊಳಂಬವಾಡಿ-೩೨೦೦೦ ವನ್ನು ಹೋರಾಟದಲ್ಲಿ ಇಮ್ಮಡಿ

ಬಲ್ಲಾಳನೇ ಗೆದ್ದುಕೊಂಡನೆಂತಲೂ ತಿಳಿಸುತ್ತದೆ.[೮೭] ಬಾಗೂರು ಬಳಿ ಇರುವ ಮಳಲಿ ಗ್ರಾಮದ ಈಶ್ವರ ದೇವಾಲಯದಲ್ಲಿರುವ ಕ್ರಿ.ಶ. ೧೨೨೬ರ ವೀರಗಲ್ಲು, ಇಮ್ಮಡಿ ನರಸಿಂಹನು ಗಂಗವಾಡಿ-೯೬೦೦೦ ಮತ್ತು ನೊಳಂಬವಾಡಿ-೩೨೦೦೦ ನಾಡುಗಳನ್ನು ಆಳುತ್ತಿದ್ದಾಗ ಮಾದಿಗೌಡನೆಂಬುವನು ಹೋರಾಟದಲ್ಲಿ ಮರಣಹೊಂದಲು ಇಲ್ಲಿಯ ಗೌಡರು ಅವನ ಹೆಸರಿನಲ್ಲಿ ಶ್ರೀಕಲಿ ದೇವರಿಗೆ ಭೂದತ್ತಿ ಬಿಟ್ಟುಕೊಟ್ಟುದುದನ್ನು ಹೇಳುತ್ತದೆ.[೮೮] ಹೊಸದುರ್ಗ ಹೋಬಳಿಯ ಹುಣುವಿನೋಡು ಗ್ರಾಮದಲ್ಲಿರುವ ಕ್ರಿ.ಶ. ೧೨೨೮ರ ಶಾಸನವು ಹೊಯ್ಸಳರ ಇಮ್ಮಡಿ ಬಲ್ಲಾಳನ ಹೆಸರಿನಲ್ಲಿದೆ. ಸಿರಾಳಮಲ್ಲಿಗೆಯ ಮಹಾನಾಡು ಪ್ರಭು ನೀಡಿದ ಭೂದತ್ತಿ ವಿವರಗಳನ್ನೊಳಗೊಂಡಿದೆ.[೮೯] ಅದೇ ರೀತಿ ಮಳಲಿ ಗ್ರಾಮದ ಕ್ರಿಶ೧೨೩೭ರ ವೀರಗಲ್ಲು ಹೇಳುವಂತೆ ಹೊಯ್ಸಳ ಸೋಮೇಶ್ವರನು ಆಡಳಿತ ನಡೆಸುತ್ತಿರುವಾಗ ಕೆಲವರು ಹಸುಗಳನ್ನು ಕದ್ದು ಒಯ್ಯುವಾಗ ಚಿಕ್ಕಬೋವನೆಂಬುವನು ಅವರೊಡನೆ ಹೋರಾಡಿ ವೀರಸ್ವರ್ಗ ಪಡೆದನು. ಅವನ ಹೆಸರಿನಲ್ಲಿ ಮಾರಬೋವ ಎಂಬುವನು ವೀರಗಲ್ಲು ನಿಲ್ಲಿಸಿದನು.[೯೦]

ಹೊಸದುರ್ಗ ಪರಿಸರದ ನೀರಗುಂದ ಗ್ರಾಮದ ಸಿದ್ದೇಶ್ವರ ದೇವಾಲಯದ ಬಳಿ ಇರುವ ಶಾಸನವು ವೀರಬಲ್ಲಾಳನ ಕಾಲದ್ದು ಅದರಲ್ಲಿ ಹೇಳುವಂತೆ ಗಂಗವಾಡಿ ಹಾಗೂ ನೊಳಂಬವಾಡಿ ಎಂಬ ಪ್ರದೇಶಗಳ ಉಲ್ಲೇಖದೊಂದಿಗೆ ಅವುಗಳನ್ನು ವೀರಬಲ್ಲಾಳನು ಸುಖಸಂಕಾಥ ವಿನೋದದಿಂದ ಆಳ್ವಿಕೆ ನಡೆಸುತ್ತಿದ್ದಾನೆ ಎಂದೂ ಹಾಗೂ ನಲ್ಲಸೆಟ್ಟಿ ಅಥವಾ ಬಲ್ಲಾಳಸೆಟ್ಟಿ ಎಂಬುವವನು ಈ ದೇವಾಲಯದ ದುರಸ್ತಿಯನ್ನು, ಬಿರುಕು ಬಿಟ್ಟಿದ್ದ ನೀರಗುಂದ ಕೆರೆಯ ದುರಸ್ತಿ ಕಾರ್ಯವನ್ನು ಪೂರೈಸಿಕೊಟ್ಟಿದ್ದರಿಂದ ಅವನಿಗೆ 'ಒಡಗೆರೆಮಲ್ಲ' ಎಂಬ ಹೆಸರು ಬಂದಿತ್ತೆಂದು ತಿಳಿಸುತ್ತದೆ.[೯೧] ಅದೇ ರೀತಿ ಜಾನಕಲ್ಲು ಗ್ರಾಮದ ಕ್ರಿ.ಶ. ೧೩೦೨ರ ಕಾಲದ ವೀರಗಲ್ಲು ಹೇಳುವಂತೆ ಮುಮ್ಮಡಿ ಬಲ್ಲಾಳನು ಆಳುತ್ತಿರುವ ಕಾಲದಲ್ಲಿ ಸೇವುಣರಾಜ ಶಂಕರದೇವನ ಸೇನೆಯು ಹೊಯ್ಸಳ ನಾಡನ್ನು ಮುತ್ತಿಗೆ ಹಾಕಿತು. ಬೆಮ್ಮತ್ತೂರಿನಲ್ಲಿ ಆಳುತ್ತಿದ್ದ ಬಲ್ಲಾಳನ ಭಾವ ಸೋಮದಂಡ ನಾಯಕನು ಸೇವುಣ ದಂಡನಾಯಕ ಕಂಪಿಲನೊಂದಿಗೆ ಹೋರಾಡುತ್ತಾ ವೀರಸ್ವರ್ಗವನ್ನು ಹೊಂದಿದನು.ಈ ಸಂದರ್ಭದಲ್ಲಿ ಹೊಳಲ್ಕೆರೆ ವೃತ್ತಿಯ ಮಹಾಮಂಡಲೇಶ್ವರ ಮಾಚಿದೇವನ ಪಾದಪದ್ಮಾರಾಧಕರ · ಕೆಂದಾರಿ ದೇವರಸನ ಮೈದುನ ಬಸವಪ್ಪನು ಹೋರಾಟದಲ್ಲಿ ಪಾಲ್ಗೊಂಡು ವೀರಸ್ವರ್ಗ ಪಡೆದನೆಂದು ಹೇಳುತ್ತದೆ.[೯೨] ಹೊನ್ನೆಯಕೆರೆ ಕಲ್ಲೇಶ್ವರ ದೇವಾಲಯದಲ್ಲಿರುವ ಕ್ರಿ.ಶ. ೧೩೦೭ರ ಶಾಸನವು ಹೇಳುವಂತೆ ಮುಮ್ಮಡಿ ಬಲ್ಲಾಳನು ಮೆದುಗಿದೇವ ದಣ್ಣಾಯಕನೊಂದಿಗೆ ಸಾಮ್ರಾಜ್ಯವನ್ನಾಳುತ್ತಿದ್ದನು. ನೀರಗುಂದ(ಉದ್ಭವ ಸೋಮನಾಥಪುರ)ವು ೧೨೦ ಬ್ರಾಹ್ಮಣರನ್ನೊಳಗೊಂಡ ಅಗ್ರಹಾರವಾಗಿ ಗಂಗವಾಡಿ ೯೬೦೦೦ದ ಅರಬಲೆ ೭೦ಕ್ಕೆ ಸೇರಿದ ಹೊನ್ನೆಯಕೆರೆ ಕಲ್ಲೇಶ್ವರ ದೇವರಿಗೆ ದತ್ತಿ

ನೀಡಲಾಯಿತು.[೯೩] ಇದೇ ವರುಷ ನೀಡಿರುವ ಇನ್ನೊಂದು ಶಾಸನವು ಹೊಯ್ಸಳರ ಕಾಲದ ಆಡಳಿತ ದೃಷ್ಟಿಯಿಂದ ಉಪಯುಕ್ತವಾದುದಾಗಿದೆ. ಹೊನ್ನೆಯಕೆರೆ ನಾಡ ಹೆಗ್ಗಡೆಯನ್ನಾಗಿ ಮಾರಗೌಡನನ್ನು ನೇಮಿಸುವಾಗ ವೀರಬಣಜು ಸೆಟ್ಟಿಗುತ್ತರು, ಪಟ್ಟಣ ಸ್ವಾಮಿಗಳು, ಗೌಡ–ಸ್ಥಾನಿಕರು ಹೀಗೆ ಒಟ್ಟು ಹದಿನೆಂಟು ಸಮಯದವರು ಅಥವಾ ಕುಲದವರು ಸೇರಿದ್ದು, ತಮ್ಮ ಒಪ್ಪಿಗೆ ಕೊಟ್ಟರೆಂದು ಶಾಸನದಿಂದ ತಿಳಿದುಬರುವುದು. ಇಲ್ಲಿ ಪ್ರಸ್ತಾಪಿಸಿರುವ 'ವೀರಬಣಜಿಧರ್ಮದವರು' ವ್ಯಾಪಾರಿಗಳಾಗಿದ್ದು, ಅವರನ್ನು ಸೆಟ್ಟಿರೆಂತಲೂ ಕರೆಯುತ್ತಿದ್ದರು. ಇನ್ನು ಪಟ್ಟಣಸ್ವಾಮಿ ಮತ್ತು ಗೌಡರುಗಳು ಸ್ಥಳೀಯ ಆಡಳಿತದಲ್ಲಿ ಮುಖ್ಯ ಪಾತ್ರವಹಿಸಿದ್ದರು.[೯೪] ಹೀಗೆ ಮೇಲಿನ ಎಲ್ಲಾ ಶಾಸನಗಳ ಆಧಾರದಿಂದ ಹೊಸದುರ್ಗ ಪರಿಸರ ಹೊಯ್ಸಳರ ಆಳ್ವಿಕೆಗೆ ಒಳಪಟ್ಟ ಪ್ರದೇಶವೆಂದು ಹೇಳಬಹುದು.

೨.೨.೯ ವಿಜಯನಗರದ ಅರಸರು

ಹೊಯ್ಸಳ ಸಾಮ್ರಾಜ್ಯವು ಪತನ ಹೊಂದಿದ ತರುವಾಯ ದಕ್ಷಿಣ ಭಾರತದಲ್ಲಿ ಬೆಳಕಿಗೆ ಬಂದದು ವಿಜಯನಗರ ಸಾಮ್ರಾಜ್ಯ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ದಕ್ಷಿಣ ಭಾರತದ ಇತಿಹಾಸದಲ್ಲಿ ಅದ್ವಿತೀಯವಾದ ಘಟನೆ. ಕ್ರಿ.ಶ. ೧೪ನೇಯ ಶತಮಾನದ ನಾಲ್ಕನೆಯ ದಶಕದಲ್ಲಿ ಹುಟ್ಟಿ ಕ್ರಿ.ಶ. ೧೬ನೇಯ ಶತಮಾನದ ಆರನೆಯ ದಶಕದಲ್ಲಿ ಅಸ್ತಂಗತವಾದ ವಿಜಯನಗರ ಸಾಮ್ರಾಜ್ಯವು ಆ ಅವಧಿಯಲ್ಲಿ ಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದಲ್ಲಿಯೇ ಖ್ಯಾತಿ ಪಡೆದಿದ್ದಿತು.[೯೫] ಕ್ರಿ.ಶ. ೧೩೩೬ ರಿಂದ ಕ್ರಿ.ಶ.೧೫೬೫ ರ ವರೆಗೆ ಆಳ್ವಿಕೆ ನಡೆಸಿದ ವಿಜಯನಗರದ ಅರಸರು ಚಿತ್ರದುರ್ಗ ಜಿಲ್ಲೆಯನ್ನು ತಮ್ಮ ಸಾಮ್ರಾಜ್ಯದ ಭಾಗವನ್ನಾಗಿಸಿಕೊಂಡು ಆಳಿದರು.[೯೬] ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ಶಾಸನಗಳು ಕ್ರಿ.ಶ. ೧೩೫೬ ರಿಂದ ಎರಡನೇ ದೇವರಾಯನ ಕಾಲದವರೆಗೂ, ನಂತರ ಕೃಷ್ಣ ದೇವರಾಯನ ಕಾಲದಿಂದ ಅಳಿಯ ರಾಮರಾಯನ ಕಾಲದವರೆಗೂ ದೊರೆಯುತ್ತವೆ.[೯೭] ಈ ಶಾಸನಗಳು ಜಿಲ್ಲೆಯಲ್ಲಿದ್ದ ವಿಜಯನಗರದ ಆಡಳಿತ ಪದ್ಧತಿಯನ್ನೇ ಸೂಚಿಸುತ್ತವೆ. ವಿಜಯನಗರದ ಕಾಲದಲ್ಲಿ ಸಾಮ್ರಾಜ್ಯದಲ್ಲಿ ಉತ್ತಮವಾದ ಆಡಳಿತದ ಅನುಕೂಲಕ್ಕಾಗಿ ಹಲವು ಆಡಳಿತ ವಿಭಾಗಗಳನ್ನು ಮಾಡಿಕೊಂಡಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ಅಂತಹ ಪ್ರಾಚೀನ ಆಡಳಿತ ವಿಭಾಗಗಳನ್ನು ಗಮನಿಸಬಹುದು. ವಿಜಯನಗರ ಮತ್ತು ನಂತರದ ಅವಧಿಯ ಶಾಸನಗಳನ್ನು ಗಮನಿಸಿದರೆ, ಈ ಪ್ರದೇಶವಲ್ಲಿ ದೇಶ, ರಾಜ್ಯ, ವಳಿತ, ವೇಂಠೆ, ನಾಡು, ಸೀಮೆ, ಚಾವಡಿ, ಮಾಗಣಿ, ಸಮಂತು, ಹೋಬಳಿ, ಕಸಬೆ ಮತ್ತು ವಿತ್ತಿ ಎಂಬ ಬೇರೆ ಬೇರೆ ಪ್ರಾದೇಶಿಕ ವಿಭಾಗಗಳು ಅಸ್ಥಿತ್ವದಲ್ಲಿದ್ದಂತೆ ಕಂಡು ಬರುತ್ತವೆ.[೯೮]

ಹೊಸದುರ್ಗ ತಾಲ್ಲೂಕಿನಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳನ್ನು ಗಮನಿಸಿದಾಗ ಹಲವು ಅಂಶಗಳನ್ನು ಕಾಣಬಹುದು. "ಜಯಕಾರ ರಾಮಪಯನ ಮಾಗಣಿಯು ಹೊಸದುರ್ಗ ತಾಲ್ಲೂಕು, ಕಲ್ಲಕೆರೆ ಗ್ರಾಮದ ಶಾಸನವೊಂದರಲ್ಲಿ ಇದರ ಉಲ್ಲೇಖವಿದೆ. ಈ ಮಾಗಣಿಯಲ್ಲಿ ಹೊಸದುರ್ಗ ಮತ್ತು ಹಿರಿಯೂರು ತಾಲ್ಲೂಕುಗಳ ಅನೇಕ ಸೀಮೆಗಳು ಸಮಾವೇಶಗೊಂಡಿದ್ದರಬೇಕೆಂದು ಹೇಳಬಹುದು".[೯೯] ಬಾಗೂರುಸೀಮೆ ಎಂಬುದು ಸಹ ಹೊಸದುರ್ಗ ಪರಿಸರದ ವಿಜಯನಗರ ಕಾಲದ ಆಡಳಿತ ವಿಭಾಗವಾಗಿತ್ತು. ಹೊಸದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕುಗಳಿಗೆ ಸೇರಿದ ಅನೇಕ ಗ್ರಾಮಗಳಲ್ಲಿಯ ಶಾಸನಗಳಲ್ಲಿ ಬಾಗೂರು, ಬಾಗ್ಯಪುರ, ಭಗೂರು ಎಂಬ ಉಲ್ಲೇಖಗಳಿರುವ ಬಾಗೂರು ಗ್ರಾಮ ಈ ಸೀಮೆಯ ಕೇಂದ್ರ ಭಾಗವಾಗಿತ್ತು.[೧೦೦] ಹೊಸದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಸಮಾವೇಶಗೊಂಡಿರುವ ಶ್ರೀರಾಮಪುರ, ಹೊಸದುರ್ಗ, ಹೊಳಲ್ಕೆರೆ, ರಾಮಗಿರಿ ಹೋಬಳಿಗಳನ್ನೊಳಗೊಂಡಂತೆ ಚಿತ್ರದುರ್ಗಕ್ಕೆ ನೈರುತ್ಯದಿಕ್ಕು ಅಂದರೆ ಚಿಕ್ಕಮಗಳೂರು ಜಿಲ್ಲೆಗೆ ಹೊಂದಿಕೊಂಡಂತಿರುವ ಪ್ರದೇಶವು ಈ ಬಾಗೂರು ಸೀಮೆಯಲ್ಲಿ ಸಮಾವೇಶಗೊಂಡಿದ್ದಿತು.[೧೦೧] ಬಾಗೂರು ಪರಿಸರದಲ್ಲಿ ವಿಜಯನಗರ ಅರಸರಿಗೆ ಸಂಬಂಧಿಸಿದಂತೆ ಹಲವು ಶಾಸನಗಳಿವೆ. ಇವುಗಳಿಂದ ಇಲ್ಲಿನ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಗುರುತಿಸಲು ಸಾಧ್ಯವಾಗುವುದು. ಇಲ್ಲಿ ಸದಾಶಿವರಾಯ ಹಾಗೂ ಅಚ್ಯುತರಾಯನ ಕಾಲದ ಹಲವು ಶಾಸನಗಳನ್ನು ಕಾಣಬಹುದು. ಬಾಗೂರಿನ ಪ್ರಸಿದ್ಧ ಚನ್ನಕೇಶವ ದೇವಾಲಯಕ್ಕೆ ಸದಾಶಿವರಾಯನ ಕಾಲದಲ್ಲಿ ಕ್ರಿ.ಶ. ೧೫೫೫ರಲ್ಲಿ ಅವನ ಅಧೀನನಾಗಿ ಇಲ್ಲಿ ಆಳುತಿದ್ದ ಕೃಷ್ಣಪ್ಪನಾಯಕನ ಕಾಲದಲ್ಲಿ ಹಲವು ದಾನದತ್ತಿಗಳನ್ನು ನೀಡಿರುವುದನ್ನು ಕಾಣಬಹುದು.[೧೦೨] ವಿಜಯನಗರ ಕಾಲದ ಮತ್ತೊಂದು ಆಡಳಿತ ವಿಭಾಗ ಬೂದಿಹಾಳು ಸೀಮೆ. ಹೊಸದುರ್ಗ ತಾಲ್ಲೂಕಿನ ಶ್ರೀರಾಮಪುರದ ಹಿಂದಿನ ಹೆಸರು ಬೂದಿಹಾಳು. ಅಲ್ಲದೆ ಇದಕ್ಕೆ ಬೂದಿಹಾಲು, ಕಾಯಿಬೂದಿಹಾಳು, ಭಸ್ಮಪುರ, ವಿಭೂತಿಪುರ ಎಂಬ ಹಲವು ಹೆಸರುಗಳಿಂದ ಕರೆಯಲಾಗಿದೆ.[೧೦೩] ಬೂದಿಹಾಳು 'ಬೂದಿಹಾಳು ಸೀಮೆ' ಯ ಕೇಂದ್ರ ಸ್ಥಳವಾಗಿತ್ತು. ಈ ಬೂದಿಹಾಳು ಮೊದಲು ಜಯಕಾರ ರಾಮಪಯನ ಮಾಗಣಿಗೆ ಸೇರಿದ ಗ್ರಾಮವಾಗಿದ್ದಿತು. ಕಲ್ಲಕೆರೆ, ಹಿರಿಯೂರು ಗ್ರಾಮಗಳು ಈ ಸೀಮೆಯ ಊರುಗಳು. ಕ್ರಿ.ಶ. ೧೫೫೪ರ ಸದಾಶಿವರಾಯನ ಕಾಲದ ಶಾಸನದಲ್ಲಿ ಬೂದಿಹಾಳು ಸೀಮೆಯ ಮಹಾಮಂಡಲೇಶ್ವರ ರಾಮರಾಜಯ್ಯ ವಿಠಲೇಶ್ವರ ಶ್ರೀಪತಿ ಓಬಳೇಶ್ವರಯ್ಯ ಮಹಾಅರಸು ರಾಜನ ಪ್ರತಿನಿಧಿಯಾಗಿ ಬೂದಿಹಾಳು ಸೀಮೆಯ ಆಡಳಿತ ನಡೆಸುತ್ತಿರುವ ವೇಳೆಯಲ್ಲಿ ತಾನು ರಾಜನ ಪ್ರತಿನಿಧಿಯಾಗಿದ್ದನೆಂದು ಹೇಳಿಕೊಳ್ಳುತ್ತಾನೆ.[೧೦೪] ಇಂದಿನ ಶ್ರೀರಾಮಪುರ ಹೋಬಳಿಯ ಪ್ರದೇಶವು ಈ ಸೀಮೆಯಲ್ಲಿ ಸಮಾವೇಶಗೊಂಡಿದ್ದಿತು.[೧೦೫] ಮತ್ತನಡುವಿನ ಸೀಮೆ ಎಂಬುದು

ಹೊಸದುರ್ಗ ಪರಿಸರದ ಮತ್ತೊಂದು ವಿಜಯನಗರ ಕಾಲದ ಆಡಳಿತ ವಿಭಾಗವಾಗಿತ್ತು. ಮತ್ತೋಡು ಇಂದಿನ ಹೊಸದುರ್ಗ ತಾಲ್ಲೂಕಿನ ಒಂದು ಹೋಬಳಿ ಕೇಂದ್ರವಾಗಿದೆ. ಪಾಳೆಯಗಾರರ ಕಾಲದ ಶಾಸನವೊಂದರಲ್ಲಿ ಈ ಸೀಮೆಯ ಉಲ್ಲೇಖ ಬಂದಿದೆ.[೧೦೬] ಮತ್ತೊಡು ಹೋಬಳಿಗೆ ಸೇರಿದ ಬಹುಭಾಗವು ಈ ಸೀಮೆಯಲ್ಲಿ ಅಂತರ್ಗತವಾಗಿದ್ದಿತು.[೧೦೭] ರಾಮಗಿರಿ ಸೀಮೆಯು ವಿಜಯನಗರ ಕಾಲದ ಆಡಳಿತ ವಿಭಾಗವಾಗಿದೆ. ರಾಮಗಿರಿ ಸೀಮೆಯ ರಾಜಧಾನಿಯಾದ ರಾಮಗಿರಿಯು ಇಂದಿನ ಹೊಳಲ್ಕೆರೆ ತಾಲ್ಲೂಕಿನ ಹೋಬಳಿಯೊಂದರ ಕೇಂದ್ರ ಸ್ಥಳವಾಗಿದೆ. ಹೊನ್ನಗೊಂಡನ ಹಳ್ಳಿ, ಬಾಗೂರು ಗ್ರಾಮಗಳು ಈ ಸೀಮೆಯ ಅಂತರ್ಭಾಗವೆಂದು ಶಾಸನವೊಂದರಿಂದ ತಿಳಿದು ಬರುತ್ತದೆ.[೧೦೮] ಹೊಸದುರ್ಗ ಹಾಗೂ ಹೊಳಲ್ಕೆರೆ ತಾಲ್ಲೂಕುಗಳು ಸಂದಿಸುವ ಪ್ರದೇಶವು ಈ ಸೀಮೆಯ ಭಾಗವಾಗಿದ್ದಿತೆಂದು ಸ್ಥೂಲವಾಗಿ ಹೇಳಬಹುದು.[೧೦೯] ಹೀಗೆ ವಿಜಯನಗರ ಕಾಲದ ಹಲವು ಆಡಳಿತ ವಿಭಾಗಗಳನ್ನು ಹೊಸದುರ್ಗ ತಾಲ್ಲೂಕು ಪರಿಸರದಲ್ಲಿ ಗುರುತಿಸಬಹುದು. ಇದರಿಂದ ಇಲ್ಲಿ ವಿಜಯನಗರದ ಆಳ್ವಿಕೆಯ ಬಗ್ಗೆ ತಿಳಿಯಬಹುದು.

೨.೨.೧೦. ಪಾಳೆಯಗಾರರು

ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಪಾಳೆಯಗಾರರ ಅಥವಾ ನಾಯಕರ ಸ್ಥಾನವು ಬಹಳ ಮಹತ್ವವಾದುದು. ಮಧ್ಯಕಾಲೀನ ಕರ್ನಾಟಕದಲ್ಲಿ ವಿಜಯನಗರ ಅರಸರ ಕಾಲದಲ್ಲಿ ಹಾಗೂ ವಿಜಯನಗರ ಸಾಮ್ರಾಜ್ಯದ ಪಥನಾನಂತರ ಆಳಿದ ಸಾಮಂತರು, ನಾಯಕರು, ಒಡೆಯರು, ಪಾಳೆಯಗಾರರೆಂದು ಪ್ರಸಿದ್ಧರಾಗಿದ್ದಾರೆ. ಕರ್ನಾಟಕವನ್ನು ವೈಭವೋಪೇತವಾಗಿ ಹಾಗೂ ಬಲಿಷ್ಟವಾಗಿ ಆಳಿದ ಪ್ರಸಿದ್ಧ ರಾಜಮನೆತನಗಳ ಆಧಾರಸ್ಥಂಭಗಳಂತೆ ಈ ಪಾಳೆಯಗಾರರು ಬಹುವಾಗಿ ಶ್ರಮಿಸಿದ್ದಾರೆ. ಅದರಲ್ಲೂ ಮಧ್ಯಕಾಲೀನ ರಾಜಕೀಯ ಚರಿತ್ರೆಯ ಬೆಳವಣಿಗೆಯಲ್ಲಿ ಪಾಳೆಯಗಾರರು ವಹಿಸಿದ ಪಾತ್ರ ಗಣನೀಯವಾದದ್ದು ಎನ್ನಲು ಅಡ್ಡಿಯಿಲ್ಲ. ಪಾಳೆಯ ಎಂಬ ಪದ ದಂಡು, ಸೈನ್ಯ, ಸೇನಾ ವಿಭಾಗ, ಶಿಬಿರ, ಠಾಣ್ಯ ಎಂಬ ಅರ್ಥವನ್ನು ಸೂಚಿಸುತ್ತದೆ.[೧೧೦] ಆದರೆ ಕರ್ನಾಟಕದಲ್ಲಿ ಸಂಭವಿಸಿದ ಕೆಲವು ಚಾರಿತ್ರಿಕ ಆಗುಹೋಗುಗಳಿಂದ ಚಿಕ್ಕ ಪ್ರದೇಶಗಳಲ್ಲಿ ಒಡೆತನವನ್ನು ನಡೆಸುತ್ತಿದ್ದ ನಾಯಕರಿಗೆ ಪಾಳೆಯಗಾರರು ಎಂಬ ಹೆಸರು ರೂಢಿಗತವಾಯಿತು. ಕನ್ನಡದ ಪಾಳೆಯಗಾರರೆಂಬ ಹೆಸರಿನ ಇವರು ತೆಲುಗಿನಲ್ಲಿ 'ಪಾಳೆಗಾಡು', ತಮಿಳಿನಲ್ಲಿ 'ಪಾಲೈಕಾರನ್', ಮರಾಠಿಯಲ್ಲಿ ಪಾಳೇಗಾರ ಎಂದು ಪ್ರಸಿದ್ಧರಾಗಿದ್ದರು. ಇವರ ಅದೀನವಾಗಿದ್ದ ಭೂಪ್ರದೇಶಕ್ಕೆ 'ಪೊಲ್ಲಂ' ಎಂದು ಹೆಸರಿದ್ದ ಕಾರಣ ಇವರಿಗೆ 'ಪಾಳೇಯಗಾರ' ಎಂಬ ಹೆಸರು ಪ್ರಾಪ್ತವಾದಂತೆ ತೋರುವುದು.[೧೧೧] ಅದೇ ರೀತಿ "ದಂಡಿನೊಡನೆ ಪಾಳೆಯವನ್ನು

ಹಾಕಿ ಇಳಿದುಕೊಂಡು ಕವನಕ್ಕೆ ಸಿದ್ದವಾಗಿರುವವನು" ಎಂದು ಎಂ.ಎಸ್.ಪುಟ್ಟಣ್ಣ ಅವರು ಅರ್ಥೈಸುತ್ತಾರೆ. ಪಾಳೆಯಗಾರರು ಮೂಲತಃ ಸಾಹಸಿಗರು, ಶೂರರು, ರಣಕಲಿಗಳು ಆಗಿದ್ದು ತಮ್ಮ ಸಾಹಸಗಳಿಂದ ಕ್ರಮಕ್ರಮವಾಗಿ ಕರ್ನಾಟಕದ ರಾಜಕೀಯದಲ್ಲಿ ಮೇಲೆರುತ್ತ ಬಂದರು.

ವಿಶ್ವವಿಖ್ಯಾತ ಪ್ರಸಿದ್ಧ ವಿಜಯನಗರ ಸಾಮ್ರಾಜ್ಯದ ಏಳಿಗೆ ಮತ್ತು ಖ್ಯಾತಿಗೆ ಅವರ ಕಾಲದ ರಾಜಕೀಯ ಘಟಕಗಳಲ್ಲಿನ ಅಮರನಾಯಕರು ಅಥವಾ ಪಾಳೆಯಗಾರರು ಪ್ರಮುಖ ಪಾತ್ರ ವಹಿಸಿದ್ದಾರೆ. ಕರ್ನಾಟಕದಲ್ಲಿ ನಾಲ್ಕು ಶತಮಾನಗಳಿಗೂ ಹೆಚ್ಚು ಕಾಲ ಆಡಳಿತವನ್ನು ನಡೆಸಿದ ಈ ಪಾಳೆಯಗಾರರು ನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ತಮ್ಮ ಮುದ್ರೆಯನ್ನೊತ್ತಿದ್ದಾರೆ. ವಿಜಯನಗರದ ಅರಸರೆ ಪಾಳೆಯಗಾರರನ್ನು ಸೃಷ್ಟಿಸಿದರು. ಈ ಪಾಳೆಯಗಾರರಿಗೆ ಅಮರನಾಯಕರೆಂಬ ಹೆಸರಿತ್ತು. ಊಳಿಗಮಾನ್ಯ ಪದ್ಧತಿಯ ಆಧಾರದ ಮೇಲೆ ಅವರಿಗೆ ಭೂಮಿಯನ್ನು ಮಂಜೂರು ಮಾಡಲಾಗುತ್ತಿತ್ತು. ಅವುಗಳಿಗೆ 'ಅಮರಂ' ಎಂದು ಹೆಸರು.[೧೧೨] ಈ ಅಮರ ನಾಯಕರು ವಿವಿಧ ಪ್ರಾಂತ್ಯಗಳಲ್ಲಿ ಉಸ್ತುವಾರಿ ನೋಡಿಕೊಳ್ಳುತ್ತಿದ್ದು ನಿರ್ದಿಷ್ಟ ಪ್ರಮಾಣದ ಸೈನ್ಯವನ್ನು ಸದಾ ಸಿದ್ಧವಾಗಿರಬೇಕಾಗಿತ್ತು. ರಾಜರು ಅಗತ್ಯದ ಸಮಯಗಳಲ್ಲಿ ಅವುಗಳನ್ನು ಬಳಸಿಕೊಳ್ಳುತ್ತಿದ್ದರು.[೧೧೩] ಇದಕ್ಕೆ ಪ್ರತಿಯಾಗಿ ಅಮರಂ ಪಡೆಯುತ್ತಿದ್ದ ಅಮರ ನಾಯಕರಿಗೆ ರಾಜಕೀಯ, ಆಡಳಿತೀಯ, ಆರ್ಥಿಕ ಮತ್ತು ನ್ಯಾಯಿಕ ಅಧಿಕಾರಗಳು ತಮ್ಮ ಪ್ರದೇಶವ್ಯಾಪ್ತಿಗೆ ಅನ್ವಯಿಸುವಂತೆ ದೊರಕುತ್ತಿದ್ದವು. ಶಾಸನಗಳಲ್ಲಿ ಚಕ್ರವರ್ತಿಯು ಈ ಅಮರನಾಯಕರಿಗೆ ಭೂಮಿಯನ್ನು ಮಂಜೂರು ಮಾಡಿದ ವಿಚಾರವನ್ನು ನೋಡುತ್ತೇವೆ.[೧೧೪] ಅಮರನಾಯಕರಿಗೆ ನೀಡಿದ ಭೂದಾನವನ್ನು ಅಮರ ಮಾಗಣಿ, ಅಮರ ನಾಯಕರ, ಅಮರಮಹಲೆ, ಅಮರಅಂಬಲಿ, ಅಮರಪಂದೆಯನಾಯಕ ಎಂದು ವಿಧವಿಧವಾಗಿ ಕರೆಯುತ್ತಿದ್ದರು.[೧೧೫] ಹೀಗೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಪ್ರಾಬಲ್ಯಕ್ಕೆ ಬಂದ ಪಾಳೆಯಗಾರರು ಕ್ರಿ.ಶ.೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯದ ಪಥನದ ಬಳಿಕ ಸ್ವತಂತ್ರರಾದರು.

ಸಾಹಿತ್ಯ ಮತ್ತು ಶಾಸನ ಆಕರಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಪಾಳೆಯಗಾರರು ಆಳ್ವಿಕೆ ನಡೆಸಿದ ಬಗ್ಗೆ ಮಾಹಿತಿಗಳನ್ನು ಒದಗಿಸುತ್ತವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಪಾಳೆಯಗಾರರ ಮನೆತನಗಳು ಒಟ್ಟು ಏಳು: ರಾಯದುರ್ಗ, ಹರತಿ(ಹರ್ತಿಕೋಟೆ), ಬೇಲೂರು, ಚಿತ್ರದುರ್ಗ, ಸಂತೇಬೆನ್ನೂರು, ಹಟ್ಟಿ(ನಾಯಕನಹಟ್ಟಿ), ಮತ್ತಿನಾಡು(ಮತ್ತೋಡು).[೧೧೬] ಹೊಸದುರ್ಗ ಪರಿಸರಕ್ಕೆ ಸಂಬಂಧಿಸಿದಂತೆ ನೋಡಿದಾಗ ಈ ಭಾಗದಲ್ಲಿ ಆಳಿದ ಪಾಳೆಯಗಾರರೆಂದರೆ ಮತ್ತೋಡು, ಬೂದಿಹಾಳು, ಸಂತೇಬೆನ್ನೂರು ಮತ್ತು ಚಿತ್ರದುರ್ಗ ಪಾಳೆಯಗಾರರು ಎಂದು ಹೇಳಬಹುದು. ಆದರೆ ಹೊಸದುರ್ಗ ಪರಿಸರದಲ್ಲಿ ರಾಜಧಾನಿ

ಮಾಡಿಕೊಂಡು ಆಳ್ವಿಕೆ ಮಾಡಿದವರೆಂದರೆ ಮತ್ತೋಡು ಹಾಗು ಬೂದಿಹಾಳು ಪಾಳೆಯಗಾರರು ಮಾತ್ರ.

೨.೨.೧೦.೧. ಮತ್ತೋಡು ಪಾಳೆಯಗಾರರು

ಮತ್ತೋಡು ಇಂದಿನ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಹೋಬಳಿ ಕೇಂದ್ರಗಳಲ್ಲಿ ಒಂದಾಗಿದೆ. ವೇದಾವತಿ ನದಿಯ ಕಣಿವೆ ಪ್ರದೇಶದಲ್ಲಿರುವ ಮತ್ತೋಡು ವಿವಿಧ ಹೆಸರುಗಳಿಂದ ಕರೆಸಿಕೊಂಡಿದೆ. ಜಾನಪದ ಹೇಳಿಕೆಗಳಲ್ಲಿ ಮತಿವಂತರನಾಡು, ಮುತ್ತೈದೆಯರನಾಡು ಎಂದು, ಶಾಸನಗಳಲ್ಲಿ ಮತ್ತಿನಡು, ಮತ್ತಿನಾಡು, ಮತ್ತನಡು, ಮತ್ತೇಡು, ಮತ್ತೋಡು ಎಂದೂ, ಚಾರಿತ್ರಿಕ ದಾಖಲೆಗಳಲ್ಲಿ ಮತ್ತೋಡು ಎಂಬುದಾಗಿಯೂ ಕರೆಯಲಾಗಿದೆ.[೧೧೭] ಈ ಮತ್ತೋಡನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದವರೇ ಮತ್ತೋಡು ಪಾಳೆಯಗಾರರು. ಇವರು ಕ್ರಿ.ಶ. ೧೭ನೇಯ ಶತಮಾನದ ಆರಂಭದಿಂದ ಕ್ರಿ.ಶ. ೧೮ನೇಯ ಶತಮಾನದ ಕೊನೆಯವರೆಗೂ ಅಂದರೆ ಕ್ರಿ.ಶ. ೧೬೦೪ ರಿಂದ ೧೭೭೯ ರವರೆಗೆ ೧೭೫ ವರ್ಷಗಳ ಕಾಲ ಆಳಿರುವುದು ತಿಳಿದು ಬರುತ್ತದೆ.[೧೧೮] ಮತ್ತೋಡು ಪಾಳೆಯಪಟ್ಟನ್ನು ಸ್ಥಾಪಿಸಿದವನು ಬೇಡ ಜನಾಂಗದ ಗಿರಿಯಪ್ಪ ನಾಯಕ. ಗಿರಿಯಪ್ಪ ನಾಯಕನು ತಿಮ್ಮಣ್ಣ ನಾಯಕ ಮತ್ತು ಲಕ್ಕವ್ವ ಎಂಬ ದಂಪತಿಗಳ ಮಗನೆಂದೂ ಅವನು ತನ್ನ ತಾಯಿಯ ಹೆಸರಿನಲ್ಲಿ ಕಟ್ಟಿದ ಊರೆ ಲಕ್ಕವ್ವನಹಳ್ಳಿ.[೧೧೯]

ಇತನು ಅತ್ಯಂತ ಸುಂದರನೂ, ಶೂರನು, ಬೇಟೆಗಾರನು ಆಗಿದ್ದನು. ತನ್ನದೆ ಆದ ಪಡೆಯೊಂದನ್ನು ಕಟ್ಟಿಕೊಂಡು ಕಳ್ಳರನ್ನು ಸದೆ ಬಡಿಯುತ್ತಾ ಇವನು ತನ್ನ ಸುತ್ತಮುತ್ತಲ ಪ್ರಾಂತ್ಯದಲ್ಲಿ ಪರಾಕ್ರಮಿ ಎನಿಸಿಕೊಂಡಿದ್ದ. ಇತನ ಪರಾಕ್ರಮವನ್ನು ಬದಿಹಾಳಿನ ಪಾಳೆಯಗಾರರಿಂದ ತಿಳಿದು ಪೆನುಗೊಂಡೆಯ ಅರಸ ವೆಂಕಟಪತಿರಾಯನು ಅವನನ್ನು ತನ್ನಲ್ಲಿಗೆ ಕರೆಸಿಕೊಂಡು ಸತ್ಕರಿಸಿದನು. ಕೆಲವು ದಿನಗಳು ಅವನು ಅಲ್ಲಿ ತಂಗಿದ್ದಾಗ ಆನೆಯೊಂದು ಮದವೇರಿ ಜನರ ಮೇಲೆ ನುಗ್ಗಿ ಅನಾಹುತ ಮಾಡತೊಡಗಿತು. ಅದನ್ನು ಪಳಗಿಸಲು ಬಹುತೇಕ ಮಂದಿ ವೀರರು ಹೆದರಿದರು. ಆಗ ಅಲ್ಲಿಯೆ ಇದ್ದ ಗಿರಿಯಪ್ಪ ನಾಯಕ ತನ್ನ ಪರಾಕ್ರಮ ತೊರಲು ಇದೇ ಸರಿಯಾದ ಸಮಯವೆಂದು ತಿಳಿದು ಧೈರ್ಯದಿಂದ ಅದರ ಸೊಂಡಿಲಿಗೆ ಹಗ್ಗವನ್ನು ಹಾಕಿ ನಿಯಂತ್ರಿಸಿ ತನ್ನ ಶಕ್ತಿ ಸಾಹಸ ಬುದ್ಧಿವಂತಿಕೆಯನ್ನು ತೋರಿಸಿದನು. ಗಿರಿಯಪ್ಪ ನಾಯಕ ಈ ಸಾಹಸವನ್ನು ಮೆಚ್ಚಿದ ವೆಂಕಟಪತಿರಾಯನು ಅವನಿಗೆ ಆನೆ, ಕುದುರೆ, ಪಲ್ಲಕ್ಕಿ,

ಛತ್ರಿ ಮೊದಲಾದ ಅಮೂಲ್ಯ ಕಾಣಿಕೆಗಳನ್ನು ಒಂಬತ್ತು ಸಾವಿರ ಪಗೋಡಗಳ ಆದಾಯವುಳ್ಳ ಲಕ್ಕವ್ವನಹಳ್ಳಿ ಮತ್ತು ಅದರ ಸುತ್ತ ಮುತ್ತಲ ಪ್ರದೇಶಗಳನ್ನು ನೀಡಿದನು. ಈ ಘಟನೆ ನೆಡೆದದ್ದು ಕ್ರಿ.ಶ.೧೬೦೪ರಲ್ಲಿ ಎಂದು ಹೇಳಬಹುದು.[೧೨೦] ಅಲ್ಲಿಂದ ಈ ಮನೆತನದ ಪಾಳೆಯಪಟ್ಟು ಆರಂಭವಾಯಿತು.

ಮೂಲಪುರುಷ ಗಿರಿಯಪ್ಪನಾಯಕನ ನಂತರ ಅವನ ಮಗ ದೊಡ್ಡಳನಾಯಕ, ಅವನಾದ ಮೇಲೆ ಅವನ ಮಗ ಹಾಲಪ್ಪನಾಯಕ, ತರುವಾಯ ಅವನ ಮಗ ದೊಡ್ಡಳನಾಯಕ ಇವರು ಆಳಿದಂತೆ ಕಾಣುತ್ತದೆ.[೧೨೧] ಕ್ರಿ.ಶ. ೧೬೭೨ರ ಒಂದು ಶಾಸನವು ದೊಡ್ಡಳನಾಯಕನಿಗೆ ಸಂಬಂಧಿಸಿದಂತೆ ದೊರೆತಿದ್ದು ಅದು ಚಿನ್ನದ ಗಿರಿಯಪ್ಪನಾಯಕನ ವಿವಾಹದ ಸಂದರ್ಭದಲ್ಲಿ ದೊರೆ ಕ್ಷೌರಿಕರ ಮೇಲಿನ ತೆರಿಗೆಯನ್ನು ಬಿಟ್ಟದ್ದನ್ನು ತಿಳಿಸುತ್ತದೆ.[೧೨೨] ಕ್ರಿ.ಶ.೧೭೩೬ರ ಶಾಸನದ ಪ್ರಕಾರ ದೊಡ್ಡಳನಾಯಕನ ತರುವಾಯ ಅವನ ಮಗ ಸಂಗಪ್ಪನಾಯಕ ಆಳಿದನೆಂದು ಕಂಡು ಬರುತ್ತದೆ.[೧೨೩] ಸಂಗಪ್ಪನಾಯಕನು ಅಪಾರ ಶೂರನೂ, ಧಿರನೂ ಆಗಿದ್ದನು. ಇವನ ತರುವಾಯ ಅಧಿಕಾರಕ್ಕೆ ಬಂದವನೆ ಅವನ ಮಗ ಹಾಲಪ್ಪ ನಾಯಕ. ಶಾಸನಗಳಲ್ಲಿ ಇವನನ್ನು ಹಾಲರಾಜ, ಹಿರಿಯ ಹಾಲಪ್ಪನಾಯಕ ಎಂಬುದಾಗಿ ಕರೆಯಲಾಗಿದೆ.[೧೨೪] ಒಳ್ಳೆಯ ಆಡಳಿತಗಾರನು, ವಿದ್ಯಾಪ್ರೇಮಿಯೂ, ಪ್ರಜಾಹಿತಚಿಂತಕನು, ಧರ್ಮಾಭಿಮಾನಿಯೂ ಆಗಿದ್ದ ಈತನು ಮನೆತನದಲ್ಲಿಯೇ ಪ್ರಸಿದ್ದನಾದವನು. ಮತ್ತೋಡಿನ ಇತಿಹಾಸ ದೃಷ್ಟಿಯಿಂದ ಇವನದು ಉನ್ನತಿಯ ಕಾಲ. ಇವನ ಕಾಲದಲ್ಲಿ ಮತ್ತೋಡು ಪಾಳೆಯಪಟ್ಟು ಧಾರ್ಮಿಕವಾಗಿ, ರಾಜಕೀಯವಾಗಿ, ಹಾಗೂ ಆಡಳಿತಾತ್ಮಕವಾಗಿ ಬೆಳೆಯಿತು. ತನ್ನ ರಾಜಧಾನಿ ಮತ್ತೋಡನ್ನು ದೊಡ್ಡ ಪಟ್ಟಣವನ್ನಾಗಿ ಮಾಡಲು ಪ್ರಯತ್ನಿಸಿದನು. ಅದರ ಸುತ್ತಲೂ ಭದ್ರವಾಗಿ ಕೋಟೆ, ಕೋತ್ತಲ, ಅರಮನೆ, ನಾಲ್ಕುಕಡೆ ಮಹಾದ್ವಾರಗಳು, ಸಚಿವರುಗಳು, ಮುಖ್ಯಾಧಿಕಾರಿಗೆ ಸಚಿವಾಲಯ ಇತ್ಯಾದಿಗಳನ್ನು ನಿರ್ಮಿಸಿದನು.[೧೨೫]

ಹಾಲಪ್ಪ ನಾಯಕನ ಕಾಲದಲ್ಲೇ ಮತ್ತೋಡಿನ ಪಾಳೆಯಗಾರರು ಲಿಂಗದೀಕ್ಷೆ ಪಡೆದು ವೀರಶೈವರಾದುದು ಕಂಡು ಬರುತ್ತದೆ. ಹೀಗಾಗಿ ಇವರ ಚರಿತ್ರೆ ಧಾರ್ಮಿಕವಾಗಿ ಹೊಸ ತಿರುವನ್ನು ಪಡೆದುಕೊಂಡಿತು. ಇವನು ತಂದೆ ತಾಯಿಯರಿಗೆ ಶಿವಸಾನಿಧ್ಯ ಲಭಿಸಲೆಂದು ಕ್ರಿ.ಶ.೧೭೦೭ರಲ್ಲಿ ಮುರಿಗೆಸ್ವಾಮಿಗಳ ಮಠವೊಂದನ್ನು ಮತ್ತೋಡಿನಲ್ಲಿ ಕಟ್ಟಿಸಿ ಅದರ ನಿರ್ವಹಣೆಗಾಗಿ ಅರೆಹಳ್ಳಿ ಎಂಬ ಹಳ್ಳಿಯೊಂದನ್ನು ದತ್ತಿ ಬಿಟ್ಟನು.[೧೨೬] ಇವನು ಕ್ರಿ.ಶ.೧೭೯೯ರಲ್ಲಿ ಚಿಗತಿಮ್ಮಣ್ಣ ಎಂಬುವನಿಗೆ ಶಿವಾರ್ಪಿತವಾಗಿ ಒಂದು ಗದ್ದೆ ನೀಡಿದ್ದಾಗಿ ಒಂದು ಶಾಸನದಲ್ಲಿ

ಹೇಳಿದೆ.[೧೨೭] ಅಲ್ಲದೆ ಕ್ರಿ.ಶ.೧೭೨೯ರಲ್ಲಿ ಜೇವಿನಹಳ್ಳಿಯ ದೇವತೆ (ಕರಿಯಮ್ಮ)ಗೆ ಸಲ್ಲುವ ಕಪ್ಪಕಾಣಿಕೆ ಸರ್ವಮಾನ್ಯ, ಅದಕ್ಕೆ ಯಾರು ತಪ್ಪಬಾರದೆಂದೂ ಕಟ್ಟಳೆ ಮಾಡಿದನು. ವಿವಿಧ ದೇವರಪೂಜಾ ಪಟ್ಟಾಧಿಕಾರವನ್ನು ಹಲವು ಗೌಡರುಗಳಿಗೆ ವಹಿಸಿದುದನ್ನು ಕ್ರಿ.ಶ. ೧೭೩೦ರ ಶಾಸನವೊಂದು ತಿಳಿಸುತ್ತದೆ.[೧೨೮] ತನ್ನ ಪೂರ್ವಿಕರು ಸ್ಥಾಪಿಸಿದ್ದ ಹಂಜಿಗೆರೆ ಅಗ್ರಹಾರವು ಹಾಳು ಬಿದ್ದಿರುವುದನ್ನು ನೋಡಿ ಕ್ರಿ.ಶ. ೧೭೩೬ ರಲ್ಲಿ ಅದನ್ನು ಜೀರ್ಣೋದ್ಧಾರ ಮಾಡಿಸಿದನು. ಹೀಗೆ ಹಾಲಪ್ಪ ನಾಯಕನ ಕಾಲ ಹಲವು ರೀತಿಯ ಚಟುವಟಿಕೆಗಳಿಂದ ಕೂಡಿತ್ತು.

ಹಾಲಪ್ಪ ನಾಯಕನಿಗೆ ಸಿದ್ದರಾಮಪ್ಪ ಮತ್ತು ದೊಡ್ಡಣ್ಣನೆಂಬ ಇಬ್ಬರು ಮಕ್ಕಳಿದ್ದುದಾಗಿ ತಿಳಿದುಬರುವುದು. ಅಲ್ಲದೆ ಸಂಗಪ್ಪ ನಾಯಕ ಎಂಬ ಮಗನಿದ್ದನೆಂದು ಹೇಳಲಾಗಿದೆ.[೧೨೯] ಸಿದ್ದರಾಮಪ್ಪ ನಾಯಕನನ್ನು ಸಿದ್ದಪ್ಪ ನಾಯಕನೆಂದು ದೊಡ್ಡಣ್ಣ ನಾಯಕನನ್ನು ಹಾಲಪ್ಪ ನಾಯಕನೆಂದು ಕರೆದಿರುವುದುಂಟು. ಇವರಲ್ಲಿ ಹಾಲಪ್ಪ ನಾಯಕನು ಹಿರಿಯನಾದರೂ ಕಿರಿಯವನಾದ ಸಿದ್ದಪ್ಪ ನಾಯಕನು ಈ ಮನೆತನದ ಪೂರ್ವಿಕರಂತೆ ಪರಾಕ್ರಮಿಯೂ, ಸುಂದರನೂ, ಅಜಾನೂಬಾಹುವೂ ಆಗಿದ್ದರಿಂದ ತಂದೆ ಅವನನ್ನು ಪಟ್ಟಕ್ಕೆ ಯೋಗ್ಯನೆಂದು ಯೋಚಿಸಿ ಅವನಿಗೆ ಪಟ್ಟ ಕಟ್ಟಿದನು.[೧೩೦] ಇದರಿಂದ ಕೋಪಿಸಿಕೊಂಡ ದೊಡ್ಡಣ್ಣ ನಾಯಕನು (ಹಾಲಪ್ಪ ನಾಯಕ) ಪ್ರಬಲರಾಗಿದ್ದ ಚಿತ್ರದುರ್ಗ ಪಾಳೆಗಾರರಲ್ಲಿಗೆ ಹೋಗಿ ಪಟ್ಟಕ್ಕೆ ಬರಲು ಅವರ ನೆರವನ್ನು ಯಾಚಿಸಿದನು. ಚಿತ್ರದುರ್ಗದವರ ಬಳಿ ವರ್ಷಕ್ಕೆ ಮೂರು ಸಾವಿರ ಪಗೋಡಗಳ ಕಪ್ಪಸಲ್ಲಿಸಬೇಕೆಂಬ ಒಪ್ಪಂದದ ಮೇರೆಗೆ ನೇರವು ನೀಡಲು ಒಪ್ಪಿ ಮತ್ತೋಡಿನ ಮೇಲೆ ದಾಳಿ ಮಾಡಿದರು. ಹಾಲಪ್ಪ ನಾಯಕನನ್ನು ಪಟ್ಟಕ್ಕೆ ಕೂರಿಸಿ ಸಿದ್ಧಪ್ಪನಾಯಕನನ್ನು ಸೆರೆಹಿಡಿದು ತಂದು ಚಿತ್ರದುರ್ಗದ ಕಾರಾಗೃಹದಲ್ಲಿಟ್ಟನು.[೧೩೧]

ಚಿತ್ರದುರ್ಗದ ಹಿರೆಮೆದಕೇರಿ ನಾಯಕನ ಪುತ್ರಿ ದ್ಯಾಮವ್ವ ಎಂಬುವವಳು ಸಿದ್ಧಪ್ಪ ನಾಯಕನಿಗೆ ಆಕರ್ಷಿತಳಾಗಿ ವಿವಾಹವಾಗ ಬಯಸಿದಳು. ಆಗ ಚಿತ್ರದುರ್ಗದ ಪಾಳೆಯಗಾರರು ಸಿದ್ಧಪ್ಪ ನಾಯಕನು ವೀರಶೈವನಾಗಿದ್ದರೂ ಬೇಡಮೂಲದವನಾಗಿದ್ದರಿಂದ ಇವರ ವಿವಾಹಕ್ಕೆ ಒಪ್ಪಿ ರಾಜಕುಮಾರಿಗೆ ಲಿಂಗಧಾರಣೆ ಮಾಡಿಸಿ ವಿವಾಹ ಮಾಡಿಸಿಕೊಟ್ಟರು.[೧೩೨] ಸೆರೆಯಾಳಾಗಿದ್ದವನು ಈಗ ಅಳಿಯನಾದ್ದರಿಂದ ಚಿತ್ರದುರ್ಗದ ಪಾಳೆಯಗಾರರು ಹಿಂದೆ ತಾವೇ ಪಟ್ಟಕ್ಕೆ ಕೂರಿಸಿದ್ದ ಹಾಲಪ್ಪ ನಾಯಕನನ್ನು ಗದ್ದುಗೆಯಿಂದ ಇಳಿಸಿ ಮತ್ತೆ ಸಿದ್ದಪ್ಪನಾಯಕನನ್ನು ರಾಜನನ್ನಾಗಿ ಮಾಡಿದರು. ಈ ಕಾರಣದಿಂದ ಮತ್ತೋಡು ಅಲ್ಲಿಂದ ಮುಂದೆ ಒಂದು ರೀತಿಯಲ್ಲಿ ಚಿತ್ರದುರ್ಗದ ಪಾಳೆಯಗಾರರ ಹಿಡಿತಕ್ಕೆ ಒಳಪಡುವಂತಾಗಿತು. ಇವನು

ದೊರೆಯಾಗಿದ್ದಾಗ ಹಾಕಿಸಿದ ಕ್ರಿ.ಶ.೧೭೪೬ರ ಶಾಸನವೊಂದರಲ್ಲಿ ಅವನು ಕಲ್ಲಯ್ಯ ಎಂಬ ಬಾಲಕನೊಬ್ಬನ ಹಾಲುಬೆಣ್ಣೆಯ ಸಲುವಾಗಿ ಆನಿಗಟ್ಟೇಹಳ್ಳಿ ಎಂಬ ಗ್ರಾಮದಲ್ಲಿ ಭೂಮಿಯನ್ನು ನೀಡಿದುದಾಗಿ ಹೇಳಿದೆ.[೧೩೩] ಸಿದ್ಧಪ್ಪ ನಾಯಕನಿಗೆ ಹಾಲಪ್ಪ ನಾಯಕ, ಸಂಗಪ್ಪನಾಯಕ, ದೊಡ್ಡಳನಾಯಕ ಎಂಬ ಮೂವರು ಮಕ್ಕಳು ಇದ್ದು ಇವರಲ್ಲಿ ಹಿರಿಯನಾದ ಹಾಲಪ್ಪ ನಾಯಕನು ತನ್ನ ತಂದೆಯ ಮರಣಾನಂತರ ಪಟ್ಟಕ್ಕೆ ಬಂದನು.[೧೩೪] ಸುಸಂಸ್ಕೃತನು, ವಿದ್ವಾಂಸನು, ಪಾಂಡಿತ್ಯವುಳ್ಳವನು ಆಗಿದ್ದ ಹಾಲಪ್ಪನಾಯಕನು ಸಹ ಚಿತ್ರದುರ್ಗ ಪಾಳೆಯಗಾರರ ಹೆಣ್ಣುಮಗಳೊಬ್ಬಳನ್ನು ಮದುವೆ ಮಾಡಿಕೊಂಡಿದ್ದನು. ಇವರ ಕಾಲದಲ್ಲಿ ಮೆದಕೇರಿ ನಾಯಕನು ಹಾಲಪ್ಪ ನಾಯಕನಲ್ಲಿ ತಮಗೆ ಮೊದಲು ಕೊಡುತ್ತಿದ್ದ ಮೂರು ಸಾವಿರ ಪಗೋಡಗಳಿಗೆ ಹಾಲಪ್ಪ ನಾಯಕನು ನಿರಾಕರಿಸಿದನು. ಮೆದಕೇರಿನಾಯಕನು ಮತ್ತೋಡಿನ ಗೌಡ ಶಾನುಭೋಗರನ್ನು ಕರೆಸಿ ಲೆಕ್ಕಪತ್ರಗಳನ್ನು ಖುದ್ದಾಗಿ ಪರಿಶೀಲಿಸಲಾಗಿ ನಿಜವಾಗಿ ಮತ್ತೋಡಿನ ನಾಯಕನಿಗೆ ಹೆಚ್ಚು ಕಪ್ಪ ಕೊಡಲು ಸಾಧ್ಯವಿಲ್ಲವೆಂದು ತಿಳಿದು, ಮೊದಲಿನ ಕಪ್ಪದ ಮೊತ್ತವನ್ನೇ ಸ್ವೀಕರಿಸಲು ಒಪ್ಪಿದನೆಂದು ತಿಳಿದು ಬರುತ್ತದೆ.[೧೩೫] ಆ ತರುವಾಯದಲ್ಲಿ ಕ್ರಿ.ಶ. ೧೭೭೯ರಲ್ಲಿ ಚಿತ್ರದುರ್ಗದ ಮೇಲೆ ಹೈದರಾಲಿಯು ದಾಳಿ ಮಾಡಿದಾಗ ಹಾಲಪ್ಪ ನಾಯಕನು ಅವನ ಜೊತೆ ಸೇರಿದ್ದನು. ಚಿತ್ರದುರ್ಗದ ನಾಯಕರ ದನಗಳನ್ನು ಹಿಡಿಯುವುದರ ಮೂಲಕ ಬೂದಿಹಾಳಿನ ಪ್ರದೇಶದಲ್ಲಿ ಕಾಳಗ ನಡೆಯಿತು. ಆಗ ಹೈದರಾಲಿಯ ಕಡೆಯವರು ಸೋತು ಹೋಡಿಹೋದರು. ಹಾಲಪ್ಪನಾಯಕನು ಮತ್ತೋಡಿಗೆ ಓಡಿಹೋದನು.[೧೩೬] ನಂತರ ಚಿತ್ರದುರ್ಗದ ಪಾಳೆಯ ಗಾರರಿಗೆ ಸೆರೆಸಿಕ್ಕಂತೆ ತಿಳಿದು ಬರುತ್ತದೆ. ನಂತರ ೧೭೭೯ರಲ್ಲಿ ಹೈದರಾಲಿ ಮತ್ತೆ ಚಿತ್ರದುರ್ಗದ ಮೇಲೆ ದಾಳಿ ಮಾಡಿದಾಗ, ಚಿತ್ರದುರ್ಗದ ದೊರೆ ಮೇದಕೇರಿ ನಾಯಕ ಹೈದರಾಲಿಗೆ ಸೆರೆಯಾದಾಗ ಹಾಲಪ್ಪ ನಾಯಕನಿಗೆ ಬಿಡುಗಡೆಯಾಯಿತಾದರೂ ಮತ್ತೋಡಿನ ಪಟ್ಟ ಮತ್ತೆ ದೊರೆಯಲಿಲ್ಲ. ಇವನು ಈ ಮನೆತನದ ಕಡೆಯ ಧೊರೆ ಎಂದು ಹೇಳಬಹುದು.[೧೩೭]

ಮತ್ತೋಡು ಪಾಳೆಯಗಾರರ ವಂಶವೃಕ್ಷ

ತಿಮ್ಮಳನಾಯಕ + ಲಕ್ಕವ್ವ

- ೧. ಗಿರಿಯಪ್ಪನಾಯಕ
  - ೨. ದೊಡ್ಡಳನಾಯಕ I
    - ೩. ಹಾಲಪ್ಪನಾಯಕ I
      - ೪. ದೊಡ್ಡಳನಾಯಕ II
        - ೫. ಚಿನ್ನದ ಗಿರಿಯಪ್ಪನಾಯಕ
        - ೬. ಸಂಗಪ್ಪನಾಯಕ I
          - ೭. ಹಾಲಪ್ಪನಾಯಕ II
            - ೯. ದೊಡ್ಡಳನಾಯಕ (ಹಾಲಪ್ಪನಾಯಕ III)
            - ೮. ಸಿದ್ದಪ್ಪನಾಯಕ (ಸಿದ್ರಾಮಪ್ಪನಾಯಕ)
              - ೧೦. ಹಾಲಪ್ಪನಾಯಕ IV
              - ಸಂಗಪ್ಪನಾಯಕ III
              - ದೊಡ್ಡಳನಾಯಕ IV
            - ಸಂಗಪ್ಪನಾಯಕ II

(ಕೃಪೆ: ಶ್ರೀಮತಿ ಪಿ. ಯಶೋಧ ರಾಜಶೇಖರಪ್ಪ, ೨೦೦೫, ಮತ್ತೋಡು ಪಾಳೆಗಾರರು, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ .ಆರ್ (ಸಂ), ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು. ೧೫೧–೧೫೨)

೨.೨.೧೦.೨. ಬೂದಿಹಾಳು ಪಾಳೆಯಗಾರರು

ಹೊಸದುರ್ಗ ತಾಲ್ಲೂಕು ಪರಿಸರದಲ್ಲಿ ಆಳಿದ ಪ್ರಮುಖ ಪಾಳೆಯಪಟ್ಟುಗಳಲ್ಲಿ ಬೂದಿಹಾಳು ಪಾಳೆಯಪಟ್ಟು ಸಹ ಒಂದಾಗಿದೆ. ಬೂದಿಹಾಳು ಹೊಸದುರ್ಗ ತಾಲ್ಲೂಕಿನ ಹೋಬಳಿ ಕೇಂದ್ರವಾಗಿದ್ದು ಹೊಸದುರ್ಗದಿಂದ ಹುಳಿಯಾರುವಿಗೆ ಹೋಗುವ ಮಾರ್ಗದಲ್ಲಿ ಆಗ್ನೇಯಕ್ಕೆ ೧೬ ಮೈಲಿಗಳ ದೂರದಲ್ಲಿದೆ. ಸುಮಾರು ೭೦ ವರ್ಷಗಳಿಂದೀಚೆಗೆ ಈ ಊರನ್ನು ಶ್ರೀರಾಮಪುರ ಎಂಬ ಹೊಸ ಹೆಸರಿನಿಂದ ಕರೆಸಿಕೊಳ್ಳುತ್ತಿತ್ತು. ಇದಕ್ಕೆ ಹಿಂದೆ ಹಲವು ಹೆಸರುಗಳಾದ ಭಸ್ಮಪುರ, ವಿಭೂತಿಪುರ, ಬೂದಿಹಾಲು, ಬೂದಿಹಾಳು ಎಂದೂ,[೧೩೮] ಸುತ್ತಮುತ್ತಲಿನ ಪ್ರದೇಶದಲ್ಲಿ ತೆಂಗಿನ ಫಸಲು ಅಧಿಕವಾಗಿದ್ದರಿಂದ ಬೂದಿಹಾಳು ಹೆಸರಿನ ಊರುಗಳಿಂದ ಇದನ್ನು ಪ್ರತ್ಯೇಕಿಸಲು ಕಾಯಿಬೂದಿಹಾಳು ಎಂದೂ,[೧೩೯] ಅಲ್ಲದೆ ಶಾಸನ-ಗ್ರಂಥಗಳಲ್ಲಿ ಹರಪುರ, ಬೇದಂಡಕೋಟೆ, ಅವನಿಗಿರಿದುರ್ಗ, ಗಿರಿಜಾನಗರ, ಸಿರುಮನನಾಡು ಎಂಬುದಾಗಿ[೧೪೦] ಹಲವು ಹೆಸರುಗಳಿಂದ ಕರೆದಿರುವುದನ್ನು ಕಾಣಬಹುದು. ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದ ಬಹುತೇಕ ಪಾಳೆಯಪಟ್ಟುಗಳಲ್ಲಿ ಹೊಸದುರ್ಗ ಪರಿಸರದ ಪಾಳೆಯಪಟ್ಟು ಒಂದು ಎಂದು ಹೇಳಬಹುದು. ಬೂದಿಹಾಳನ್ನು ರಾಜಧಾನಿಯಾಗಿ ಅಥವಾ ಆಡಳಿತ ಕೇಂದ್ರವಾಗಿ ಮಾಡಿಕೊಂಡು ಮೂಲತಃ ಗೊಲ್ಲ ಜನಾಂಗದವರಿದ್ದು, ನಂತರ ವೀರಶೈವಧರ್ಮದ ಪ್ರಭಾವಕ್ಕೆ ಒಳಗಾಗಿ, ಆಳ್ವಿಕೆ ನಡೆಸಿದವರೆ "ಬೂದಿಹಾಳು ಪಾಳೆಯಗಾರರು".[೧೪೧] ಇವರಲ್ಲಿ ಪ್ರಖ್ಯಾತನಾದವನು ಸಿರುಮ ಅಥವಾ ಸಿರುಮಣನಾಯಕ. ಇವನನ್ನು ಅರಸು, ಮಂಡಲೇಶ್ವರ ಎಂದು ಕವಿಗಳು ಕರೆದಿದ್ದಾರೆ. ಆದರೂ ಈಚೆಗಿನ ಇತಿಹಾಸದ ಅಭ್ಯಾಸದ ಕ್ರಮದಲ್ಲಿ ಇವರನ್ನು ಪಾಳೆಯಗಾರರೆಂದೇ ಕರೆಯಲಾಗುತ್ತಿದೆ. ಬೂದಿಹಾಳು ಪಾಳೆಯಗಾರರ ಬಗ್ಗೆ ಅಧ್ಯಯನ ಮಾಡಲು ಸಹಾಯಕವಾಗಿ ಶಾಸನಗಳು ಕಂಡು ಬಂದಿಲ್ಲ. ಆದರೆ ಸಿರುಮನನ್ನು ಕುರಿತು ಮೂರು ಸಾಂಗತ್ಯ ಕಾವ್ಯಗಳು ರಚನೆಯಾಗಿದ್ದು, ಅವು ಇವರ ಇತಿಹಾಸಕ್ಕೆ ಮುಖ್ಯ ಆಕರಗಳಾಗಿವೆ. ಆ ಕಾವ್ಯಗಳೆಂದರೆ ಸಿರುಮನ ಚರಿತೆ, ಗೊಲ್ಲ ಸಿರುಮನ ಚರಿತೆ ಮತ್ತು ಸಿರುಮಣನಾಯಕನ ಸಾಂಗತ್ಯ. ಬೂದಿಹಾಳು ಪಾಳೆಯಪಟ್ಟು ಪ್ರಾರಂಭವಾದದ್ದು ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಎಂದು "ಗೊಲ್ಲ ಸಿರುಮನ ಚರಿತೆ" ಸೂಚಿಸುತ್ತದೆ.[೧೪೨] ಈ ಪಾಳೆಯಪಟ್ಟಿನ ಸ್ಥಾಪನೆಯ ಕೂತುಹಲಕಾರಿ ಹಿನ್ನಲೆಯನ್ನು ಅದು ಹೀಗೆ ನಿರೂಪಿಸುತ್ತದೆ. "ಪೆನುಗೊಂಡೆಯಲ್ಲಿ ಪ್ರೌಢದೇವರಾಯನು ಇದ್ದಾಗ ಅವನಿಗೆ ಸಮಾನವೋ ಎಂಬಂತೆ ನೂರು ಕುದುರೆಗಳನಿಟ್ಟುಕೊಂಡು ಸಾಳುವ ಗುಂಡರಾಜ ಎಂಬುವನು

ಲಕ್ಷಸೀಮೆಗೆ ವಜೀರನಾಗಿದ್ದನು. ಆಗ ಪ್ರೌಢರಾಯನ ಅರಮನೆಯಲ್ಲಿ ಬಾಗಿಲ ಕಾವಲುಗಾರನಾಗಿ ಗೊಲ್ಲಕಾಚಾನಾಯಕ ಎಂಬುವವನು ಇದ್ದನು. ಒಂದು ದಿನ ದೊರೆ ಏಕಾಂತದಲ್ಲಿದ್ದಾಗ ಅವನನ್ನು ಕಾಣಲೆಂದು ಗುಂಡರಾಜನು ಅಲ್ಲಿಗೆ ಬಂದನು. ಆಗ ಕಾಚನು ಕರ್ತವ್ಯದಂತೆ ಬೆತ್ತವನ್ನು ಅಡ್ಡಹಿಡಿದು ಅವನನ್ನು ಒಳಗೆ ಬಿಡದೆ ತಡೆದನು. ಇದರಿಂದ ಸಿಟ್ಟಿಗೆದ್ದ ಗುಂಡರಾಜ "ಬೆತ್ತವನ್ನು ಅಡ್ಡ ಹಿಡಿದ ನಿನ್ನ ತಲೆಯನ್ನು ಕತ್ತರಿಸುತ್ತೇನೆ" ಎಂದು ಅಬ್ಬರಿಸಿದನು. "ನನಗೆ ಹೀಗೆ ಮಾತಾಡಿ ಹಲ್ಲುಗಳನ್ನು ತೋರಿ ಸರಸವಾಡುತ್ತೀಯಾ?" ಎಂದೂ ಕಾಚನಾಯಕನು ಪ್ರತಿಯಾಗಿ ಅಬ್ಬರಿಸಿದನು. ಅವರ ನಡುವೆ ಕದನವೇ ನಡೆಯತೊಡಗಿ ಅದರ ಗದ್ದಲ ಪ್ರೌಢರಾಯನಿಗೆ ಕೇಳಿಸಿತು. ನಿಜಸ್ಥಿತಿಯನ್ನು ತಿಳಿದುಕೊಳ್ಳಲು ದೊರೆ ಅವರಿಬ್ಬರನ್ನು ಓಲಗಕ್ಕೆ ಕರೆಸಿ ಕೇಳಿದಾಗ, ಕಾಚಾನಾಯಕ "ಇವನೊಂದಿಗೆ ನಾನು ಕಾದಾಡಬೇಕು" ಎಂದನು. ಆಗ ದೊರೆ ನೀನು ಗೊಲ್ಲ, ಗುಂಡರಾಜನೊಂದಿಗೆ ಕಾದಾಡುವ ಬಲ್ಲಿದತನ ನಿನ್ನಲೇನಿದೆ? ಎನ್ನಲು ಕಾಚನು "ಅವನ ಬಾಯೊಳಗಿನ ಹಲ್ಲುಗಳನ್ನದುರಿಸಿ ತಮ್ಮ ಮುಂದಿಡುತ್ತೇನೆ ತಾವು ನೋಡಬೇಕು ಎಂದನು. ಆಗ ಗುಂಡನು ಇವನ ಕೈಯನ್ನು ಕಡಿದು ಕಾಣಿಕೆಯಾಗಿ ನಿಮ್ಮ ಮುಂದಿಡುತ್ತೇನೆ ದೊರೆಗಳು ನೋಡಬೇಕು ಎಂದನು. ಆಗ ಪ್ರೌಢರಾಯನು ಒಂದು ಹಗೇವನ್ನು ತೋಡಿಸಿ ಒಂದು ಕೋಳಿಕತ್ತಿಯನ್ನು ನೀಡಿದನು. ಆಗ ಇಬ್ಬರು ಆರ್ಭಟಿಸಿ, ಒಬ್ಬರನ್ನೋಬ್ಬರು ಮೊದಲಿಸಿ, ಉಗ್ರವಾಗಿ ಹೋರಾಡಿದರು. ಕಾಚನಾಯಕ ಗುಂಡರಾಜನ ದವಡೆಯನ್ನು ತಿವಿದು ಹಲ್ಲುಗಳನ್ನು ಉದುರಿಸಿದನು. ಪ್ರೌಢರಾಯನು ಕಾಚನನ್ನು ಕುರಿತು ನಿನಗೇನು ಬೇಕು ಎಂದಾಗ ಕಾಚನು ಎಲ್ಲಾ ಸೌಭಾಗ್ಯವನ್ನು ನೀಡಿದ್ದೀರಿ ನನಗೆ ಈ ಹಲ್ಲುಗಳನ್ನು ಮಾತ್ರ ನೀಡಿರಿ ಎಂದಾಗ ಪ್ರೌಢರಾಯನು ಅವನಿಗೆ ಗುಂಡರಾಜನ ಹಲ್ಲುಗಳನ್ನು ನೀಡುವುದರ ಜೊತೆಗೆ ಬಲ್ಲೇಹ, ಪದಕ, ಚೌಕಳಿ, ಬೊಲ್ಲಗಳನ್ನು ಕೊಟ್ಟು ಸೂಜಿಗಲ್ಲು ಎಂಬ ದುರ್ಗವನ್ನು ನೀಡಿದನು.[೧೪೫] ಗುಂಡರಾಜನ ಹಲ್ಲುಗಳನ್ನು ತನ್ನ ಪಾದರಕ್ಷಗಳೊಳಗೆ ಹಾಕಿಸಿ ಅವನ್ನು ಮೆಟ್ಟುತ ರಾಜ್ಯವಾಳಿಕೊಂಡಿದ್ದನು. ಕಾವ್ಯಗಳಲ್ಲಿ ಹೇಳಿರುವ ಸೂಜಿಗಲ್ಲು ಪ್ರಸ್ತುತ ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನಲ್ಲಿದೆ. ಇದು ಕಾಚಾನಾಯಕನ ಕಾಲಕ್ಕಾಗಲೇ ಒಂದು ಪ್ರಮುಖ ಸ್ಥಳವಾಗಿತ್ತು. ಅಲ್ಲಿ ಕಂಡುಬಂದಿರುವ ಕ್ರಿ.ಶ.೧೨, ೧೩ನೇ ಶತಮಾನದ ಶಾಸನಗಳು ಆಗಲೇ ಈ ಊರು ಒಂದು ಪ್ರಮುಖ ಊರಾಗಿತ್ತೆಂಬುದನ್ನು ಶೃತಪಡಿಸುತ್ತವೆ ಎಂದು ಹೇಳಲಾಗಿದೆ.[೧೪೬] ಕಾಚಾನಾಯಕನು ಸೂಜಿಗಲ್ಲು ಬೂದಿಹಾಳು ಪಾಳೆಯಪಟ್ಟನ್ನು ಸುಮಾರು ೨೫ ವರ್ಷ ಆಳಿರಬೇಕು.[೧೪೭] ಅವನ ಆ ಅವಧಿಯನ್ನು ಸ್ಥೂಲವಾಗಿ ಕ್ರಿ.ಶ.೧೪೩೫-೬೦ ಎನ್ನಬಹುದು.[೧೪೮] ಕಾಚನಾಯಕನ ಇಬ್ಬರು

ಮಕ್ಕಳು ಸಿರುಮ ಮತ್ತು ಮಲ್ಲ ಇವರು ಕ್ರಮವಾಗಿ ಬೂದಿಹಾಳು ಹಾಗೂ ಹೆಗ್ಗೆರೆಯಲ್ಲಿ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಕಾಚನಾಯಕನ ಮರಣದ ಬಳಿಕ ಸಿರುಮನು ಬೂದಿಹಾಳನ್ನು ಕೇಂದ್ರವನ್ನಾಗಿ ಮಾಡಿಕೊಂಡು ಅಲ್ಲಿ ಕೋಟೆ, ಕೊತ್ತಲಗಳನ್ನು ಬಲಪಡಿಸಿಕೊಂಡು ಆಳ್ವಿಕೆ ನಡೆಸಿದನು. ಸಿರುಮ ಎಷ್ಟು ವರ್ಷ ರಾಜ್ಯವಾಳಿದನೆಂದು ಸ್ಪಷ್ಟವಿಲ್ಲ. ಅವನು ಸುಮಾರು ಕ್ರಿ.ಶ.೧೪೬೦ ರಿಂದ ನರಸಿಂಹನೊಂದಿಗೆ ಯುದ್ಧವಾಗುವವರೆಗೆ ಅಂದರೆ ಕ್ರಿ.ಶ.೧೪೭೬ಕ್ಕೆ ಸ್ವಲ್ಪ ಮುಂಚಿನವರೆಗೆ, ಸುಮಾರು ೨೦ ವರ್ಷಕಾಲ ಆಳಿದ್ದಿರಬೇಕು.[೧೪೯] ಕಾವ್ಯಗಳು ಬೂದಿಹಾಳು ಕೋಟೆಯನ್ನು ರಾವಣನ ಲಂಕೆಗೂ, ಕುಮಾರ ರಾಮನ ಕುಮ್ಮಟದುರ್ಗಕ್ಕೂ ಹೋಲಿಸುತ್ತವೆ. ಬಲಿದುರ್ಗವೆಂದು ವರ್ಣಿಸುತ್ತವೆ. ಸಿರುಮನ ಬೂದಿಹಾಳು ರಾಜ್ಯವು ಹಿರಿಯೂರು, ಹೊನ್ನವಳ್ಳಿ, ಎಕ್ಕಟಿ, ಕಂದಿಕೆರೆ, ಹಾರನಹಳ್ಳಿ, ಹಾಲುಕುರಿಕೆ, ಆಸಂದಿ, ಬಾಗೂರು ಈ ಪ್ರಾಂತ್ಯಗಳ ನಡುವೆ ಸಾಕಷ್ಟು ವಿಶಾಲವಾದ ಪ್ರದೇಶವಾಗಿದ್ದಿತೆಂದು ಹೇಳಲಾಗಿದೆ.[೧೫೦] ಸಿರುಮನನ್ನು ನಡುನಾಡಗೂಳಿ, ಹಿಂಡು ಮನ್ನೆಯರ ಕೊಲಾಹಲ ಮಂಡಳೇಶ್ವರ, ನಡುನಾಡಿನ ಮನ್ನೆಯರ ಗಂಡ ಎಂದೆಲ್ಲಾ ಕರೆದಿರುವುದು ಸಿರುಮನು ಸುತ್ತಣ ಪಾಳೆಯಗಾರರಿಗೆ ಸಿಂಹಸ್ವಪ್ನವಾಗಿದ್ದನೆಂದೂ, ಬೂದಿಹಾಳು ಬಲಿಷ್ಠ ಪಾಳೆಯಪಟ್ಟಾಗಿತ್ತೆಂದೂ ತಿಳಿಯಬಹುದಾಗಿದೆ.[೧೫೧] ಸಿರುಮನು ಗುರುಲಿಂಗಜಂಗಮ ಸೇವಿತನಾಗಿ, ಕುಂತಹರನ ಭಕ್ತನೆನಿಸಿ, ಪ್ರಥಮ ಕಲ್ಯಾಣವೆನಿಸಿದ್ದ ಬೂದಿಹಾಳು ಪಟ್ಟಣದ ಸೋಮೇಶಲಿಂಗ, ವೀರಭದ್ರದೇವರ ಪರಮ ಆರಾಧಕನಾಗಿ, ವೀರಶೈವ ಮತ ನಿಷ್ಠನಾಗಿ, ಬಲಾಢ್ಯ ಪಾಳೆಯಗಾರನೆನಿಸಿ ಮೆರೆಯುತ್ತಿದ್ದ. ಇವನ ಪತ್ನಿ ರಾಣಿ ಚಿಕ್ಕಮ್ಮ, ಕಾಚನಾಯಕ ಕುಮಾರ ಮಲ್ಲಣ್ಣ, ವೀರಭದ್ರ, ಸೋಮಯ್ಯ, ನಂಬಿಯಣ್ಣ ಎಂಬ ಐವರು ವೀರಪುತ್ರರೂ, ಮೂವರೂ ಪುತ್ರಿಯರೂ ಇದ್ದರು ತನ್ನ ಹೆಣ್ಣು ಮಕ್ಕಳನ್ನು ಕ್ರಮವಾಗಿ ತಿಪ್ಪಯ್ಯ ಬಸವಯ್ಯ, ಭೈರಯ್ಯ ಎಂಬುವವರಿಗೆ ವಿವಾಹ ಮಾಡಿಕೊಟ್ಟಿದ್ದ ಕಾಚನಾಯಕನಿಗೆ ಬೆಲಗೂರು ಭೈರನಾಯಕನ ಮಗಳನ್ನು, ಮಲ್ಲಣ್ಣನಿಗೆ ಅಳಿಯ ತಿಪ್ಪಯ್ಯನ ಮಗಳನ್ನು, ವೀರಭದ್ರನಿಗೆ ಹಾಲುಕುರಿಕೆ ರುದ್ರರಾಜನ ಮಗಳನ್ನು ತಂದು ವಿವಾಹ ಮಾಡಿದ್ದ.[೧೫೨] ಸಿರುಮನ ತಮ್ಮ ಮಲ್ಲನಾಯಕನು ತನ್ನ ಮಗ ಚೆನ್ನನಾಯಕನೊಂದಿಗೆ ಹೆಗ್ಗೆರೆ ವಳಿತವನ್ನು ನೋಡಿಕೊಳ್ಳುತ್ತಿದ್ದ. ಕಲ್ಲರಸನೆಂಬ ನಿಷ್ಠಾವಂತ ಶೂರಮಂತ್ರಿ ಸಿರುಮನಿಗಿದ್ದನು. ರಾಣಿ ಚಿಕ್ಕಮ್ಮನ ತಮ್ಮ ಬೆಲಗೂರು ಭೈರನಾಯಕ, ಹಾಲುಕುರಿಕೆ ರುದ್ರರಾಜ, ಹೊನ್ನವಳ್ಳಿಯ ವೇದರಾಜ, ಬಾಗೂರಿನ ಗೋವಿಂದ ನಾಯಕ ಸಿರುಮನ ಮಿತ್ರರಾಗಿದ್ದರು. ಅದರಲ್ಲೂ ಶ್ರೀಮಂತ ಪಾಳೆಯಪಟ್ಟಾಗಿದ್ದ ಬಾಗೂರಿನ

ಗೋವಿಂದ ಹಾಗೂ ಸಿರುಮ ಅಣ್ಣತಮ್ಮಂದಿರಂತೆ ವಾತ್ಸಲ್ಯ ಸ್ನೇಹ ಹೊಂದಿದ್ದರು.[೧೫೩] ಸಿರುಮನ ಬಳಿ ೩೦೦ ಕುದುರೆ, ೩೦೦೦ ಪರಿವಾರವಿತ್ತು ಎಂದು ಮಲ್ಲಕವಿ ವರ್ಣಿಸುತ್ತಾನೆ. ಹುಲಿಮುಖ, ಐಂಕರಿ, ಕೊತ್ತಳ, ವ್ಯವಸ್ಥಿತ ಅಗಳು, ಚಿತ್ರಗೆಲಸದ ತೆನೆಗಳು, ಅಲ್ಲಲ್ಲಿ ಡೆಂಕಣಿ ಯಂತ್ರ ಹೂಡಿಸಿದ್ದ ಪರಿಘಗಳಿಂದ ಕೂಡಿದ ಕೋಟೆ ಬಲದುರ್ಗ, ಕಂಚಿನ ಕೋಟೆಯೆನಿಸಿತ್ತು. ಸುಭದ್ರ, ಜಾಗೃತ ರಕ್ಷಣಾ ವ್ಯವಸ್ಥೆ, ವೀರಬಂಟರು, ತರಾವರಿ ಯುದ್ಧ ಸಾಮಗ್ರಿಗಳು ಅಲ್ಲಿದ್ದವು. ಸಮೃದ್ಧ ಆದಾಯ ತರುವ ವ್ಯಾಪಾರ ವಹಿವಾಟು, ಕೃಷಿ ಉತ್ಪನ್ನ ಇವನ ರಾಜ್ಯವನ್ನು ಸುಭಿಕ್ಷವನ್ನಾಗಿಸಿತ್ತು.[೧೫೪] ಬೂದಿಹಾಳಿನ ಸಿರುಮನಿಗೂ ಚಂದ್ರಗಿರಿ ಪೆನುಗೊಂಡೆಯಲ್ಲಿದ್ದ ನರಸಿಂಹನಿಗೂ ಕದನವೊಂದು ಕೈಗಟ್ಟಿತ್ತು. ಇದಕ್ಕೆ ಸಿರುಮನ ನೆರೆಹೊರೆಯ ಪಾಳೆಗಾರರಾದ ಹಿರಿಯೂರಿನ ಕಸವಿನಾಯಕ ಮತ್ತು ಎಕ್ಕಟಿಯ ಮಿಡಗೇಶಿ ಗಂಗಯ್ಯ ಇವರುಗಳೊಂದಿಗೆ ಘಟಿಸಿದ ವಿರಸ ಕಾರಣವಾಯಿತು.[೧೫೫] ರಾಮಕವಿಯ ಸಿರುಮನ ಚರಿತೆ ಹೇಳುವಂತೆ ಒಮ್ಮೆ ನಾಡಿಗೆ ನುಗ್ಗಿ ಬೆಳೆಗಳನ್ನು ನಾಶಮಾಡುತ್ತಿದ್ದ ಕಾಡುಮೃಗಗಳನ್ನು ಬೇಟೆಯಾಡಲೆಂದು ದಶರಥ ರಾಮೇಶ್ವರ ಕಾನನಕ್ಕೆ ಸಿರುಮ ಹೋದ, ಅಲ್ಲಿ ಹಿರಿಯೂರು ಸೀಮೆಯನ್ನು ಅತಿಕ್ರಮಿಸಿ ಬೇಟೆಯಾಡಿದ. ಇದನ್ನು ಆಕ್ಷೇಪಿಸಿದ ಹಿರಿಯೂರು ಪಾಳೆಯಗಾರರ ಕಸವಿನಾಯಕನ ಮಾತನ್ನು ಸಿರುಮ ಉಪೇಕ್ಷಿಸಿದಾಗ, ಮೇಲೇರಿ ಬಂದ ಕಸವನಾಯಕ ಸೂತು ಹಿಂತಿರುಗಿದ, ಮತ್ತೊಂದೆಡೆ ಹುಳಿಯಾರುವಿನ ಬಳಿ ವೇದರಾಜನು ಸಿರುಮನಿಂದ ಸೋತನು.[೧೫೬] ಕೊನೆಗೆ ಹಿರಿಯೂರು ಕಸವಿನಾಯಕ, ಎಕ್ಕಟಿ ಗಂಗಯ್ಯ , ಹಾರ್ನಹಳ್ಳಿ ಕೇಶವರಾಜ, ಕೆಂದಿಕೆರೆಯ ಚೆಟ್ಟಿಗ, ಚೆನ್ನಮರಾಜರು ಸೇರಿಕೊಂಡು ವೈರಿಕೂಟ ರಚಿಸಿಕೊಂಡು, ಚಂದ್ರಗಿರಿಯ ಸಾಳುವ ನರಸಿಂಹರಾಯನ ಬಳಿ ದೂರು ನೀಡಿದರು.[೧೫೭] ಇದನ್ನು ತಿಳಿದ ಸಾಳುವ ನರಸಿಂಗನು ತನ್ನ ಮಂತ್ರಿ ಈಶ್ವರನಾಯಕನೊಂದಿಗೆ ಅಪಾರ ಸೈನ್ಯದೊಂದಿಗೆ ಬೂದಿಹಾಳು ಮುತ್ತಿಗೆಗೆ ದಂಡೆತ್ತಿ ಹೊರಟ, ಮಾರ್ಗದುದ್ದಕ್ಕೂ ಅನೇಕ ಚಿಕ್ಕಪುಟ್ಟ ಪ್ರದೇಶಗಳಾದ ಡೆಂಕಣಕೋಟೆ, ಕೋಳುಕೋಟೆ, ಅರಗೊಂಡೆ, ಮುಳಬಾಗಿಲು, ಸಾವಂದಿಗೆ, ಯರಮಿಂಚಿ, ಗುಟ್ಟಲಕುರಿಕೆ, ಕಲ್ಲದುರ್ಗ, ನಿಡಗಲ್ಲು, ಮಿಡಗೇಸಿಗಳನ್ನು ವಶಪಡಿಸಿಕೊಳ್ಳುತ್ತಾ, ಸಾಗಿ ಬಂದ ಇವನು ಮೊದಲು ಸಿರುಮನ ಮಿತ್ರ ಪಾಳ್ಯದವರನ್ನು ಸೋಲಿಸಲು ತೀರ್ಮಾನಿಸಿ ಸಿರುಮನ ಆಪ್ತಮಿತ್ರ ಬಾಗೂರಿನ ಗೋವಿಂದ ನಾಯಕನ ಕೋಟೆಗೆ ಮೊದಲು ಲಗ್ಗೆ ಹಾಕಿದನು ಅಲ್ಲಿ ಎಂಬತ್ತು ದಿನಗಳ ಘೋರ ಕಾಳಗ ನಡೆಯಿತು. ಇದರಲ್ಲಿ ಗೋವಿಂದ ನಾಯಕನು ನರಸಿಂಹನೊಂದಿಗೆ ಸಂಧಿ ಮಾಡಿಕೊಂಡು ಅಪಾರ ಮೊತ್ತದ ಹಣ ಹೊನ್ನು ನೀಡಿದನು.[೧೫೮] ತದನಂತರ ರಾಯನ ದಂಡು

ಬೂದಿಹಾಳಿನತ್ತ ನಡೆದು ಎರಡು ಪಕ್ಷದವರಿಗೂ ಭೀಕರ ಕದನವೇರ್ಪಟ್ಟು ಒಂದು ತಿಂಗಳ ಕಾಲದವರೆಗೂ ಮುಂದುವರೆಯಿತು. ಇದರಲ್ಲಿ ಸಿರುಮನ ಕಡೆಯವರು ಬಹುವಾಗಿ ಸೋತರು. ಹಲವು ರಾಜಪರಿವಾರದವರು ಅನುಗಮನ ಮಾಡಿಕೊಳ್ಳುತ್ತಾರೆ. ಸಿರುಮನ ಮಗ ಕಾಚನು ವೀರಾವೇಶದಿಂದ ಹೋರಾಡಿ ವೀರಮರಣವಪ್ಪುತ್ತಾನೆ. ಆತನ ಮಡದಿಯರು ಉರಿಯುವ ಕೊಂಡಗಳನ್ನು ಪ್ರವೇಶಿಸಿದರು.[೧೫೯] ಅನಂತರ ಸಿರುಮನು ವೈರಿಗಳಿಗೆ ಏನೂ ಸಿಗಬಾರದೆಂದೂ ಯೋಚಿಸಿ ತನ್ನ ಪ್ರಜೆಗಳಿಗೆಲ್ಲಾ ಅಪಾರ ಧನ, ಧಾನ್ಯ ನೀಡಿ ಊರು ಬಿಟ್ಟು ಹೋಗಲು ತಿಳಿಸುತ್ತಾನೆ. ಊರ ಮಧ್ಯದಲ್ಲಿ ದೊಡ್ಡ ದೊಡ್ಡ ಕೊಂಡಗಳನ್ನು ಏರ್ಪಡಿಸುತ್ತಾನೆ. ಅದರಲ್ಲಿ ಕುದುರೆಗಳು ಸಕಲದವಸ ಧಾನ್ಯ, ಅಮೂಲ್ಯ ವಸ್ತುಗಳು, ಲೆಕ್ಕಪತ್ರದ ಕಡತಗಳು, ಸಂಪತ್ತು, ಹಣ ಒಡವೆ ಎಲ್ಲವನ್ನು ಹಾಕಿಸಿ ಸುಡಿಸುತ್ತಾನೆ. ಅರಮನೆಯ ಸಮಸ್ತ ಹೆಂಗಸು ಮಕ್ಕಳಾದಿಯಾಗಿ ಪರಿವಾರವನ್ನೆಲ್ಲ ಕೊಂಡಕ್ಕೆ ಕಳಿಸುತ್ತಾನೆ. ಅನಂತರ ಸಿರುಮ ವೀರಾವೇಶದಿಂದ ಕಾದಾಡಿ ಗಾಯಗೊಳ್ಳುತ್ತಾನೆ. ವೈರಿಗಳಿಗೆ ತಲೆಯೊಪ್ಪಿಸಬಾರದೆಂದು ಊರಿಗೆ ಬಂದು ಮಡದಿ ಚಿಕ್ಕಮ್ಮನೊಂದಿಗೆ ಶಿರಕಡಿದುಕೊಂಡು ಕೊಂಡಕ್ಕೆ ಬೀಳುತ್ತಾನೆ.[೧೬೦] ಒಟ್ಟಿನಲ್ಲಿ ಬೂದಿಹಾಳು ಕಾಳಗದಲ್ಲಿ ಸಿರುಮ ಹಾಗೂ ಆತನ ವೀರಪುತ್ರರು ಬಂಧು-ಬಳಗ, ವೀರಭಂಟರು ವೀರ ಮರಣ ಹೊಂದುವುದರೊಂದಿಗೆ ಬೂದಿಹಾಳು ಪತನಗೊಂಡಿತು.[೧೬೧]

"ಬೂದಿಹಾಳು ಸೀಮೆಯು ಮಗರನಾಡು ವೇಂಠೆಯಕ್ಕೆ ಸೇರಿತ್ತೆಂದು ಗೊತ್ತಾಗುತ್ತದೆ. ಈ ಮಗರ ನಾಡು ವೆಂಠೆಯು ಮಗರ ೩೦೦ ಎಂದು ಶಾಸನಗಳಲ್ಲಿ ಕರೆಯಲಾಗಿತ್ತು. ಗಂಗವಾಡಿ -೯೬೦೦೦ದ ಉಪವಿಭಾಗವಾಗಿದ್ದಿರಬೇಕೆಂದು ತಿಳಿದುಬರುತ್ತದೆ. ಈ ಬೂದಿಹಾಳು ಸೀಮೆಯಲ್ಲಿ ಕುಲವಟಿ, ನೇರಿಲಕೆರೆ, ಹೆಗ್ಗೆರೆ, ಎಣ್ಣವಗೆರೆ, ಬಿನದರಸದಳ್ಳಿ, ಮಾಳವನಹಳ್ಳಿ, ಬೆಲಗೂರು, ಸಿಂಗಟಕೆರೆ, ಕಂಚಿಗಲ್ಲು, ಬೂದಿಹಾಳು, ಶ್ರೀವೊಮಯಹಳ್ಳಿ, ತುಂಬಿನಕೆರೆ, ಶ್ರೀಚಿಕ್ಕಗೋಂಡನಹಳ್ಳಿ, ಯಡಗಟ್ಟಿ, ಲಕುಮಾಪುರ, ಬೊಮ್ಮೇನಹಳ್ಳಿ, ಕೈಮರ, ಭೈರವ ದೇವರಗುಡ್ಡ, ಕನ್ನೆನಹಳ್ಳಿ, ಉಪ್ಪಿನಹೊಳೆ, ನರಿಯಹಳ್ಳಿ, ಮಾಟನಹಳ್ಳಿ, ನಟ್ಟಕಲ್ಲು, ಕಲ್ಲಕೆರೆ, ಮೊದಲಾದ ಗ್ರಾಮಗಳು ಅಂತರ್ಗತವಾಗಿದ್ದವೆಂದು ಶಾಸನಗಳಿಂದ ಗೊತ್ತಾಗುತ್ತದೆ. ಮತ್ತೋಡು, ನಾಯಿಗೆರೆ, ಅರಳಿಹಾಳ, ಗ್ರಾಮಗಳೂ ಈ ಸೀಮೆಗೆ ಸೇರಿದ್ದವು. ಒಟ್ಟಿನಲ್ಲಿ ಈ ಪಾಳೇಯಪಟ್ಟು ಸಾಕಷ್ಟು ವಿಸ್ತಾರವಾದ ಪ್ರದೇಶವನ್ನು ಒಳಗೊಂಡಿತ್ತು. ಅಲ್ಲದೆ ಸಿರುಮನು, ಹೊಳಲು, ಹೊನ್ನತ್ತಿ, ಕೆರೆಯಸಂತೆ, ದೇವನೂರು, ಹಳೇಯಬೀಡುಗಳನ್ನು ಲಕ್ಷ ತೆರಿಗೆ ತರುವಂತಹ ಚಿಕ್ಕಂಗಳ ಒರಿಯಂಗಳಗಳನ್ನು, ಹಲಸು, ತೆಂಗು, ಬಾಳೆ, ಕಿತ್ತಳೆ, ತೋಟಗಳಿಂದ ಸಮೃದ್ಧವಾಗಿರುವ

ತಂಗಲಿ ಮಚ್ಚೇರು, ಕಡವೂರು, ಸಿಂಗಟಗೆರೆ, ಗ್ರಾಮಗಳನ್ನು, ಹೊಳೆಸಾಲು ಗ್ರಾಮಗಳನ್ನು ವಶಪಡಿಸಿಕೊಂಡಿದ್ದನೆಂದು ಸಿರುಮನ ಕುರಿತ ಕಾವ್ಯಗಳು ಬಣ್ಣಿಸುತ್ತವೆ.[೧೬೨]

ಬೂದಿಹಾಳು ಪಾಳೆಯಗಾರರ ವಂಶವೃಕ್ಷ

- ಕಾಚನಾಯಕ **(I)**
  - ಸಿರುಮ ನಾಯಕ **II** ಪತ್ನಿ ಚಿಕ್ಕಮ್ಮ
    - ಕಾಚನಾಯಕ
    - ಕುಮಾರ ಮಲ್ಲಣ್ಣ
    - ವೀರಭದ್ರ
    - ಸೋಮಣ್ಣ **III** (?)
    - ನಂಬಿಯಣ್ಣ
    - ಮೂವರು ಪುತ್ರಿಯರು
  - ಮಲ್ಲನಾಯಕ
    - ಚೆನ್ನನಾಯಕ

(ಕೃಪೆ : ಶೈಲಜಾ ಹೊಸಳ್ಳೇರ., ೨೦೦೧, ಬೂದಿಹಾಳು ಪಾಳೆಯಗಾರರು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ವಸು ಎಂ.ವಿ (ಸಂ)., ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೪೧)

೨.೨.೧೦.೩. ಸಂತೇಬೆನ್ನೂರು ಪಾಳೆಯಗಾರರು

ವಿಜಯನಗರ ಅರಸೊತ್ತಿಗೆಯ ಕೊನೆಯ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಹಲವು ಪಾಳೆಯಪಟ್ಟುಗಳಲ್ಲಿ ಸಂತೇಬೆನ್ನೂರು ಪಾಳೆಯಪಟ್ಟು ಒಂದಾಗಿದೆ. ಕರ್ನಾಟಕದ ಅರೆ ಮಲೆನಾಡಿನ ಭಾಗವಾಗಿದ್ದ ಈಗಿನ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ, ಸಂತೇಬೆನ್ನೂರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಗಳಲ್ಲಿ ೧೬ರಿಂದ ೧೮ನೇ ಶತಮಾನದವರೆಗೆ ಪಾಳೆಯಪಟ್ಟು ಕಟ್ಟಿ ಆಡಳಿತ ನಡೆಸಿದ ರಾಜವಂಶಕ್ಕೆ ಬಸವಾಪಟ್ಟಣ, ಸಂತೇ ಬೆನ್ನೂರು, ತರೀಕೆರೆ ಪಾಳೆಯಗಾರರೆಂದು ಕರೆಯಲಾಗಿದೆ.[೧೬೩]

ಈ ವಂಶದ ಮೂಲಪುರುಷ ವಿಜಯನಗರದಿಂದ ಬಂದ ಧೂಮರಾಜನೆಂದೂ, ಇಲ್ಲಿ ಸಮೀಪದ ಬಸವಾಪಟ್ಟಣಕ್ಕೆ ಬೇಟೆಗಾಗಿ ಬಂದು ಅಲ್ಲಿನ ಬೇಡರ ಯುವತಿಯನ್ನು ಮದುವೆಯಾಗಿ ಅವಳಿಂದ ಪಡೆದ ಮಕ್ಕಳಿಗೆ ಅಧಿಕಾರ ಕೊಡಲು ಒಪ್ಪಿ ಅಲ್ಲಯೇ ನೆಲೆ ನಿಂತು ಪಾಳೆಯಪಟ್ಟು ಕಟ್ಟಿದನೆಂದು ಹೇಳಲಾಗುತ್ತದೆ.[೧೬೪] ಈ ವಂಶದ ಆಡಳಿತಕಾಲದಲ್ಲಿ ಇವರು ತಮ್ಮ ರಾಜ್ಯವನ್ನು ಪೂರ್ವದಲ್ಲಿ ಚಿತ್ರದುರ್ಗದಿಂದ ಪಶ್ಚಿಮದ ಕವಲೇದುರ್ಗದವರೆಗೂ, ಉತ್ತರದಲ್ಲಿ ಹರಿಹರದಿಂದ ದಕ್ಷಿಣದ ಬಾಬಾಬುಡನ್‌ಗಿರಿ ಬೆಟ್ಟದವರೆಗೂ ವಿಸ್ತರಿಸಿದರೆಂದು ಚಾರಿತ್ರಿಕ ದಾಖಲೆಗಳು ತಿಳಿಸುತ್ತವೆ.[೧೬೫]

ವಿಜಯನಗರದ ಸಾಮಂತರಾಗಿದ್ದ ಇವರು ಆ ಸಾಮ್ರಾಜ್ಯದ ಪತನಾನಂತರ ತಾವೇ ಸ್ವತಂತ್ರರಾಗಿ, ನಂತರ ಬಿಜಾಪುರದ ಆದಿಲ್‌ಷಾಹಿ, ಕೆಳದಿ, ಚಿತ್ರದುರ್ಗ ಪಾಳೆಯಗಾರರ ಹಾಗೂ ಕೆಲಕಾಲ ಹೈದರ್, ಟಿಪ್ಪು, ಮರಾಠ, ಮೈಸೂರು ಅರಸರ ಅಧೀನರಾಗಿ ನಂತರ ಬ್ರಿಟೀಷ್ ಆಧಿಪತ್ಯ ಆರಂಭವಾದಾಗ ಅವರ ವಿರುದ್ಧವೂ ಹೋರಾಡಿ ತಮ್ಮ ಅಸ್ಥಿತ್ವ ಕಳೆದುಕೊಂಡು ಮೂರು ಶತಮಾನಗಳ ಕಾಲ ನಮ್ಮ ನಾಡಿನಲ್ಲಿ ಈಗಿನ ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು, ತುಮಕೂರು, ಹಾಸನ, ಹಾವೇರಿ ಜಿಲ್ಲೆಗಳಿಗೆ ಒಳಪಟ್ಟ ಪ್ರದೇಶದಲ್ಲಿ ಆಳ್ವಿಕೆ ನಡೆಸಿದರೆಂದು ಶಾಸನಗಳನ್ನೊಳಗೊಂಡಂತೆ ಐತಿಹಾಸಿಕ ದಾಖಲೆಗಳಿಂದ ನಮಗೆ ತಿಳಿದು ಬರುತ್ತದೆ.[೧೬೬] ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳನ್ನು ಸಂತೇಬೆನ್ನೂರು ಪಾಳೆಯಗಾರರು ಆಳ್ವಿಕೆ ಮಾಡಿರುವುದಕ್ಕೆ ಹಲವು ಆಧಾರಗಳಿವೆ. ಅದರಲ್ಲಿ ಬಹುಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯ ಅರೆಮಲೆನಾಡು ಎಂದು ಕರೆಯಲ್ಪಡುವ ಹೊಸದುರ್ಗದಲ್ಲಿ ಅವರ ಆಳ್ವಿಕೆ ಇದ್ದಿತು. ಅದರಂತೆ ಹೊಳಲ್ಕೆರೆ ತಾಲ್ಲೂಕಿನ ಕೆಲವು ಭಾಗಗಳು ಅವರ ಆಳ್ವಿಕೆಗೆ ಒಳಪಟ್ಟಿದ್ದವು. ಇದಕ್ಕೆ ಸಾಕ್ಷಿ ಹೊಸದುರ್ಗ ಹಾಗೂ ಹೊಳಲ್ಕೆರೆಗಳಲ್ಲಿ ದೊರೆತ ಶಾಸನಗಳು ಎಂಬುದಾಗಿ ಹೇಳಬಹುದು. ಸಂತೇಬೆನ್ನೂರು ಪಾಳೆಯಗಾರರಲ್ಲಿ ಬರುವ ರಾಜಪ್ಪನಾಯಕ, ಬಾಲಗಿರಿನಾಯಕ, ದಳನಾಯಕ (ಕ್ರಿ.ಶ.೧೫೭೦–೧೬೧೦) ಈ ಮೂವರ ಹೆಸರಿನಲ್ಲಿ ಹೊಳಲ್ಕೆರೆ ಮತ್ತು ಹೊಸದುರ್ಗಗಳಲ್ಲಿ ಶಾಸನಗಳಿವೆ. ದೈವಭಕ್ತರಾಗಿದ್ದ ಇವರು ತಮ್ಮ ಆಳ್ವಿಕೆಗೆ ಒಳಪಟ್ಟಿದ್ದ ಈ ಭಾಗಗಳಲ್ಲಿ ಹಲವಾರು ದೇವಾಲಯಗಳ ಜೀರ್ಣೋದ್ಧಾರ ಕಾರ್ಯಕೈಗೊಂಡು, ದತ್ತಿಗಳನ್ನು ಬಿಟ್ಟಿರುವರು. ಹನುಮಪ್ಪ ನಾಯಕರ ಮಗ ರಾಜಪ್ಪ ನಾಯಕನು ಹೊಸದುರ್ಗ ತಾಲ್ಲೂಕು ಬಾಗೂರಿನ ಪ್ರಸಿದ್ಧ ಚನ್ನಕೇಶವ ದೇವಾಲಯದ ಪ್ರಾಕಾರದಲ್ಲಿರುವ ಲಕ್ಷ್ಮೀದೇವಿ ದೇವಾಲಯವನ್ನು ಜೀರ್ಣೋದ್ಧಾರ ಕಾರ್ಯವನ್ನು ಕ್ರಿ.ಶ.೧೫೭೧ರಲ್ಲಿ ಮಾಡಿಸಿದ್ದಾಗಿ ಹಾಗೂ

ಅದಕ್ಕೆ ಕೆಲವೊಂದು ಗದ್ದೆ ಹಾಗೂ ಇತರೆ ಅಂಶಗಳನ್ನು ದಾನ ನೀಡಿದ್ದಾಗಿ ತಿಳಿದು ಬರುವುದು.[೧೭] ಅದೇ ರೀತಿ ಹನಿಮಿನಾಯಕನ ಮೊಮ್ಮಗ ದಳನಾಯಕ ಎಂಬುವವನು ಇದೇ ತಾಲ್ಲೂಕಿನ ಕೆಲ್ಲೋಡು ಹನುಮಂತ ದೇವರಿಗೆ ಕುರುಬರ ಹಳ್ಳಿಯನ್ನು ಕ್ರಿ.ಶ. ೧೬೦೫ರಲ್ಲಿ ದತ್ತಿ ಕೊಟ್ಟಿದ್ದಾಗಿ ಹೇಳಲಾಗಿದೆ.[೧೮] ಹನುಮನಾಯಕರಿಗೆ ಧರ್ಮವಾಗಲಿ ಎಂದು ಅವನ ಸಾಮಂತ ವರ್ಗದ ನಾಯಕನೊಬ್ಬನು ಹೊರಕೆರೆ ರಂಗನಾಥದೇವರ ನೈವೇದ್ಯಕ್ಕೆ ಕೋಡಿಹಳ್ಳಿ ಗ್ರಾಮವನ್ನು ದಾನ ನೀಡುವುದಾಗಿ ಕಂಡು ಬರುತ್ತದೆ.[೧೯] ಹೀಗೆ ಇವರು ಹೊಳಲ್ಕೆರೆ, ಹೊಸದುರ್ಗ ಪ್ರಾಂತ್ಯವನ್ನು ಆಳುತ್ತಿದ್ದುದಾಗಿ ತಿಳಿದುಬರುತ್ತದೆ. ಅಲ್ಲದೆ ಇವರು ಕೆಲವು ಸಂದರ್ಭದಲ್ಲಿ ಚಿತ್ರದುರ್ಗ ಪಾಳೆಯಗಾರರ ಅಧೀನರಾಗಿಯೂ ಬಾಳಿದುಂಟು.

ಟಿಪ್ಪಣಿಗಳು:

೧. ಶಿವತಾರಕ್ ಕೆ.ಬಿ., "ಚಿತ್ರದುರ್ಗ ಜಿಲ್ಲೆಯ ಪ್ರಾಗಿತಿಹಾಸ", ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್(ಸಂ), ಪು.೨೧.

೨. ಅದೇ

೩. ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ ೨೦೦೬-೨೦೦೭, ಪು.೧

೪. ಕನ್ನಡ ವಿಷಯ ವಿಶ್ವಕೋಶ, ಪು.೯೬೭.

೫. ವಿರೂಪಾಕ್ಷಿ ಪೂಜಾರಹಳ್ಳಿ, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪು.೧೦.

೬. ಕನ್ನಡ ವಿಷಯ ವಿಶ್ವಕೋಶ, ಪು.೯೬೭.

೭. ಅದೇ

೮. ಅದೇ

೯. ಅದೇ

೧೦. ಅದೇ

೧೧. ಅದೇ

೧೨. ಅದೇ

೧೩. ಅದೇ

೧೪. ಶಿವರುದ್ರಪ್ಪ ಟಿ.ವಿ., ಚಿತ್ರದುರ್ಗ ಜಿಲ್ಲೆಯ ಭೂ ಇತಿಹಾಸ, ಹರತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ), ಪು.೫೬೮.

೧೫. ಕನ್ನಡ ವಿಷಯ ವಿಶ್ವಕೋಶ, ಪು.೯೬೯.

೧೬. ಶಿವರುದ್ರಪ್ಪ ಟಿ.ವಿ., ಪು.೫೬೮.

೧೭. ಅದೇ

೧೮. ಅದೇ, ಪು. ೫೬೯

೧೯. ಅದೇ

೨೦. ಅದೇ

೨೧. ಕನ್ನಡ ವಿಷಯ ವಿಶ್ವಕೋಶ, ಪು.೯೬೭

೨೨. ಅದೇ

೨೩. ಅದೇ

೨೪. ಅದೇ

೨೫. ಅದೇ

೨೬. ಬಾಗೂರು ಆರ್. ನಾಗರಾಜಪ್ಪ, ಹೊಸದುರ್ಗದ ಸುತ್ತ, ಪು.೧

೨೭. ಕನ್ನಡ ವಿಷಯ ವಿಶ್ವಕೋಶ, ಪು.೧೬೨೮.

೨೮. ಹೊಸದುರ್ಗ ತಾಲ್ಲೂಕು ಆಫೀಸಿನಿಂದ ಪಡೆದ ಮಾಹಿತಿ.

೨೯. ಕನ್ನಡ ವಿಷಯ ವಿಶ್ವಕೋಶ, ಪು.೯೬೭.

೩೦. ಅದೇ

೩೧. ಅದೇ, ಪು.೧೬೩೯.

೩೨. ಲೋಕೇಶ್ವರ ಐ.ಎಲ್., ಹೊಸದುರ್ಗ ತಾಲ್ಲೂಕಿನ ನೆಲ-ಜಲ-ಮಳೆ-ಬೆಳೆ, ಕಲ್ಪಾದ್ರಿ, ಬಾಗೂರು ನಾಗರಾಜಪ್ಪ, ಬಸವರಾಜ ಶಿವಪುರ (ಸಂ), ಪು.೬೮.

೩೩. ಅದೇ, ಪು.೬೮-೬೯.

೩೪. ಅದೇ, ಪು.೬೯

೩೫. ಅದೇ

೩೬. ಕನ್ನಡ ವಿಷಯ ವಿಶ್ವಕೋಶ, ಪು. ೯೬೭.

೩೭. ಅದೇ

೩೮. ಅದೇ

೩೯. ತಿಪ್ಪೇಸ್ವಾಮಿ ಎಸ್., ರಕ್ಷಣಾ ವಾಸ್ತುಶಿಲ್ಪ: ಚಿತ್ರದುರ್ಗ ಜಿಲ್ಲೆ (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಪು.೨೩.

೪೦. ಶಿವತಾರಕ್ ಕೆ.ಬಿ., ಪೂರ್ವೋಕ್ತ, ಪು.೨೧.

೪೧. ಅದೇ, ಪು.೨೫

೪೨. ಅದೇ

೪೩. ಅದೇ, ಪು.೨೭

೪೪. ಅದೇ

೪೫ ಅದೇ, ಪು.೩೧

೪೬. ಶ್ರೀಶೈಲ ಆರಾಧ್ಯ ಎಚ್., ಚಿತ್ರದುರ್ಗ ಪರಿಸರದ ಪ್ರಾಗೈತಿಹಾಸಿಕ ಚಿತ್ರಗಳು, ಹರತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ), ಪು.೩೨.

೪೭. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಾಕ್ಚಾರಿತ್ರಿಕ ಕಲೆ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್. (ಸಂ), ಪು.೪೬.

೪೮. ಅದೇ, ಪು.೪೬.

೪೯. ಲಕ್ಷ್ಮಣ್ ತೆಲಗಾವಿ., ಮೌರ್ಯ ಮತ್ತು ಶಾತವಾಹನ ಯುಗ, ಪು.೧೩.

೫೦. ಶ್ರೀನಿವಾಸ್ ಎಂ.ವಿ., ಚಿತ್ರದುರ್ಗ ಜಿಲ್ಲೆಯಲ್ಲಿ ಮೌರ್ಯರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ (ಸಂ), ಪು.೨.

೫೧. ಅದೇ

೫೨. ಶ್ರೀನಿವಾಸ್ ಎಂ.ವಿ., ಚಿತ್ರದುರ್ಗ ಜಿಲ್ಲೆಯಲ್ಲಿ ಮೌರ್ಯರ ಆಳ್ವಿಕೆ, ಪೂರ್ವೋಕ್ತ, ಪು.೨

೫೩. ರಘುನಾಥ ಭಟ್ ಎಚ್.ಆರ್., ಚಿತ್ರದುರ್ಗ ಜಿಲ್ಲೆಯಲ್ಲಿ ಶಾತವಾಹನರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ., ಲಕ್ಷ್ಮಣ ತೆಲಗಾವಿ (ಸಂ), ಪು.೬.

೫೪. ಅದೇ, ಪು. ೭

೫೫. ಅದೇ

೫೬. ಅದೇ, ಪು. ೮

೫೭. ಅದೇ, ಪು. ೯

೫೮. ಅದೇ, ಪು. ೧೦

೫೯. ಬಾಗೂರು ಆರ್ ನಾಗರಾಜಪ್ಪ., ಪೂರ್ವೋಕ್ತ, ಪು.೨೬.

೬೦. ರಾಜಶೇಖರಪ್ಪ ಬಿ., ಇತಿಹಾಸ ಕಥನ; ಪು.೩೭–೩೯.

೬೧. ಉಷಾ ಎಂ.ಎಚ್., ಚಿತ್ರದುರ್ಗ ಜಿಲ್ಲೆಯಲ್ಲಿ ಕದಂಬರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ (ಸಂ). ಪು.೧೪

೬೨. ಅದೇ, ಪು.೧೫

೬೩. ಅದೇ ಪು.೧೫

೬೪. ದೀಕ್ಷಿತ್ ಸಿ.ಕೆ.ವೈ., ಚಿತ್ರದುರ್ಗ ಜಿಲ್ಲೆಯಲ್ಲಿ ಚಾಲುಕ್ಯರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್.ಎಂ.ವಿ, ಲಕ್ಷ್ಮಣ್ ತೆಲಗಾವಿ.(ಸಂ), ಪು.೧೭

೬೫. ಅದೇ

೬೬. ಅದೇ

೬೭ .ಅದೇ

೬೮. ಅದೇ, ಪು.೨೦

೬೯. ಅದೇ, ಪು.೨೦

೭೦. ಅದೇ, ಪು.೨೧

೭೧. ಸೀತಾರಾಮ್ ಜಾಗೀರ್‌ದಾರ್., ಚಿತ್ರದುರ್ಗ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ (ಸಂ), ಪು.೨೩

೭೨. ಅದೇ

೭೩. ಕೃಷ್ಣಮೂರ್ತಿ ಎಂ.ಎಸ್., ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು, ಹರತಿಸಿರಿ, ಲಕ್ಷ್ಮಣ್ ತೆಲಗಾವಿ (ಸಂ), ಪು.೩೬೫.

೭೪. ಜಯಮ್ಮ ಕರಿಯಣ್ಣ ಎಚ್., ಚಿತ್ರದುರ್ಗ ಜಿಲ್ಲೆ ಮತ್ತು ನೊಳಂಬ ಪಲ್ಲವರು, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್.ಆರ್(ಸಂ), ಪು.೭೧.

೭೫. ಬಸವ ಲಿಂಗಪ್ಪ ಸಿ.ಎಸ್., ಚಿತ್ರದುರ್ಗ ಜಿಲ್ಲೆಯಲ್ಲಿ ನೊಳಂಬರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ, ಲಕ್ಷ್ಮಣ್ ತೆಲಗಾವಿ (ಸಂ), ಪು.೩೦.

೭೬. ಎಪಿಗ್ರಾಫಿಯಾ ಕರ್ನಾಟಿಕ, ಸಂ.೧೧, ಸಂಖ್ಯೆ ೬೨.

೭೭. ಅದೇ, ಸಂಖ್ಯೆ ೨೯

೭೮. ನಾಗರಾಜು ಡಿ.ಎಂ., ಚಿತ್ರದುರ್ಗ ಪ್ರದೇಶದ ಉಚ್ಚಂಗಿ ಪಾಂಡ್ಯರ ಒಂದು ರಾಜಕೀಯ ಅಧ್ಯಯನ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್(ಸಂ), ಪು.೭೫

೭೯. ಕೃಷ್ಣಮೂರ್ತಿ ಪಿ.ವಿ., ಚಿತ್ರದುರ್ಗ ಜಿಲ್ಲೆಯ ಭೂಗೋಳ, ಹರತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ), ಪು.೩೯೩

೮೦. ನಾಗರಾಜು ಡಿ.ಎಂ., ಪೂರ್ವೋಕ್ತ, ಪು.೭೫

೮೧. ಅದೇ, ಪು. ೭೫–೭೬

೮೨. ಅದೇ, ಪು. ೭೬

೮೩. ಅದೇ

೮೪. ಶ್ರೀಲತೆ, ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), ಪು.೪೪.

೮೫. ಅದೇ

೮೬. ಅದೇ

೮೭. ಅದೇ, ಪು.೪೭

೮೮. ಅದೇ, ಪು.೪೮.

೮೯. ಅದೇ

೯೦. ಅದೇ, ಪು.೪೯

೯೧. ಎಪಿಗ್ರಫಿಯಾ ಕರ್ನಾಟಿಕ, ಸಂ.೧೧, ಸಂಖ್ಯೆ ೧೨೧

೯೨. ಶ್ರೀಲತೆ, ಪೂರ್ವೋಕ್ತ, ಪು.೫೩

೯೩. ಅದೇ ಪು. ೫೩.

೯೪. ಅದೇ, ಪು.೫೩-೫೪.

೯೫. ಶಿವಣ್ಣ ಕೆ.ಎಸ್., ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಅರಸರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ (ಸಂ), ಪು. ೫೭.೯೬. ಅದೇ

೯೭. ಅಪರ್ಣ ಕೂ.ಸ., ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ದೇವಾಲಯಗಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್(ಸಂ), ಪು.೧೯೮೬.

೯೮. ಕೃಷ್ಣಮೂರ್ತಿ ಪಿ.ವಿ., ಪೂರ್ವೋಕ್ತ, ಪು.೩೭೬

೯೯. ಅದೇ, ಪು. ೩೯೦

೧೦೦. ಅದೇ, ಪು. ೩೯೪

೧೦೧. ಅದೇ, ಪು. ೩೯೫.

೧೦೨. ಎಪಿಗ್ರಾಫಿಯ ಕರ್ನಾಟಿಕ, ಸಂ.೧೧೩

೧೦೩. ಬಾಗೂರು ಆರ್. ನಾಗರಾಜಪ್ಪ, ಪೂರ್ವೋಕ್ತ, ಪು.೫೦

೧೦೪. ಬಸವರಾಜಪ್ಪ ಎಚ್.ಈ., ವಿಜಯನಗರ ಕಾಲದ ಚಿತ್ರದುರ್ಗ ಪ್ರದೇಶದ ಆಡಳಿತ ಘಟಕಗಳು, ವಿಜಯನಗರ ಅಧ್ಯಯನ, ಸಂಪುಟ, ಪು.೧೧೭.

೧೦೫. ಕೃಷ್ಣಮೂರ್ತಿ ಪಿ.ವಿ. ಪೂರ್ವೋಕ್ತ, ಪು.೩೯೫.

೧೦೬. ಅದೇ, ಪು.೩೯೮

೧೦೭. ಅದೇ

೧೦೮. ಅದೇ, ಪು.೪೦೦-೪೦೧.

೧೦೯. ಅದೇ ಪು.೪೦೧.

೧೧೦. ಕನ್ನಡ ವಿಷಯ ವಿಶ್ವಕೋಶ, ಪೂರ್ವೋಕ್ತ, ಪು. ೯೦೬.

೧೧೧. ಕೃಷ್ಣರಾವ್ ಎಂ.ವಿ., ಕರ್ನಾಟಕ ಇತಿಹಾಸ ದರ್ಶನ, ಪು.೫೮.

೧೧೨. ಶಿವಣ್ಣ ಕೆ.ಎಸ್.(ಸಂ), ಕರ್ನಾಟಕ ಚರಿತ್ರೆ, ಸಂಪುಟ-೩, ಪು.೬೨

೧೧೩. ಅದೇ

೧೧೪. ಅದೇ

೧೧೫. ಅದೇ

೧೧೬. ಅದೇ, ಪು.೬೩

೧೧೭. ಲಕ್ಷ್ಮಣ ತೆಲಗಾವಿ, ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ, ಚಂದ್ರವಳ್ಳಿ, ಶ್ರೀನಿವಾಸ ಎಂ.ವಿ., ಲಕ್ಷ್ಮಣ್ ತೆಲಗಾವಿ (ಸಂ), ಪು.೬೪.

೧೧೮. ಯಶೋದಾ ರಾಜಶೇಖರಪ್ಪ.ಪಿ., ಮತ್ತೋಡು ಪಾಳೆಯಗಾರರು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ವಸು ಎಂ.ವಿ.(ಸಂ), ಪು.೧೭೦.

೧೧೯. ಅದೇ

೧೨೦. ಅದೇ, ಪು. ೧೭೧

೧೨೧. ಅದೇ

೧೨೨. ಅದೇ ಪು, ೧೭೨

೧೨೩. ಅದೇ

೧೨೪. ಅದೇ

೧೨೫. ಅದೇ, ಪು. ೧೭೩

೧೨೬. ಅದೇ

೧೨೭. ಅದೇ

೧೨೮. ಅದೇ

೧೨೯. ಅದೇ

೧೩೦. ಅದೇ, ಪು. ೧೭೪

೧೩೧. ಅದೇ

೧೩೨. ಅದೇ

೧೩೩. ಅದೇ

೧೩೪. ಅದೇ

೧೩೫. ಅದೇ

೧೩೬. ಅದೇ

೧೩೭. ಅದೇ

೧೩೮. ಅದೇ

೧೩೯. ಬಾಗೂರು ಆರ್. ನಾಗರಾಜಪ್ಪ, ಪೂರ್ವೋಕ್ತ, ಪು.೫೦

೧೪೦. ಶೈಲಜಾ ಹೊಸಳ್ಳೇರ., ಬೂದಿಹಾಳು ಪಾಳೆಯಗಾರರು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ವಸು ಎಂ.ವಿ.(ಸಂ), ಪು.೧೩೦.

೧೪೧. ಬಾಗೂರು ಆರ್. ನಾಗರಾಜಪ್ಪ, ಪೂರ್ವೋಕ್ತ, ಪು.೫೦

೧೪೨. ರಾಜಶೇಖರಪ್ಪ ಬಿ, ಪೂರ್ವೋಕ್ತ, ಪು.೮೯

೧೪೩. ಅದೇ

೧೪೪. ಅದೇ, ಪು.೯೦

೧೪೫. ಅದೇ, ಪು.೯೩

೧೪೬. ಅದೇ, ಪು.೯೦-೯೪

೧೪೭. ಅದೇ, ಪು.೯೧

೧೪೮. ಅದೇ, ಪು.೧೦೦

೧೪೯. ಅದೇ

೧೫೦. ಅದೇ

೧೫೧. ಶೈಲಜಾ ಹೊಸಳ್ಳೇರ, ಪೂರ್ವೋಕ್ತ, ಪು.೧೪೦.

೧೫೨. ಅದೇ

೧೫೩. ಅದೇ, ಪು. ೧೪೬

೧೫೪. ಅದೇ

೧೫೫. ಅದೇ

೧೫೬. ರಾಜಶೇಖರಪ್ಪ.ಬಿ., ಪೂರ್ವೋಕ್ತ, ಪು.೧೦೧.

೧೫೭. ಶೈಲಜಾ ಹೊಸಳ್ಳೇರ, ಪೂರ್ವೋಕ್ತ, ಪು.೧೪೭.

೧೫೮. ಅದೇ

೧೫೯. ಅದೇ, ಪು. ೧೪೮

೧೬೦. ಅದೇ, ಪು. ೧೪೯

೧೬೧. ಅದೇ

೧೬೨. ಅದೇ, ಪು. ೧೫೦.

೧೬೩. ಸಂತೇಬೆನ್ನೂರು ಸುಮತೀಂದ್ರ ನಾಡಿಗ್, ಸಂತೇಬೆನ್ನೂರು ನಾಯಕರು, ಮಲೆ ಕರ್ನಾಟಕದ ಅರಸು ಮನೆತನಗಳು, ರಾಜಾರಾಮ ಹೆಗಡೆ, ಅಶೋಕ್ ಶೆಟ್ಟರ್ (ಸಂ), ಪು.೨೪೦.

೧೬೪. ಸಂತೇಬೆನ್ನೂರು ಸುಮತೀಂದ್ರ ನಾಡಿಗ್, ಸಂತೇಬೆನ್ನೂರು ಪಾಳೆಯಗಾರರು, ಇತಿಹಾಸ ದರ್ಶನ, ಸಂ-೧೨, ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ. (ಸಂ), ಪು. ೨೩೦

೧೬೫. ಅದೇ

೧೬೬. ಸಂತೇಬೆನ್ನೂರು ಸುಮತೀಂದ್ರ ನಾಡಿಗ್, ಪುರ್ವೋಕ್ತ, ಪು. ೨೪೫.

೧೬೭. ಎಪಿಗ್ರಾಫಿಯಾ ಕರ್ನಾಟಿಕ, ಸಂ.೧೧, ಸಂಖ್ಯೆ. ೧೧೫

೧೬೮. ಅದೇ, ೬೨

೧೬೯. ಅದೇ, ೪೦

ಅಧ್ಯಾಯ ೩
ದೇವಾಲಯಗಳ ಉಗಮ ಮತ್ತು ವಿಕಾಸ

ಅಧ್ಯಾಯ ೩

ದೇವಾಲಯಗಳ ಉಗಮ ಮತ್ತು ವಿಕಾಸ

ದೇವಾಲಯಗಳ ಅಧ್ಯಯನವು ಚರಿತ್ರೆಯ ರಚನೆಯಲ್ಲಿ ಬಹುಮುಖ್ಯ ಪುರಾತತ್ವೀಯ ಆಕರಗಳಾಗಿ ಕಂಡು ಬರುತ್ತವೆ ಹಾಗೂ ಕಳೆದುಹೋದ ಗತವನ್ನು ಪುನಃ ಕಟ್ಟುವ ಬಹುಮುಖ್ಯ ಸಂಪತ್ತು. ಒಂದು ದೇಶದ ಸಾಂಸ್ಕೃತಿಕ ಸಂಪತ್ತು ಎನಿಸಿಕೊಂಡಿರುವ ದೇವಾಲಯಗಳು ಆ ದೇಶದ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ನಿಟ್ಟಿನಲ್ಲಿ ಭಾರತ ಪ್ರಾಚೀನ ಕಾಲದಿಂದಲೂ ಭವ್ಯ ಪರಂಪರೆಯನ್ನು ಹೊಂದಿದ ದೇಶವಾಗಿದೆ. "ಭಾರತದ ತುಂಬಾ ಒಡಾಡಿದ ಯಾವುದೇ ವ್ಯಕ್ತಿಗೆ ಪ್ರತಿ ಹಳ್ಳಿ ಹಳ್ಳಿಯಲ್ಲೂ, ನದಿ ದಡದಲ್ಲಿ, ಬೆಟ್ಟದ ಮೇಲೆ, ಊರ ಮಧ್ಯದಲ್ಲಿ, ಊರಿನ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಹಿಗೆ ಒಂದಲ್ಲಾ ಒಂದು ಕಡೆ ದೇವಾಲಯಗಳು ಕಾಣಬರುತ್ತವೆ."[೧] ಧಾರ್ಮಿಕ ಕಲ್ಪನೆಗಳನ್ನು, ದೈವತ್ವದಲ್ಲಿ ನಂಬಿಕೆಯನ್ನು ಹೊಂದಿದ ಭಾರತೀಯರು ದೇಶದ ತುಂಬೆಲ್ಲಾ ವೈವಿಧ್ಯಮಯವಾದ ದೇವಾಲಯಗಳನ್ನು ನಿರ್ಮಾಣ ಮಾಡಿದರು. ಬಹುಶಃ ಜಗತ್ತಿನ ಯಾವುದೇ ಭಾಗದಲ್ಲಿ ಕಂಡು ಬರದೇ ಇರುವ ಅಧಿಕ ಸಂಖ್ಯೆಯ ದೇವಾಲಯಗಳು ಭಾರತದಲ್ಲಿವೆ. ಈ ದೇವಾಲಯಗಳು ಪ್ರಾಚೀನ ಕಾಲದ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಾಗಿ ಅವರು ನೀಡಿರುವ ಪ್ರೋತ್ಸಾಹವನ್ನು, ರೂವಾರಿಗಳ ಕೈಚಳಕ ಮತ್ತು ಕಲಾ ನೈಪುಣ್ಯತೆಯ ಮಹಿಮೆಯನ್ನು ಇಂದಿನ ಜನತೆಗೆ ಸಾರಿ ಹೇಳುವ ಜೀವಂತ ಸಾಕ್ಷಿಯಾಗಿವೆ. ಅಲ್ಲದೆ ಕಾಲಕ್ಷೇತ್ರಕ್ಕೆ ನೀಡಿದ ಮಹಾನ್ ಕೊಡುಗೆಗಳಾಗಿವೆ.

ಪ್ರಾಚೀನ ಮತ್ತು ಮಧ್ಯಕಾಲೀನ ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ದೇವಾಲಯಗಳು ಪರಿಣಾಮಕಾರಿ ಮಾಧ್ಯಮಗಳಾಗಿ ಕಾರ್ಯನಿರ್ವಹಿಸಿವೆ. ದೇವಾಲಯಗಳು ಮಾನವನ ಧಾರ್ಮಿಕ ಶ್ರದ್ಧೆ, ಭಕ್ತಿ ಮತ್ತು ನಂಬಿಕೆಗಳ ಪ್ರತೀಕಗಳಾಗಿ ಬೆಳೆದು ಬಂದಿವೆ. "ಅಲೆಮಾರಿಯಾಗಿದ್ದ ಮಾನವ ಒಂದು ಕಡೆ ನೆಲೆಯಾಗಿ ನಿಲ್ಲಬೇಕೆಂದೂ, ಒಂದು ಸುರಕ್ಷಿತ ಗೂಡಿನಲ್ಲಿ ವಾಸಿಸಬೇಕೆಂದೂ ಎಂದಿನಿಂದ ಬಯಸಿದನೋ, ಅಂದಿನಿಂದ ತನಗಾಗಿ ಮನೆಯನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದ. ಸುತ್ತಗೋಡೆ, ಅದರ ಮೇಲೆ ವಿವಿಧ ಆಕಾರದ ಮುಚ್ಚಿಗೆ, ಮುಂಭಾಗದಲ್ಲಿ ಬಾಗಿಲು, ಅದರ ಮೇಲೆ ಗಾಳಿ ಬೆಳಕು ಬರಲು ಕಮಾನು–ತೆರವು ಹೀಗೆ ಅವನ ಮನೆ ರೂಪುಗೊಂಡಿತು. ಇದು

ವಾಸ್ತುಶಿಲ್ಪದ ಪ್ರಾಥಮಿಕ ಹೆಜ್ಜೆ".[೨] ಮಾನವನು ಪ್ರಕೃತಿಯೊಡನೆ ಬದುಕಬೇಕಾದ ಸಂದರ್ಭದಲ್ಲಿ ಪ್ರಕೃತಿಯ ವಿಸ್ಮಯಗಳಾದ ಗಾಳಿ, ಮಳೆ, ಗುಡುಗು, ಸಿಡಿಲು, ಕಾಡ್ಗಿಚ್ಚು ಮೊದಲಾದವು ಅವನಲ್ಲಿ ಭೀತಿ ಹುಟ್ಟಿಸಿದವು. ಇವುಗಳಿಂದ ಅವನು ನಿಸರ್ಗದಲ್ಲಿ ಎಲ್ಲಕ್ಕೂ ಮಿಗಿಲಾದ ಒಂದು ಅದ್ಭುತವಾದ ಶಕ್ತಿ ಇದೆ ಎಂದು ಅರಿತುಕೊಂಡನು. ತನ್ನ ಕೆಲಸ ಕಾರ್ಯಗಳಿಗೆ ಪೂರಕವಾಗಿ ಬೆಂಬಲ ನೀಡಬಹುದಾದ ಈ ಶಕ್ತಿಗೆ ಅವನು ಒಂದು ಮೂರ್ತರೂಪ ನೀಡಿ ಪೂಜಿಸಲು ಪ್ರಾರಂಭಿಸಿದನು. ಅದರ ರಕ್ಷಣೆಗೆ ಭೂಮಿಯ ಮೇಲೆ ಕಟ್ಟಡವನ್ನು ಕಟ್ಟಿದನು. "ತನಗಾಗಿ ಕಟ್ಟಿಕೊಂಡ ಮನೆ ಗೃಹವಾಸ್ತುಶಿಲ್ಪ ಎನಿಸಿದರೆ, ತನ್ನ ದೇವರಿಗಾಗಿ ಕಟ್ಟಿದ್ದು ಧಾರ್ಮಿಕ ವಾಸ್ತುಶಿಲ್ಪ ಅಥವಾ ದೇವಾಲಯ ವಾಸ್ತುಶಿಲ್ಪ" ಎನಿಸಿತು.[೩]

ಭೂಮಿಯನ್ನು ಒಂದು ವಸ್ತುವೆಂದು ಪರಿಗಣಿಸಿ ಅದರ ಮೇಲೆ ಕಟ್ಟಲ್ಪಟ್ಟ ಗೃಹ ಗುಡಿ ಮುಂತಾದವುಗಳನ್ನು ವಾಸ್ತುವೆಂದು ಕರೆಯಲಾಗಿದೆ.[೪]

ವಾಸ್ತುಶಿಲ್ಪವನ್ನು ಕುರಿತು ಹಲವು ಪ್ರಾಚೀನ ಶಾಸ್ತ್ರ ಗ್ರಂಥಗಳು ಹಾಗೂ ವಿದ್ವಾಂಸರು ಹಲವು ವಿಚಾರಧಾರೆಗಳನ್ನು ಹರಿಸಿರುವುದನ್ನು ಗಮನಿಸಬಹುದು. ಅಂತಹುಗಳಲ್ಲಿ ಬಹುಮುಖ್ಯವಾಗಿ ಬೃಹತ್ಸಂಹಿತೆ, ಮಾನಸಾರ, ಮಯಮತ, ಸಮರಾಂಗಣ ಸೂತ್ರಧಾರ, ಕಾಶ್ಯಪ ಶಿಲ್ಪ, ಅಗಸ್ತ್ಯ ಸಕಲಾಧಿಕಾರ, ಅಪರಾಜಿತಪುಚ್ಛಾ, ಪ್ರಸಾದಮಂಡನ, ರೂಪಮಂಡನ, ಅಭಿಲಾಷಿತಾರ್ಥ ಚಿಂತಾಮಣಿ, ತಂತ್ರಸಮುಚ್ಚಯ ಮುಂತಾದವುಗಳು ನಮ್ಮ ಪ್ರಾಚೀನ ಕಾಲದ ದೇವಾಲಯ ವಾಸ್ತುಶಿಲ್ಪವನ್ನು ಕುರಿತು ಮಾಹಿತಿ ನೀಡುವ ಶಾಸ್ತ್ರ ಗ್ರಂಥಗಳು ಎಂದು ಹೇಳಬಹುದು.[೫] "ಮಯಮತ ಗ್ರಂಥವು 'ವಾಸ್ತು' ಶಬ್ದವನ್ನು ಎರಡು ಹಂತಗಳಲ್ಲಿ ವಿವರಿಸಿದೆ. ಮರ್ತ್ಯರು ಮತ್ತು ಅಮರ್ತ್ಯರು ವಾಸಿಸುವ ಸ್ಥಳಕ್ಕೆ ವಸ್ತು ಎಂದು ಹೆಸರು. ವಸ್ತುವನ್ನು ಆಶ್ರಯಿಸಿದ್ದು ವಾಸ್ತು ಎಂದು ಗುರುತಿಸಲ್ಪಡುತ್ತದೆ. ಪ್ರಾಸಾದ, ಹರ್ಮ್ಯ, ಸೌಧ ಇತ್ಯಾಧಿಗಳು ವಸ್ತುವನ್ನು ಆಶ್ರಯಿಸಿದ್ದು ವಾಸ್ತು ಎಂದೆನಿಸುತ್ತವೆ. ಆದ್ದರಿಂದ ವಾಸ್ತು ಎಂದಲ್ಲಿ ವಸತಿ ಯೋಗ್ಯ ಭೂಮಿ ಮತ್ತು ಆ ಭೂಮಿಯ ಮೇಲೆ ನಿಂತ ಕಟ್ಟಡ ಎರಡನ್ನು ಒಳಗೊಳ್ಳುತ್ತದೆ."[೬] ಗರುಡ ಪುರಾಣದ ಒಂದು ಶ್ಲೋಕವು ಗ್ರಾಮಗಳು ನಗರಗಳು, ಕೋಟೆಗಳು, ಪಟ್ಟಣಗಳು, ಮಠಗಳು ಸಹ ವಾಸ್ತುಗಳೆಂದು ಹೇಳುತ್ತದೆ.[೭] ಆಲಯಗಳನ್ನು ಕಟ್ಟಲು ಬಳಸಿದ ಇಟ್ಟಿಗೆ, ಕಲ್ಲು, ಮರ ಹಾಗೂ ಕಬ್ಬಿಣಗಳನ್ನು ಸಹ ವಿಶ್ವಕರ್ಮ ವಾಸ್ತುಶಾಸ್ತ್ರದಲ್ಲಿ ವಾಸ್ತುಗಳೆಂದೇ ಕರೆದಿದೆ.[೮] ದೇವಾಲಯ ಅರಮನೆ ಅಥವಾ ರಾಜಗೃಹ, ದೇವತಾ ಮೂರ್ತಿಗಳು, ಸರ್ವಜನೋಪಯೋಗಿ ಗೃಹಗಳು, ಬಾವಿ, ಪುಷ್ಕರಣಿ ಮುಂತಾದವುಗಳ ರಚನೆಯನ್ನು ಶುಕ್ರನೀತಿ ಗ್ರಂಥವು ವಾಸ್ತುಶಿಲ್ಪ ಶಾಸ್ತ್ರದಡಿಯಲ್ಲಿ ಗುರುತಿಸುತ್ತದೆ. ಒಟ್ಟಾರೆ ವಾಸ್ತುಶಿಲ್ಪವು ನಾಗರೀಕತೆಯನ್ನು ರೂಪಿಸುವ ಮಾತೃಕೆ.

ವಾಸ್ತುಶಿಲ್ಪ ಎಂಬ ಪರಿಭಾಷೆಗೆ ವಿಶಾಲವಾದ ಅರ್ಥವ್ಯಾಪ್ತಿ ಇದ್ದರೂ ಸಾಮಾನ್ಯವಾಗಿ ದೇವಾಲಯಗಳು ಮಾತ್ರ ವಾಸ್ತುಶಿಲ್ಪಗಳಾಗಿ ಕಣ್ಮುಂದೆ ನಿಲ್ಲುತ್ತವೆ. ಸ್ತೂಪ, ಚೈತ್ಯ, ವಿಹಾರ, ಬಸದಿ, ಮಸೀದಿ, ಚರ್ಚು, ಕೆರೆಕಟ್ಟೆ, ಬುರುಜು, ಕೋಟೆ ಹಾಗೂ ಮನೆಗಳಂತಹ ಎಲ್ಲಾ ರಚನೆಗಳು ವಾಸ್ತುಶಿಲ್ಪಗಳೇ ಆಗಿವೆ. ಆದರೆ ಅಧ್ಯಯನದ ಅನುಕೂಲಕ್ಕಾಗಿ ವಾಸ್ತುಶಿಲ್ಪವನ್ನು ದೇವಾಲಯಕ್ಕೂ ಹಾಗೂ 'ಶಿಲ್ಪ' ಎಂಬುದನ್ನು ಮೂರ್ತಿಗಳಿಗೆ ಅನ್ವಯವಾಗುವಂತೆ ಅನುಕ್ರಮದಲ್ಲಿ ಬಳಸುತ್ತಾರೆ.[೯]

ದೇವಾಲಯಗಳ ಅಧ್ಯಯನದ ಸಂದರ್ಭದಲ್ಲಿ ಅವುಗಳ ಪ್ರಾಚೀನತೆಯನ್ನು ಸರಿಯಾಗಿ ಗುರುತಿಸುವಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಭಾರತದ ಪ್ರಾಚೀನ ನಾಗರೀಕತೆ ಸಿಂಧೂಬಯಲಿನ ಸಂಸ್ಕೃತಿಯ ಜನರು ಪ್ರಕೃತಿಯ ಆರಾಧಕರಾಗಿದ್ದು, ಪಶುಪತಿ ಮೊದಲಾದ ವಿಗ್ರಹಗಳನ್ನು ಪೂಜಿಸುತ್ತಿದ್ದರು ಎಂಬುದು ಬೆಳಕಿಗೆ ಬಂದಿರುವ ಸಂಗತಿಯಾಗಿದೆ. ಆದರೆ ಈ ಅವಧಿಯಲ್ಲಿ ವಿಗ್ರಹಗಳಿಗೆಂದು ಕಟ್ಟಿದ ದೇಗುಲ ವಾಸ್ತು ಇದುವರೆಗೆ ಸ್ಪಷ್ಟವಾಗಿ ಗೋಚರಿಸಿಲ್ಲ ಹಾಗಿದ್ದು ಈ ಸಂಸ್ಕೃತಿಯಿಂದ ಒಂದಂಶ ಸ್ಪಷ್ಟವಾಗುತ್ತದೆ. ಅದೆಂದರೆ ದೇಗುಲ ವಾಸ್ತು ರಚನೆಗೆ ಪೂರ್ವದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆ ಹಾಗೂ ಆರಾಧನೆ ಇತ್ತೆಂಬುದು.[೧೦] ಹರಪ್ಪ ಮತ್ತು ಮೆಹೆಂಜೋದಾರೋ ನಿವೇಶನಗಳ ಉತ್ಖನನಗಳಲ್ಲಿ ದೊರೆತ ಕೆಲವು ಪಳೆಯುಳಿಕೆಗಳನ್ನು ಕುರಿತು ಸರ್‌ಜಾನ್ ಮಾರ್ಷಲ್ ಅವರು ಮೂರ್ತಿಪೂಜೆ ಆರಾಧನೆಯನ್ನು ಗುರುತಿಸಿದ್ದಾರೆ. ಆದ್ದರಿಂದ ಮೂರ್ತಿ ಪೂಜೆ ಇದ್ದಿತು ಎಂದರೆ ಅವರ ರಕ್ಷಣೆಗೆ 'ದೇಗುಲವಾಸ್ತು' ಇರಲೇಬೇಕಲ್ಲವೇ, ಇದಕ್ಕೆ ಸ್ಪಷ್ಟ ನಿದರ್ಶನಗಳು ದೊರೆತಿಲ್ಲ. ಆದರೆ ಇಲ್ಲಿನ ನಗರಗಳ ಪಶ್ಚಿಮಾಂತ್ಯದಲ್ಲಿ ರಕ್ಷಣಾರ್ಥವಾಗಿ ಕೋಟೆಯ ಗೋಡೆ, ಸಾರ್ವಜನಿಕರ ಬಳಕೆಗಾಗಿ ನಿರ್ಮಿಸಿರುವ ಬೃಹತ್ ಗಾತ್ರದ ಸಭಾಗೃಹಗಳು, ಕಣಜಗಳು, ಸ್ನಾನಗೃಹಗಳು, ದೇವಾಲಯಗಳಾಗಿರಬಹುದಾದ ಕಟ್ಟಡಗಳು ಇವುಗಳು ಪ್ರಾಚೀನ ಕಾಲದ ವಾಸ್ತುಶಿಲ್ಪ ನಿರ್ಮಿತಿಗಳಿಗೆ ಸಾಕ್ಷಿಗಳಾಗಿವೆ.[೧೧] ಭಾರತದ ಚರಿತ್ರೆಯಲ್ಲಿ ದೇಗುಲದ ವಾಸ್ತುರೂಪಗಳು ದೊರೆಯುವುದು ಬೌದ್ಧ ಮತ್ತು ಜೈನ ಧರ್ಮಗಳು ಅಸ್ತಿತ್ವಕ್ಕೆ ಬಂದ ನಂತರ ಈ ಧರ್ಮಗಳಿಗಾಗಿ ಸಂಬಂಧಿಸಿದ ಸ್ತೂಪ ಮತ್ತು ಚೈತ್ಯಗಳು ಆರಂಭದ ಧಾರ್ಮಿಕ ಕಟ್ಟಡ ವಾಸ್ತುವಿಗೆ ಸಾಕ್ಷಿಗಳಾಗಿವೆ. ಸ್ತೂಪವು ಬೌದ್ಧಧರ್ಮದ ಒಂದು ಧಾರ್ಮಿಕ ಕಟ್ಟಡ.[೧೨] ಇದನ್ನು ಬೃಹತ್ ಶಿಲಾ ಸಂಸ್ಕೃತಿಯ ಸಮಾಧಿಕಲ್ಲನೆಯ ಮುಂದುವರೆದ ಹಂತವಾಗಿರುವುದನ್ನು ಗಮನಿಸಬೇಕು. ಸ್ತೂಪ ಪ್ರಾರಂಭವಾದದ್ದು ಸತ್ತವರ ಶವ ಅಥವಾ ಅಸ್ತಿಗಳ ಮೇಲೆ ನಿರ್ಮಿಸಲಾಗುತ್ತಿದ್ದ ಸಮಾಧಿ ದಿಬ್ಬಗಳಿಂದ.[೧೩] ಅಂದರೆ ಸ್ಮಾರಕವಾಗಿ ಭೂಗತಮಾಡಿದ ಕಳೆಬರಹದ ಮೇಲೆ ಕಟ್ಟಿದ ಗೋಲಾಕಾರದ ದಿಬ್ಬ. ಈ ಸ್ತೂಪಗಳು ಭಾರತದಲ್ಲಿ ಅಶೋಕನ

ವಾಸ್ತುಶಿಲ್ಪ ಎಂಬ ಪರಿಭಾಷೆಗೆ ವಿಶಾಲವಾದ ಅರ್ಥವ್ಯಾಪ್ತಿ ಇದ್ದರೂ ಸಾಮಾನ್ಯವಾಗಿ ದೇವಾಲಯಗಳು ಮಾತ್ರ ವಾಸ್ತುಶಿಲ್ಪಗಳಾಗಿ ಕಣ್ಮುಂದೆ ನಿಲ್ಲುತ್ತವೆ. ಸ್ತೂಪ, ಚೈತ್ಯ, ವಿಹಾರ, ಬಸದಿ, ಮಸೀದಿ, ಚರ್ಚು, ಕೆರೆಕಟ್ಟೆ, ಬುರುಜು, ಕೋಟೆ ಹಾಗೂ ಮನೆಗಳಂತಹ ಎಲ್ಲಾ ರಚನೆಗಳು ವಾಸ್ತುಶಿಲ್ಪಗಳೇ ಆಗಿವೆ. ಆದರೆ ಅಧ್ಯಯನದ ಅನುಕೂಲಕ್ಕಾಗಿ ವಾಸ್ತುಶಿಲ್ಪವನ್ನು ದೇವಾಲಯಕ್ಕೂ ಹಾಗೂ 'ಶಿಲ್ಪ' ಎಂಬುದನ್ನು ಮೂರ್ತಿಗಳಿಗೆ ಅನ್ವಯವಾಗುವಂತೆ ಅನುಕ್ರಮದಲ್ಲಿ ಬಳಸುತ್ತಾರೆ.[೯]

ದೇವಾಲಯಗಳ ಅಧ್ಯಯನದ ಸಂದರ್ಭದಲ್ಲಿ ಅವುಗಳ ಪ್ರಾಚೀನತೆಯನ್ನು ಸರಿಯಾಗಿ ಗುರುತಿಸುವಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಭಾರತದ ಪ್ರಾಚೀನ ನಾಗರೀಕತೆ ಸಿಂಧೂಬಯಲಿನ ಸಂಸ್ಕೃತಿಯ ಜನರು ಪ್ರಕೃತಿಯ ಆರಾಧಕರಾಗಿದ್ದು, ಪಶುಪತಿ ಮೊದಲಾದ ವಿಗ್ರಹಗಳನ್ನು ಪೂಜಿಸುತ್ತಿದ್ದರು ಎಂಬುದು ಬೆಳಕಿಗೆ ಬಂದಿರುವ ಸಂಗತಿಯಾಗಿದೆ. ಆದರೆ ಈ ಅವಧಿಯಲ್ಲಿ ವಿಗ್ರಹಗಳಿಗೆಂದು ಕಟ್ಟಿದ ದೇಗುಲ ವಾಸ್ತು ಇದುವರೆಗೆ ಸ್ಪಷ್ಟವಾಗಿ ಗೋಚರಿಸಿಲ್ಲ ಹಾಗಿದ್ದು ಈ ಸಂಸ್ಕೃತಿಯಿಂದ ಒಂದಂಶ ಸ್ಪಷ್ಟವಾಗುತ್ತದೆ. ಅದೆಂದರೆ ದೇಗುಲ ವಾಸ್ತು ರಚನೆಗೆ ಪೂರ್ವದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆ ಹಾಗೂ ಆರಾಧನೆ ಇತ್ತೆಂಬುದು.[೧೦] ಹರಪ್ಪ ಮತ್ತು ಮೊಹೆಂಜೋದಾರೋ ನಿವೇಶನಗಳ ಉತ್ಖನನಗಳಲ್ಲಿ ದೊರೆತ ಕೆಲವು ಪಳೆಯುಳಿಕೆಗಳನ್ನು ಕುರಿತು ಸರ್‌ಜಾನ್ ಮಾರ್ಷಲ್ ಅವರು ಮೂರ್ತಿಪೂಜೆ ಆರಾಧನೆಯನ್ನು ಗುರುತಿಸಿದ್ದಾರೆ. ಆದ್ದರಿಂದ ಮೂರ್ತಿ ಪೂಜೆ ಇದ್ದಿತು ಎಂದರೆ ಅವರ ರಕ್ಷಣೆಗೆ 'ದೇಗುಲವಾಸ್ತು' ಇರಲೇಬೇಕಲ್ಲವೇ, ಇದಕ್ಕೆ ಸ್ಪಷ್ಟ ನಿದರ್ಶನಗಳು ದೊರೆತಿಲ್ಲ. ಆದರೆ ಇಲ್ಲಿನ ನಗರಗಳ ಪಶ್ಚಿಮಾಂತ್ಯದಲ್ಲಿ ರಕ್ಷಣಾರ್ಥವಾಗಿ ಕೋಟೆಯ ಗೋಡೆ, ಸಾರ್ವಜನಿಕರ ಬಳಕೆಗಾಗಿ ನಿರ್ಮಿಸಿರುವ ಬೃಹತ್ ಗಾತ್ರದ ಸಭಾಗೃಹಗಳು, ಕಣಜಗಳು, ಸ್ನಾನಗೃಹಗಳು, ದೇವಾಲಯಗಳಾಗಿರಬಹುದಾದ ಕಟ್ಟಡಗಳು ಇವುಗಳು ಪ್ರಾಚೀನ ಕಾಲದ ವಾಸ್ತುಶಿಲ್ಪ ನಿರ್ಮಿತಿಗಳಿಗೆ ಸಾಕ್ಷಿಗಳಾಗಿವೆ.[೧೧] ಭಾರತದ ಚರಿತ್ರೆಯಲ್ಲಿ ದೇಗುಲದ ವಾಸ್ತುರೂಪಗಳು ದೊರೆಯುವುದು ಬೌದ್ಧ ಮತ್ತು ಜೈನ ಧರ್ಮಗಳು ಅಸ್ತಿತ್ವಕ್ಕೆ ಬಂದ ನಂತರ ಈ ಧರ್ಮಗಳಿಗಾಗಿ ಸಂಬಂಧಿಸಿದ ಸ್ತೂಪ ಮತ್ತು ಚೈತ್ಯಗಳು ಆರಂಭದ ಧಾರ್ಮಿಕ ಕಟ್ಟಡ ವಾಸ್ತುವಿಗೆ ಸಾಕ್ಷಿಗಳಾಗಿವೆ. ಸ್ತೂಪವು ಬೌದ್ಧಧರ್ಮದ ಒಂದು ಧಾರ್ಮಿಕ ಕಟ್ಟಡ.[೧೨] ಇದನ್ನು ಬೃಹತ್ ಶಿಲಾ ಸಂಸ್ಕೃತಿಯ ಸಮಾಧಿಕಲ್ಪನೆಯ ಮುಂದುವರೆದ ಹಂತವಾಗಿರುವುದನ್ನು ಗಮನಿಸಬೇಕು. ಸ್ತೂಪ ಪ್ರಾರಂಭವಾದದ್ದು ಸತ್ತವರ ಶವ ಅಥವಾ ಅಸ್ತಿಗಳ ಮೇಲೆ ನಿರ್ಮಿಸಲಾಗುತ್ತಿದ್ದ ಸಮಾಧಿ ದಿಬ್ಬಗಳಿಂದ.[೧೩] ಅಂದರೆ ಸ್ಮಾರಕವಾಗಿ ಭೂಗತಮಾಡಿದ ಕಳೆಬರಹದ ಮೇಲೆ ಕಟ್ಟಿದ ಗೋಲಾಕಾರದ ದಿಬ್ಬ. ಈ ಸ್ತೂಪಗಳು ಭಾರತದಲ್ಲಿ ಅಶೋಕನ

ಕಾಲಕ್ಕೆ ಹೆಚ್ಚಾಗಿ ನಿರ್ಮಾಣಗೊಂಡಿರುವುದನ್ನು ಕಾಣಬಹುದು. ಸ್ತೂಪದ ಮೂಲ ಉದ್ದೇಶವು ಬುದ್ಧನ ಶಾರೀರಿಕ ಅಸ್ತಿ ಅಥವಾ ಬೌದ್ಧ ಧರ್ಮದ ಉಪಾದ್ಯಾಯ ಭಿಕ್ಷುಗಳ ಅಸ್ತಿಗಳನ್ನು ಸ್ಥಾಪಿಸಿ ಇರಿಸುವುದು. ಅಶೋಕನು ಕಳಿಂಗದ ಯುದ್ಧದಲ್ಲಿ ನಡೆದ ರಕ್ತಪಾತವನ್ನು ನೋಡಿ ವಿರಕ್ತಿಯಿಂದ ಬೌದ್ಧಧರ್ಮವನ್ನು ಸ್ವೀಕರಿಸಿದ ತರುವಾಯ ಬೌದ್ಧಧರ್ಮಕ್ಕೆ ಸಂಬಂಧಿಸಿದ ಧಾರ್ಮಿಕ ಕಟ್ಟಡಗಳ ರಚನೆಯನ್ನು ಕೈಗೊಂಡು ಸ್ತಂಭಗಳು, ಸ್ತೂಪಗಳು ಹಾಗೂ ಗುಹಾಲಯಗಳ ನಿರ್ಮಾಣ ಕಾರ್ಯ ಮಾಡಿದನು. ಸಾಂಚಿ ಮತ್ತು ಸಾರನಾಥಗಳಲ್ಲಿ ಈ ಬಗೆಯ ಸ್ತೂಪಗಳನ್ನು ಕಾಣಬಹುದು. ನಾಗಾರ್ಜುನಕೊಂಡ, ಜಗ್ಗಯ್ಯಪೇಟೆ, ಘಂಟಸಾಲಗಳಲ್ಲಿ ದಕ್ಷಿಣ ಭಾರತದ ಮುಖ್ಯವಾದ ಸ್ತೂಪಗಳ ಉಳಿಕೆಗಳಿವೆ. ಅದೇ ರೀತಿ ಚೈತ್ಯಾಲಯಗಳು ಸಹ ಬೌದ್ಧರ ಧಾರ್ಮಿಕ ಕಟ್ಟಡಗಳಾಗಿದ್ದವು ಇವುಗಳನ್ನು ಕಲ್ಲುಗಳನ್ನು ಕೊರೆದು ನಿರ್ಮಿಸಲಾಗುತ್ತಿತ್ತು. ಬುದ್ಧನ ಪ್ರತೀಕವಾಗಿರುವ ಸ್ತೂಪವನ್ನು ಸಭಾಮಂಟಪಗಳಲ್ಲಿಟ್ಟು ಪೂಜಿಸಲಾಗುತ್ತಿತ್ತು. ಇಂತಹ ಮಂಟಪವನ್ನು ಚೈತ್ಯಗೃಹ ಅಥವಾ ಚೈತ್ಯಾಲಯ ಎನ್ನುತ್ತಾರೆ. ಅಶೋಕನ ಕಾಲದಲ್ಲಿಯೇ ಸ್ತಂಭಗಳೊಂದಿಗಿನ ಚೈತ್ಯಗೃಹಗಳನ್ನು ನಿರ್ಮಿಸಲಾಗಿದೆ. ಚೈತ್ಯಗೃಹಗಳನ್ನು ಕಲ್ಲುಗುಡ್ಡಗಳನ್ನು ಕೊರೆದು ಅದರಲ್ಲಿಯೇ ಸ್ತೂಪವನ್ನು ರೂಪಿಸಲಾಗುತಿತ್ತು. ಹೀಗೆ ಕಲ್ಲುಗಳಲ್ಲಿ ಕೊರೆದಿರುವ ಎಂಟು ಚೈತ್ಯಗೃಹಗಳು ಬರಾಬರ್, ನಾಗಾರ್ಜುನ ಬೆಟ್ಟಗಳಲ್ಲಿ ಹಾಗೂ ರಾಜಗೀರ್ ಬಳಿ ನಿರ್ಮಾಣಗೊಂಡಿವೆ. ಚೈತ್ಯಾಲಯಗಳಂತೆ ಆ ಕಾಲದಲ್ಲಿ ವಿಹಾರಗಳನ್ನು ಕಾಣಬಹುದು. ಕಲ್ಲಿನಲ್ಲಿ ಕೊರೆದು ಮಾಡುವ ವಿಹಾರಗಳ ರಚನೆಯ ಈ ಸಂದರ್ಭವನ್ನು ಶಿಲ್ಪ ವಿನ್ಯಾಸ, ಭಾರತೀಯ ಕಟ್ಟಡ ನಿರ್ಮಾಣ ವಿಜ್ಞಾನಕ್ಕೆ ಹೊಸ ಆಯಾಮವನ್ನು ಒದಗಿಸಿತು ಎಂದು ಹೇಳಬಹುದು. ಕಲ್ಲಿನಲ್ಲಿ ಕೊರೆದು ನಿರ್ಮಿಸುವ ಚೈತ್ಯಗೃಹ ವಿಹಾರ, ಗುಹಾಂತರದೇವಾಲಯಗಳಿಗೆ ಇದೇ ಉಗಮವಾಯಿತು. ಭಾರತೀಯ ಶಿಲ್ಪಕಲೆಗೆ ಇದೊಂದು ಅಪೂರ್ವವಾದ ಕಾಂತಿಯನ್ನು ತಂದುಕೊಟ್ಟಿತು. ಈ ಕಲೆಯ ನಮೂನೆಗಳು ಆಂಧ್ರಪ್ರದೇಶ, ಗುಜರಾತಿನ ಕಾಠೇವಾಡಾ, ದಖ್ಖನ್ ಪ್ರಸ್ಥಭೂಮಿಯ ಚಾಲೀಸ್‌ಗಾವ್‌ನಿಂದ ಕರಾಡ್ ತನಕ ಹಾಗೂ ಮುಖ್ಯವಾಗಿ ಪಶ್ಚಿಮ ಘಟ್ಟಗಳಲ್ಲಿ ಅಸಂಖ್ಯಾತವಾಗಿ ಇವು ಕಾಣಸಿಗುತ್ತವೆ.[೧೬] ಹೀಗೆ ಸ್ತೂಪ ಚೈತ್ಯಗಳು ಮತ್ತು ವಿಹಾರಗಳು ಪ್ರಾಚೀನ 'ದೇಗುಲ ವಾಸ್ತು' ರೂಪವನ್ನು ಕುರಿತು ಮಾಹಿತಿ ನೀಡುತ್ತವೆ.

ಗುಪ್ತರ ಕಾಲದಲ್ಲಿ ದೇವಾಲಯಗಳ ನಿರ್ಮಾಣದಲ್ಲಿ ಹೊಸ ರಚನೆಗಳು ನಡೆಯತೊಡಗಿದವು. ಇಟ್ಟಿಗೆ ಮತ್ತು ಕಲ್ಲನ್ನು ಬಳಸಿ ದೇವಾಲಯವನ್ನು ನಿರ್ಮಾಣ ಮಾಡುವ ರೂಢಿ ಗುಪ್ತರ ಕಾಲದಲ್ಲಿ ಪ್ರಾರಂಭವಾಯಿತು. ನಾಲ್ಕನೆಯ ಶತಮಾನದ ಪ್ರಾರಂಭದ ಮೊದಲ ಕಾಲುಭಾಗದಲ್ಲಿ ದೇವಾಲಯ ಕಟ್ಟಡ ನಿರ್ಮಾಣ ಪ್ರಾರಂಭವಾಯಿತು. ಕಟ್ಟಡ ರಚನಾ ಶಿಲ್ಪದಲ್ಲಿ ಕಲ್ಲನ್ನು ನಿಖರವಾದ ಉದ್ದ-ಅಗಲಕ್ಕೆ ತಂದು ಅದನ್ನು ನಯಗೊಳಿಸಿ ಕಟ್ಟಡಕ್ಕೆ ಬಳಸುವ ರೂಢಿ

ಪ್ರಾರಂಭವಾದದ್ದು ಈ ಕಾಲದಲ್ಲಿಯೇ ರಚನೆಯಲ್ಲಿ ಮರದ ನಿರ್ಮಾಣಗಳನ್ನು ಅನುಸರಿಸದೆ ಇಟ್ಟಿಗೆ ಕಲ್ಲುಗಳನ್ನು ಬಳಸಿ ಅವುಗಳ ಜಾಯಮಾನಕ್ಕೆ ಒಗ್ಗುವಂತೆ ಕಟ್ಟಡ ರಚನೆಯನ್ನು ಪ್ರಾರಂಭಿಸಲಾಯಿತು. ಆದ್ದರಿಂದ ಗುಪ್ತರ ಕಾಲದ ದೇವಾಲಯಗಳು ವಿವಿಧ ರೀತಿಗಳನ್ನು, ರೂಪುಗಳನ್ನು ತೋರುತ್ತವೆ. ಇದರ ಫಲವಾಗಿ ದೇವಾಲಯ ನಿರ್ಮಾಣದಲ್ಲಿ ಸೃಜನಾತ್ಮಕ ಪ್ರಯೋಗಶೀಲತೆ ಮೈಗೂಡಿಸಿಕೊಂಡು ಅಭಿವೃದ್ಧಿಯನ್ನು ಗಳಿಸಿತು.[೧೭] ಕಟ್ಟಡ ರಚನೆ, ಮೂರ್ತಿಶಿಲ್ಪ ಮತ್ತು ಚಿತ್ರಗಳಲ್ಲಿ ಸೌಂದರ್ಯ ತತ್ವಗಳನ್ನು ಕಂಡುಕೊಂಡು ಅವನ್ನು ಸೂತ್ರೀಕರಿಸಿದ್ದು ಗುಪ್ತರ ಕಾಲದಲ್ಲಿ ಎಂಬುದು ವಿಮರ್ಶಕರ ಅಭಿಮತ.[೧೮] ಗುಪ್ತರ ಕಾಲಕ್ಕೂ ಮೊದಲು ಮೌರ್ಯರ ಕಾಲದಲ್ಲಿ ತೀರಾ ಸಾಧಾರಣವಾದ ದೇವಾಲಯವನ್ನು ನಿರ್ಮಿಸಲಾಗುತಿತ್ತು. ದೇವಾಲಯಗಳ ನಿರ್ಮಾಣದ ಕಲೆ ಗಮನಾರ್ಹವಾದ ರೀತಿಯಲ್ಲಿ ವಿಕಾಸವನ್ನು ಪಡೆದ ಕಾಲ ಗುಪ್ತರಕಾಲ. ದೇವಾಲಯದ ಪ್ರಮುಖವಾದ ಅಂಗಗಳೆಲ್ಲವೋ ಬೆಳೆದುದನ್ನು ಕಾಣಬಹುದು. ಗುಪ್ತರ ಕಾಲದ ಮುಖ್ಯ ದೇಗುಲಗಳಲ್ಲಿ ಭೂಮಾರದ ಶಿವ ದೇವಾಲಯ, ನಾಚ್ನಾದ ಪಾರ್ವತಿ ದೇವಾಲಯ, ಜಬ್ಬಲ್‌ಪುರದ ವಿಷ್ಣು, ಕಾಳಿಕಾದೇವಿ ದೇವಾಲಯಗಳು ಬಹುಮುಖ್ಯವಾಗಿವೆ.[೧೯] "ಗುಪ್ತ ಸಾಮ್ರಾಜ್ಯದ ಪತನದ ನಂತರದ ಶತಮಾನಗಳಲ್ಲಿ ದೇವಾಲಯ ನಿರ್ಮಾಣ ಶೈಲಿಯಲ್ಲಿ ಅಪಾರವಾದ ಪ್ರಗತಿ ಮತ್ತು ಬದಲಾವಣೆಗಳನ್ನು ಮೈಗೂಡಿಸಿಕೊಂಡಿತು. ಭಾರತೀಯ ಶಿಲ್ಪಶಾಸ್ತ್ರಗಳು ದೇವಾಲಯಗಳನ್ನು ನಾಗರ, ವೇಸರ ಮತ್ತು ದ್ರಾವಿಡಗಳೆಂದು ವಿಭಜಿಸುತ್ತವೆ. ಉತ್ತರ ಭಾರತದ ದೇವಾಲಯಗಳು ಬಹುಪಾಲು ನಾಗರ ಶೈಲಿಗೆ ಸೇರಿವೆ. ಆದರೆ ಈ ರೀತಿಯಾಗಿ ಸುಲಭವಾಗಿ ಮತ್ತು ನಿಖರವಾಗಿ ಭೌಗೋಳಿಕ ಸೀಮೆಗಳನ್ನು ಅನುಸರಿಸಿ ದೇವಾಲಯಗಳ ಬಗೆಗಳನ್ನು ವರ್ಗೀಕರಿಸಲು ಸಾಧ್ಯವಾಗುವುದಿಲ್ಲ. ನಾಗರಶೈಲಿಯ ದೇವಾಲಯಗಳು ದಕ್ಷಿಣ ಭಾರತದಲ್ಲೂ ಕಂಡು ಬರುತ್ತವೆ. ಆದ್ದರಿಂದ ಭಾರತೀಯ ದೇವಾಲಯ ಪರಂಪರೆಯಲ್ಲಿ ಔತರೇಯ, ದಖ್ಖನಿ ಹಾಗೂ ದಾಕ್ಷಿಣಾತ್ಯ ದ್ರಾವಿಡ ದೇವಾಲಯಗಳೆಂದು ವರ್ಗೀಕರಿಸಿಕೊಳ್ಳಲಾಗಿದೆ".[೨೦]

"ವಾಸ್ತುಶಿಲ್ಪದಲ್ಲಿ ಕರ್ನಾಟಕದಲ್ಲಿರುವಷ್ಟು ವೈವಿಧ್ಯ ಬಹುಶಃ ಭರತಖಂಡದ ಇನ್ನಾವ ಭಾಗದಲ್ಲೂ ಇಲ್ಲವೆನ್ನಬಹುದು. ದೇವಾಲಯಗಳ ನಿರ್ಮಾಣದಲ್ಲಿ ಕರ್ನಾಟಕ ತೋರಿಸಿದ ಉದಾತ್ತವಾದ ಅಭಿರುಚಿ ಮತ್ತು ಅದನ್ನು ಬಳಸಿಕೊಂಡು ಬಂದ ಬಗೆ ವಿಶಿಷ್ಟವಾದುದು. ಭರತ ಖಂಡದ ಎಲ್ಲಾ ಭಾಗಗಳ ಉತ್ತಮ ಅಂಶಗಳನ್ನೂ ತನ್ನಲ್ಲಿ ಅಳವಡಿಸಿಕೊಳ್ಳಲು ಕರ್ನಾಟಕ ಪ್ರಯತ್ನ ಪಟ್ಟಿದೆ. ಅವುಗಳ ಸಮನ್ವಯದಿಂದ ತನ್ನದೇ ಆದ ಮಾರ್ಗವನ್ನು ರೂಪಿಸಿಕೊಂಡಿದೆ."[೨೧] ದಖ್ಖನಿ ಹಾಗೂ ದಾಕ್ಷಿಣಾತ್ಯ ದ್ರಾವಿಡ ಶೈಲಿಯ ದೇವಾಲಯಗಳ

ವಾಸ್ತುಶೈಲಿಯ ಅಂಶಗಳನ್ನು ಕರ್ನಾಟಕದಲ್ಲಿ ಕಾಣಬಹುದು. ಕರ್ನಾಟಕದ ದೇವಾಲಯಗಳ ವಾಸ್ತುಶಿಲ್ಪವನ್ನು ಪ್ರಧಾನವಾಗಿ ನಾಲ್ಕು ಘಟ್ಟಗಳಾಗಿ ವಿಭಾಗಿಸಬಹುದು.

ಅವುಗಳೆಂದರೆ :-

೧. **ಚಾಲುಕ್ಯ ಪೂರ್ವಯುಗ**

೨. **ಚಾಲುಕ್ಯ ಯುಗ**

೩. **ಹೊಯ್ಸಳ ಯುಗ**

೪. ವಿಜಯನಗರ ಕಾಲ

೧. ಚಾಲುಕ್ಯ ಪೂರ್ವಯುಗ :-

ಚಾಲುಕ್ಯ ಪೂರ್ವಯುಗದಲ್ಲಿ ಅದರಲ್ಲೂ ಕರ್ನಾಟಕದಲ್ಲಿ, ಮೌರ್ಯ ಮತ್ತು ಶಾತವಾಹನ ಕಾಲದ ಹಲವು ನಿವೇಶನಗಳು ಉತ್ಖನನದಿಂದ ಬೆಳಕಿಗೆ ಬಂದಿದ್ದು ಆ ನೆಲೆಗಳಲ್ಲಿನ ಕಟ್ಟಡ ಅವಶೇಷಗಳು, ಸ್ತೂಪ, ಚೈತ್ಯಗಳು, ಮೋರಿಯರ ಮನೆಗಳೆಂದು ಕರೆಯಲ್ಪಡುವ ಬೃಹತ್ ಶಿಲಾಗೋರಿಗಳು ಈ ವಿಧವಾದ ಅವಶೇಷಗಳು ಕರ್ನಾಟದಲ್ಲಿ ದೇವಾಲಯಗಳ ಹುಟ್ಟನ್ನು ಕುರಿತು ಹೇಳುತ್ತವೆ. ಬ್ರಹ್ಮಗಿರಿ, ಚಂದ್ರವಳ್ಳಿ, ಬನವಾಸಿ, ಪಟ್ಟದಕಲ್ಲು, ಐಹೊಳೆ ಹಾಗೂ ಇತ್ತೀಚಿಗೆ ಉತ್ಖನನಗೊಂಡ ಸನ್ನತಿಗಳಲ್ಲಿ ಪ್ರಾಚೀನ ಕಟ್ಟಡದ ಅವಶೇಷಗಳು ದೊರೆತಿವೆ."[೨೨] ಸನ್ನತಿಯ ಉತ್ಖನನದಲ್ಲಿ ಒಂದು ಭವ್ಯವಾದ ಸ್ತೂಪದ ಅವಶೇಷ ದೊರೆತಿದ್ದು, ಗಾತ್ರದಲ್ಲಿ ಚಿಕ್ಕದಿದ್ದು, ಅದರ ಹೊರಮೈ ಉಬ್ಬುಶಿಲ್ಪದ ಶಿಲ್ಪಗಳಿಂದ ಕೂಡಿದೆ. ಉಬ್ಬುಶಿಲ್ಪದಲ್ಲಿ ಭೋಧಿವೃಕ್ಷ, ವಜ್ರಾಸನ ಮತ್ತು ಪಾದಗಳನ್ನು ಕೆತ್ತಲಾಗಿದ್ದು, ಅವು ಬುದ್ದನನ್ನು ಸಂಕೇತಿಸುತ್ತವೆ.[೨೩] ಶಾತವಾಹನರ ಮತ್ತು ಅವರ ಆನಂತರದ ಕಾಲದ ಶಾಸನಗಳಲ್ಲಿ ಕೆಲವು ವೈದಿಕ ಸಂಪ್ರದಾಯದ ದೇವಾಲಯಗಳ ಉಲ್ಲೇಖಗಳು ಬರುತ್ತವೆ. ಶಿವಸ್ಕಂದವರ್ಮನ ಮಳವಳ್ಳಿ ಶಾಸನ ಮತ್ತು ಪಟ್ಟಿದೇವರನ್ನು ಕದಂಬರ ತಾಳಗುಂದ ಸ್ತಂಭಶಾಸನ ಶಾತಕರಣಿಗಳಿಂದ ಪೂಜಿತ ಪ್ರಣವೇಶ್ವರ ದೇವಾಲಯವನ್ನು ಉಲ್ಲೇಖಿಸುತ್ತವೆ.[೨೪] ಮೇಲಿನ ಈ ಉಲ್ಲೇಖಗಳು ಕರ್ನಾಟಕದಲ್ಲಿ ಶಾತವಾಹನರ ಕಾಲದ ದೇವಾಲಯಗಳ ವಿಕಾಸದ ಅಂಶಗಳನ್ನು ಕುರಿತು ಹೇಳುತ್ತವೆ. ಶಾತವಾಹನರ ನಂತರದಲ್ಲಿ ಕರ್ನಾಟಕದಲ್ಲಿ ಕದಂಬರ ಕಾಲದಲ್ಲಿ ದೇವಾಲಯಗಳ ಬೆಳವಣಿಗೆಯನ್ನು ಕಾಣಬಹುದು. ಕದಂಬರು ಕ್ರಿ.ಶ. ೪ನೆಯ ಶತಮಾನದಿಂದ ೬ನೆಯ ಶತಮಾನದವರೆಗೆ ಆಳ್ವಿಕೆ ನಡೆಸಿದ್ದಾರೆ. ಕರ್ನಾಟಕದಲ್ಲಿ ಕದಂಬರ ಕಾಲಕ್ಕೆ ಶಿಲಾವಾಸ್ತುವಿನ ಪ್ರಮುಖ ಸಾಕ್ಷ್ಯಗಳು ದೊರಕುತ್ತವೆ.

ಕದಂಬರ ಕಾಲದ ದೇಗುಲ ವಾಸ್ತುಶಿಲ್ಪವನ್ನು ಎರಡು ಭಾಗಗಳಾಗಿ ನೋಡಬಹುದು. ಅವುಗಳೆಂದರೆ :-

೧. ಕೊರೆದ ಗುಹಾಲಯ

೨. ಕಟ್ಟಿದ ದೇವಾಲಯ ವಾಸ್ತುಶಿಲ್ಪ.[೨೫]

ಕದಂಬರ ಕಾಲದ ಗುಹಾಲಯಗಳೆಂದು ಹೇಳಲ್ಪಡುವ ಅರವೇಲಮ್, ನೋರ್ವಾ, ಲಂಪಗಾವ್ ಇತ್ಯಾದಿ ಸ್ಥಳಗಳಲ್ಲಿ ಜಾಂಬುಟ್ಟಿಗೆ (Laterite) ಬಂಡೆಗಳಲ್ಲಿ ಇವುಗಳನ್ನು ನಿರ್ಮಿಸಿದ್ದು, ಇಲ್ಲಿನ ಮೂರ್ತಿಶಿಲ್ಪಗಳು ಶಾಸನ ಲಿಪಿ ಮುಂತಾದ ಆಧಾರಗಳಿಂದ ಇವು ಕದಂಬ ಶೈಲಿಯೆಂದು ವಿದ್ವಾಂಸರ ಅಭಿಮತ.[೨೬] ಇವರ ಕಾಲದ ಕಟ್ಟಿದ ದೇವಾಲಯಗಳಲ್ಲಿ ಹಲಸಿಯ ಜೈನಬಸ್ತಿ ಪ್ರಾಚೀನ ಕಾಲದಾಗಿದ್ದು, ಇದು ಕ್ರಿ.ಶ. ೫ನೇ ಶತಮಾನದಲ್ಲಿದ್ದ ಮೃಗೇಶರ್ಮನಿಂದ ನಿರ್ಮಾಣಗೊಂಡಿದೆ. ಇದು ಗರ್ಭಗೃಹ, ಸುಖನಾಸಿ ಮತ್ತು ಚಿಕ್ಕಮಂಟಪ ಇವುಗಳಿಂದ ಕೂಡಿದೆ.[೨೭] ಹಲಸಿಯಲ್ಲಿರುವ ಹಟ್ಟಕೇಶ್ವರ, ಕಲ್ಲೇಶ್ವರ, ಸುವರ್ಣೇಶ್ವರ, ನರಸಿಂಹ ಮೊದಲಾದ ದೇವಾಲಯಗಳು ಕದಂಬ ಶೈಲಿಯ ದ್ಯೋತಕಗಳಾಗಿ ನಿಂತಿವೆ. ತಾಳಗುಂದದ ಪ್ರಣವೇಶ್ವರ ದೇವಾಲಯ ಅಚ್ಚುಕಟ್ಟಾಗಿ ಕತ್ತರಿಸಿದ ಕಲ್ಲುಗಳು, ಕಟ್ಟಡದ ರೀತಿ, ಕೆತ್ತನೆಯ ಕೆಲಸ ಇವುಗಳಲ್ಲಿಯೂ ಇದು ಹಲಸಿಯ ಬಸ್ತಿಗಿಂತ ಮುಂದಿನ ಹೆಜ್ಜೆಯನ್ನು ತೋರಿಸುತ್ತದೆ ಹಾಗೂ ಬನವಾಸಿಯ ಮಧುಕೇಶ್ವರ ದೇವಾಲಯವು ಇವರ ಕಾಲದ ಬಹುಮುಖ್ಯ ದೇವಾಲಯವಾಗಿದೆ.[೨೮]

೨. ಚಾಲುಕ್ಯ ಯುಗ :-

ಉತ್ತರ ಭಾರತದಲ್ಲಿ ಗುಪ್ತರ ಪೋಷಣೆಯಲ್ಲಿ ದೇವಾಲಯಗಳ ನಿರ್ಮಾಣ ನಡೆಯುತ್ತಿರುವ ಕಾಲದಲ್ಲಿಯೇ ದಕ್ಷಿಣದಲ್ಲಿ ಒಂದು ಹೊಸ ಪರಂಪರೆ ಪ್ರಾರಂಭವಾಯಿತು. ಚಾಲುಕ್ಯರ ನೇತೃತ್ವದಲ್ಲಿ ಕರ್ನಾಟಕ ಆ ಮುನ್ನಡೆಯ ಕೇಂದ್ರವಾಯಿತು.[೨೯] ಚಾಲುಕ್ಯರಲ್ಲಿ ಮೂರು ಶಾಖೆಗಳುಂಟು. ಬಾದಾಮಿಯ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು, ವೆಂಗಿ ಚಾಲುಕ್ಯರು. ಅಖಂಡ ಕರ್ನಾಟಕದ ಪ್ರಪ್ರಥಮ ಚಕ್ರವರ್ತಿಗಳಾಗಿ ಬಾದಾಮಿಯ ಚಾಲುಕ್ಯರು ಇನ್ನೂರು ವರ್ಷಗಳ ಕಾಲ (ಕ್ರಿ.ಶ.೫೪೩-ಕ್ರಿ.ಶ ೭೫೭) ವೈಭವದಿಂದ ಆಳಿದರು. ಕರ್ನಾಟಕದ ವಾಸ್ತುಶಿಲ್ಪ ಶೈಲಿಯಲ್ಲಿ ಅನೇಕ ಬಗೆಯ ಪ್ರಯೋಗಗಳನ್ನು ನಡೆಸಿದ ಅವಧಿಯೆಂದರೆ ಬಾದಾಮಿ ಚಾಲುಕ್ಯ ಮನೆತನದ ಆಳ್ವಿಕೆಯ ಕಾಲ. ಇವರನ್ನು ಕರ್ನಾಟಕದ ವಿಶಿಷ್ಟ ವಾಸ್ತುಶೈಲಿಯ ಆದ್ಯ ಪ್ರವರ್ತಕರೆಂದೂ ಕರೆಯಲಾಗಿದೆ. ಬಾದಾಮಿ ಚಾಲುಕ್ಯರ ಕಾಲದ ಶಿಲಾದೇಗುಲಗಳು ವಿಪುಲವಾಗಿವೆ. ಇವರ ಕಾಲದ ಕಟ್ಟಡ ರಚನೆಗಳು ಪಟ್ಟದಕಲ್ಲು, ಐಹೊಳೆ, ಮಹಾಕೂಟಗಳೇ ಅಲ್ಲದೇ ಪ್ರಸ್ತುತ ಆಂಧ್ರಪ್ರದೇಶದ ಅಲಂಪುರ, ಮಹಾನಂದಿಗಳಲ್ಲೂ ವ್ಯಾಪಿಸಿವೆ.

ಕ್ರಿ.ಶ. ೬–೮ನೆಯ ಶತಮಾನಗಳಲ್ಲಿ ನಿರ್ಮಾಣಗೊಂಡ ಈ ಸ್ಮಾರಕಗಳು ಭಾರತದ ಉತ್ಕೃಷ್ಟ ದೇವಾಲಯಗಳ ಸಾಲಿಗೆ ಸೇರಿವೆ. ಈ ದೇವಾಲಯಗಳಲ್ಲಿ ಕಂಡು ಬರುವ ವಾಸ್ತುವೈವಿಧ್ಯತೆಗಳು ವಿಸ್ಮಯಕಾರಿಯಾಗಿವೆ. ಚಾಲುಕ್ಯ ವಾಸ್ತುಕಲೆಯು ಭಾರತೀಯ ಕಲಾ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ.[೩೦] ಚಾಲುಕ್ಯರ ಕಾಲದ ದೇವಾಲಯ ವಾಸ್ತುಶಿಲ್ಪವನ್ನು ಎರಡು ಭಾಗಗಳಾಗಿ ನೋಡಬಹುದು ಅವು ೧. ಗುಹಾದೇವಾಲಯಗಳು, ೨. ರಾಚನಿಕ ದೇವಾಲಯಗಳು. ಚಾಲುಕ್ಯ ರೂವಾರಿಗಳು ಬಾದಾಮಿ, ಐಹೊಳೆಯಲ್ಲಿ ಒಟ್ಟು ಒಂಬತ್ತು ಗುಹಾ ದೇವಾಲಯಗಳನ್ನು ಕೊರೆದಿದ್ದಾರೆ."[೩೧] ಬಾದಾಮಿಯಲ್ಲಿರುವ ಚಾಲುಕ್ಯ ಗೃಹಾಲಯಗಳು ನಾಲ್ಕು. ಇವುಗಳನ್ನು ಬಾದಾಮಿಯ ದಕ್ಷಿಣ ದಿಕ್ಕಿನಲ್ಲಿರುವ ಕೆಂಪು ಉಸುಗು ಕಲ್ಲಿನ ಗುಡ್ಡದಲ್ಲಿ ಕೊರೆಯಲಾಗಿದೆ. ಈ ನಾಲ್ಕು ಗುಹೆಗಳಲ್ಲಿ ಮೊದಲನೆಯದು ಶೈವ, ಆನಂತರದ ಎರಡು ವೈಷ್ಣವ, ಕೊನೆಯದು ಜೈನ ಸಂಪ್ರದಾಯಕ್ಕೆ ಸೇರಿದೆ.[೩೨] ಬಾದಾಮಿಯಲ್ಲಿನ ಗುಹಾ ದೇವಾಲಯಗಳನ್ನು ಸ್ಥಳೀಯರು ಮೇಣದ ಬಸದಿಗಳೆಂದು ಕರೆಯುತ್ತಾರೆ. ಆಯತಾಕಾರದ ಮೊಗಸಾಲೆ, ಹಜಾರ ಮತ್ತು ಮಧ್ಯದಲ್ಲಿ ಗರ್ಭಗುಡಿ ಇದು ಗುಹಾಲಯಗಳ ತಳವಿನ್ಯಾಸ. ಅದೇ ರೀತಿ ಬಾದಾಮಿ ಚಾಲುಕ್ಯರ ಕಾಲದ ರಾಚನಿಕ (ಕಟ್ಟಡ) ದೇವಾಲಯಗಳು ಸಹ ಅವರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ನಿರ್ಮಿತಿಗಳಾಗಿವೆ. ಅವರ ಕಾಲದಲ್ಲಿ ಐಹೊಳೆ, ಮಹಾಕೂಟ, ಪಟ್ಟದಕಲ್ಲುಗಳಲ್ಲಿ ರಾಚನಿಕ ದೇವಾಲಯಗಳನ್ನು ಕಾಣಬಹುದು. ಚಾಲುಕ್ಯ ಸ್ಥಪತಿಗಳು ವಿಭಿನ್ನ ತಳವಿನ್ಯಾಸಗಳಿರುವ ದೇವಾಲಯಗಳನ್ನು ಸೃಷ್ಟಿಸಿದ್ದಾರೆ. ಬಹುಪಾಲು ದೇವಾಲಯಗಳಿಗೆ ಸರಳವಾದ ತಳವಿನ್ಯಾಸವಿದೆ. ಇವು ಚೌಕಾರದ ಚಿಕ್ಕಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪಗಳನ್ನು ಹೊಂದಿದ್ದು ಪೂಜಾ ವಿಧಿಗಳಿಗೆ ಪೂರಕವಾಗಿವೆ. ಮಹಾಕೂಟದ ಬಾಣಂತಿಗುಡಿ, ಐಹೊಳೆಯ ಸೂರ್ಯ ದೇವಾಲಯ ಈ ಬಗೆಯ ವಿನ್ಯಾಸದಲ್ಲಿ ರಚಿತವಾಗಿವೆ. ಪ್ರದಕ್ಷಿಣಾ ಪಥವಿಲ್ಲದ ಇವನ್ನು ನಿರಂಧಾರ ಮಂದಿರಗಳೆಂದು ಕರೆಯಲಾಗುತ್ತದೆ".[೩೩] ಪ್ರದಕ್ಷಿಣಾಪಥವಿರುವ ದೇವಾಲಯಗಳನ್ನು ಸಾಂಧಾರವೆಂದು ಗುರುತಿಸಲಾಗುತ್ತದೆ. ದೇವತಾ ಶಿಲ್ಪವನ್ನು ಸುತ್ತು ಹಾಕಲು ಸಾಧ್ಯವಾಗುವಂತೆ ಗರ್ಭಗೃಹದ ಸುತ್ತ ಪ್ರದಕ್ಷಿಣಾ ಪಥವನ್ನು ನಿರ್ಮಿಸಲಾಗಿರುತ್ತದೆ. ಐಹೊಳೆಯ ಹುಚ್ಚಿಮಲ್ಲಿಗುಡಿ, ಪಟ್ಟದಕಲ್ಲಿನ ಸಂಗಮೇಶ್ವರ, ಮಹಾಕೂಟದ ಮಲ್ಲಿಕಾರ್ಜುನ ಗುಡಿಗಳನ್ನು ಹೆಸರಿಸಬಹುದು. ಐಹೊಳೆಯ ಲಾಡಖಾನ ಗುಡಿಯ ತಲವಿನ್ಯಾಸ ಇನ್ನೊಂದು ಬಗೆಯದು. ಗರ್ಭಗೃಹವು ಸಭಾಮಂಟಪದ ಭಾಗವಾಗಿದ್ದು, ಅವೆರಡರ ಹಿಂದೆ ಗೋಡೆ ಒಂದೇ ಆಗಿದೆ. ಬಾದಾಮಿ ಚಾಲುಕ್ಯರು ಅವರ ಕಾಲದ ದೇವಾಲಯಗಳ ನಿರ್ಮಾಣಕ್ಕಾಗಿ ಸ್ಥಳೀಯವಾಗಿ ದೊರೆಯುವ ನಯವಾದ ನಸುಗೆಂಪು ಅಥವಾ ತಿಳಿ ಹಳದಿ ಬಣ್ಣದ ಮರಳು ಕಲ್ಲನ್ನೇ ಹೆಚ್ಚಾಗಿ ಬಳಸಿದ್ದಾರೆ.[೩೪] ಹೀಗೆ ಬಾದಾಮಿ

ಚಾಲುಕ್ಯರ ಕಾಲದ ದೇವಾಲಯಗಳ ನಿರ್ಮಿತಿಗಳ ಹಲವು ವಾಸ್ತುಶೈಲಿ ವಿಷಯಗಳನ್ನು ತಿಳಿಯಬಹುದು.

ಬಾದಾಮಿ ಚಾಲುಕ್ಯರಿಂದ ಪ್ರಾರಂಭವಾದ ಚಾಲುಕ್ಯ ವಾಸ್ತುಶೈಲಿಯ ನಿರ್ಮಾಣ ಚಟುವಟಿಕೆಯು ಅವರ ವಂಶಜರೆ ಆದ ಕಲ್ಯಾಣ ಚಾಲುಕ್ಯರ (೧೦-೧೨ನೆಯ ಶತಮಾನ) ಆಡಳಿತ ಕಾಲದಲ್ಲೂ ಮುಂದುವರೆಯಿತು. ಇದು ಬಾದಾಮಿ ಚಾಲುಕ್ಯರ ವಾಸ್ತು ಸಂಪ್ರದಾಯದ ವಿಕಾಸವೇ ಆದರೂ ಅದು ಸಂಪೂರ್ಣವಾಗಿ ವಿಕಾಸ ಹೊಂದುವ ವೇಳೆಗೆ ಅನೇಕ ಪ್ರಮುಖ ಬದಲಾವಣೆಗಳಿಗೊಳಗಾಗಿ ತನ್ನ ತನವನ್ನೇ ಸಾಧಿಸಿಕೊಂಡಿತು. ಕಲ್ಯಾಣ ಚಾಲುಕ್ಯರು ಕಪ್ಪು ಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲನ್ನು (ಕ್ಲೋರೈಟಿಕ್ ಸಿಸ್ಟ್) ದೇವಾಲಯಗಳ ನಿರ್ಮಾಣಕ್ಕೆ ಬಳಸಿದುದನ್ನು ಕಾಣಬಹುದು.[೨೪] ಕರ್ನಾಟಕ ದೇವಾಲಯಗಳ ನಿರ್ಮಾಣದ ಇತಿಹಾಸದಲ್ಲಿ ಕಲ್ಯಾಣದ ಚಾಲುಕ್ಯರ ಕಾಲ ಅಪೂರ್ವವಾದುದು. ಹೊಸದಾದ ವಿಶಿಷ್ಟ ಶೈಲಿಯೊಂದನ್ನು ಇವರು ಆರಂಭಿಸಿದರು. ಮುಂದೆ ಹೊಯ್ಸಳರು ಈ ಶೈಲಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಮುಂದುವರೆಸಿದರು. "ವಿಸ್ತಾರವಾದ ಪ್ರದೇಶವನ್ನಾಳಿದ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ವಿಪುಲ ಸಂಖ್ಯೆ ದೇವಾಲಯಗಳು ನಿರ್ಮಿತವಾದವು. ಕಲ್ಯಾಣ ಚಾಲುಕ್ಯರ ದೇವಾಲಯಗಳನ್ನು ಔರಂಗಾಬಾದದ ಕೊಡದಿಂದ ತುಮಕೂರು ಜಿಲ್ಲೆಯ ಅರಳುಗುಪ್ಪೆಯವರೆಗೆ, ಕೊಲ್ಲಾಪುರದಿಂದ ಮಹಬೂಬನಗರ ಜಿಲ್ಲೆಯ ಪಾನಗಲ್ಲುವರೆಗೆ ಹಬ್ಬಿರುವುದನ್ನು ಕಾಣಬಹುದು. ಆದರೂ ಇವರ ವಾಸ್ತು ಶೈಲಿಯನ್ನು ನಿರೂಪಿಸುವ ಬಹುಸಂಖ್ಯೆ ದೇವಾಲಯಗಳು ಬಳ್ಳಾರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿವೆ. ಇವುಗಳನ್ನು ಹೆಚ್ಚಾಗಿ ತುಂಗಭದ್ರಾನದಿಯ ಎರಡು ದಂಡೆಯ ಸುತ್ತಮುತ್ತ ಕಟ್ಟಲಾಗಿದೆ."[೨೫] ಕಲ್ಯಾಣ ಚಾಲುಕ್ಯರ ಹೆಚ್ಚಿನ ದೇವಾಲಯಗಳು ನಿರಂಧಾರ ಪ್ರಕಾರದವುಗಳು.[೨೬] ಇವುಗಳಲ್ಲಿ ಏಕಕೂಟ ದೇವಾಲಯಗಳೇ ಅಧಿಕ. ಕಲ್ಯಾಣ ಚಾಲುಕ್ಯರ ದೇವಾಲಯಗಳ ಅಧಿಷ್ಠಾನವ ಎತ್ತರವು ದೇವಾಲಯದಿಂದ ದೇವಾಲಯಕ್ಕೆ ಬೇರೆಯಾಗಿರುತ್ತದೆ. ಅದು ಸಾಮಾನ್ಯವಾಗಿ ಮೂರರಿಂದ ಐದು ಅಡಿಗಳ ಎತ್ತರವುಳ್ಳದಾಗಿರುತ್ತದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಕಂಪ, ಕಂಠ ಮತ್ತು ಪಟ್ಟಿಕೆಗಳು ಹೆಚ್ಚು ಎದ್ದು ಕಾಣುತ್ತವೆ. ಅನೇಕ ಸಲ ಎಲ್ಲಕ್ಕೂ ಮೇಲಿನ ಭಾಗವನ್ನು ಚೌಕಾಕಾರ, ದೀರ್ಘಚತುರಸ್ರಾಕಾರ ಮತ್ತು ಶಿಲುಬೆಯಾಕಾರದ ಅಲಂಕಾರಗಳಿಂದ ಅಲಂಕರಿಸಿರುವುದನ್ನು ಕಾಣಬಹುದು. ಕೆಲವು ಸಂದರ್ಭಗಳಲ್ಲಿ ಮಕರದ ತಲೆ, ಕೀರ್ತಿಮುಖ, ಮನುಷ್ಯ ಮತ್ತು ದೇವತಾ ಪುರುಷರ ಚಿಕ್ಕ ಚಿಕ್ಕ ಶಿಲ್ಪಗಳನ್ನು ಇವುಗಳಲ್ಲಿ ಕೆತ್ತಿರುವುದು ಕಂಡು ಬರುತ್ತದೆ.[೨೭] ಕಲ್ಯಾಣ ಚಾಲುಕ್ಯರ ದೇವಾಲಯಗಳಲ್ಲಿ ಕಂಡು ಬರುವ ಜಾಲಾಂಧ್ರಗಳು ವೈಶಿಷ್ಟ್ಯ ಪೂರ್ಣವಾಗಿರುತ್ತವೆ. ಈ ದೇವಾಲಯಗಳಲ್ಲಿ ಜಾಲಾಂಧ್ರಗಳನ್ನು ಸಾಮಾನ್ಯವಾಗಿ ದ್ವಾರಗಳ ಎರಡೂ ಬದಿಗೆ ಅಳವಡಿಸಿರುತ್ತಾರೆ. ಪ್ರವೇಶದ್ವಾರ, ಸುಕನಾಸಿದ್ವಾರ

ಮತ್ತು ಗರ್ಭಗೃಹದ್ವಾರಗಳ ಇಕ್ಕೆಲಗಳಲ್ಲಿ ಇಂತಹ ಜಾಲಂಧ್ರಗಳನ್ನು ಕಾಣಬಹುದು[೩೯]. ಉಣಕಲ್ಲಿನ ಚಂದ್ರಮೌಳೇಶ್ವರ ಮತ್ತು ಜಳ್ಳಿಗಾವಿಯ ತ್ರಿಪುರಾಂತಕೇಶ್ವರ ದೇವಾಲಯದ ಅಲಂಕಾರಿಕ ಜಾಲಾಂದ್ರಗಳು ಆಕರ್ಷಕವಾಗಿವೆ. ಇವರ ಕಾಲದ ದೇವಾಲಯಗಳ ದ್ವಾರಗಳಲ್ಲಿ ಹೆಚ್ಚು ಅಲಂಕೃತವಾಗಿರುವ ದ್ವಾರ ಶಾಖೆಗಳಿರುತ್ತವೆ. ಐದು ಅಥವಾ ಅದಕ್ಕೂ ಹೆಚ್ಚು ದ್ವಾರ ಶಾಖೆಗಳಿರುತ್ತವೆ. ಕಲ್ಯಾಣ ಚಾಲುಕ್ಯರ ದೇವಾಲಯಗಳ ಇನ್ನೊಂದು ಗಮನಾರ್ಹ ಲಕ್ಷಣವೆಂದರೆ ಕಂಬಗಳ ವಿನ್ಯಾಸ ಮತ್ತು ಅವುಗಳನ್ನು ಕೆತ್ತುಪಿಕೆ. ಸಾಮಾನ್ಯವಾಗಿ ಎರಡು ಪ್ರಕಾರದ ಕಂಬಗಳು ಇಲ್ಲಿ ಕಂಡು ಬರುತ್ತವೆ. ಮೊದಲನೆಯ ವಿಧದ ಕಂಬ ಕಾಂಡಭಾಗದಲ್ಲಿ ಚಚ್ಚೌಕವಾಗಿದ್ದು, ಅಷ್ಟಪೈಲು ಮತ್ತು ಹದಿನಾರು ಭಾಗಗಳುಳ್ಳದಾಗಿರುತ್ತದೆ. ಎರಡನೇ ಪ್ರಕಾರದ ಕಂಬ ಗಂಟೆಯಾಕಾರದಾಗಿರುತ್ತದೆ. ಕಂಬಗಳನ್ನು ಒಂದು ಪೊಟಗಿಂತಲೂ ಚಿಕ್ಕದಾದ ಚಚ್ಚೌಕ ಪೀಠಗಳ ಮೇಲೆ ನಿಲ್ಲಿಸಲಾಗಿರುವುದನ್ನು ಇಲ್ಲಿ ಸಾಮಾನ್ಯವಾಗಿ ಕಾಣುತ್ತೇವೆ.[೪೦] ಈ ಕಾಲದ ದೇಗುಲಗಳು ದ್ರಾವಿಡ ಮತ್ತು ನಾಗರ ಶೈಲಿಗಳ ಸಮ್ಮಿಲನವಾಗಿ ಸಂಕರಣ ಶೈಲಿಯಾದ ವೇಸರ ಶೈಲಿಯಲ್ಲಿ ನಿರ್ಮಾಣವಾಗಿವೆ. ಹಸಿರು ಮಿಶ್ರಿತ ಶಿಲೆಯ ಜೊತೆಗೆ ಕರ್ನಾಟಕದ ವಿವಿದೆಡೆ ಕಣಶಿಲೆಯನ್ನು ದೇವಾಲಯಗಳ ನಿರ್ಮಾಣಕ್ಕೆ ಬಳಸಿರುವರು. ಇದಕ್ಕೆ ಪ್ರಾದೇಶಿಕವಾಗಿ ಆಯಾಯ ಸ್ಥಳಗಳಲ್ಲಿ ಹಸಿರು ಮಿಶ್ರಿತ ಶಿಲೆ ದೊರೆಯದಿರುವುದು ಕಾರಣವಾಗಿದೆ. ಕಲ್ಯಾಣ ಚಾಲುಕ್ಯರ ಕಾಲದ ಪ್ರಮುಖ ದೇವಾಲಯಗಳೆಂದರೆ ಇಟಗಿಯ ಮಹದೇವ ದೇವಾಲಯ, ಲಕ್ಕುಂಡಿಯ ಕಾಶಿ ವಿಶ್ವನಾಥ, ಕುಕನೂರಿನ ನವಲಿಂಗೇಶ್ವರ, ಕಲ್ಲೇಶ್ವರ, ಗದುಗಿನ ತ್ರಿಕೂಟೇಶ್ವರ, ಸರಸ್ವತಿ ಮತ್ತು ಸೋಮೇಶ್ವರ ದೇವಾಲಯಗಳು ಮುಖ್ಯವಾಗಿವೆ.

೨. ಹೊಯ್ಸಳಯುಗ :-

ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದ ಹೊಯ್ಸಳರು ೧೨ನೇ ಶತಮಾನದ ಪುರ್ವಾರ್ಧದಲ್ಲಿ ಸ್ವತಂತ್ರರಾದ ನಂತರ, ಚಾಲುಕ್ಯರ ಸಾಂಸ್ಕೃತಿಕ ಸಂಸ್ಥೆಗಳಿಗೆ ಉತ್ತರಾಧಿಕಾರಿಗಳಾಗಿ ಆ ಸಾಂಸ್ಕೃತಿಕ ಪರಂಪರೆಯನ್ನು ಸ್ವೀಕರಿಸಿದರು. ಆದ್ದರಿಂದಾಗಿ ಹೊಯ್ಸಳ ಸ್ಥಪತಿಗಳು ಚಾಲುಕ್ಯ ವಾಸ್ತುಶೈಲಿಯನ್ನೇ ಮುಂದುವರಿಸಿದರಾದರೂ ಅದರಲ್ಲಿ ಅನೇಕ ಹೊಸ ಬಗೆಯ ಪ್ರಯೋಗಗಳನ್ನು ನಡೆಸಿ ಹೊಸ ಅಂಶಗಳನ್ನು ಅಳವಡಿಸಿದರು. ಇವರ ಕಾಲದಲ್ಲಿ ರೂಪಗೊಂಡ ಕಲೆ, ವಾಸ್ತುಶಿಲ್ಪ ವಿಶ್ವಪ್ರಸಿದ್ಧಿ ಪಡೆದಿದೆ. "ಹೊಯ್ಸಳ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳನ್ನು 'ಸೋಪ್‌ಸ್ಟೋನ್' ಎಂದು ಕರೆಯಲ್ಪಡುವ ಮೆದುವಾದ ಕಲ್ಲಿನಲ್ಲಿ ರೂಪಿಸಿದ್ದಾರೆ. ಇದರಲ್ಲಿ ಕೆತ್ತನೆಗೆ ಬಹುವಾದ ಅವಕಾಶವಿರುತ್ತದೆ. ಈ ಕಲ್ಲಿನ ಗುಣವೆಂದರೆ ಭೂಮಿಯಿಂದ ಅಗೆದು ತೆಗೆದಾಗ ತುಂಬಾ ಮೆದುವಾಗಿರುತ್ತದೆ. ನಂತರ ಗಾಳಿಯಾಡುತ್ತಿದ್ದಂತೆಲ್ಲಾ ಗಡುಸಾಗುತ್ತದೆ. ಈ ಕಲ್ಲಿನಲ್ಲಿ ಕೊರೆಯುವುದು ಸುಲಭ, ತುಂಬಾ

ಸೂಕ್ಷ್ಮವಾದ ಕೆತ್ತನೆಗಳನ್ನು ನೋಡಬಹುದು[೪೧]. ಹೊಯ್ಸಳ ಶೈಲಿಯ ಕಟ್ಟಡ ನಿರ್ಮಾಣದಲ್ಲಿ ವಾಸ್ತುಶಿಲ್ಪಿಯ ಕೈಚಳಕಕ್ಕಿಂತಲೂ ರೂವಾರಿಯ ಅನುಪಮ ಕಲಾವಂತಿಕೆ ಎದ್ದು ಕಾಣುತ್ತದೆ ಎಂಬುದು ಕಲಾವಿಮರ್ಶಕರ ಅಭಿಪ್ರಾಯ. ಪರ್ಸಿಬ್ರೌನರ ಮಾತುಗಳಲ್ಲಿ ಹೇಳಬೇಕೆಂದರೆ "ಹೊಯ್ಸಳ ದೇವಾಲಯಗಳು ವಾಸ್ತು ನಿರ್ಮಾಣಗಳೆನ್ನುವುದಕ್ಕಿಂತ ಪ್ರಯೋಗಾತ್ಮಕ ಕಲಾಮಂದಿರಗಳಾಗಿವೆ. ದೇವಾಲಯದ ಹೊರಗೋಡೆಗಳ ಮೇಲಿನ ವಿಗ್ರಹಗಳು ಒಂದೊಂದು ತಮ್ಮದೇ ಆದ ಪ್ರತ್ಯೇಕ ಸನ್ನಿವೇಶವನ್ನು ಪ್ರತಿನಿಧಿಸುತ್ತವೆ. ದಂತದ ಕೆಲಸಗಾರರು ನಿರ್ಮಿಸುವ ದೇವತಾ ಮೂರ್ತಿಗಳು ಕಲ್ಲಿನಲ್ಲಿ ದೊಡ್ಡ ಆಕಾರದಲ್ಲಿ ಇಲ್ಲಿ ಪುನರಾವರ್ತನೆಗೊಂಡಂತೆ ಭಾಸವಾಗುತ್ತದೆ.[೪೨] ಹೊಯ್ಸಳ ಕಾಲದ ದೇವಾಲಯಗಳು ಕರ್ನಾಟಕದ ಅನೇಕ ಭಾಗಗಳಲ್ಲಿ ಕಂಡುಬಂದರೂ ಅವು ಹೆಚ್ಚಾಗಿ ಹಾಸನ, ಚಿಕ್ಕಮಗಳೂರು, ತುಮಕೂರು, ಚಿತ್ರದುರ್ಗ, ಶಿವಮೊಗ್ಗ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಕೇಂದ್ರಿಕೃತವಾಗಿವೆ.[೪೩]

ಹೊಯ್ಸಳರ ಕಾಲದ ದೇವಾಲಯಗಳಲ್ಲಿ ದೇವಾಲಯದ ಮೂರು ಭಾಗಗಳು ಇವೆ. ೧) ಗರ್ಭಗೃಹ ಮತ್ತು ವಿಮಾನ ೨) ಶುಕನಾಸಿ (ಅಂತರಾಳ) ಮತ್ತು ನವರಂಗ (ಮಂಟಪ) ೩) ಅನೇಕ ಬಾರಿ ಮುಖಮಂಟಪವು ಮುಂಭಾಗದಲ್ಲಿರುತ್ತದೆ.[೪೪] ತಲವಿನ್ಯಾಸವನ್ನನುಸರಿಸಿ ಹೊಯ್ಸಳ ದೇವಾಲಯಗಳನ್ನು ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟಗಳಾಗಿ ವಿಂಗಡಿಸಬಹುದು. ಒಂದೇ ಗರ್ಭಗೃಹವಿರುವ ದೇವಾಲಯಗಳಿಗೆ ಏಕಕೂಟ ದೇವಾಲಯಗಳೆಂದು ಕರೆಯಲಾಗಿದ್ದು, ಬೇಲೂರಿನ ಚನ್ನಕೇಶವ, ಹಾರ್ನಳ್ಳಿಯ ಸೋಮೇಶ್ವರ ಮೊದಲಾದ ದೇವಾಲಯಗಳನ್ನು ಉದಾಹರಿಸಬಹುದು.[೪೫] ಹಳೇಬೀಡಿನ ಹೊಯ್ಸಳೇಶ್ವರ, ಆನೆಕೊಂಡದ ಈಶ್ವರ, ಬೆಳ್ಳೂರಿನ ಕಣ್ಣೇಶ್ವರ ದೇವಾಲಯಗಳು ಪ್ರಸಿದ್ಧ ದ್ವಿಕೂಟ ದೇವಾಲಯಗಳು.[೪೬] ಅದೇ ರೀತಿ ಹೊಯ್ಸಳ ಕಾಲ ತ್ರಿಕೂಟ ದೇವಾಲಯಗಳ ರಚನೆಯ ಪರ್ವಕಾಲವೆಂದೇ ಹೇಳಬಹುದು. ಕಂಬದಹಳ್ಳಿ, ಭದ್ರಾವತಿ, ಉಂಡಿಗನಹಾಳ್, ಸೆಟ್ಟಿಕೆರೆ, ಬೆಳ್ಳೂರು, ಅಘಾಲಯ, ಬಂದಳಿಕೆ, ಹೊಸಹೊಳಲು ಮೊದಲಾದ ಸ್ಥಳಗಳಲ್ಲಿ ತ್ರಿಕೂಟ ದೇವಾಲಯಗಳಿವೆ.[೪೭] ಹೊಯ್ಸಳ ದೇವಾಲಯಗಳ ವಿಶಿಷ್ಟ ಲಕ್ಷಣಗಳಲ್ಲಿ ಜಗತಿ ಒಂದು. ಹೊಯ್ಸಳ ದೇವಾಲಯಗಳು ಎತ್ತರವಾದ ಜಗತಿಯ ಮೇಲೆ ನಿರ್ಮಾಣಗೊಂಡಿವೆ. ಕರ್ನಾಟಕದ ವಾಸ್ತುಶಿಲ್ಪದಲ್ಲಿ ಈ ಜಗತಿಯ ಸಂಪ್ರದಾಯ ಹೊಯ್ಸಳ ಕಾಲದಲ್ಲಿ ಅಭಿವೃದ್ಧಿಗೊಂಡಿತು. ಹೊಯ್ಸಳ ದೇವಾಲಯಗಳಲ್ಲಿ ಈ ಜಗತಿ ಸಾಮಾನ್ಯವಾಗಿ ಮೂರರಿಂದ ಐದು ಅಡಿಗಳ ಎತ್ತರವಿರುತ್ತದೆ. ಜಗತಿಯು ಆಕಾರದಲ್ಲಿ ನಕ್ಷತ್ರಾಕಾರದಲ್ಲಿರುತ್ತದೆ. ಬೇಲೂರಿನ ಚನ್ನಕೇಶವ ದೇವಾಲಯದ ಜಗತಿ ಸುಮಾರು ಐದು ಅಡಿ ಎತ್ತರವಾಗಿದ್ದು ಇದರಲ್ಲಿ ಮೂವತ್ತೆರಡು ಕೋನಗಳಿವೆ.[೪೮] ಬಹು ಎತ್ತರವಾಗಿರುವ ಹೊಯ್ಸಳ ದೇವಾಲಯಗಳ ಅಧಿಷ್ಠಾನಗಳು, ಅತ್ಯಂತ

ಸುಂದರವಾದ ಅಲಂಕರಣವನ್ನು ಹೊಂದಿರುವ ಅಡ್ಡಪಟ್ಟಿಗಳನ್ನು ಪಡೆದುಕೊಂಡಿರುತ್ತವೆ. ಈ ಅಡ್ಡಪಟ್ಟಿಗಳಲ್ಲಿ ಆನೆಗಳ ಸಾಲು, ಅಶ್ವಗಳ ಸಾಲು, ಎಲೆಬಳ್ಳಿಗಳ ಸಾಲು, ರಾಮಾಯಣ ಮಹಾಭಾರತಗಳ ಕಥೆಗಳನ್ನು ಒಳಗೊಂಡ ಸಾಲು, ಹಂಸಗಳ ಸಾಲು ಹೀಗೆ ವಿವಿಧ ಚಿತ್ರಪಟ್ಟಿಕೆಗಳನ್ನು ಅವುಗಳಲ್ಲಿ ಕಾಣಬಹುದು.[೪೯] ಹೊಯ್ಸಳ ದೇವಾಲಯಗಳ ಮುಖಮಂಟಪಗಳಲ್ಲಿರುವ ಕಕ್ಷಾಸನಗಳು ಗಮನಾರ್ಹವಾಗಿದ್ದು ಇವುಗಳ ಹಿಂಭಾಗಗಳು ವಿವಿಧ ಬಗೆಯ ಶಿಲ್ಪಗಳಿಂದ ಅಲಂಕೃತವಾಗಿರುತ್ತವೆ. ಅಮೃತಾಪುರದ ಅಮೃತೇಶ್ವರ, ಬಸರಾಳದ ಮಲ್ಲಿಕಾರ್ಜುನ, ಹಳೇಬೀಡಿನ ಹೊಯ್ಸಳೇಶ್ವರ ಮತ್ತು ಹಾರನಹಳ್ಳಿಯ ಸೋಮೇಶ್ವರ ಹಾಗೂ ಕೇಶವ ದೇವಾಲಯದಲ್ಲಿ ಇವುಗಳನ್ನು ನೋಡಬಹುದು.[೫೦] ಹೊಯ್ಸಳ ಶೈಲಿಯ ಅತ್ಯಂತ ಶ್ರೀಮಂತ ಶಿಲ್ಪದಿಂದ ಕೂಡಿದ ಪ್ರಾತಿನಿಧಿಕ ದೇವಾಲಯಗಳಲ್ಲಿ ಹಳೇಬೀಡಿನ ಹೊಯ್ಸಳೇಶ್ವರ, ಬೇಲೂರಿನ ಚನ್ನಕೇಶವ ಮತ್ತು ಸೋಮನಾಥಪುರದ ಕೇಶವ ದೇವಾಲಯವನ್ನು ಹೆಸರಿಸಬಹುದು. ಹೊಯ್ಸಳೇಶ್ವರ ದೇವಾಲಯವು ಈ ಶೈಲಿಯ ದೇವಾಲಯಗಳಲ್ಲಿ ಅತಿ ದೊಡ್ಡದು. ೭೦೦ ಅಡಿಗಳಿಗೂ ಹೆಚ್ಚು ಉದ್ದ ಗೋಡೆಯ ಪಟ್ಟಿಕೆಗಳಲ್ಲಿರುವ ಆನೆಗಳ ಸಂಖ್ಯೆಯೇ ೨೦೦೦ಕ್ಕೂ ಅಧಿಕ ಸರ್ವಾಲಂಕಾರ ಭೂಷಿತ ಆನೆಗಳ ಭಂಗಿಯು ವೈವಿಧ್ಯಮಯ. ಈ ದೇವಾಲಯದ ಶಿಲ್ಪಕಲೆ ಈ ಶೈಲಿಯ ದೇಗುಲಗಳಲ್ಲಿ ಇತರ ಕಡೆಗಳಲ್ಲೆಲ್ಲೂ ಇಷ್ಟು ಭವ್ಯವಾಗಿಲ್ಲ. ಹೊಯ್ಸಳ ಶೈಲಿಯ ಮತ್ತೊಂದು ವಿಶಿಷ್ಟ ಅಂಶವೆಂದರೆ ಮದನಿಕೆ ಅಥವಾ ಶಿಲಾಬಾಲಿಕಿಯರು. ನವರಂಗದ ಸುಂದರ ಕಂಬಗಳ ಬೋದಿಗೆಯ ಮೇಲೆ ಓರೆಯಾಗಿ ನಿಲ್ಲಿಸಲಾಗಿರುವ ಶಿಲಾಬಾಲಕಿಯರ ಬೆಡಗಿನ ಶಿಲ್ಪಗಳನ್ನು ಅಲಂಕಾರಕ್ಕಾಗಿಯೇ ಜೋಡಿಸಲಾಗಿದೆ. ಹೀಗೆ ಹೊಯ್ಸಳರ ಕಾಲದ ದೇವಾಲಯಗಳು ಕರ್ನಾಟಕದ ಹಲವು ಭಾಗಗಳಲ್ಲಿ ನಿರ್ಮಾಣಗೊಂಡಿದ್ದು ಅವರ ಕಾಲದ ಸಾಂಸ್ಕೃತಿಕ ವೈಭವವನ್ನು ಬಿಂಬಿಸುತ್ತವೆ.

೪. ವಿಜಯನಗರದ ಕಾಲ :-

ಇಡೀ ದಕ್ಷಿಣ ಭಾರತಕ್ಕೆ ಧಾರ್ಮಿಕ ರಕ್ಷಣೆಯನ್ನು ನೀಡಿದ ಮಧ್ಯಕಾಲೀನ ಕರ್ನಾಟಕದ ಒಂದು ಸಾಮ್ರಾಜ್ಯ ವಿಜಯನಗರ. ಎಲ್ಲಾ ಕಲೆಗಳಂತೆ ವಾಸ್ತುಶಿಲ್ಪ, ಶಿಲ್ಪಗಳೂ ಈ ಸಾಮ್ರಾಜ್ಯದಡಿಯಲ್ಲಿ ಪೋಷಣೆಯನ್ನು ಪಡೆದವು. ದಕ್ಷಿಣಭಾರತದ ಉತ್ತರಭಾಗದಲ್ಲಿ ಚಾಲುಕ್ಯರ, ಕಾಕತೀಯರ ಮತ್ತು ಹೊಯ್ಸಳರ ಪರಂಪರೆಯನ್ನು ಮುಂದುವರೆಸಿದರು.[೫೧] ಇವರ ಕಾಲದ ದೇವಾಲಯ ವಾಸ್ತುಶೈಲಿಯನ್ನು ವಿಜಯನಗರ ವಾಸ್ತುಶೈಲಿ ಎಂದೇ ಪ್ರಸಿದ್ಧಿ ಪಡೆದಿದೆ. ಈ ಕಾಲದ ದೇವಾಲಯಗಳು ಇಡೀ ದಕ್ಷಿಣ ಭಾರತದಲ್ಲೆಲ್ಲಾ ಹರಡಿಕೊಂಡಿವೆ. ಹೊಸದಾಗಿ ದೇವಾಲಯಗಳನ್ನು ಕಟ್ಟಿಸಿದಂತೆಯೇ ಹಳೆಯ ದೇವಾಲಯಗಳನ್ನು

ಜೀರ್ಣೋದ್ಧಾರಗೊಳಿಸುವುದಕ್ಕೂ ಮತ್ತು ಅವುಗಳನ್ನು ವಿಸ್ತರಿಸುವುದಕ್ಕೂ ಈ ಸಾಮ್ರಾಜ್ಯ ಹೆಚ್ಚು ಗಮನವನ್ನುಕೊಟ್ಟಿತ್ತು. ದ್ರಾವಿಡ ಮತ್ತು ಹೊಯ್ಸಳ ಶೈಲಿಗಳ ಸುಂದರ ಸಂಯೋಜನೆಯನ್ನು ರೂಢಿಸಿ, ರೂಪಿಸಿಕೊಂಡ ವಿಜಯನಗರ ಶಿಲ್ಪಿಗಳು ವಿಜಯನಗರ ಶೈಲಿಯೆಂದೂ ಪ್ರಸಿದ್ಧವೂ, ನವೀನವೂ, ಖಚಿತವೂ ಆದ ಶೈಲಿಯ ಪ್ರವರ್ತಕರಾದರು. ಅನೇಕ ಧಾರ್ಮಿಕ ವಿಧಿಗಳನ್ನು ದೇವಾಲಯದಲ್ಲಿಯೇ ನೆರವೇರಿಸಬೇಕಾದುದರಿಂದ ದೇವಾಲಯಗಳ ತಳವಿನ್ಯಾಸ ಹೆಚ್ಚು ವಿಸ್ತಾರವಾಗ ತೊಡಗಿದವು. ಇವರ ಕಾಲದ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ, ಪ್ರದಕ್ಷಿಣಾಪಥ, ಶುಕನಾಸಿ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳಿರುತ್ತವೆ. ನವರಂಗಕ್ಕೆ ಮೂರು ಪ್ರವೇಶ ದ್ವಾರಗಳಿದ್ದು ಪಕ್ಕದಲ್ಲಿರುವ ಪ್ರವೇಶ ದ್ವಾರಗಳು ನವರಂಗವನ್ನು ಚಿಕ್ಕದಾದ ಮಂಟಪಗಳಿಗೆ ಕೂಡಿಸಿರುತ್ತವೆ. ದೇವಾಲಯದ ಸುತ್ತಲೂ ನಿರ್ದಿಷ್ಟ ಪಡಿಸಿದ ದಿಕ್ಕಿನಲ್ಲಿ ಪರಿವಾರ ದೇವತೆಗಳಿಗಾಗಿ ಚಿಕ್ಕಗುಡಿಗಳಿರುತ್ತವೆ. ವಿಶಾಲವಾದ ಪ್ರಾಕಾರದ ಸುತ್ತಲೂ ಎತ್ತರವಾದ ಗೋಡೆಯಿದ್ದು ಪ್ರಾಕಾರವನ್ನು ಎರಡು ಅಥವಾ ಮೂರು ಕಡೆಗಳಿಂದ ಪ್ರವೇಶಿಸಲು ಪ್ರವೇಶ ಮಂಟಪಗಳು ಕಂಡುಬರುತ್ತವೆ.[೫೨] ಈ ಪ್ರವೇಶ ಮಂಟಪಗಳ ಮೇಲೆ ಎತ್ತರವಾದ ಗೋಪುರಗಳನ್ನು ಕಟ್ಟಿರುತ್ತಾರೆ. ಇದು ದೇವಾಲಯದ ವಾಸ್ತುಶಿಲ್ಪಕ್ಕೆ ವಿಜಯನಗರದ ಶಿಲ್ಪಿಗಳು ನೀಡಿದ ಬಹುದೊಡ್ಡ ಕೊಡುಗೆ. ಇದನ್ನೇ ರಾಜಗೋಪುರ ಎಂದೂ ಸಹ ಕರೆಯಲಾಗುತ್ತಿದೆ.[೫೩] ಕೆಲವು ಬಾರಿ ಇದರ ಎತ್ತರವೂ ೧೧ಅಂತಸ್ತು ಎತ್ತರವಾಗಿರುವುದುಂಟು. ಕಾಂಚೀಪುರದ ಏಕಾಂಬರನಾಥ ದೇವಾಲಯದ ಗೋಪುರವು ೧೧ ಅಂತಸ್ತು ಎತ್ತರವಾಗಿದೆ.[೫೪] ಈ ಕಾಲದ ಶಿಲ್ಪಿಗಳ ಇನ್ನೊಂದು ಕೊಡುಗೆಯೆಂದರೆ ಹಲವು ಮಂಟಪಗಳಿರುವಂತೆ ದೇವಾಲಯವನ್ನು ವಿಸ್ತರಿಸಿ ವಿನ್ಯಾಸಮಾಡಿದ್ದು. ವಿಜಯನಗರ ಕಾಲದಲ್ಲಿ ಗ್ರಾನೈಟ್ ಶಿಲೆಯನ್ನು ದೇವಾಲಯಗಳ ನಿರ್ಮಾಣಕ್ಕೆ ಬಳಸಿದರು. ಇವರ ಕಾಲದಲ್ಲಿ ಸ್ಥಳೀಯವಾಗಿ ಗ್ರಾನೈಟ್ ಶಿಲೆಗಳು ಅಪಾರ ಪ್ರಮಾಣದಲ್ಲಿ ದೊರೆಯುತ್ತಿದ್ದು ಅವುಗಳನ್ನು ಹೆಚ್ಚು ಬಳಸಿರುವುದನ್ನು ಕಾಣಬಹುದು. ಇದರಿಂದಾಗಿ ಹೊಯ್ಸಳ ಕಾಲದ ಸೂಕ್ಷ್ಮಕೆತ್ತನೆ ಮರೆಯಾಗಿ ಈ ಶಿಲೆಯಲ್ಲಿ ದೇವಾಲಯಗಳು ಹೆಚ್ಚು ವಿಸ್ತಾರವೂ ಹಾಗೂ ದೇವಾಲಯದ ಕಂಬಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಉಬ್ಬು ಶಿಲ್ಪಗಳು ಕಂಡುಬಂದವು. ವಿಜಯನಗರದ ದೇವಾಲಯಗಳು ಎತ್ತರವಾದ ಅಧಿಷ್ಠಾನವನ್ನು ಹೊಂದಿರುತ್ತವೆ. ಹಜಾರಾರಾಮ ಮತ್ತು ವಿಠ್ಠಲ ದೇವಾಲಯಗಳಲ್ಲಿಯು ಅಧಿಷ್ಠಾನ ವಿವಿಧ ಬಗೆಯ ಭಾಗಗಳನ್ನು ಹೊಂದಿದ್ದು ಕೈಬಳೆಯಾಕಾರದ ಬಾಗ ಎದ್ದು ಕಾಣುತ್ತದೆ.[೫೫] ವಿಜಯನಗರ ಕಾಲದ ಪ್ರದಕ್ಷಿಣಾಪಥ ಗರ್ಭಗೃಹದ ನೆಲೆಗಟ್ಟಿಗಿಂತ ಕೆಳಮಟ್ಟದಲ್ಲಿದ್ದು ಸೋಪಾನವೊಂದರ ಮೂಲಕ ಕೆಳಗಿಳಿಯುವ ವ್ಯವಸ್ಥೆ ಇರುತ್ತದೆ.[೫೬] ವಿಜಯನಗರ ದೇವಾಲಯಗಳ ಗರ್ಭಗೃಹ ಸಾಮಾನ್ಯವಾಗಿ ಚೌಕಾಗಿರುತ್ತವೆ. ಆದರೆ ನಿದ್ರಿಸುತ್ತಿರುವ ಅಥವಾ

ಒರಗಿರುವ ಭಂಗಿಯಲ್ಲಿರುವ ದೇವತೆಗಾಗಿ ದೇವಾಲಯವನ್ನು ಕಟ್ಟಿಸಿದಾಗ ಮಾತ್ರ ಗರ್ಭಗೃಹ ಸಮಾಚತುಷ್ಕೋಣಾಕಾರದಲ್ಲಿರುತ್ತದೆ.[೫೭] ಹಂಪಿ ಪರಿಸರದಲ್ಲಿರುವ ಅನಂತಶಯನ ಗುಡಿ ಇದಕ್ಕೆ ಉತ್ತಮ ಉದಾಹರಣೆ. ವಿಜಯನಗರ ಕಾಲದ ಕಂಬಗಳು ತುಂಬಾ ಕಲಾತ್ಮಕವಾಗಿ ಕಂಡು ಬರುತ್ತವೆ. ಇವರ ಕಾಲದ ಕಂಬಗಳಲ್ಲಿನ ಪುಷ್ಪಬೋದಿಗೆಯು ಹೆಚ್ಚುಬಾಗಿದ್ದು ಅಲಂಕೃತವಾಗಿರುತ್ತವೆ. ಅಲ್ಲದೇ ಸಂಗೀತ ಕಂಬಗಳು ಮತ್ತೊಂದು ಪ್ರಕಾರದ ಕಂಬಗಳಾಗಿವೆ. ಅಷ್ಟೇ ಅಲ್ಲದೇ ಅಶ್ವಸ್ಥಂಭ, ಯಾಳೀಸ್ತಂಭ ವಿವಿಧ ಮಾದರಿ ಸ್ತಂಭಗಳು ಇವರ ಕಾಲದಲ್ಲಿ ಬೆಳೆದು ಬಂದವು ವಿಜಯನಗರ ಕಾಲದ ಪ್ರಮುಖ ದೇವಾಲಯಗಳೆಂದರೆ ವಿರೂಪಾಕ್ಷ ದೇವಾಲಯ, ಹಜಾರಾರಾಮಸ್ವಾಮಿ ದೇವಾಲಯ, ಅನಂತಶಯನ ದೇವಾಲಯ, ವಿಜಯವಿಠ್ಠಲಸ್ವಾಮಿ ದೇವಾಲಯ ಇನ್ನೂ ಮುಂತಾದ ದೇವಾಲಯಗಳನ್ನು ಹೆಸರಿಸಬಹುದು.

ವಿಜಯನಗರ ಪಥನದ ನಂತರ ಕರ್ನಾಟಕದ ವಾಸ್ತುಶೈಲಿಯಲ್ಲಿ ಏಕತೆ ಉಳಿದುಬರಲಿಲ್ಲ ಉತ್ತರ ಭಾಗದಲ್ಲಿ ಬಹುಮನಿ ಮತ್ತು ಆದಿಲ್‌ಷಾಹಿಗಳ ಪ್ರಭಾವದಿಂದ ಹಿಂದೂ ಮುಸ್ಲಿಂ ಶೈಲಿಯು ಬಳಕೆಗೆ ಬಂದಿತು. ಉಳಿದ ಭಾಗಗಳಲ್ಲಿ ಪಾಳೆಯಗಾರರ ಆಳ್ವಿಕೆಯ ಅತಂತ್ರತೆ, ಅಧಿಕಾರದ ಹಸ್ತಾಂತರಗಳಿಂದ ದೇಗುಲ ವಾಸ್ತುಶೈಲಿಯು ಸರಳಗೊಂಡಿರುವುದನ್ನು ಕಾಣಬಹುದು. ಹೀಗೆ ಭಾರತವನ್ನು ಒಳಗೊಂಡಂತೆ ಅದರಲ್ಲೂ ಕರ್ನಾಟಕದ ದೇವಾಲಯ ವಾಸ್ತುಶಿಲ್ಪ ಶೈಲಿಯ ಬೆಳವಣಿಗೆಯನ್ನು ಸಂಕ್ಷಿಪ್ತವಾಗಿ ಗುರುತಿಸಬಹುದಾಗಿದೆ.

ಟಿಪ್ಪಣಿಗಳು

೧. ಅಪರ್ಣಕೂ.ಸ., ದೇವಾಲಯ ವಾಸ್ತುಶಿಲ್ಪ ಪರಿಚಯ, ಪು. ೧

೨. ಅದೇ, ಪು ೧

೩. ಅದೇ, ಪು.೧

೪. ಗೋಪಾಲ್ ಬಾ.ರಾ., ಕರ್ನಾಟಕದ ಕಲೆಗಳು (ವಾಸ್ತು), ಸಂಪುಟ-೪, ಪು.೧

೫. ಅದೇ, ಪು.೧-೨

೬. ಪ್ರಭಾಕರ್ ಎಂ.ಎನ್., ದೇವಾಲಯ ವಾಸ್ತುಚಂದ್ರಿಕೆ, ಪು.೧-೨

೭. ಗೋಪಾಲ್ ಬಾ.ರಾ. ಪೂರ್ವೋಕ್ತ ಪು.೧

೮. ಅದೇ, ಪು.೧

೯. ರಮೇಶ ನಾಯಕ., ವಾಸ್ತು ಮತ್ತು ಮೂರ್ತಿಶಿಲ್ಪ, ಕರುಗೋಡು (ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-೧), ಬಾಲಸುಬ್ರಹ್ಮಣ್ಯ (ಸಂ)., ಪು.೮೮

೧೦. ಸುರೇಶ ಕೆ.ಎಂ. ಮತ್ತು ಇತರರು., ಕರ್ನಾಟಕ ದೇವಾಲಯ ಕೋಶ:ಕೊಪ್ಪಳ ಜಿಲ್ಲೆ, ಪು.೮

೧೧. ಜ್ಞಾನಾನಂದ ಜಿ. ಶಿಲ್ಪಾದರ್ಶ, ಸಂಪುಟ –೨, ಪು. ೭

೧೨. ಸುರೇಶ ಕೆ.ಎಂ. ಮತ್ತು ಇತರರು, ಪುರ್ವೋಕ್ತ, ಪು. ೯

೧೩. ಜ್ಞಾನಾನಂದ ಜಿ., ಪುರ್ವೋಕ್ತ, ಪು. ೧೬

೧೪. ಅದೇ, ಪು.೧೬

೧೫. ಅದೇ, ಪು.೨೩

೧೬. ಅದೇ, ಪು.೩೯

೧೭. ಅದೇ, ಪು.೮೯

೧೮. ಅದೇ, ಪು.೮೮–೮೯

೧೯. ಸುರೇಶ ಕೆ.ಎಂ., ಮತ್ತು ಇತರರು, ಪುರ್ವೋಕ್ತ, ಪು ೧೫

೨೦. ಜ್ಞಾನಾನಂದ ಜಿ., ಪೂರ್ವೋಕ್ತ, ಪು. ೯೮

೨೧. ತಿಪ್ಪೇರುದ್ರಸ್ವಾಮಿ ಹೆಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೫೩೪

೨೨. ಸುರೇಶ ಕೆ.ಎಂ. ಮತ್ತು ಇತರರು, ಪೂರ್ವೋಕ್ತ, ಪು. ೧೫

೨೩. ರಾಜಶೇಖರ್ ಎಸ್. ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಪು. ೬

೨೪. ಅದೇ, ಪು.೮

೨೫. ರಘುನಾಥಭಟ್ ಎಚ್.ಆರ್., ಆದಿಕದಂಬರ ವಾಸ್ತುಶಿಲ್ಪಕಲೆ, ಶಿಲ್ಪಕಲಾ ಪ್ರಪಂಚ, ತಿಪ್ಪೇಸ್ವಾಮಿ ಪಿ.ಆರ್.(ಪ್ರ.ಸಂ)., ಪು.೧೪೭–೧೪೮.

೨೬. ರಾಜಶೇಖರ್ ಎಸ್., ಪೂರ್ವೋಕ್ತ, ಪು.೧೫–೧೭

೨೭. ತಿಪ್ಪೇರುದ್ರಸ್ವಾಮಿ ಹೆಚ್., ಪುರ್ವೋಕ್ತ, ಪು.೫೩೪

೨೮. ರಾಜಶೇಖರ್ ಎಸ್., ಪೂರ್ವೋಕ್ತ, ಪು.೧೨–೧೩

೨೯. ಸುರೇಶ್ ಕೆ.ಎಂ. ಮತ್ತು ಇತರರು ಪೋರ್ವೋಕ್ತ, ಪು.೧೭

೩೦. ಶಿಲಾಕಾಂತ ಪತ್ತಾರ, ಬಾದಾಮಿ, ಪು.೧೩

೩೧. ಅದೇ, ಪು.೨೭

೩೨. ರಾಜಶೇಖರ್ ಎಸ್., ಪೂರ್ವೋಕ್ತ, ಪು.೩೦

೩೩. ಶಿಲಾಕಾಂತ ಪತ್ತಾರ., ಪೂರ್ವೋಕ್ತ, ಪು. ೧೫

೩೪. ಅದೇ, ಪು.೩

೩೫. ರಾಜಶೇಖರ್ ಎಸ್., ಪೂರ್ವೋಕ್ತ, ಪು.೯೩

೩೬. ಅದೇ, ಪು.೯೧

೩೭. ಅದೇ, ಪು.೯೩

೩೮. ಅದೇ, ಪು.೯೯

೩೯. ಅದೇ ಪು.೧೦೩

೪೦. ಅದೇ ಪು.೧೧೧-೧೧೨

೪೧. ಜ್ಞಾನಾನಂದ ಜಿ., ಪೂರ್ವೋಕ್ತ, ಪು.೧೬೫

೪೨. ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಪರಂಪರೆ, ಪು.೩೯-೪೦

೪೩. ರಾಜಶೇಖರ್ ಎಸ್., ಪೂರ್ವೋಕ್ತ, ಪು.೧೨೫-೧೨೯

೪೪. ಜ್ಞಾನಾನಂದ ಜಿ., ಪೂರ್ವೋಕ್ತ, ಪು.೧೬೫

೪೫. ರಾಜಶೇಖರ್ ಎಸ್., ಪೂರ್ವೋಕ್ತ, ಪು.೧೩೨

೪೬. ಅದೇ, ಪು.೧೩೩

೪೭. ಅದೇ, ಪು.೧೩೪

೪೮. ಅದೇ, ಪು.೧೪೦

೪೯. ಜ್ಞಾನಾನಂದ ಜಿ., ಪೂರ್ವೋಕ್ತ, ಪು.೧೬೬

೫೦. ರಾಜಶೇಖರ್ ಎಸ್., ಪೂರ್ವೋಕ್ತ, ಪು.೧೫೧-೧೫೨

೫೧. ಅದೇ, ಪು.೧೯೭

೫೨. ರಾಜಶೇಖರ್ ಎಸ್., ಪೂರ್ವೋಕ್ತ, ಪು.೧೭೪

೫೩. ಜ್ಞಾನಾನಂದ ಜಿ., ಪುರ್ವೋಕ್ತ, ಪು.೧೯೮

೫೪. ಅದೇ, ಪು.೧೯೮

೫೫. ರಾಜಶೇಖರ್, ಎಸ್., ಪೂರ್ವೋಕ್ತ, ಪು.೧೭೭

೫೬. ಅದೇ, ಪು.೧೭೬

೫೭. ಅದೇ, ಪು.೧೭೬.

ಅಧ್ಯಾಯ ೪

ಹೊಸದುರ್ಗ ಪರಿಸರದ ದೇವಾಲಯಗಳು

೪.೧. ಶೈವ ದೇವಾಲಯಗಳು

೪.೨. ವೈಷ್ಣವ ದೇವಾಲಯಗಳು

೪.೩. ಶಾಕ್ತ ದೇವಾಲಯಗಳು

ಅಧ್ಯಾಯ ೪

ಹೊಸದುರ್ಗ ಪರಿಸರದ ದೇವಾಲಯಗಳು:

ದೇವಾಲಯಗಳು ಚರಿತ್ರೆಯ ರಚನೆಗೆ ಸಹಾಯಕವಾಗಬಲ್ಲ ಬಹುಮುಖ್ಯ ಪುರಾತತ್ವೀಯ ಆಕರಗಳು. ಇವುಗಳ ಅಧ್ಯಯನದಿಂದ ಆಯಾ ಪರಿಸರದ ಮಾನವನ ಚರಿತ್ರೆ ಹಾಗು ಅವನ ಕಾಲದ ವಿಭಿನ್ನ ಸಂಸ್ಕೃತಿಯ ಪರಿಚಯ ನಮಗೆ ಆಗುತ್ತದೆ. ಜೊತೆಗೆ ಆಯಾ ದೇವಾಲಯಗಳ ಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಅವುಗಳ ರಚನೆಯ ವಿಶಿಷ್ಟತೆ ಅಂದಿನ ವಾಸ್ತುಶಿಲ್ಪಿಗಳ ಕುಶಲತೆ, ತಾಂತ್ರಿಕ ಜ್ಞಾನ, ಅವರ ಕಲಾಭಿರುಚಿ, ಅದಕ್ಕೆ ನೀಡಿದ್ದ ಪ್ರಾಧಾನ್ಯತೆ ಮುಂತಾದ ಹತ್ತುಹಲವು ಸಂಗತಿಗಳನ್ನು ದೇವಾಲಯಗಳ ಅಧ್ಯಯನದಿಂದ ತಿಳಿಯಬಹುದಾಗಿದೆ.

ಈ ದೃಷ್ಟಿಯಿಂದ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕು "ಪ್ರಾಚೀನ ದೇವಾಲಯಗಳಿ"ಗೆ ಸಂಬಂಧಿಸಿದಂತೆ ಕಣಜವೆಂದೇ ಹೇಳಬೇಕು. ಅರೆ ಮಲೆನಾಡು ಪ್ರಾಂತ್ಯವಾಗಿರುವ ಈ ಭಾಗದಲ್ಲಿ ಹಲವು ಪ್ರಬಲ ಹಾಗು ಚಿಕ್ಕ ಪುಟ್ಟ ಅರಸುಮನೆತನಗಳ ಚರಿತ್ರೆ ಹಾಗೂ ಸಂಸ್ಕೃತಿಯ ಕುರುಹುಗಳೊಂದಿಗೆ ಅವುಗಳನ್ನು ಪ್ರತಿಬಿಂಬಿಸುವ ಸ್ಮಾರಕಗಳಲ್ಲಿ ದೇವಾಲಯಗಳು ಸಹ ಬಹುಮುಖ್ಯವಾಗಿವೆ. ಹೊಸದುರ್ಗ ತಾಲ್ಲೂಕು ಪರಿಸರದಲ್ಲಿ ಸಹಸ್ರ ಸಂಖ್ಯೆಯ ಪ್ರಾಚೀನ ದೇವಾಲಯಗಳು ಉಳಿದು ಬಂದಿವೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಹಾಕಿಕೊಂಡ ವ್ಯಾಪ್ತಿಗೆ ಅನುಗುಣವಾಗಿ ಅಂದರೆ ಪ್ರಾಚೀನ ಆಡಳಿತ ವಿಭಾಗಗಳಾದ ನಿರ್ಗುಂದನಾಡು ಮತ್ತು ಬಾಗೂರು ಸೀಮೆಯ ಹಲವು ಗ್ರಾಮಗಳನ್ನು ಒಳಗೊಂಡಂತೆ ಹಾಗೂ ಹೊಸದುರ್ಗ ನಗರವನ್ನು ಒಳಗೊಂಡಂತೆ ಇರುವ ಕಸಬಾ ಹೋಬಳಿಯಲ್ಲಿ ಕ್ಷೇತ್ರ ಕಾರ್ಯದ ಮೂಲಕ ಕಂಡು ಬಂದಿರುವ ಪ್ರಾಚೀನ ದೇವಾಲಯಗಳನ್ನು ಮಾತ್ರ ಅಧ್ಯಯನ ಮಾಡಲಾಗಿದೆ.

ಹೊಸದುರ್ಗ ಪರಿಸರದಲ್ಲಿ ರಾಷ್ಟ್ರಕೂಟರ ಶೈಲಿಯ ದೇವಾಲಯದಿಂದ ಹಿಡಿದು ಪಾಳೆಯಗಾರರ ಶೈಲಿಯ ದೇವಾಲಯಗಳವರೆಗೂ ಕಾಣಬಹುದು ಇವುಗಳಲ್ಲಿ ಬಹುಮುಖ್ಯವಾಗಿ ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗು ವಿಜಯನಗರೋತ್ತರ ಕಾಲದ ದೇವಾಲಯಗಳೇ ಹೆಚ್ಚು ಎಂದು ಹೇಳಬಹುದಾಗಿದೆ. ಕಲ್ಯಾಣ ಚಾಲುಕ್ಯರ ಆಳ್ವಿಕೆಯ

ಒಂದು ಭಾಗವಾಗಿದ್ದ ಚಿತ್ರದುರ್ಗ ಜಿಲ್ಲೆಯಲ್ಲಿ ಅವರ ಸಾಮಂತರಾಗಿದ್ದ ನೊಳಂಬರು, ಹೊಯ್ಸಳರು ಕೆಲಕಾಲ ಆಳ್ವಿಕೆ ನಡೆಸುತ್ತಿದ್ದರು ಎಂಬುದು ಸರ್ವವಿಧಿತ. ಕರ್ನಾಟಕವನ್ನು ಕ್ರಿ.ಶ. ೧೦-೧೨ನೇ ಶತಮಾನದವರೆಗೆ ಆಳಿದ ಕಲ್ಯಾಣ ಚಾಲುಕ್ಯ ರಾಜವಂಶವು ಕರ್ನಾಟಕದ ಕಲಾ ಪ್ರಪಂಚಕ್ಕೆ ನೀಡಿದ ಕೊಡುಗೆ ಅತ್ಯಮೂಲ್ಯವಾಗಿದೆ. ಡಾ.ಎಸ್.ನಾಗರಾಜುರವರ ಅಭಿಪ್ರಾಯದಂತೆ ಕಲ್ಯಾಣ ಚಾಲುಕ್ಯ ಸಂಪ್ರದಾಯದ ವಾಸ್ತು ಮತ್ತು ಶಿಲ್ಪಗಳು ದಕ್ಷಿಣ ಭಾರತದ ಕಲೆಯ ಪರಂಪರೆಯಲ್ಲಿ ನೂತನ ಮಾರ್ಗವನ್ನು ಆರಂಭಿಸಿದವು. ಶೆಟ್ಟರ್‌ರವರು 'ಹೊಯ್ಸಳ ವಾಸ್ತುಶಿಲ್ಪ'ದ ಬಗೆಗೆ ತಿಳಿಸುತ್ತಾ ಒಂದೆಡೆಯಲ್ಲಿ - "ವರದಾ ಮತ್ತು ವೇದಾವತಿ ನದಿಗಳ ನಡುವಿನ ಭಾಗವಾದ ಅಂದರೆ ಇಂದಿನ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳ ಪ್ರದೇಶದಲ್ಲಿ ಗಮನಿಸಿದರೆ ನಮಗೆ ಚಾಲುಕ್ಯ ಮತ್ತು ಹೊಯ್ಸಳ ವಾಸ್ತುಶಿಲ್ಪಗಳು ಬೆಳೆದು ಬಂದ ಹಂತವನ್ನು ಗುರುತಿಸಲು ಸುಳಿಹುಗಳು ದೊರೆಯುತ್ತವೆ" ಎಂದಿದ್ದಾರೆ.[೧] ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದು, ಹೊಯ್ಸಳರು, ಚಾಲುಕ್ಯರ ವಾಸ್ತುಶೈಲಿಯಲ್ಲೇ ನಿರ್ಮಿಸಿರುವುದನ್ನು, ಚಿತ್ರದುರ್ಗ ಜಿಲ್ಲೆಯ ಕೆಲವು ದೇವಾಲಯಗಳ ಶೈಲಿಯು ಸ್ಪಷ್ಟಪಡಿಸುತ್ತದೆ.[೨] ಅದರಲ್ಲಿ ಹೊಸದುರ್ಗ ಪರಿಸರ ಬಹುಮುಖ್ಯವಾಗಿದೆ. ಕಾರಣ ವೇದಾವತಿ ನದಿ ಪರಿಸರದಲ್ಲೇ ಇದು ಇರುವುದು. ಹಾಗಾಗಿ ಕಲ್ಯಾಣ ಚಾಲುಕ್ಯ ವಾಸ್ತುಶೈಲಿಯ ಹಲವು ದೇವಾಲಯಗಳನ್ನು ಕಾಣಬಹುದು. ಅಂತಹ ದೇವಾಲಯಗಳಲ್ಲಿ ಬಹುಮುಖ್ಯವಾಗಿ ನೀರಗುಂದದ ಸಿದ್ದೇಶ್ವರ ಮತ್ತು ಚನ್ನಕೇಶವ ದೇವಾಲಯ, ಚಿಕ್ಕಯಗಟಿ ಗ್ರಾಮದ ಈಶ್ವರ ದೇವಾಲಯ, ಕಲ್ಲೇದೇವರಕಟ್ಟೆಯ ಕಲ್ಲೇಶ್ವರ ದೇವಾಲಯ ಇನ್ನೂ ಮುಂತಾದ ದೇವಾಲಯಗಳು ಕಲ್ಯಾಣ ಚಾಲುಕ್ಯ ವಾಸ್ತುಶೈಲಿಯಲ್ಲಿ ನಿರ್ಮಾಣಗೊಂಡಿವೆ. ಈ ದೇವಾಲಯಗಳನ್ನು ಬಹುತೇಕ ಹಸಿರು ಮಿಶ್ರಿತ ಬಳಪದ ಕಲ್ಲನ್ನು ಬಳಸಿ ನಿರ್ಮಿಸಲಾಗಿದೆ. ದೇವಾಲಯಗಳ ರಂಗಮಂಟಪ ಮತ್ತು ಇತರ ಭಾಗಗಳಲ್ಲಿ ಕರಿಯ ಮೆದುಗಲ್ಲು (ಕ್ಲೋರೋಟಿಕ್ ಸಿಸ್ಟ್)ನ್ನು ಉಪಯೋಗಿಸಿ ಕಂಬಗಳು ಮತ್ತು ಇತರೆ ರಚನೆ ಮಾಡಿರುವುದನ್ನು ಕಾಣಬಹುದು. ಅಲ್ಲದೆ ಕೆಲವೆಡೆ ಗ್ರಾನೈಟ್ ಶಿಲೆಯಿಂದ ದೇವಾಲಯಗಳನ್ನು ವಿಸ್ತಾರ ಮಾಡಿರುವುದು ಕಂಡು ಬರುತ್ತದೆ.

ಅದೇ ರೀತಿ ಹೊಸದುರ್ಗ ಪರಿಸರದಲ್ಲಿ ಹೊಯ್ಸಳ ಕಾಲದ ಅಥವಾ ಅವರ ಕಲೆ, ವಾಸ್ತು ಶಿಲ್ಪ, ಮೂರ್ತಿಶಿಲ್ಪಗಳಿಂದ ಕೂಡಿದ ಕೆಲವು ದೇವಾಲಯಗಳನ್ನು ಕಾಣಬಹುದು. ಕ್ರಿ.ಶ. ಹನ್ನೊಂದನೆ ಶತಮಾನದಿಂದ ಹದಿನಾಲ್ಕನೆಯ ಶತಮಾನದವರೆಗೆ ಕರ್ನಾಟಕವಲ್ಲದೆ ದಕ್ಷಿಣ ಭಾರತದ ಬಹುಭಾಗದಲ್ಲಿ ಆಳಿದ ಇವರು ತಮ್ಮ ರಾಜಕೀಯ ಚರಿತ್ರೆ, ಸಾಂಸ್ಕೃತಿಕವಾದ ಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ ಇತರ ಅಂಶಗಳಿಂದಾಗಿ ಕರ್ನಾಟಕದ ಚರಿತ್ರೆಯಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸಿದ್ದಾರೆ. ಹೊಸದುರ್ಗ ಪರಿಸರದಲ್ಲಿ ಹೊಯ್ಸಳರು ಆಳಿದ್ದಾರೆ. ಹೊಯ್ಸಳ

ರಾಜರು ಈ ಪ್ರದೇಶವನ್ನು ಅನೇಕ ವರ್ಷಕಾಲ ಆಳ್ವಿಕೆ ನಡೆಸಿದರ (ಕ್ರಿ.ಶ. ೧೧೧೬ ರಿಂದ ೧೩೪೬) ಫಲವಾಗಿ ಇಲ್ಲಿ ಅವರ ನೂರಾರು ಶಿಲಾ ಶಾಸನಗಳು ಹಾಗು ವಾಸ್ತುಶಿಲ್ಪ ಕಟ್ಟಡಗಳು ಕಂಡು ಬಂದಿವೆ. ಹಿಂದೆಯೆ ಇದ್ದ ವಾಸ್ತುಶಿಲ್ಪ ಕಟ್ಟಡಗಳಿಗೆ ಅನೇಕ ದಾನ ದತ್ತಿಗಳನ್ನು ಕೊಟ್ಟು ಅವನ್ನು ಊರ್ಜಿತಗೊಳಿಸಿ ತಮ್ಮದೇ ಆದ ಕಲೆಯ ಕೊಡುಗೆಯನ್ನು ಕೊಡಮಾಡಿದ್ದಾರೆ.[೩] ಬಾಗೂರಿನ ಚನ್ನಕೇಶವ ದೇವಾಲಯವು ಹೊಯ್ಸಳರ ಕಾಲದಲ್ಲಿ ವಿಸ್ತಾರವಾಯಿತು. ನೀರಗುಂದದ ಸಿದ್ದೇಶ್ವರ ದೇವಾಲಯವು ಕಲ್ಯಾಣಿ ಚಾಲುಕ್ಯರ ಕೊನೆಯ ಕಾಲ ಹಾಗೂ ಹೊಯ್ಸಳರ ಪ್ರಾರಂಭದ ಕಾಲದ್ದಾಗಿದ್ದು, ಹೊಯ್ಸಳರ ಅರಸರಿಂದ ಹಲವು ದಾನದತ್ತಿಗಳನ್ನು ಪಡೆದ ದೇವಾಲಯವಾಗಿದೆ.[೪] ಇಷ್ಟೇ ಅಲ್ಲದೆ ಈ ಪರಿಸರದಲ್ಲಿ ಹಲವಾರು ಹೊಯ್ಸಳರ ಕಾಲದ ಹಾಗೂ ಅವರ ವಾಸ್ತುಶಿಲ್ಪದ ದೇವಾಲಯಗಳನ್ನು ಕಾಣಬಹುದು.[೫]

ಹೊಸದುರ್ಗ ಪರಿಸರವನ್ನು ಒಳಗೊಂಡಂತೆ ಇಡೀ ಚಿತ್ರದುರ್ಗ ಜಿಲ್ಲೆ ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟ ಪ್ರದೇಶವೆಂದು ಈಗಾಗಲೇ ಹೇಳಲಾಗಿದೆ. ಹೊಸದುರ್ಗ ಪರಿಸರದಲ್ಲಿ ಅವರ ಕಾಲದ ಶಾಸನಗಳು ದೇವಾಲಯಗಳು ಹಾಗೂ ಇತರೆ ಪ್ರಾಚ್ಯ ಅವಶೇಷಗಳನ್ನು ಕಾಣಬಹುದು. ಅವರ ಕಾಲದಲ್ಲಿ ಈ ಪರಿಸರದಲ್ಲಿ ಗ್ರಾನೈಟ್ ಶಿಲೆಯಿಂದಲೇ ಹಲವು ದೇವಾಲಯಗಳನ್ನು ನಿರ್ಮಿಸಿದ್ದಾರೆ ಅದರೊಂದಿಗೆ ಈ ಮುಂಚಿನ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದ್ದಾರೆ. ಅಂತಹ ದೇವಾಲಯಗಳು ಬಾಗೂರು, ನೀರಗುಂದ ಮತ್ತು ಇತರೆ ಪ್ರದೇಶಗಳಲ್ಲಿ ಕಾಣಬಹುದು. ತದನಂತರ ವಿಜಯನಗರ ನಂತರದಲ್ಲಿ ಪಾಳೆಯಗಾರರ ಕಾಲದಲ್ಲಿ ಸಾಕಷ್ಟು ದೇವಾಲಯಗಳು ಹೊಸದುರ್ಗ ಪರಿಸರದಲ್ಲಿ ನಿರ್ಮಾಣಗೊಂಡಿವೆ. ಅದರೊಂದಿಗೆ ಈ ಮುಂಚಿನ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿರುವ ಬಗ್ಗೆ ಹಲವು ಶಾಸನಗಳು ಮಾಹಿತಿ ನೀಡುತ್ತವೆ. ಪಾಳೆಯಗಾರರ ಕಾಲದಲ್ಲಿ ದೇವಾಲಯಗಳ ನಿರ್ಮಾಣಕ್ಕೆ 'ಗ್ರಾನೈಟ್ ಶಿಲೆ'ಯನ್ನು ಬಳಸಲಾಗಿದೆ. ಅವುಗಳ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ರಂಗಮಂಟಪ, ಹಾಗು ಮುಖಮಂಟಪಗಳ ರಚನೆಗಳನ್ನು ಕಾಣಬಹುದು. ಅದರೊಂದಿಗೆ ದೇವಾಲಯಗಳ ವಾಸ್ತುಶೈಲಿಯು ಸರಳವಾಗಿರುವುದನ್ನು ಗಮನಿಸಬಹುದು. ಹೊಸದುರ್ಗ ನಗರವನ್ನು ಒಳಗೊಂಡಂತೆ ಹೊಸದುರ್ಗ ಪರಿಸರದ ಬಹುಭಾಗಗಳಲ್ಲಿ ಪಾಳೆಯಗಾರರ ಕಾಲದ ಅಥವಾ ವಿಜಯನಗರೋತ್ತರ ಶೈಲಿಯ ಹಲವು ದೇವಾಲಯಗಳನ್ನು ಕಾಣಬಹುದು. ಹೊಸದುರ್ಗ ಪರಿಸರದಲ್ಲಿ ಕ್ಷೇತ್ರ ಕಾರ್ಯದಲ್ಲಿ ಕಂಡು ಬಂದ ಪ್ರಾಚೀನ ದೇವಾಲಯಗಳನ್ನು ಧಾರ್ಮಿಕ ದೃಷ್ಟಿಕೋನದಿಂದ ಶೈವದೇವಾಲಯಗಳು, ವೈಷ್ಣವ ದೇವಾಲಯಗಳು ಹಾಗೂ ಶಾಕ್ತ ದೇವಾಲಯಗಳು ಎಂದು ವರ್ಗೀಕರಿಸಿಕೊಂಡು ಈ ಕೆಳಗಿನಂತೆ ಆ ದೇವಾಲಯಗಳಿಗೆ ಸಂಬಂಧಿಸಿದಂತೆ ಹಲವು ಸಂಗತಿಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ.

೪.೧ ಶೈವ ದೇವಾಲಯಗಳು.

೪.೧.೧ ಸಿದ್ದೇಶ್ವರ ದೇವಾಲಯ.

ಹೊಸದುರ್ಗದಿಂದ ಸು. ೧೩ ಕಿ.ಮೀ. ಅಂತರದಲ್ಲಿ ಅಜ್ಜಂಪುರ ರಸ್ತೆಯಲ್ಲಿ ನೀರಗುಂದ ಎಂಬ ಪ್ರಾಚೀನ ಗ್ರಾಮದಲ್ಲಿ ಸಿದ್ದೇಶ್ವರ ದೇವಾಲಯವಿದೆ. ಅತ್ಯಂತ ಪ್ರಾಚೀನ ಚಾರಿತ್ರಿಕ ಅವಶೇಷಗಳನ್ನು ಹೊಂದಿರುವ ನೀರಗುಂದವು ಶಾಸನಸ್ಥ ಸ್ಥಳವಾಗಿದೆ.[೬] ಇದನ್ನು ನೀರುಗುಂದ, ನೀರ್ಗುಂದನಾಡು, ಉದ್ಭವ ಸೋಮನಾಥಪುರ ಎಂದು ಕರೆಯಲಾಗಿದೆ.[೭] ನೀಲಾವತಿಪಟ್ಟಣ, ನೀಲಾವತಿ ನಗರ ಎಂಬ ಹೆಸರುಗಳು ಸಹ ಇದ್ದವೆಂದು ಜಾನಪದ ಕಥೆಗಳಲ್ಲಿ ಹೇಳಲಾಗಿದೆ.[೮] ಇಲ್ಲಿನ ಸಿದ್ಧೇಶ್ವರ ದೇವಾಲಯವು ಶೈವ ದೇವಾಲಯವಾಗಿದ್ದು ಇದನ್ನು ಕಪ್ಪು ಮಿಶ್ರಿತ ಹಸಿರು ಮೆದುಗಲ್ಲನ್ನು ಬಳಸಿ ನಿರ್ಮಿಸಲಾಗಿದೆ. ಇದು ಸು ಕ್ರಿಶ. ೧೦-೧೧ ನೇ ಶತಮಾನದಲ್ಲಿ ನಿರ್ಮಿತಗೊಂಡಿದ್ದು ಹೊಯ್ಸಳರ ಆರಂಭ ಕಾಲದ ಅಂದರೆ ಕಲ್ಯಾಣ ಚಾಲುಕ್ಯರ ವಾಸ್ತುಶೈಲಿಯನ್ನು ಬಿಂಬಿಸುತ್ತದೆ.[೯] ಇದು ತ್ರಿಕೂಟಾಚಲವಾಗಿದ್ದು ಪೂರ್ವಾಭಿಮುಖವಾಗಿದೆ. ಇದರ ತಲವಿನ್ಯಾಸದಲ್ಲಿ ಮುಖ್ಯ ಗರ್ಭಗೃಹ, ಅಂತರಾಳ, ಬಲಭಾಗದ ಗರ್ಭಗೃಹ, ಎಡಭಾಗದ ಗರ್ಭಗೃಹ, ರಂಗಮಂಟಪ ಹಾಗು ಮುಖಮಂಟಪವನ್ನು ಒಳಗೊಂಡಿದೆ. ಈ ದೇವಾಲಯವು ಜಗತಿಯ ಮೇಲಿಲ್ಲಾ ಹಾಗು ನಕ್ಷತ್ರಾಕಾರದ ಅಧಿಷ್ಠಾನವನ್ನು ಹೊಂದಿಲ್ಲ. ಆದರೆ ಆಯತಾಕಾರದ ತಲವಿನ್ಯಾಸವುಳ್ಳ ಈ ದೇವಾಲಯದ ಭಿತ್ತಿಯು ಹಿಂಚಾಚು, ಮುಂಚಾಚುಗಳಿಂದ ಕೂಡಿದೆ. ಕುಡ್ಯ ಸ್ತಂಭಗಳಿಂದಾದ ಭಿತ್ತಿಯಲ್ಲಿ ಕೋಷ್ಠಗಳು ಇವೆ. ಮುಖ್ಯ ಗರ್ಭಗೃಹದ ಭಿತ್ತಿಯ ಮುಖ್ಯ ಪಾರ್ಶ್ವದ ಕೋಷ್ಠದಲ್ಲಿ ಮಹೇಶ್ವರ ಶಿಲ್ಪ, ಬಲಪಾರ್ಶ್ವದ ಕೋಷ್ಠದಲ್ಲಿ ವಿಷ್ಣುವಿನ ಶಿಲ್ಪ, ಎಡಭಾಗದ ಕೋಷ್ಠದಲ್ಲಿ ಬ್ರಹ್ಮನ ಶಿಲ್ಪವಿದೆ. ಇದರ ಅದಿಷ್ಠಾನದಲ್ಲಿ ಉಪಾನ, ಜಗತಿ, ಪದ್ಮ, ತ್ರಿಪಟ್ಟಿ ಕುಮುದ, ದಂತ ಪಂಕ್ತಿ, ಕಪೋತ ಭಾಗಗಳಿವೆ.

ಮುಖ್ಯ ಗರ್ಭಗೃಹದ ಬಾಗಿಲವಾಡವು ಅರ್ಧಗಂಭ ಏಕಶಾಖೆಯನ್ನು ಹೊಂದಿದೆ. ಇದರ ಇಕ್ಕೆಲಗಳಲ್ಲಿ ಪದ್ಮಪುಷ್ಪ ಹಾಗು ಲತಾ ಸುರುಳಿ ಅಲಂಕರಣವನ್ನು ಕಡೆಯಲಾಗಿದೆ. ಸಾಧಾರಣ ಲಲಾಟ ಬಿಂಬವಿದ್ದು ಕೆಳಮುಖದಲ್ಲಿ ಪದ್ಮಪುಷ್ಪದ ಅಲಂಕರಣವಿದೆ. ಗರ್ಭ ಗೃಹದಲ್ಲಿ ಪದ್ಮಪೀಠದ ಮೇಲೆ ಸು. ೩ ಅಡಿ ಎತ್ತರದ ಶಿವಲಿಂಗವಿದೆ. ಅಂತರಾಳದ ಬಾಗಿಲುವಾಡವು ಪಂಚಶಾಖೆಗಳಿಂದ ಕೂಡಿದೆ. ಅದರಲ್ಲಿ ರತ್ನಶಾಖೆ, ವಜ್ರಶಾಖೆ, ಪದ್ಮಶಾಖೆ, ಲತಾಸುರಳಿ, ಸಂಭ ಶಾಖೆಗಳಿವೆ. ಇವುಗಳ ಮಧ್ಯದಲ್ಲಿ ಜಾಲಂಧ್ರದ ರಚನೆ ಇದ್ದು ಅದರಲ್ಲಿ ವಾದ್ಯಗಾರ್ತಿಯರು ಹಾಗು ನೃತ್ಯಗಾರ್ತಿಯರ ಶಿಲ್ಪಗಳಿವೆ. ಈ ಬಾಗಿಲವಾಡವು

ಸಾಧಾರಣವಾಗಿದೆ. ಬಾಗಿಲವಾಡದ ಪಾದದಲ್ಲಿ ಶೈವ ದ್ವಾರಪಾಲಕರಿದ್ದು ಅವರು ತ್ರಿಶೂಲ, ಢಮರು, ಗಧಾ ಹಾಗೂ ಅಭಯ ಮುದ್ರೆಗಳನ್ನು ಹೊಂದಿರುವರು.

ನವರಂಗದ ಮಧ್ಯದಲ್ಲಿ ನಾಲ್ಕು ಕಲಾತ್ಮಕವಾದ ಗಂಟಾಕಾರದ ಕಂಭಗಳಿವೆ. ತಿರುಗಣೆಯಿಂದ ಮಾಡಿರುವ ಈ ಕಂಬಗಳ ರಚನೆಯಲ್ಲಿ ಪೀಠ, ಕಾಂಡದಲ್ಲಿ ಚೌಕ, ದಂಡ, ಘಂಟಾ, ಫಲಕ ಹಾಗೂ ಭೋದಿಗೆಯನ್ನು ಕಾಣಬಹುದು. ನವರಂಗದಲ್ಲಿ ೯ ಅಂಕಣಗಳಿದ್ದು ಪ್ರತಿಯೊಂದು ಅಂಕಣದಲ್ಲೂ ವಿವಿಧ ಮಾದರಿ ಭುವನೇಶ್ವರಿಗಳಿವೆ. ಮಧ್ಯಭಾಗದ ಭುವನೇಶ್ವರಿಯು ಹೆಚ್ಚು ಅಲಂಕೃತದಿಂದ ಕೂಡಿದೆ. ಇದರ ಸುತ್ತಲೂ ಇರುವಂತಹ ಪಟ್ಟಿಕೆಯಲ್ಲಿ ವಜ್ರಮಾಧರಿಯ ಅಲಂಕರಣವನ್ನು ಮಾಡಲಾಗಿದೆ. ನಂತರದ ಪಟ್ಟಿಯಲ್ಲಿ ಅಷ್ಟದಿಕ್ಪಾಲಕರನ್ನು ಕೆತ್ತಿದ್ದು ಅದಕ್ಕೆ ಹೊಂದಿಕೊಂಡಂತೆ ವಿವಿಧ ದೇವತೆಗಳ ಉಬ್ಬುಶಿಲ್ಪಗಳಿವೆ. ಅದರ ಮೇಲಿನ ಭಾಗದಲ್ಲಿ ಕಮಲದ ದಳಗಳು ಕೆಳಭಾಗದಲ್ಲಿ ಇಳಿಬಿದ್ದಂತೆ ಸುಂದರವಾಗಿ ಕೆತ್ತಲಾಗಿದೆ. ಮಧ್ಯದಲ್ಲಿ ಬರುವ ಬಾಗಿದ ಬೋಧಿಗೆ ಪ್ರಸ್ತುತ ಕಂಡು ಬರುವುದಿಲ್ಲ. ಅದರ ಮೂಲೆಗಳಲ್ಲಿ ವ್ಯಾಳ ಹಾಗು ಇತರೆ ಉಬ್ಬುಶಿಲ್ಪಗಳಿವೆ. ದೇವಾಲಯದ ಮೇಲಿನ ಪ್ರತಿಯೊಂದು ತೊಲೆಯ ಮೇಲೆ ಕಮಲದ ಕೆತ್ತನೆ ಇದೆ.

ದೇವಾಲಯದ ಬಲಭಾಗದ ಗರ್ಭಗುಡಿಯಲ್ಲಿ ವಿಷ್ಣುವಿನ ಮೂರ್ತಿಶಿಲ್ಪವಿದೆ. ಇದರ ಬಾಗಿಲುವಾಡದಲ್ಲೂ ಪಂಚಶಾಖೆಗಳು ಇರುವುದನ್ನು ಕಾಣಬಹುದು. ಬಾಗಿಲುವಾಡದ ಪಾದದಲ್ಲಿ ವೈಷ್ಣವ ದ್ವಾರಪಾಲಕರ ಕೆತ್ತನೆಗಳಿವೆ. ಲಲಾಟಬಿಂಬವು ಸಾಧಾರಣವಾದ ಅದೇ ರೀತಿ ಎಡಭಾಗದ ಗರ್ಭಗೃಹದಲ್ಲಿ ವೇಣುಗೋಪಾಲನ ಮೂರ್ತಿಶಿಲ್ಪವಿದೆ. ಇದರ ಬಾಗಿಲವಾಡವು ಪಂಚಶಾಖೆಗಳಿಂದ ಕೂಡಿದೆ. ಲಲಾಟಬಿಂಬವು ಅಲಂಕಾರದಿಂದ ಕೂಡಿದೆ. ತೋರಣವು ಸಾಧಾರಣವಾಗಿದ್ದು ಬಾಗಿದ ಭೋದಿಗೆ ಇದೆ. ನವರಂಗದ ಮುಂದಿನ ಭಾಗವು ಎರಡು ಸ್ವತಂತ್ರ ಕಂಬಗಳಿಂದ ಕೂಡಿದ ಮುಖಮಂಟಪವಿದೆ. ಮುಖಮಂಟಪದ ಛತ್ತಿನಲ್ಲಿ ೯ ಅಂಕಣವಿರುವ ವಿತಾನಗಳಿವೆ. ಅದರಲ್ಲಿ ಪದ್ಮಗಳ ಸುಂದರ ಕೆತ್ತನೆಗಳಿವೆ.

ಈ ದೇವಾಲಯದ ಮೇಲ್ಭಾಗದ ಪ್ರಾಚೀನವಾದ ಶಿಖರ ಭಾಗ ಇಲ್ಲ. ಆದರೆ ಆಧುನಿಕವಾಗಿ ದುರಸ್ಥಿಗೊಳಿಸಿದ್ದಾರೆ. ಕ್ರಿ.ಶ. ೧೧೬೫ರ ಹೊಯ್ಸಳ ಕಾಲದ ಶಾಸನದಲ್ಲಿ ಈ ದೇವಾಲಯಕ್ಕೆ ಕೆಲವೊಂದು ದಾನದತ್ತಿಗಳನ್ನು ನೀಡಿರುವ ವಿಷಯವಿದೆ.[೧೦] ದೇವಾಲಯದ ಆವರಣದಲ್ಲಿ ಎರಡು ಶಾಸನಗಳು, ವೀರಭದ್ರ, ಭೈರವ ಹಾಗು ಮೂರು ವೀರಗಲ್ಲು ಶಿಲ್ಪಗಳಿವೆ.

೪.೧.೨ ರಾಮೇಶ್ವರ ದೇವಾಲಯ.

ನೀರಗುಂದದಲ್ಲಿರುವ ಪ್ರಮುಖ ಹಾಗೂ ಪ್ರಾಚೀನ ಶೈವ ದೇವಾಲಯಗಳಲ್ಲಿ ರಾಮೇಶ್ವರ ದೇವಾಲಯವು ಬಹುಮುಖ್ಯವಾದುದು. ಇದು ಕಲ್ಯಾಣ ಚಾಲುಕ್ಯರಿಗಿಂತಲೂ ಹಿಂದಿನದು, ಬಹುಶಃ ರಾಷ್ಟ್ರಕೂಟರ ಕಾಲದ್ದೆಂದು ಹೇಳಬಹುದು. ದೇವಾಲಯವು ಕೆಂಪು ಮರಳುಗಲ್ಲಿನಲ್ಲಿ ನಿರ್ಮಾಣಗೊಂಡಿದೆ. ಇದು ಪೂರ್ವಾಭಿಮುಖವಾಗಿದೆ. ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ರಂಗಮಂಟಪ, ಗೂಢಮಂಟಪ ಹಾಗೂ ತೆರೆದ ಸಭಾ ಮಂಟಪವನ್ನು ಕಾಣಬಹುದು. ಗರ್ಭಗೃಹದಲ್ಲಿ ಪ್ರಸ್ತುತ ಮೂರ್ತಿ ಇಲ್ಲ. ದೇವಾಲಯದ ರಂಗಮಂಟಪದಲ್ಲಿ ನಾಲ್ಕು ಸ್ವತಂತ್ರವಾದ ಕಂಬಗಳಿವೆ. ಅವುಗಳ ರಚನೆಯಲ್ಲಿ ಪೀಠ, ಕಾಂಡ ಭಾಗದಲ್ಲಿ ಚಚ್ಚೌಕದ ಒಂದು ಭಾಗ ೧೬ ಮುಖದ ಗಂಟಾಮಾದರಿ ರಚನೆ, ಕುಂಭ, ಚಚ್ಚೌಕದ ಫಲಕ, ಸಾಧಾರಣ ಬೋಧಿಗೆ ಕಾಣಬಹುದು. ಈ ಮಾದರಿ ಕಂಬಗಳನ್ನು ದೇವಾಲಯದ ತೆರೆದ ಸಭಾ ಮಂಟಪದಲ್ಲೂ ಕಾಣಬಹುದು.

ರಂಗಮಂಟಪ ಹಾಗೂ ತೆರೆದ ಸಭಾಮಂಟಪದ ನಡುವಿನ ನಾಲ್ಕು ಕಂಬಗಳ ಛತ್ತಿನ ಭಾಗದಲ್ಲಿ ಸುಂದರ ಭುವನೇಶ್ವರಿ ಕೆತ್ತನೆ ಇದೆ. ಸಭಾಮಂಟಪದಲ್ಲಿ ಸುತ್ತಲೂ ಜಗುಲಿ ಇದ್ದು ಅದಕ್ಕೆ ಹೊಂದಿಕೊಂಡಂತೆ ಕಕ್ಷಾಸನವಿದೆ. ದೇವಾಲಯದ ಗರ್ಭಗೃಹದ ಮೇಲೆ ಕದಂಬನಾಗರ ಶಿಖರವಿದೆ. ಗ್ರೀವ ಹಾಗು ಸ್ಥೂಪಿಯ ರಚನೆಗಳು ಇವೆ. ಅದರೊಂದಿಗೆ ಸುಖನಾಸಿಯು ಇದೆ. ದೇವಾಲಯದ ಅಧಿಷ್ಠಾನದ ಭಾಗ ಹಾಗು ದೇವಾಲಯವನ್ನು ಪ್ರವೇಶಿಸಲು ಇರುವ ಸೋಪಾನ ಇವುಗಳು ಪ್ರಸ್ತುತ ಮಣ್ಣಿನಲ್ಲಿ ಹೂತು ಹೋಗಿವೆ.

೪.೧.೩ ಕಲ್ಲೇಶ್ವರ ದೇವಾಲಯ

ಕಲ್ಲೇಶ್ವರ ದೇವಾಲಯವು ನೀರಗುಂದದಿಂದ ಸಾಣೇಹಳ್ಳಿಗೆ ಹೋಗುವ ಅಡ್ಡಮಾರ್ಗದಲ್ಲಿ ೧ ಕಿ.ಮೀ. ದೂರದ ತೋಟದಲ್ಲಿ ಕಂಡು ಬರುತ್ತದೆ. ಸ್ಥಳೀಯರಿಂದ ಕಲ್ಲೇದೇವರಕಟ್ಟೆ ಎಂದು ಕರೆಯಲ್ಪಡುವ ಈ ನೆಲೆಯ ಕಲ್ಲೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು ಇದು ಕಟ್ಟಡ ದೇವಾಲಯವಾಗಿದೆ. ಈ ದೇವಾಲಯದ ಬಹುಭಾಗದ ಗ್ರಾನೈಟ್ ಹಾಗೂ ಕೆಲವು ಕಡೆ ಹಸಿರು ಮಿಶ್ರಿತ ಬಳಪದ ಶಿಲೆಯಿಂದ ನಿರ್ಮಾಣಗೊಂಡಿದೆ. ಇದು ದ್ವಿಕೂಟಾಚಲವಾಗಿದೆ. ದೇವಾಲಯದ ತಳವಿನ್ಯಾಸದಲ್ಲಿ ಮುಖ್ಯಗರ್ಭಗೃಹ, ಅಂತರಾಳ, ಎಡಭಾಗದ ಗರ್ಭಗೃಹ, ರಂಗಮಂಟಪ ಹಾಗು ಮಂಟಪವನ್ನು ಒಳಗೊಂಡಿದೆ. ದೇವಾಲಯದ ಎದುರಿಗೆ ಎತ್ತರವಾದ ದೀಪದ ಸ್ತಂಭವಿದೆ.

ದೇವಾಲಯದ ಮುಖ್ಯಗರ್ಭಗೃಹದ ದ್ವಾರವು ಸಾಧಾರಣವಾದ ಏಕಶಾಖೆಯನ್ನು ಹೊಂದಿದೆ. ಲಲಾಟಬಿಂಬವು ಸಾಧಾರಣವಾಗಿದೆ ಮುಖ್ಯಗರ್ಭಗೃಹದಲ್ಲಿ ಸು. ೧ ಅಡಿ ಎತ್ತರದ ಪಾಣಿವಟ್ಟದ ಮೇಲೆ ಶಿವಲಿಂಗವಿದೆ. ಇದನ್ನು ಕಪ್ಪು ಶಿಲೆಯಲ್ಲಿ ಕಡೆಯಲಾಗಿದೆ. ನಂತರ ಅಂತರಾಳದ ದ್ವಾರವು ಸಾಧಾರಣವಾದ ಅರ್ಧಗಂಬ ದ್ವಿಶಾಖೆಗಳನ್ನು ಸಾಧಾರಣ ಲಲಾಟಬಿಂಬವನ್ನು ಹೊಂದಿದೆ. ದ್ವಾರದ ಪಾದದಲ್ಲಿ ಶೈವ ದ್ವಾರಪಾಲಕರ ಉಬ್ಬು ಕೆತ್ತನೆಗಳಿವೆ. ಅಂತರಾಳದಲ್ಲಿ ನಂದಿ ಶಿಲ್ಪವಿದೆ. ಎಡಭಾಗದ ಗರ್ಭಗೃಹದ ದ್ವಾರದಲ್ಲಿ ಅರ್ಧಗಂಭ ದ್ವಿಶಾಖೆಗಳ ರಚನೆಗಳನ್ನು ಕಾಣಬಹುದು. ಈ ಗರ್ಭಗೃಹದಲ್ಲಿ ಸು ೫ ಅಡಿ ಎತ್ತರದ ವೀರಭದ್ರ ಮೂರ್ತಿಶಿಲ್ಪವಿದೆ. ರಂಗಮಂಟಪದಲ್ಲಿ ೪ ಕಲಾತ್ಮಕವಾದ ಸ್ತಂಭಗಳನ್ನು ಹೊಂದಿದೆ. ಈ ಸ್ತಂಭಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕದ ಭಾಗ, ಎಂಟು ಮುಖದ ಕೋನ, ಕುಂಭ, ಫಲಕ, ಹಾಗೂ ಸಾಧಾರಣ ಭೋಧಿಗೆಯನ್ನು ಕಾಣಬಹುದು. ಇದೇ ಛತ್ತುವಿನಲ್ಲಿ ಪದ್ಮ ಪುಷ್ಪಗಳಿಂದ ಕೂಡಿದ ಭುವನೇಶ್ವರಿ ಇದೆ. ರಂಗ ಮಂಟಪದಲ್ಲಿ ನಂದಿ, ಗಣೇಶ ಹಾಗು ಶೂಲಬ್ರಹ್ಮಶಿಲ್ಪಗಳನ್ನು ಕಾಣಬಹುದು. ತದನಂತರದ ಮಂಟಪವು ಸ್ವತಂತ್ರವಾದ ನಾಲ್ಕು ಕಂಬಗಳನ್ನು ಹೊಂದಿದ್ದು ವಿಶಾಲವಾಗಿದೆ.

ದೇವಾಲಯದ ಹೊರ ಭಾಗದಲ್ಲಿ ಒಂದು ವೀರಗಲ್ಲು ಇದೆ. ಇದರಲ್ಲಿರುವ ಶಾಸನ ಪಾಠ ಬಹುತೇಕವಾಗಿ ಹಾಳಾಗಿದೆ. ಇದರ ರಚನೆ ಹಾಗು ಲಿಪಿ ಲಕ್ಷಣದ ಆಧಾರದ ಮೇಲೆ ಬಿ. ರಾಜಶೇಖರಪ್ಪ ಅವರು ಇದು ಪ್ರಾರಂಭ ಹೊಯ್ಸಳರ ಕಾಲದ ವೀರಗಲ್ಲು ಎಂದು ಹೇಳಿದ್ದಾರೆ. ಹೀಗೆ ದೇವಾಲಯದ ವಾಸ್ತು ಲಕ್ಷಣ ಇತರೆ ಅವಶೇಷಗಳ ಆಧಾರದ ಮೇಲೆ ಕಲ್ಯಾಣ ಚಾಲುಕ್ಯರ ಕೊನೆಯ ಕಾಲದ ದೇವಾಲಯವೆಂದು ಹೇಳಬಹುದು.

೪.೧.೪ ಈಶ್ವರ ದೇವಾಲಯ

ಹೊಸದುರ್ಗ ತಾಲ್ಲೂಕಿನ ಪ್ರಾಚೀನ ಬಾಗೂರು ಗ್ರಾಮದಿಂದ ಮುಂದೆ ೧೦ ಕಿ.ಮೀ. ದೂರದಲ್ಲಿ ಚಿಕ್ಕಯ್ಯಗಟ್ಟಿ ಎಂಬ ಗ್ರಾಮವಿದೆ. ಇಲ್ಲಿನ ಪ್ರಾಚೀನ ಸುಂದರ ದೇವಾಲಯ ಈಶ್ವರ ದೇವಾಲಯ. ಪ್ರಾರಂಭ ಹೊಯ್ಸಳ ವಾಸ್ತುಶೈಲಿಯನ್ನು ಹೊಂದಿರುವ ಈ ದೇವಾಲಯವು ಕ್ರಿ.ಶ. ೧೧ನೇ ಶತಮಾನದ್ದಾಗಿದೆ.[೧೧] ದೇವಾಲಯವು ಪಶ್ಚಿಮಾಭಿಮುಖವಾಗಿದೆ. ದೇವಾಲಯದ ತಲ ವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗು ರಂಗ ಮಂಟಪವನ್ನು ಕಾಣಬಹುದು. ಚಚ್ಚಾಕವಾದ ಗರ್ಭಗೃಹದಲ್ಲಿ ಸು ೪ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹದ ಛತ್ತಿನಲ್ಲಿ ಸುಂದರವಾದ ಪದ್ಮಪುಷ್ಪದ ಅಲಂಕರಣವಿದೆ. ಗರ್ಭಗೃಹದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಇದರ ಬಾಗಿಲುವಾಡದಲ್ಲಿ ಅರ್ಧಗಂಭ ದ್ವಿಶಾಖೆಗಳನ್ನು ಕಾಣಬಹುದು. ಸು ೪ ಅಡಿ

ವಿಸ್ತೀರ್ಣದ ಅಂತರಾಳವಿದೆ. ಅಂತರಾಳದ ಬಾಗಿಲುವಾಡವು ನಾಲ್ಕು ಶಾಖೆಗಳನ್ನು ಹೊಂದಿದೆ. ಅದರಲ್ಲಿ ಅರ್ಧಗಂಭಶಾಖೆ, ಲತಾಸುರುಳಿ ಶಾಖೆಗಳು ಹಾಗು ವಜ್ರಶಾಖೆಯನ್ನು ಗುರುತಿಸಬಹುದು. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಉಬ್ಬು ಶಿಲ್ಪವಿದೆ.

ವಿಶಾಲವಾದ ರಂಗಮಂಟಪವಿದ್ದು ಅದರಲ್ಲಿ ಕಲಾತ್ಮಕವಾದ ತಿರುಗಣೆಯಿಂದ ಮಾಡಿದ ಗಂಟಾಕಾರದ ಕಂಬಗಳನ್ನು ಕಾಣಬಹುದು. ಇವುಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಒಂದು ಚಚ್ಚೌಕ ಭಾಗ, ದಂಡಾ, ಗಂಟಾ, ಘಟ, ಚಚ್ಚಾಕ ಫಲಕ, ಸಾಧಾರಣ ಬೋಧಿಗೆಯನ್ನು ಕಾಣಬಹುದು. ಇದೇ ಭಾಗವಲ್ಲಿ ಭಿತ್ತಿನಲ್ಲಿ ಭುವನೇಶ್ವರಿ ಇದೆ. ರಂಗಮಂಟಪ ಮಧ್ಯದಲ್ಲೆ ಸು ೩ ಅಡಿಗಳ ಎತ್ತರದಲ್ಲಿ ನಂದಿ ವಿಗ್ರಹವಿದೆ. ರಂಗಮಂಟಪ ಬಾಗಿಲುವಾಡವು ಅರ್ಧಗಂಭ ದ್ವಿಶಾಖೆಗಳನ್ನು ಹೊಂದಿದೆ. ಪಾದದಲ್ಲಿ ಶೈವ ದ್ವಾರಪಾಲಕರಿದ್ದು ತ್ರಿಶೂಲ, ಢಮರು, ಗದೆ ಹಾಗೂ ಅಭಯ ಮುದ್ರೆಗಳನ್ನು ಹೊಂದಿರುವರು. ರಂಗಮಂಟಪದಲ್ಲಿ ಹೊಯ್ಸಳ ಮೂರ್ತಿಶಿಲ್ಪಗಳಾದ ಚನ್ನಕೇಶವ, ಚಾಮುಂಡೇಶ್ವರಿ, ಗಣೇಶ ಮುಂತಾದವುಗಳನ್ನು ಕಾಣಬಹುದು. ಈ ಮೂರ್ತಿಗಳನ್ನು ಹಸಿರು ಶಿಲೆಯಲ್ಲಿ ತುಂಬಾ ಅಲಂಕಾರಿಕವಾಗಿ ಕಂಡರಿಸಲಾಗಿದೆ.

ಈ ದೇವಾಲಯದ ಅದಿಷ್ಠಾನವು ಉಪಾನ, ಜಗತಿ, ಪದ್ಮ, ಕುಮುದ, ದಂತಪಂಕ್ತಿ, ಕಪೋತ ಭಾಗಗಳನ್ನು ಒಳಗೊಂಡಿದೆ. ದೇವಾಲಯದ ಭಿತ್ತಿಯು ಹಿಂಚಾಚು ಮುಂಚಾಚುಗಳಿಂದ ಕೂಡಿದ್ದು, ಕುಂಡ್ಯ ಸ್ತಂಭಗಳಿಂದ ಆಗಿದೆ. ಮೇಲೆ ಕಪೋತವಿದ್ದು ಅದರ ಮೇಲೆ ಇತ್ತೀಚಿನ ಆಧುನಿಕ ಶಿಖರವನ್ನು ನಿರ್ಮಿಸಲಾಗಿದೆ. ದೇವಾಲಯದ ಹಿಂಭಾಗದಲ್ಲಿ ಒಂದು ಮಂಟಪದ ಮಾದರಿಯ ರಚನೆ ಇದ್ದು ಅದರಲ್ಲಿ ಹೊಯ್ಸಳ ಶೈಲಿಯ ಭೈರವ ಮೂರ್ತಿಶಿಲ್ಪವಿದೆ. ದೇವಾಲಯದ ಮುಂಭಾಗದಲ್ಲಿ ಕ್ರಿ.ಶ. ೧೦೯೪ರ ಹೊಯ್ಸಳರ ಪ್ರತಾಪ ಚಕ್ರವರ್ತಿಯ ಶಾಸನವಿದೆ.[೧೨] ಇದರಲ್ಲಿ ಧರ್ಮೇಶ್ವರ ದೇವರಿಗೆ ಮಾವಿನ ಕೆರೆಯ ತೋಟವನ್ನು ಇತರೆ ಅನೇಕ ತೆರಿಗೆಯ ದತ್ತಿಗಳನ್ನು ನೀಡಿರುವುದನ್ನು ಕಾಣಬಹುದು.[೧೩] ಬಹುಶಃ ಆ ಧರ್ಮೇಶ್ವರ ದೇವರು ಇದೇ ದೇವಾಲಯದ ಈಶ್ವರ ದೇವರಿರಬೇಕು.

೪.೧.೫. ಕಲ್ಲೇದೇವರ ದೇವಾಲಯ

ಹೊಸದುರ್ಗದಿಂದ ಬಾಗೂರು ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಬರುವ ಶಿವನೇಕಟ್ಟೇ ಗ್ರಾಮದಲ್ಲಿ ಪ್ರಾಚೀನ ಕಲ್ಲೇದೇವರ ದೇವಾಲಯ ಇದೆ. ಗ್ರಾನೈಟ್ ಶಿಲೆಯಿಂದ ನಿರ್ಮಾಣವಾಗಿರುವ ಇದು ಪೂರ್ವಾಭಿಮುಖವಾಗಿದೆ. ಇದರ ತಲವಿನ್ಯಾಸದಲ್ಲಿ ಗರ್ಭಗೃಹ ಹಾಗೂ ಅಂತರಾಳ ಭಾಗಗಳು ಮಾತ್ರ ಇದ್ದು ಮುಂದಿನ ಭಾಗಗಳು ನಶಿಸಿ ಹೋಗಿವೆ.

ಅದರೊಂದಿಗೆ ದೇವಾಲಯದ ಅದಿಷ್ಠಾನ ಹಾಗೂ ಸೋಪಾನ ಭಾಗಗಳು ಮಣ್ಣಿನಲ್ಲಿ ಹೂತು ಹೋಗಿವೆ. ದೇವಾಲಯದ ಗರ್ಭಗೃಹ ಚಚ್ಚೌಕವಾಗಿದ್ದು, ಮೇಲಿನ ಭಾಗದಲ್ಲಿ ಕದಂಬನಾಗರ ಶೈಲಿಯ ಶಿಖರವಿದೆ. ಅದರೊಂದಿಗೆ ಸುಖನಾಸಿಯು ಇದೆ. ಗರ್ಭಗೃಹದಲ್ಲಿ ಸು ೪ ಅಡಿ ಎತ್ತರದ ಶಿವಲಿಂಗವಿದೆ. ಅಂತರಾಳದಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಂದಿ ಶಿಲ್ಪವಿದೆ. ಅಂತರಾಳದ ಹೊರಭಾಗದಲ್ಲಿ ಸೂಕ್ಷ್ಮಕೆತ್ತನೆಗಳಿಂದ ಹೆಚ್ಚು ಅಲಂಕೃತವಾಗಿರುವ ಹೊಯ್ಸಳಶೈಲಿಯ ಸುಮಾರು ೪ ಅಡಿ ಎತ್ತರದ ಕಪ್ಪು ಶಿಲೆಯ ನಂದಿಯಿದೆ. ಈ ದೇವಾಲಯ ಪ್ರಾಯಶಃ ಕಲ್ಯಾಣ ಚಾಲುಕ್ಯರ ಕೊನೆಯ ಕಾಲದ್ದು.

೪.೧.೬ ಕೋಡಿ ರಾಮಲಿಂಗೇಶ್ವರ ದೇವಾಲಯ

ಹೊಸದುರ್ಗದಿಂದ ಸು ೧೫ಕಿ.ಮೀ. ದೂರದಲ್ಲಿರುವ ಕಂಗುವಳ್ಳಿ ಗ್ರಾಮದಲ್ಲಿ ಕೋಡಿ ರಾಮಲಿಂಗೇಶ್ವರ ದೇವಾಲಯ ನೆಲೆಗೊಂಡಿದೆ. ಇಲ್ಲಿನ ಕೆರೆಯ ಕೋಡಿಯ ಭಾಗದಲ್ಲೇ ಇದು ಇರುವುದರಿಂದ ಇದಕ್ಕೆ ಕೋಡಿ ರಾಮಲಿಂಗೇಶ್ವರ ದೇವಾಲಯ ಎಂದು ಹೆಸರು ಬಂದಿದೆ. ಪೂರ್ವಾಭಿಮುಖವಾಗಿ ನೆಲೆಗೊಂಡಿರುವ ಈ ದೇವಾಲಯ ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ. ಇದು ಕ್ರಿ.ಶ. ೧೬-೧೭ನೇ ಶತಮಾನದ್ದಾಗಿದ್ದು ವಿಜಯನಗರೋತ್ತರ ಶೈಲಿಯಲ್ಲಿದೆ. ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ರಂಗಮಂಟಪ ಮತ್ತು ಸಭಾಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಸು ೨ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹದ ಬಾಗಿಲುವಾಡವು ಸಾಧಾರಣವಾದ ಏಕಶಾಖೆಯನ್ನು ಹೊಂದಿದೆ. ಅದರ ತೋರಣವು ಸಾಧಾರಣವಾಗಿದ್ದು ಅದರ ಭೋದಿಗೆಯು ಬಾಗಿದೆ. ಲಲಾಟಬಿಂಬವು ಸಾಧಾರಣವಾಗಿದೆ. ಅಂತರಾಳದ ಬಾಗಿಲುವಾಡವು ತ್ರಿಶಾಖೆಗಳನ್ನು ಹೊಂದಿದೆ. ಅವುಗಳಲ್ಲಿ ಲತಾಸುರುಳಿ ಶಾಖೆ, ವಜ್ರಶಾಖೆ, ಪುಷ್ಪಶಾಖೆಗಳನ್ನು ಕಾಣಬಹುದು.

ರಂಗಮಂಟಪದಲ್ಲಿ ನಾಲ್ಕು ಸ್ವತಂತ್ರವಾದ ಕಂಬಗಳಿವೆ. ಅವುಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕದ ಮೂರು ಭಾಗಗಳು ಇವೆ. ಕೆಳಗಿನ ಚಚ್ಚೌಕದ ಭಾಗದಲ್ಲಿ ನಾಗಬಂಧವಿದೆ. ಚಚ್ಚೌಕಗಳ ಮಧ್ಯೆ ಅಷ್ಟಪೈಲು ಹಾಗು ಹದಿನಾರು ಮುಖದ ಭಾಗಗಳು ಇವೆ. ನಂತರದಲ್ಲಿ ಮೇಲಿನ ಭಾಗದಲ್ಲಿ ಸಾಧಾರಣ ಭೋದಿಗೆಯಿದೆ. ಈ ಕಂಬಗಳ ಮೇಲೆ ವಿವಿಧ ಉಬ್ಬು ಶಿಲ್ಪಗಳಿವೆ. ರಂಗಮಂಟಪದ ಮಧ್ಯ ಎರಡು ನಂದಿ ಶಿಲ್ಪಗಳನ್ನು ಕಾಣಬಹುದು. ಅಲ್ಲದೆ ಮೇಲಿನ ಛತ್ತಿನಲ್ಲಿ ಕದಳಿ ಅಂಕಣದ ಸುಂದರ ಭುವನೇಶ್ವರಿ ಇದೆ. ರಂಗಮಂಟಪದ ಬಾಗಿಲುವಾಡವು ಏಕಶಾಖೆಯಿಂದ ಕೂಡಿದೆ. ಅದು ಲತಾ ಸುರುಳಿ ಶಾಖೆಯಾಗಿದೆ. ಈ

ಬಾಗಿಲುವಾಡದಲ್ಲಿ ಶೈವ ದ್ವಾರಪಾಲಕರಿದ್ದಾರೆ. ಅದರ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ.

ಸಭಾಮಂಟಪದಲ್ಲಿ ಸಹ ಸ್ವತಂತ್ರವಾದ ನಾಲ್ಕು ಕಂಬಗಳನ್ನು ಹೊಂದಿದ್ದು ಅವು ಸಹ ರಂಗಮಂಟಪದ ಕಂಬಗಳ ಮಾದರಿಯಲ್ಲಿವೆ. ಅವುಗಳ ಮೇಲೆ ವಿವಿಧ ಉಬ್ಬುಶಿಲ್ಪಗಳಿವೆ. ಸಭಾಮಂಟಪದ ಬಾಗಿಲುವಾಡವು ಏಕಶಾಖೆಯನ್ನು ಹೊಂದಿದ್ದು ಅದು ಅರ್ಧಗಂಭಶಾಖೆಯಾಗಿದೆ. ಲಲಾಟ ಬಿಂಬದಲ್ಲಿ ಶಿವಲಿಂಗ ಹಾಗು ಬದಿಗಳಲ್ಲಿ ನಂದಿಗಳಿರುವ ಉಬ್ಬು ಶಿಲ್ಪವಿದೆ. ದೇವಾಲಯದ ಎದುರಿಗೆ ಬೃಹತ್ತಾದ ದೀಪದ ಸ್ತಂಭವಿದೆ.

೪.೧.೭ ಭೀರಲಿಂಗೇಶ್ವರ ದೇವಾಲಯ

ಇದು ಪಾಳೆಯಗಾರರ ಕಾಲದ ದೇವಾಲಯವಾಗಿದ್ದು ಸು ಕ್ರಿ.ಶ. ೧೭ನೇ ಶತಮಾನದ್ದು. ಹೊಸದುರ್ಗದಿಂದ ಕಂಗುವಳ್ಳಿಗೆ ಹೋಗುವ ಮಧ್ಯದಲ್ಲಿ ಬೋಕಿಕೆರೆ ಎಂಬ ಗ್ರಾಮದಲ್ಲಿ ಕಂಡು ಬರುತ್ತದೆ. ಬೋಕಿಕೆರೆಯ ಹೊಯ್ಸಳರ ಕಾಲದಲ್ಲಿ ನೀರ್ಗುಂದನಾಡಿನ ಭಾಗವಾಗಿದ್ದಿತು.[೧೪]

'ಬೋಗಾರರ ಕೇರಿ' ಯಾಗಿದ್ದ ಈ ಸ್ಥಳಕ್ಕೆ ಈ ಹೆಸರು ಬಂದಿದೆ. ಕ್ರಿ.ಶ. ೧೭೪೩ರಲ್ಲಿ ಒಡೆದು ಹೋಗಿದ್ದ ಇಲ್ಲಿನ ಕೆರೆಯನ್ನು ಬೋಕಿಕೆರೆ ಗೌಡವಂಶಸ್ಥರು ದುರಸ್ತಿ ಮಾಡಿಸಿ ಹತ್ತಿರದ ಹೊಲಗದ್ದೆಗಳಿಗೆ ಸೌಕರ್ಯ ಮಾಡಿದ ಬಗ್ಗೆ ಬೋಕಿಕೆರೆ ಗೇಟಿನ ಬಳಿ ಇರುವ ಶಾಸನದಿಂದ ತಿಳಿಯುವುದು.[೧೫]

ದೇವಾಲಯವು ಪೂರ್ವಾಭಿಮುಖವಾಗಿ ನೆಲೆಸಿದ್ದು ಗ್ರಾನೈಟ್ ಶಿಲೆಯಲ್ಲಿ ನಿರ್ಮಾಣಗೊಂಡಿದೆ. ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ ಹಾಗು ಅಂತರಾಳ ಭಾಗಗಳಿವೆ. ಉಳಿದ ಭಾಗಗಳು ನಶಿಸಿಹೋಗಿವೆ. ಗರ್ಭಗೃಹ ಚಚ್ಚೌಕವಾಗಿದ್ದು ಇದರ ವಿಮಾನವು ಅಧುನಿಕವಾಗಿ ನಿರ್ಮಾಣವಾಗಿದೆ. ಗರ್ಭಗೃಹದ ಬಾಗಿಲುವಾಡವು ದ್ವಿಶಾಖೆಗಳಿಂದ ಕೂಡಿದ್ದು, ಒಂದು ವಜ್ರಶಾಖೆ ಮತ್ತೊಂದು ಲತಾಸುರುಳಿ ಶಾಖೆ ಎಂದು ಹೇಳಬಹುದು. ಬಾಗಿಲುವಾಡದ ಪಾದದಲ್ಲಿ ಶೈವ ದ್ವಾರಪಾಲಕರಿದ್ದು ಅವರು ತ್ರಿಶೂಲ, ಢಮರು, ಗದಾ ಹಾಗು ಅಭಯ ಮುದ್ರೆಗಳನ್ನು ಹೊಂದಿರುವರು ಗರ್ಭಗೃಹದಲ್ಲಿ ಪ್ರಸ್ತುತ ಯಾವುದೇ ಮೂರ್ತಿಶಿಲ್ಪಗಳಿಲ್ಲ.

ಅಂತರಾಳದ ಭಾಗವು ಸಾಧಾರಣವಾಗಿದ್ದು ಅದರ ಮುಂದೆ ಕೆಲವು ಕಂಬಗಳ ಅವಶೇಷಗಳಿವೆ. ಅವುಗಳ ಮೇಲೆ ಹಲವು ಉಬ್ಬು ಶಿಲ್ಪಗಳಿವೆ. ದೇವಾಲಯದ ಎದುರಲ್ಲೇ ಸು

೮ ಅಡಿ ಎತ್ತರದ ಪುರಾತನ ಗ್ರಾನೈಟ್ ಶಿಲೆಯ ದೀಪಸ್ತಂಭವಿದೆ. ಒಟ್ಟಾರೆ ಭೀರಲಿಂಗೇಶ್ವರ ದೇವಾಲಯವು ಪಾಳೆಯಗಾರರ ಕಾಲದ ಒಂದು ಅವಶೇಷವಾಗಿದೆ.

೪.೧.೮ ಕಲ್ಲೇಶ್ವರ ದೇವಾಲಯ

ಇದು ಹೊಸದುರ್ಗದ ಕಸಬಾ ಹೋಬಳಿಯ ಆನಿವಾಳ ಗ್ರಾಮದಲ್ಲಿ ಕಂಡು ಬರುವ ದೇವಾಲಯವಾಗಿದೆ. ಬಾಗೂರು ಬಳಿಯಿರುವ ಈ ಗ್ರಾಮಕ್ಕೆ ಹಿಂದಿನ ಕಾಲದಲ್ಲಿ 'ಆನೆವಾಲ' ಎಂಬ ಹೆಸರಿದ್ದಿತು. ನೀರುಗುಂದನಾಡಿಗೆ ಸೇರಿದ್ದ ಕಾಲದಲ್ಲಿ ಈ ಸ್ಥಳ ಆನೆಗಳನ್ನು ಕಟ್ಟುತ್ತಿದ್ದ ಸ್ಥಳವಾಗಿತ್ತು.[೧೬] ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗ್ರಾನೈಟ್ ಶಿಲೆಯಲ್ಲಿ ನಿರ್ಮಾಣವಾಗಿದೆ. ಈ ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗು ನವರಂಗವನ್ನು ಕಾಣಬಹುದು. ದೇವಾಲಯದ ಹೊರಭಾಗದ ರಚನೆಗಳು ಅಂದರೆ ಹೊರಗೋಡೆ ಹಾಗು ಗರ್ಭಗೃಹದ ಶಿಖರ ಇತ್ಯಾದಿಗಳನ್ನು ಆಧುನಿಕ ಶೈಲಿಯಲ್ಲಿ ಜೀರ್ಣೋದ್ಧಾರಗೊಳಿಸಲಾಗಿದೆ. ಆದರೆ ಒಳಭಾಗದ ರಚನೆಗಳು ಪ್ರಾಚೀನ ಶೈಲಿಯಲ್ಲೇ ಹಾಗೇ ಉಳಿದು ಬಂದಿವೆ. ದೇವಾಲಯವು ಪಾಳೆಯಗಾರರ ಶೈಲಿಯಲ್ಲಿದ್ದು ಕ್ರಿ.ಶ. ೧೬-೧೭ನೇ ಶತಮಾನದ್ದಾಗಿದೆ. ಗರ್ಭಗೃಹದಲ್ಲಿ ೨ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹದ ಛತ್ತಿನಲ್ಲಿ ಅಲಂಕೃತ ಭುವನೇಶ್ವರಿ ಇದೆ. ಗರ್ಭಗೃಹದ ಬಾಗಿಲುವಾಡವು ಅರ್ಧಗಂಭ ಏಕಶಾಖೆಯನ್ನು ಹೊಂದಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಉಬ್ಬುಶಿಲ್ಪವಿದೆ. ಅಂತರಾಳದ ಛತ್ತಿನಲ್ಲಿ ಭುವನೇಶ್ವರಿ ಕೆತ್ತನೆಯಿದೆ. ಅಂತರಾಳದಲ್ಲಿ ಒಂದು ಅಡಿ ಎತ್ತರದ ನಂದಿ ವಿಗ್ರಹವಿದೆ. ಅಂತರಾಳದ ಬಾಗಿಲುವಾಡವು ಗರ್ಭಗೃಹದ ಬಗಿಲುವಾಡದ ಯತಾ ಪ್ರಕಾರವಾಗಿದೆ.

ನವರಂಗವು ಸ್ವತಂತ್ರವಾದ ನಾಲ್ಕು ಕಂಬಗಳನ್ನು ಹೊಂದಿದೆ. ಇವುಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಎರಡು ಚಚ್ಚೌಕದ ರಚನೆಗಳನ್ನು ಅವುಗಳ ಮಧ್ಯೆ ಎಂಟುಕೋನ ಹಾಗು ಹದಿನಾರು ಕೋನಗಳ ರಚನೆಯನ್ನು ಕಾಣಬಹುದು. ಅವುಗಳ ಮೇಲೆ ಫಲಕ ನಂತರ ಸಾಧಾರಣ ಭೋದಿಗ ಇದೆ. ದೇವಾಲಯದ ಹೊರಭಾಗದಲ್ಲಿ ಸು ೬ ವೀರಗಲ್ಲುಗಳು ಇವೆ. ಒಂದು ವೀರಗಲ್ಲಿನಲ್ಲಿ ಮಾತ್ರ ಶಾಸನ ಉಳಿದಿದೆ. ಇದರಲ್ಲಿ ಹೇಳುವಂತೆ ಪ್ರಧಾನಿ ಶ್ರೀ ಬಯಣ್ಣನು ಆಳುತ್ತಿದ್ದಾಗ, ಶ್ರೀ ಮಸ್ನಾಳ್ ಪ್ರಭು ಆನೆವಾಳ ಹಳ್ಳಿಗೌಡ ಮತ್ತು ಬಯಿಚಂಣನ ಮಗ ಬೂಚಂಣ ಇವರು ಮರಣ ಹೊಂದಿದ ಬಗ್ಗೆ ತಿಳಿಸುತ್ತದೆ.

೪.೧.೯ ಈಶ್ವರ ದೇವಾಲಯ

ಅನಿವಾಳ ಗ್ರಾಮದ ಊರ ಮಧ್ಯಭಾಗದಲ್ಲಿ ಈಶ್ವರ ದೇವಾಲಯವಿದೆ. ಉತ್ತರಾಭಿಮುಖವಾಗಿರುವ ಈ ದೇವಾಲಯದ ರಚನೆಯು ಪಾಳೆಯಗಾರರ ಕಾಲದ್ದಾಗಿದೆ. ದ್ವಿಕೂಟವಾಗಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಮುಖ್ಯ ಗರ್ಭಗೃಹ, ಎಡಭಾಗದ ಗರ್ಭಗೃಹ, ನವರಂಗ ಹಾಗು ಮುಖಮಂಟಪವನ್ನು ಕಾಣಬಹುದು. ಮುಖ್ಯಗರ್ಭಗೃಹದಲ್ಲಿ ಸು ೫ ಅಡಿ ಎತ್ತರದ ಸುಂದರ ಕಪ್ಪು ಶಿಲೆಯ ಶಿವಲಿಂಗವಿದ್ದು ತುಂಬಾ ಆಕರ್ಷಣೀಯವಾದದ್ದು. ಎಡಭಾಗದ ಗರ್ಭಗೃಹದಲ್ಲಿ ೪ ೧/೨ ಅಡಿ ಎತ್ತರದ ವೀರಭದ್ರ ಮೂರ್ತಿಶಿಲ್ಪವಿದೆ. ಇದು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿದೆ. ಇದರ ಬಾಗಿಲುವಾಡದಲ್ಲಿ ದ್ವಿಶಾಖೆಗಳಿದ್ದು ವಜ್ರಶಾಖೆ, ಪದ್ಮಶಾಖೆಗಳನ್ನು ಕಾಣಬಹುದು. ಲಲಾಟ ಬಿಂಬದಲ್ಲಿ ಬಸವನ ಉಬ್ಬು ಶಿಲ್ಪವಿದೆ. ನವರಂಗದಲ್ಲಿ ಸು ೪ ಅಡಿ ಎತ್ತರದ ಸುಂದರ ನಂದಿ ಇದೆ. ನವರಂಗದ ಒಂದು ಕಂಬದ ಚಚ್ಚೌಕದ ಭಾಗದಲ್ಲಿ ಗಜಲಕ್ಷ್ಮೀ ಹಾಗು ಭಕ್ತನ ಶಿಲ್ಪವಿದೆ. ಮುಖ ಮಂಟಪದಲ್ಲಿ ಎರಡು ಸ್ವತಂತ್ರ ಕಂಬಗಳಿಂದ ಕೂಡಿದೆ. ಇಲ್ಲಿನ ಪ್ರಾಚೀನ ಮೂರ್ತಿಶಿಲ್ಪಗಳು ಕಲ್ಯಾಣ ಚಾಲುಕ್ಯ ಹಾಗು ಹೊಯ್ಸಳ ಕಾಲದ್ದಾಗಿದ್ದು, ಆಗಿನ ದೇವಾಲಯ ಸಂಪೂರ್ಣ ನಶಿಸಿಹೋದ ಮೇಲೆ ಪಾಳೆಯಗಾರರ ಕಾಲದಲ್ಲಿ ಪುನರ್‌ನಿರ್ಮಾಣ ಮಾಡಿದಂತೆ ತೋರುತ್ತದೆ.

೪.೧.೧೦ ವೀರಭದ್ರ ದೇವಾಲಯ

ವೀರಭದ್ರ ದೇವಾಲಯವು ಹೊಸದುರ್ಗ ನಗರದಲ್ಲಿ ಕೆಲ್ಲೋಡು ಗ್ರಾಮಕ್ಕೆ ಹೋಗುವ ಮಾರ್ಗದಲ್ಲಿ ಕಂಡು ಬರುತ್ತದೆ. ದೇವಾಲಯವು ದಕ್ಷಿಣಾಭಿಮುಖವಾಗಿದೆ ಹಾಗು ಇದು ಗ್ರಾನೈಟ್ ಶಿಲೆಯಲ್ಲಿ ನಿರ್ಮಾಣಗೊಂಡಿದೆ. ಇದು ಪಾಳೆಯಗಾರರ ಕಾಲದ್ದಾಗಿದೆ. ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ವಿದೆ. ದೇವಾಲಯದ ಸುತ್ತಲೂ ಒಂದು ಕಲ್ಲಿನ ಗೋಡೆ ಇದ್ದು ಮುಂದೆ ಪ್ರವೇಶದ್ವಾರ ಮಂಟಪವಿದೆ. ಗರ್ಭಗೃಹದಲ್ಲಿ ಪದ್ಮಪೀಠದ ಮೇಲೆ ಕಪ್ಪು ಶಿಲೆಯ ೪ ಅಡಿ ಎತ್ತರದ ವೀರಭದ್ರ ಮೂರ್ತಿಶಿಲ್ಪವಿದೆ. ದೇವಾಲಯದ ಗೋಡೆಗೆ ನವೀಕರಣ ಮಾಡಿರುವುದರಿಂದ ಪ್ರಾಚೀನ ಗುರುತುಗಳನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ದೇವಾಲಯದ ಅಂತರಾಳದಲ್ಲಿ ಬಲಭಾಗದ ಗೋಡೆಯಲ್ಲಿ ಶೂಲಬ್ರಹ್ಮ ಶಿಲ್ಪವಿದೆ. ನವರಂಗದ ಬಾಗಿಲುವಾಡವು ಲತಾಸುರುಳಿ ಶಾಖೆಯನ್ನು ಹೊಂದಿದೆ. ಇದರ ಪಾದದಲ್ಲಿ ಶೈವದ್ವಾರ ಪಾಲಕರಿದ್ದಾರೆ. ಲಲಾಟ ಬಿಂಬದಲ್ಲಿ ನಂದಿಯ ಉಬ್ಬು ಶಿಲ್ಪವಿದೆ. ನವರಂಗದಲ್ಲಿ ಸಾಧಾರಣ ಶೈಲಿಯ ನಾಲ್ಕು ಕಂಬಗಳಿವೆ. ಅವುಗಳು ಚಚ್ಚೌಕದ ಮೂರು ಭಾಗಗಳನ್ನು ಹಾಗು ನಡುವೆ ಅಷ್ಟಪೈಲು ಭಾಗಗಳನ್ನು ಹೊಂದಿವೆ. ಚಚ್ಚೌಕದ ಭಾಗದಲ್ಲಿ ಕೈ ಮುಗಿದು ನಿಂತಿರುವ ಭಕ್ತನ ಶಿಲ್ಪ, ಗಣೇಶನ ಶಿಲ್ಪ, ಶಿವಲಿಂಗದ ಶಿಲ್ಪ, ವ್ಯಾಳದ ಶಿಲ್ಪ,

ಮಯೂರ ಶಿಲ್ಪ, ಸೂರ್ಯಕಿರಣ ಶಿಲ್ಪ, ಲಿಂಗಪೂಜೆ ಶಿಲ್ಪಗಳನ್ನು ಗುರುತಿಸಬಹುದು. ನವರಂಗದ ಛತ್ತಿನಲ್ಲಿ ವಿತಾನವಿದೆ. ದೇವಾಲಯದ ದ್ವಾರ ಮಂಟಪವು ಜಗುಲಿಯ ಮೇಲೆ ನಿರ್ಮಾಣವಾಗಿದ್ದು ಅದರಲ್ಲಿ ೬ ಸ್ವತಂತ್ರ ಕಂಬಗಳಿವೆ.

೪.೧.೧೧ ಭೈರಪ್ಪನ ಬೆಟ್ಟದ ಕಾಲಭೈರವ ದೇವಾಲಯ

ಕಾಲಭೈರವನ ದೇವಾಲಯವಿರುವ ಹೊಸದುರ್ಗದ ಬೆಟ್ಟಕ್ಕೆ ಭೈರನಕೊಂಬೆ, ಭೈರಪ್ಪನ ಬೆಟ್ಟ ಎಂದು ಕರೆಯಲಾಗಿದೆ.[೧೭] ಈ ಬೆಟ್ಟದಲ್ಲಿ ಕೋಟೆ, ಬತೇರಿ, ಗುಡಿ, ಮಂಟಪ, ಹೊಂಡಗಳು ಇವೆ. ಭೈರವನ ದೇವಾಲಯದ ಹಿಂಭಾಗದಲ್ಲಿ ಅರವತ್ತು ಅಂಕಣಗಳ ಮದ್ದಿನ ಮನೆ ಇದೆ. ಇವುಗಳೆಲ್ಲಾ ಇಲ್ಲಿ ಆಳಿದ ಪಾಳೆಯಗಾರರ ಅವಶೇಷಗಳು. ಇವುಗಳಲ್ಲಿ ಕಾಲಭೈರವನ ದೇವಾಲಯ ಬಹು ಮುಖ್ಯವಾದದ್ದು. ಉತ್ತರಾಭಿಮುಖವಾಗಿರುವ ದೇವಾಲಯವು ಗ್ರಾನೈಟ್ ಶಿಲೆಯಲ್ಲಿ ನಿರ್ಮಾಣವಾಗಿದೆ. ಇದು ಪಾಳೆಯಗಾರರ ಕೊನೆಯ ಕಾಲದ್ದಾಗಿದೆ. ಈ ದೇವಾಲಯವು ದ್ವಿಕೂಟವಾಗಿದೆ. ಇದರ ತಲವಿನ್ಯಾಸದಲ್ಲಿ ಮುಖ್ಯಗರ್ಭಗೃಹ, ಅಂತರಾಳ, ಎಡಭಾಗದ ಗರ್ಭಗೃಹ, ನವರಂಗ, ಇವುಗಳನ್ನು ಕಾಣಬಹುದು. ಗರ್ಭಗೃಹದಲ್ಲಿ ಸು ೪ ೧/೨ ಅಡಿ ಎತ್ತರದ ಭೈರವನ ಮೂರ್ತಿ ಶಿಲ್ಪವಿದೆ. ಎಡಭಾಗದ ಗರ್ಭಗೃಹದಲ್ಲಿ ಶಿವಲಿಂಗ, ಗರ್ಭಗೃಹಕ್ಕೆ ಹೊಂದಿಕೊಂಡಂತೆ ಒಂದು ಮಂಟಪದಲ್ಲಿ ಗಣೇಶ ಹಾಗು ದೇವಿ ಮೂರ್ತಿಶಿಲ್ಪಗಳಿವೆ. ನವರಂಗದ ಕಂಬಗಳು ಸಾಧಾರಣವಾಗಿವೆ. ಅವುಗಳ ರಚನೆಯಲ್ಲಿ ಚಚ್ಚೌಕದ ೩ ಭಾಗಗಳು, ಎಂಟು ಮುಖದ ಕೋನಗಳು ಹಾಗು ಸಾಧಾರಣ ಭೋದಿಗೆಯನ್ನು ಗಮನಿಸಬಹುದು. ನವರಂಗದ ದ್ವಾರವು ಏಕಶಾಖೆಯನ್ನು ಹೊಂದಿದೆ. ಪಾದದಲ್ಲಿ ಶೈವ ದ್ವಾರಪಾಲಕರಿದ್ದಾರೆ.

೪.೧.೧೨ ಸಿದ್ಧಪ್ಪನ ಬೆಟ್ಟದ ಸಿದ್ಧೇಶ್ವರ ದೇವಾಲಯ

ಹೊಸದುರ್ಗದಿಂದ ಮಧುರೆಗೆ ಹೋಗುವ ರಸ್ತೆಯ ಬಲಕ್ಕೆ ಇರುವ ಬೆಟ್ಟದ ಬುಡದಲ್ಲಿರುವ ದೇವಾಲಯವೇ ಬೆಟ್ಟದ ಸಿದ್ಧಪ್ಪ ದೇವರ ದೇಗುಲ. ಇದು ಪ್ರಾಚೀನ ಗುಹಾಂತರ ದೇವಾಲಯವಾಗಿದ್ದು, ಹೆಬ್ಬಂಡೆಗಳಿಂದ ಅವೃತ್ತವಾಗಿದೆ. ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಭಾಗಗಳು ಗುಹೆಯ ಒಳಗೆ ಬರುತ್ತದೆ. ಉಳಿದಂತೆ ಪ್ರಸ್ತುತ ಆಧುನಿಕ ಮುಖಮಂಟಪವಿದೆ. ದೇವಾಲಯದ ಬಹುಭಾಗ ಆಧುನಿಕವಾಗಿ ವಿಸ್ತಾರವಾಗಿದೆ. ಗರ್ಭಗೃಹದಲ್ಲಿ ೩ ೧/೨ ಅಡಿ ಎತ್ತರದ ಶಿವಲಿಂಗವಿದೆ. ಅಂತರಾಳದಲ್ಲಿ ಗಣೇಶ, ನಂದಿ ಹಾಗು

ಭೈರವನ ಮೂರ್ತಿಶಿಲ್ಪಗಳಿವೆ. ಈ ಮೂರ್ತಿಶಿಲ್ಪಗಳು ಹೊಯ್ಸಳ ಮೂರ್ತಿಶಿಲ್ಪಗಳಾಗಿವೆ. ಈ ದೇವಾಲಯ ಪ್ರಾಯಶಃ ಹೊಯ್ಸಳ ಕಾಲದ್ದು.

೪.೨ ವೈಷ್ಣವ ದೇವಾಲಯಗಳು

ಹೊಸದುರ್ಗ ಪರಿಸರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ವೈಷ್ಣವ ದೇವಾಲಯಗಳು ಇವೆ. ಇವುಗಳಲ್ಲಿ ಪಾಳೆಯಗಾರರ ಕಾಲದವುಗಳೇ ಅಧಿಕ. ಹೊಯ್ಸಳ, ವಿಜಯನಗರ ಕಾಲದವುಗಳಲ್ಲೂ ನಿರ್ಮಾಣಗೊಂಡ ಕೆಲವು ವೈಷ್ಣವ ದೇವಾಲಯಗಳು ಸಹ ಇವೆ. ಪ್ರಸ್ತುತ ಕ್ಷೇತ್ರ ಕಾರ್ಯದ ಮೂಲಕ ಕಂಡು ಬಂದ ಹಲವು ವೈಷ್ಣವ ದೇವಾಲಯಗಳನ್ನು ಇಲ್ಲಿ ಚರ್ಚಿಸಲಾಗಿದೆ.

೪.೨.೧. ಚನ್ನಕೇಶವ ದೇವಾಲಯ

ಹೊಸದುರ್ಗದಿಂದ ಪೂರ್ವಕ್ಕೆ ಸು ೧೦ ಕಿ.ಮೀ. ದೂರದಲ್ಲಿ ಬಾಗೂರು ಗ್ರಾಮವಿದ್ದು ಇಲ್ಲೇ ಪ್ರಾಚೀನ ಚನ್ನಕೇಶವ ದೇವಾಲಯವಿದೆ. ಶಾಸನಗಳಲ್ಲಿ 'ಬಾಗೇಊರು', 'ಬಾಗೂರು', 'ಬಾಗೂರು ಚರಂತಿ', 'ಬಾಗೂರು ಸೀಮೆ', 'ಭಾಗ್ಯಪುರ' ಎಂಬುದಾಗಿ ಕರೆಯಲಾಗಿದೆ. ಜಾನಪದದಲ್ಲಿ ಸಣ್ಣಕ್ಕಿ ಬಾಗೂರು ಮುಂತಾಗಿ ಕರೆಯಲಾಗಿದೆ.[೧೮] ಇಲ್ಲಿನ ಪ್ರಸಿದ್ಧ ಚನ್ನಕೇಶವ ದೇವಾಲಯವು ಹೊಯ್ಸಳ ಕಾಲದಲ್ಲಿ ನಿರ್ಮಾಣಗೊಂಡಿದ್ದು ವಿಜಯನಗರದ ಅರಸರು ಹಾಗು ಪಾಳೆಯಗಾರರ ಕಾಲದಲ್ಲಿ ವಿಸ್ತಾರಗೊಂಡಂತಿದೆ.

ಚನ್ನಕೇಶವ ದೇವಾಲಯವು ಪೂರ್ವಾಭಿಮುಖವಾಗಿದ್ದು ಸ್ಥಳೀಯವಾಗಿ ದೊರೆಯುವ ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ. ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪ ಇವುಗಳನ್ನು ಒಳಗೊಂಡಿದೆ. ದೇವಾಲಯದ ಬಲಭಾಗದಲ್ಲಿ ಕಲ್ಲಿನ ಪ್ರಾಂಗಣವಿದೆ. ದೇವಾಲಯದ ಎಡ ಭಾಗದಲ್ಲಿಯೂ ಕಲ್ಲಿನ ಪ್ರಾಂಗಣವಿದ್ದಿರಬಹುದಾಗಿ ಸಾಧ್ಯತೆ ಇದೆ. ದೇವಾಲಯದ ಆಗ್ನೇಯ ಭಾಗದಲ್ಲಿ ಲಕ್ಷ್ಮಿದೇವಿಯ ದೇವಾಲಯ ವಿದೆ. ದೇವಾಲಯಕ್ಕೆ ದ್ವಾರಮಂಟಪವಿದ್ದು ಗೋಪುರ ಅಪೂರ್ಣಗೊಂಡಿದೆ. ದೇವಾಲಯದ ಮುಂಭಾಗದ ಗರುಡಗಂಭ, ಊಯ್ಯಾಲೆ ಕಂಬ, ತುಳಸಿಕಟ್ಟೆ ಇವೆ. ಚಚ್ಚೌಕದ ಗರ್ಭಗೃಹದಲ್ಲಿ ಪೀಠದ ಮೇಲೆ ನಾಲ್ಕು ಅಡಿ ಎತ್ತರದ ವಿಷ್ಣುವಿನ ಸ್ಥಾನಿಕ ಶಿಲ್ಪವಿದೆ. ಗರ್ಭಗೃಹದ ಮುಂಭಾಗದಲ್ಲಿ ಆಯಾತಾಕಾರದ ಅಂತರಾಳವಿದೆ. ಇಲ್ಲಿ ರಾಮ ಲಕ್ಷ್ಮಣ ಸೀತೆಯರ ಉತ್ಸವ ಮೂರ್ತಿಗಳಿವೆ. ಅಂತರಾಳದ ಬಲಭಾಗದಲ್ಲಿರುವ ಚಿಕ್ಕಕೋಣೆಯಲ್ಲಿ ಆಳ್ವಾರರುಗಳಾದ ರಾಮಾನುಜ, ನಮ್ಮಾಳವರ್, ಚಕ್ರಾಳವರ್ ಅವರುಗಳ ಕಂಚಿನ ಎರಕದ

ಮೂರ್ತಿಗಳಿವೆ. ಅಂತರಾಳದ ಪ್ರದೇಶದ್ವಾರದಲ್ಲಿ ಆಳೆತ್ತರದ ವೈಷ್ಣವ ದ್ವಾರಪಾಲಕರ ಶಿಲ್ಪಗಳಿದ್ದು ಇವರು ಶಂಖ, ಚಕ್ರ, ಗಧಾ ಮತ್ತು ಅಭಯ ಮಂತ್ರಿಗಳನ್ನು ಹೊಂದಿರುವವರು ಅಂತರಾಳದ ನಂತರದಲ್ಲಿ ನವರಂಗವಿದ್ದು ಅದರಲ್ಲಿ ಸುಂದರವಾದ ಸ್ವತಂತ್ರವಾದ ಕಂಬಗಳಿವೆ. ನವರಂಗವು ಒಂಬತ್ತು ಅಂಕಣದಲ್ಲಿದ್ದು ಮಧ್ಯದ ಅಂಕಣದಲ್ಲಿ ವಿತಾನದಲ್ಲಿ ಪದ್ಮದ ಅಲಂಕಣವಿದೆ. ನವರಂಗದ ಸ್ವತಂತ್ರ ಕಂಬಗಳ ರಚನೆಯಲ್ಲಿ ಪೀಠ, ಕಾಂಡ ಭಾಗದಲ್ಲಿ ಚಚ್ಚೌಕದ ಒಂದು ಭಾಗ, ಬಹುಮುಖದಿಂಡು, ಫಲಕ ಮತ್ತು ಸರಳ ಭೋದಿಗೆಯಲ್ಲಿವೆ. ಅದರಲ್ಲಿ ಚಿತ್ರದುರ್ಗದ ಪಾಳೆಯಗಾರ ಓಬಣ್ಣನಾಯಕನು ಮಾಡಿಸಿದ (ಕ್ರಿ.ಶ. ೧೬೦೧ರಲ್ಲಿ) ಆರು ಅಡಿ ಎತ್ತರದ ಬಂಗಾರದ ಲೇಪನವಿರುವ ಗರುಡವಿಗ್ರಹವಿದೆ.[೧೯] ನವರಂಗದ ಬಾಗಿಲುವಾಡವು ಲತಾಸುರುಳಿಶಾಖೆ ಹೊಂದಿರುವುದನ್ನು ಕಾಣಬಹುದು. ಇಲ್ಲಿನ ಲಲಾಟಬಿಂಬದಲ್ಲಿ ಪದ್ಮದ ಕೆತ್ತನೆಯಿದೆ.

ನವರಂಗದ ಪೂರ್ವ ಪ್ರವೇಶದ್ವಾರಕ್ಕೆ ಹೊಂದಿಕೊಂಡಂತೆ ಮುಚ್ಚಿದ ಸಭಾಮಂಟಪವಿದೆ. ಈ ಸಭಾಮಂಟಪ ಸ್ವತಂತ್ರವಾದ ಹತ್ತು ಕಂಬಗಳನ್ನು ಹೊಂದಿದೆ. ಅವುಗಳು ಎತ್ತರದ ಜಗುಲಿಯ ಮೇಲೆ ಇವೆ. ಈ ಕಂಬಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕ ಮುಖದ ಎರಡು ಭಾಗಗಳು, ಕುಂಬ, ಫಲಕ, ಸಾಧಾರಣ ಬೋಧಿಗೆಯನ್ನು ಕಾಣಬಹುದು. ಸಭಾಮಂಟಪದ ಮಧ್ಯದಲ್ಲಿ ಆಧುನಿಕ ಯಜ್ಞ ಕುಂಡವಿದೆ. ಸಭಾಮಂಟಪದ ಮುಂಭಾಗದಲ್ಲಿ ನಾಲ್ಕು ಕಂಬಗಳ ಮುಖಮಂಟಪವಿದೆ. ಮುಖಮಂಟಪದ ಒಂದು ಕಂಬದ ಮೇಲೆ ಹನುಮಾನ್ ಶಿಲ್ಪವಿದೆ. ಇದರ ಮೇಲೆ ಶಂಖ ಚಕ್ರಗಳ ಕೆತ್ತನೆಯಿದೆ, ಮುಖಮಂಟಪಕ್ಕೆ ಹೊಂದಿಕೊಂಡಂತೆ ಹನ್ನೆರಡು ಕಂಬಗಳ ತೆರೆದ ಮಂಟಪವಿದೆ. ಇಲ್ಲಿಯ ಕಂಬಗಳು ಪೀಠ, ಕಾಂಡ ಭಾಗದಲ್ಲಿ ಚೌಕ, ಲಶುನ, ಫಲಕ ಮತ್ತು ಸರಳ ಬೋಧಿಗೆಯಿದೆ. ಇಲ್ಲಿಯ ಎರಡು ಕಂಬಗಳ ನಾಲ್ಕು ಮುಖಗಳಲ್ಲಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ವಿವಿಧ ಉಬ್ಬು ಶಿಲ್ಪಗಳಿವೆ. ಇವುಗಳಲ್ಲಿ ವರಹ, ಕಾಳಿಂಗಮರ್ಧನ, ನರಸಿಂಹ, ಅನಂತಶಯನ, ಗೋಪಾಲಕೃಷ್ಣ, ಲಜ್ಜಾಗೌರಿ, ಗಜಗಳು, ರಾಮ, ಪರುಶುರಾಮ, ಮತ್ಸ್ಯ, ಕೂರ್ಮ, ವಾಮನ, ನೇಗಿಲು ಹಿಡಿದಿರುವ ಸ್ತ್ರೀ ಮುಂತಾದ ಶಿಲ್ಪಗಳಿವೆ.

ದೇವಾಲಯಕ್ಕೆ ಅಭಿಮುಖವಾಗಿ ಒಂದು ಚಿಕ್ಕ ಗುಡಿ ಇದ್ದು, ಸ್ಥಾನಿಕ ಗರುಡನ ಶಿಲ್ಪವಿದೆ. ಗರುಡನು ಅಂಜಲಿ ಮುದ್ರೆಯಲ್ಲಿದ್ದಾನೆ.

ದೇವಾಲಯದ ವಾಯವ್ಯದಲ್ಲಿ ಹೊಕಳಿ ಮಂಟಪವಿದೆ. ಇದರ ಅಧಿಷ್ಠಾನದಲ್ಲಿ ಉಪಾನ, ಪದ್ಮ, ಗಳ ಭಾಗಗಳನ್ನು ಕಾಣಬಹುದು. ಗಳಭಾಗದಲ್ಲಿ ವಿವಿಧ ಉಬ್ಬು ಶಿಲ್ಪಗಳಿವೆ ಅವುಗಳಲ್ಲಿ ಮಿಥುನ ಶಿಲ್ಪಗಳು, ಯಕ್ಷನ ಶಿಲ್ಪ, ವ್ಯಾಳ, ಗಜ, ಅಶ್ವ, ಲಜ್ಜಾಗೌರಿ ಶಿಲ್ಪಗಳನ್ನು

ಕಾಣಬುಹುದು. ಈ ಮಂಟಪದಲ್ಲಿ ನಾಲ್ಕು ಕಲಾತ್ಮಕವಾದ ಕಂಬಗಳಿವೆ. ಇವುಗಳ ರಚನೆಯಲ್ಲಿ ಪೀಠ, ಚಚ್ಚೌಕದ ೨ ಭಾಗಗಳು, ಅವುಗಳ ಮಧ್ಯೆ ಅಷ್ಟ ಪೈಲು ಹಾಗು ಹದಿನಾರು ಮುಖದ ಭಾಗಗಳು ನಂತರ ಕುಂಬ, ಕುಮುದ, ಫಲಕ, ಸಾಧಾರಣ ಭೋದಿಗೆ ಇದೆ. ಮೇಲ್ ಭಾಗದಲ್ಲಿ ಇಟ್ಟಿಗೆ ಗಚ್ಚು ಗಾರೆಯಿಂದ ಕೂಡಿದ ವಿಮಾನವಿದೆ. ಇದು ತ್ರಿತಲ ವಿಮಾನವಾಗಿದ್ದು ಈ ಭಾಗಗಳಲ್ಲಿ ವಿವಿಧ ವೈಷ್ಣವ ಮೂರ್ತಿಶಿಲ್ಪಗಳಿವೆ. ಗ್ರೀವ, ಶಿಖರ ಹಾಗು ಸ್ತೂಪಿ ಭಾಗಗಳನ್ನು ಕಾಣಬಹುದು. ಗ್ರೀವದ ಭಾಗದಲ್ಲಿ ಪೀಠದ ಮೇಲೆ ಕುಳಿತ ಲಕ್ಷ್ಮೀನಾರಸಿಂಹ ಶಿಲ್ಪವಿದೆ. ಅದರೊಂದಿಗೆ ಇಲ್ಲಿನ ಕಂಬಗಳ ಮೇಲೆ ಆಂಜನೇಯ, ಗರುಡ, ಮುಂತಾದ ಉಬ್ಬು ಶಿಲ್ಪಗಳಿವೆ.

ದೇವಾಲಯದ ಪ್ರವೇಶ ದ್ವಾರ ಮಂಟಪವು ವಿಜಯನಗರ ವಾಸ್ತುಶೈಲಿಯಲ್ಲಿದ್ದು ಬಿತ್ತಿಯಲ್ಲಿ ದೇವಾಲಯಕ್ಕೆ ಅಭಿಮುಖವಾಗಿ ವಿಜಯನಗರದ ರಾಜಪರಿವಾರದವರ ಉಬ್ಬು ಶಿಲ್ಪಗಳಿವೆ. ಈ ದ್ವಾರಮಂಟಪದ ಅಧಿಷ್ಠಾನವು ಅತ್ಯಂತ ಎತ್ತರವಾಗಿದ್ದು ಎರಡು ಹಂತಗಳಲ್ಲಿ ಇದೆ. ಕೆಳಗಿನ ಭಾಗದಲ್ಲಿ ಉಪಾನ, ಪದ್ಮ, ತ್ರಿಪಟ್ಟಿ ಕುಮುದಗಳ ಮತ್ತು ವೇದಿಕೆ ಕಂಡುಬರುತ್ತದೆ. ವೇದಿಕೆಯಲ್ಲಿ ವ್ಯಾಳದ ಚಿತ್ರಗಳಿವೆ. ಇದರ ಮುಂದುವರೆದ ಅಧಿಷ್ಠಾನದ ಭಾಗದಲ್ಲಿ ಉಪಾನ, ಪದ್ಮ, ಗಳ, ತ್ರಿಪಟ್ಟಿ ಕುಮುದದ ಮೇಲೆ ಸರಪಳಿಯ ಚಿತ್ರ ನಂತರದ ಪಟ್ಟಿಕೆಯ ಮೇಲೆ ಪುಷ್ಪಗಳ ಚಿತ್ರಗಳನ್ನು ಕೆತ್ತಲಾಗಿದೆ. ನಂತರ ಭಿತ್ತಿಯಲ್ಲಿ ಕೋಷ್ಠಗಳನ್ನು ಕಾಣಬಹುದು. ದ್ವಾರಮಂಟಪವನ್ನು ಒಳಗೆ ಪ್ರವೇಶಿಸುವ ಭಾಗದಲ್ಲಿ ಅಭಿಮುಖವಾಗಿ ದೊಡ್ಡ ಪ್ರಮಾಣದ ದ್ವಾರ ಶಾಖೆಯನ್ನು ಕಾಣಬಹುದು. ಅವುಗಳಲ್ಲಿ ವ್ಯಾಳದ ಮೇಲೆ ನಿಂತಿರುವ ಸ್ತ್ರೀ ಶಿಲ್ಪಗಳು ಅವರ ಮೇಲಿಂದ ಹೋಗಿರುವ ಲತಾಸುರುಳಿ ಪಟ್ಟಿಕೆಯ ಕಲಾತ್ಮಕ ಕೆತ್ತನೆಯನ್ನು ಕಾಣಬಹುದು. ಈ ದ್ವಾರ ಮಂಟಪದ ಒಂದು ಕೋಷ್ಠದಲ್ಲಿ ಅಲ್ಲೇ ಸಮೀಪದಲ್ಲೇ ದೊರೆತ ಕೋಟೆ ಹನುಮಂತನ ಮೂರ್ತಿ ಶಿಲ್ಪವನ್ನು ಸ್ಥಾಪಿಸಲಾಗಿದೆ. ಪ್ರವೇಶ ಮಂಟಪದ ಮುಖ್ಯ ಶಾಖೆಯು ಪದ್ಮಶಾಲೆಯಾಗಿದೆ. ಅದರ ಪಾದದಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಈ ದ್ವಾರ ಮಂಟಪದಲ್ಲಿ ಕಲಾತ್ಮಕವಾದ ವಿಜಯನಗರ ಶೈಲಿಯ ಕಂಬಗಳಿದ್ದು ಅವುಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕ ಮುಖದ ಐದು ಮುಖಗಳಿವೆ, ನಂತರ ಸುಂಧರವಾದ ಭೋದಿಗೆಗಳನ್ನು ಕಾಣಬಹುದು. ದೇವಾಲಯದ ಮುಂಭಾಗದಲ್ಲಿ ಉಯ್ಯಾಲೆ ಕಂಬ, ಸು ೫೪ ಅಡಿ ಎತ್ತರದ ಗರುಡ ಸ್ಥಂಭವಿದ್ದು, ಇದು ಕ್ರಿ.ಶ. ೧೫೩೦-೪೨ರಲ್ಲಿ ವೀರ ಪ್ರತಾಪರಾಯನ ಕಾಲದಲ್ಲಿ ವಿಶ್ವನಾಥಯ್ಯ ಎಂಬುವವನು ಸ್ಥಾಪಿಸಲ್ಪಟ್ಟನು ಎಂದು ತಿಳಿಸುತ್ತದೆ.

ದೇವಾಲಯದ ಪ್ರಾಂಗಣದ ಒಳಗೆ ಆಯ್ಕೆಯಾದಲ್ಲಿ ಲಕ್ಷ್ಮಿದೇವಿಯ ದೇವಾಲಯವಿದೆ. ಇದು ಗರ್ಭಗೃಹ, ಅಂತರಾಳ ಎರಡುಕಂಬಗಳ ಮುಖಮಂಟಪ, ಮುಖಮಂಟಪದ ಮುಂಭಾಗ ೧೨ ಕಂಬಗಳ ವಿಶಾಲ ತೆರೆದ ಮಂಟಪವಿದೆ. ಗರ್ಭಗೃಹದಲ್ಲಿ ಲಕ್ಷ್ಮೀದೇವಿಯ

ಮೂರ್ತಿಶಿಲ್ಪವಿದೆ. ಲಕ್ಷ್ಮೀದೇವಿ ಗುಡಿಯ ಮುಂಭಾಗ ಬದಿಗೆ ಇರುವ ಪ್ರಾಂಗಣದಲ್ಲಿ ವೈಕುಂಠನಾರಾಯಣನ ದೇವಾಲಯವಿದೆ. ಇದರಲ್ಲಿ ಗರುಡನು ಹೊತ್ತುನಿಂತ ವೈಕುಂಠನಾರಾಯಣನ ಶಿಲ್ಪವಿದ್ದು ಇದರ ಇಕ್ಕೆಲಗಳಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತದ ದೈವಾಂಶ ಸಂಬೂತರಾದ ಹನ್ನೆರಡು ಆಳ್ವಾರರುಗಳ ಮೂರ್ತಿಶಿಲ್ಪಗಳಿವೆ. ಅವುಗಳೆಂದರೆ ಪೆರಿಯಾಳ್ವರ್, ನಮ್ಮೊಳ್ವರ್, ಮಧುರಕವಿ ಆಳ್ವಾರ್, ಕೊರತ್ತಾಳ್ವರ್, ತಿರುಪ್ಪನಾಳ್ವರ್, ಬೂದತ್ತಾಳ್ವರ್, ತಿರುಮಳಿ ಶೈಯಾಳ್ವರ್ ಮತ್ತು ಆಂಡಾಳ್ ಅವರುಗಳನ್ನು ಕಾಣಬಹುದು.

ದೇವಾಲಯಕ್ಕೆ ಸಂಬಂಧಿಸಿದ ಕೆಲವು ಶಾಸನಗಳು ಇಲ್ಲಿ ಇವೆ. ಅವುಗಳಲ್ಲಿ ಕ್ರಿ.ಶ. ೧೫೭೧ರ ಶಾಸನವು ಸಂತೇಬೆನ್ನೂರು ಹನುಮಪ್ಪನಾಯಕರ ಮಗ ರಾಜಪ್ಪನಾಯಕ ತಮ್ಮ ತಂದೆತಾಯಿಗೆ ಪುಣ್ಯವಾಗಲೆಂದು ಈ ಲಕ್ಷ್ಮೀದೇವಾಲಯವನ್ನು ಜೀರ್ಣೋದ್ಧಾರವಾಗಿಸಿ ದತ್ತಿ ಬಿಟ್ಟ ಬಗ್ಗೆ ತಿಳಿಸುತ್ತದೆ.[೨೦]

೪.೨.೨. ಜೀವಿ ಪ್ರಾಣದೇವರ ದೇವಾಲಯ

ಇದು ಬಾಗೂರು ಗ್ರಾಮದಲ್ಲಿ ಮಧ್ಯ ಭಾಗದಲ್ಲಿ ಬರುವುದು. ಈ ದೇವಾಲಯವು ವಿಜಯನಗರೋತ್ತರ ಅಥವಾ ಪಾಳೆಯಗಾರರ ಶೈಲಿಯಲ್ಲಿದ್ದು ಕ್ರಿ.ಶ. ೧೭ನೇ ಶತಮಾನದ್ದಾಗಿದೆ. ದೇವಾಲಯವು ಉತ್ತರಾಭಿಮುಖವಾಗಿದ್ದು ಗ್ರಾನೈಟ್ ಶಿಲೆಯಿಂದ ನಿರ್ಮಿತಿಗೊಂಡಿದೆ. ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ತೆರೆದ ಸಂಭಾಮಂಟಪವನ್ನು ಕಾಣಬಹುದು. ಗರ್ಭಗೃಹದಲ್ಲಿ ಸು. ೪ ಅಡಿ ಎತ್ತರದ ಕಪ್ಪು ಶಿಲೆಯಲ್ಲಿ ಆಂಜನೇಯನ ಮೂರ್ತಿಶಿಲ್ಪವಿದೆ. ಗರ್ಭಗೃಹದ ಬಾಗಿಲುವಾಡವು ದ್ವಿಶಾಖೆಗಳಿಂದ ಕೂಡಿದ್ದು ಸಾಧಾರಣವಾಗಿದೆ. ಲಲಾಟಬಿಂಬದಲ್ಲಿ ಯಾವುದೇ ಅಲಂಕಾರವಿಲ್ಲ, ಅಂತರಾಳದ ಬಾಗಿಲುವಾಡವು ದ್ವಿಶಾಖೆಯನ್ನು ಹೊಂದಿದ್ದು ವಜ್ರಪಟ್ಟಿ ಹಾಗೂ ಲತಾಸುರುಳಿ ಅಲಂಕಾರಗಳನ್ನು ಕಾಣಬಹುದು. ಬಾಗಿಲುವಾಡದ ಪದಾದದಲ್ಲಿ ವೈಷ್ಣವ ದ್ವಾರಪಾಲಕರಿದ್ದು ಅವರು ಶಂಕ ಚಕ್ರ, ಗದಾ ಹಾಗು ಅಭಯ ಮುದ್ರೆಯನ್ನು ಹೊಂದಿರುವರು.

ನವರಂಗದಲ್ಲಿ ಕಲಾತ್ಮಕವಾದ ಕಂಬಗಳಿದ್ದು ಅವುಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕದ ಎರಡು ಭಾಗಗಳು ಅವುಗಳ ಮಧ್ಯೆ ಅಷ್ಟಪೈಲು ಹಾಗು ೧೬ ಮುಖದ ಭಾಗಗಳು ಇವೆ. ಅದರ ಮೇಲೆ ಕುಂಬ, ಫಲಕ, ಸಾಧಾರಣ ಭೋದಿಗೆ ಇರುವುದನ್ನು ಕಾಣಬಹುದು. ಈ ಕಂಬಗಳ ಚಚ್ಚೌಕದ ಭಾಗದಲ್ಲಿ ಪುಷ್ಪ, ನಮಿಸುತ್ತಿರುವ ಆಂಜನೇಯ, ಶಿವಲಿಂಗಕ್ಕೆ ತನ್ನ ಕೆಚ್ಚಲಿನ ಮೂಲಕ ಹಾಲಿನ ಅಭಿಷೇಕ ಮಾಡುತ್ತಿರುವ ಹಸುವಿನ ಶಿಲ್ಪ ಮುಂತಾದವುಗಳನ್ನು ಕಾಣಬಹುದು. ಕಂಬಗಳ ಮೇಲ್ಭಾಗದಲ್ಲಿ ಸಾಧಾರಣ ಭುವನೇಶ್ವರಿ ಇದೆ.

೪.೨.೩. ಹನುಮಂತ ದೇವಾಲಯ

ಇದು ಕೆಲ್ಲೋಡು ಗ್ರಾಮದ ಮಧ್ಯಭಾಗದಲ್ಲಿ ಬರುತ್ತದೆ. ದೇವಾಲಯವು ಪೂರ್ವಾಭಿಮುಖವಾಗಿದೆ. ಇದನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಪಾಳೆಯಗಾರರ ಶೈಲಿಯಲ್ಲಿ ಇರುವ ಈ ದೇವಾಲಯವು ಕ್ರಿ.ಶ. ೧೬-೧೭ನೇ ಶತಮಾನದ್ದು, ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗವನ್ನು ಕಾಣಬಹುದು. ನವರಂಗದಲ್ಲಿ ನಾಲ್ಕು ಸ್ವತಂತ್ರವಾದ ಕಂಬಗಳಿದ್ದು ಅವುಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕದ ರಚನೆ, ಕುಂಬ, ಫಲಕ, ಭೋದಿಗೆಯನ್ನು ಕಾಣಬಹುದು. ಗರ್ಭಗೃಹದಲ್ಲಿ ಸು ೧೦ ಅಡಿ ಎತ್ತರದ ಆಂಜನೇಯ ಶಿಲ್ಪವಿದೆ. ಹೊರಭಾಗದ ಒಂದು ಪುಟ್ಟ ಗುಡಿಯಲ್ಲಿ ಭೈರವೇಶ್ವರ, ಭೈರವಿ, ಶಿವಲಿಂಗ ಮೂರ್ತಿ ಶಿಲ್ಪಗಳಿವೆ.

೪.೨.೪. ರಂಗನಾಥ ದೇವಾಲಯ

ಹೊಸದುರ್ಗದಿಂದ ಹೊಳಲ್ಕೆರೆಗೆ ಹೋಗುವ ಮಾರ್ಗದಲ್ಲಿ ಸು. ೧೦ ಕಿ.ಮೀ. ಅಂತರದಲ್ಲಿ ಕಬ್ಬಳ ಗ್ರಾಮದಲ್ಲಿ ರಂಗನಾಥ ದೇವಾಲಯವಿದೆ. ದೇವಾಲಯದ ರಚನೆ ಹಾಗು ಶೈಲಿಯಿಂದ ಇದು ಪಾಳೆಯಗಾರರ ಕಾಲದ್ದೆಂದು ಹೇಳಬಹುದು. ಉತ್ತರಾಭಿಮುಖವಾಗಿರುವ ಈ ದೇವಾಲಯವು ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ. ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ ಅಂತರಾಳ ಹಾಗು ತೆರೆದ ಮಂಟಪವನ್ನು ಒಳಗೊಂಡಿದೆ. ಇದಕ್ಕೆ ಅಭಿಮುಖವಾಗಿ ಎತ್ತರದ ದೀಪದ ಸ್ತಂಭವಿದೆ. ಗರ್ಭಗೃಹದ ಬಾಗಿಲುವಾಡದ ಲಲಾಟಬಿಂಬದಲ್ಲಿ ಗಜಲಕ್ಷ್ಮೀಯ ಉಬ್ಬುಶಿಲ್ಪವಿದೆ ಪಾದದಲ್ಲಿ ವೈಷ್ಣವ ದ್ವಾರ ಪಾಲಕರಿದ್ದಾರೆ ಗರ್ಭಗೃಹದಲ್ಲಿ ಉದ್ಭವಮೂರ್ತಿ (ಶಿಲೆ) ಇದ್ದು ಅದನ್ನು ಸ್ಥಳಿಯರು ರಂಗನಾಥ ಎಂದು ಪೂಜಿಸುತ್ತಾರೆ.

೪.೨.೫. ಹನುಮಂತ ದೇವರ ದೇವಾಲಯ

ಹೊಸದುರ್ಗದ ಹತ್ತಿರದಲ್ಲೇ ಇರುವ ಬೋಕಿಕೆರೆ ಗ್ರಾಮದಲ್ಲಿ ಹನುಮಂತ ದೇವರ ದೇವಾಲಯವಿದೆ ಉತ್ತರಾಭಿಮುಖವಾಗಿರುವ ಈ ದೇವಾಲಯವು ಗ್ರಾನೈಟ್ ಶಿಲೆಯಲ್ಲಿ ನಿರ್ಮಾಣಗೊಂಡಿದೆ. ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ತೆರೆದ ಮಂಟಪವನ್ನು ಕಾಣಬಹುದು. ದೇವಾಲಯವು ವಿಜಯನಗರೋತ್ತರ ಶೈಲಿಯಲ್ಲಿದೆ. ಗರ್ಭಗೃಹದ ಬಾಗಿಲುವಾಡವು ಸಾಧಾರಣವಾದ ಏಕಶಾಖೆಯನ್ನು ಹೊಂದಿದ್ದು, ಅದರ

ಲಲಾಟಬಿಂಬದಲ್ಲಿ ಗಜಲಕ್ಷ್ಮೀಯ ಉಬ್ಬುಶಿಲ್ಪವಿದೆ. ಬಾಗಿಲುವಾಡದ ಪಾದದಲ್ಲಿ ವೈಷ್ಣವ ದ್ವಾರಪಾಲಕರಿದ್ದು, ಅವರು ಶಂಖ, ಚಕ್ರ, ಗದೆ ಮತ್ತು ಅಭಯ ಮುದ್ರೆಗಳನ್ನು ಹೊಂದಿದ್ದಾರೆ. ಗರ್ಭಗೃಹದಲ್ಲಿ ಆಂಜನೇಯನ ಮೂರ್ತಿ ಶಿಲ್ಪವಿದೆ. ತೆರೆದ ಮಂಟಪದಲ್ಲಿ ನಾಲ್ಕು ಸ್ವತಂತ್ರ ಕಂಬಗಳಿವೆ, ಇವುಗಳ ಮೇಲಿನ ಛತ್ತಿನಲ್ಲಿ ಕಲಾತ್ಮಕವಾಗಿ ಹೆಚ್ಚು ಬಾಗಿದ ಭುವನೇಶ್ವರಿ ಇದೆ. ತೆರೆದ ಮಂಟಪದ ಎದುರಿಗೆ ಎತ್ತರವಾದ ದೀಪದ ಸ್ತಂಭವಿದೆ. ಅದರ ಪಾದದ ನಾಲ್ಕು ಮುಖಗಳಲ್ಲಿ ಶಂಖ, ಚಕ್ರ, ಹಾಗೂ ಭಕ್ತರ ಉಬ್ಬುಶಿಲ್ಪಗಳಿವೆ. ದೇವಾಲಯದ ವಿಮಾನವು ದ್ರಾವಿಡಶೈಲಿಯ ವಿಮಾನವಾಗಿದ್ದು, ಇದು ಇಟ್ಟಿಗೆ ಗಚ್ಚು-ಗಾರೆಯಿಂದ ಕೂಡಿದೆ. ಅದರಲ್ಲಿ ಕೋಷ್ಠಗಳನ್ನು ಕಾಣಬಹುದು. ಇದರ ಗ್ರೀವಭಾಗದಲ್ಲಿ ವೈಷ್ಣವ ದೇವತಾಶಿಲ್ಪಗಳಿವೆ.

ದೇವಾಲಯವನ್ನು ಪ್ರವೇಶಿಸಲು ಕಂಬಗಳ ಸಾಲುಗಳಿಂದ ಕೂಡಿದ ದ್ವಾರ ಮಂಟಪವಿದೆ. ಇದರಲ್ಲಿ ೧೮ ಕಂಬಗಳಿವೆ. ದೇವಾಲಯದ ಪಕ್ಕದಲ್ಲೇ ಒಂದು ವಾಮನ ಮುದ್ರೆ ಕಲ್ಲು ಇದೆ.

೪.೨.೬. ಹನುಮಂತ ದೇವಾಲಯ

ಹೊಸದುರ್ಗದಿಂದ ಹೊಳಲ್ಕೆರೆ ಹೋಗುವ ಮಾರ್ಗದಲ್ಲಿ ಸು ೧೨ ಕಿ.ಮೀ. ಅಂತರದಲ್ಲಿರುವ ಮಧುರೆ ಗ್ರಾಮದಲ್ಲಿ ಹನುಮಂತ ದೇವಾಲಯವಿದೆ. ಉತ್ತರಾಭಿಮುಖವಾಗಿರುವ ಈ ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಇದು ಕ್ರಿ.ಶ.ಸು ೧೭ನೇ ಶತಮಾನದ್ದಾಗಿದ್ದು ವಿಜಯನಗರೋತ್ತರ ಕಾಲದ ಸಾಧಾರಣ ಶೈಲಿಯಲ್ಲಿದೆ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ ಹಾಗೂ ತೆರೆದ ಮಂಟಪವನ್ನು ಮಾತ್ರ ಒಳಗೊಂಡಿದೆ. ಗರ್ಭಗೃಹದಲ್ಲಿ ೫ ಅಡಿ ಎತ್ತರದ ಹನುಮಂತ ದೇವರ ಮೂರ್ತಿಶಿಲ್ಪವಿದೆ ಗರ್ಭಗೃಹದ ಬಾಗಿಲುವಾಡವು ಲತಾಸುರುಳಿ ಶಾಖೆಯನ್ನು ಹಾಗೂ ಗಜಲಕ್ಷ್ಮೀ ಉಬ್ಬುಶಿಲ್ಪವನ್ನು ಹೊಂದಿದೆ. ಪಾದದಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬು ಕೆತ್ತನೆಗಳಿವೆ. ತೆರೆದ ಮಂಟಪದಲ್ಲಿ ಸ್ವತಂತ್ರವಾದ ನಾಲ್ಕು ಕಂಬಗಳಿದ್ದು ಅವುಗಳ ರಚನೆಯಲ್ಲಿ ಕಾಂಡಭಾಗದಲ್ಲಿ ಚಚ್ಚೌಕದ ಮೂರು ಭಾಗಗಳು, ಅವುಗಳ ಮಧ್ಯೆ ಅಷ್ಟಪೈಲು ಹಾಗೂ ಹದಿನಾರು ಮುಖದ ಭಾಗಗಳಿವೆ. ಮೇಲೆ ಸಾಧಾರಣ ಭೋಧಿಗೆ ಇದೆ. ತೆರೆದ ಮಂಟಪದ ಛತ್ತಿನಲ್ಲಿ ಕದಳಿ ಅಂಕಣದ ಭುವನೇಶ್ವರಿ ಇದೆ.

೪.೨.೭. ಆಂಜನೇಯ ದೇವಾಲಯ

ಹೊಸದುರ್ಗ ಪರಿಸರದಲ್ಲೇ ಇರುವ ಮಾವಿನಕಟ್ಟೆ ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಕ್ರಿ.ಶ. ೧೬-೧೭ನೇ ಶತಮಾನಕ್ಕೆ ಸೇರಬಹುದಾದ ಈ ದೇವಾಲಯವು ಪಾಳೆಯಗಾರರ ಶೈಲಿಯನ್ನು ಹೊಂದಿದೆ. ಉತ್ತರಾಭಿಮುಖವಾಗಿರುವ ಈ ದೇವಾಲಯವು ಗ್ರಾನೈಟ್ ಶಿಲೆಯಿಂದಲೇ ನಿರ್ಮಾಣ ಗೊಂಡಿದೆ. ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ ಹಾಗೂ ತೆರೆದಮಂಟಪವನ್ನು ಕಾಣಬಹುದು ಗರ್ಭಗೃಹದ ಬಾಗಿಲುವಾಡವು ಏಕಶಾಖೆಯನ್ನು ಹೊಂದಿದೆ. ಅದರ ಪಾದದಲ್ಲಿ ವೈಷ್ಣವ ದ್ವಾರ ಪಾಲಕರ ಶಿಲ್ಪಗಳಿವೆ ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಉಬ್ಬು ಶಿಲ್ಪವಿದೆ.

ತೆರೆದಮಂಟಪದಲ್ಲಿ ೬ ಸ್ವತಂತ್ರವಾದ ಕಂಬಗಳಿದ್ದು ಅವುಗಳ ಚಚ್ಚೌಕದ ಭಾಗದ ಮೇಲೆ ಹಲವು ಉಬ್ಬು ಶಿಲ್ಪಗಳಿವೆ.

೪.೨.೮. ಹನುಮಂತ ದೇವಾಲಯ

ಹೊಸದುರ್ಗ ಪಕ್ಕದಲ್ಲೇ ಅತ್ತಿಗಟ್ಟ ಗ್ರಾಮದಲ್ಲಿ ಹನುಮಂತ ದೇವಾಲಯವಿದೆ. ಪೂರ್ವಾಭಿಮುಖವಾಗಿದೆ. ಇದು ಸಹ ಪಾಳೆಯಗಾರರ ಕಾಲದ್ದಾಗಿದೆ. ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ತೆರೆದಮಂಟಪ ಇವುಗಳನ್ನು ಕಾಣಬಹುದು. ಗರ್ಭಗೃಹದಲ್ಲಿ ಹನುಮಂತನ ಮೂರ್ತಿಶಿಲ್ಪವಿದೆ. ಅಂತರಾಳದ ಬಾಗಿಲುವಾಡದಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ ತೆರೆದ ಮಂಟಪದಲ್ಲಿ ಸ್ವತಂತ್ರವಾದ ೪ ಕಂಬಗಳಿವೆ ಭಿತ್ತಿನಲ್ಲಿ ಭುವನೇಶ್ವರಿ ಇದೆ. ದೇವಾಲಯದ ಎದುರಿಗೆ ಒಂದು ಎತ್ತರದ ದೀಪದ ಸ್ತಂಭವಿದೆ.

೪.೩. ಶಾಕ್ತ ದೇವಾಲಯಗಳು

ಮಾತೃದೇವತೆಯ ರೂಪದಲ್ಲಿರುವ ಶಕ್ತಿ ದೇವತೆಯನ್ನು ಆರಾಧಿಸುವ ಪಂಥವನ್ನು ಶಾಕ್ತಪಂಥವೆಂದು ಕರೆಯುತ್ತೇವೆ. ಅವುಗಳಿಗೆ ಸಂಬಂಧಿಸಿದ ದೇವಾಲಯಗಳನ್ನು ಶಾಕ್ತ ದೇವಾಲಯಗಳೆಂದು ಕರೆಯುತ್ತೇವೆ ಹೊಸದುರ್ಗ ಪರಿಸರದಲ್ಲಿ ಹಲವು ಶಾಕ್ತ ದೇವಾಲಯಗಳಿವೆ. ಅವುಗಳಲ್ಲಿ ಬಹುತೇಕ ಆಧುನಿಕವಾದವುಗಳು. ಪ್ರಸ್ತುತ ಪ್ರಾಚೀನ ಕೆಲವೇ ಶಾಕ್ತಾ ದೇವಾಲಯಗಳಲ್ಲಿ ಬಾಗೂರಿನ ಹೊರಗಲ್ಲಮ್ಮ ಹಾಗು ಅಂತರಘಟ್ಟಮ್ಮ ದೇವಾಲಯಗಳನ್ನು ಕಾಣಬಹುದು.

೪.೩.೧. ಹೊರಗಲ್ಲಮ್ಮ ದೇವಾಲಯ

ಬಾಗೂರಿನ ಹೊರಗಲ್ಲಮ್ಮ ದೇವಾಲಯವು ಕ್ರಿ.ಶ. ೧೬-೧೭ನೇ ಶತಮಾನದ್ದಾಗಿದ್ದು ವಿಜಯನಗರೋತ್ತರ ಶೈಲಿಯಲ್ಲಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗ್ರಾನೈಟ್ ಶಿಲೆಯಲ್ಲೇ ನಿರ್ಮಾಣಗೊಂಡಿದೆ. ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಕಾಣಬಹುದು. ಗರ್ಭಗೃಹದ ವಿಮಾನವು ಕದಂಬ ನಾಗರ ಶೈಲಿಯದಾಗಿದೆ. ಇದು ಅಷ್ಟತಳ ವಿಮಾನವಾಗಿದೆ. ಗ್ರೀವ, ಶಿಖರ, ಸ್ತೂಪಿ ಭಾಗಗಳನ್ನು ಕಾಣಬಹುದು. ಗರ್ಭಗೃಹದ ಭಿತ್ತಿಯ ಮೇಲೆ ಮೀನು, ಕೋತಿ, ಆನೆ, ನೃತ್ಯಗಾರ್ತಿ, ಲಜ್ಜಾಗೌರಿ, ಪುಂಗಿ ಊದುತ್ತಿರುವ ಹಾವಾಡಿಗ ಮುಂತಾದ ಉಬ್ಬು ಶಿಲ್ಪಗಳಿವೆ. ಗರ್ಭಗೃಹದಲ್ಲಿ ಹೊರಗಲ್ಲಮ್ಮ ಎನ್ನುವ ಶಕ್ತಿದೇವತಾ ಮೂರ್ತಿಶಿಲ್ಪವಿದೆ. ಅಂತರಾಳದ ಬಾಗಿಲುವಾಡವು ಲತಾಸುರುಳಿ ಹಾಗು ವಜ್ರಶಾಖೆಗಳನ್ನು ಹೊಂದಿದ್ದು ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಉಬ್ಬುಶಿಲ್ಪವಿದೆ. ನವರಂಗವು ಸ್ವತಂತ್ರವಾದ ನಾಲ್ಕು ಕಂಬಗಳನ್ನು ಹೊಂದಿದ್ದು ಅವುಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚಚ್ಚೌಕ ಮುಖದ ಭಾಗಗಳು ಅವುಗಳ ಮಧ್ಯೆ ಅಷ್ಟಪೈಲು ಹಾಗು ಹದಿನಾರು ಮುಖದ ಭಾಗಗಳಿವೆ. ಈ ಕಂಬಗಳಲ್ಲಿ ಮತ್ಸ್ಯಾವತಾರ, ವರಾಹ, ವ್ಯಾಳಿ, ಭಕ್ತರ ಶಿಲ್ಪಗಳನ್ನು ಕಾಣಬಹುದು.

ನವರಂಗದ ಒಳಭಾಗದ ಭಿತ್ತಿಯ ಮೇಲೆ ವಿಷ್ಣುವಿನ ಕಾಳಿಂಗಮರ್ಧನ ಶಿಲ್ಪ, ವೇಣುಗೋಪಾಲಸ್ವಾಮಿ, ಗೋವು, ಬೇಡರ ಕಣ್ಣಪ್ಪ ಮುಂತಾದ ಉಬ್ಬು ಶಿಲ್ಪಗಳಿವೆ.

೪.೩.೨. ಅಂತರಘಟ್ಟಮ್ಮ ದೇವಾಲಯ

ಬಾಗೂರಿನ ಊರಿನ ಕೊನೆಯ ಭಾಗದಲ್ಲಿರುವ ಅಂತರಘಟ್ಟಮ್ಮ ದೇವಾಲಯವು ವಿಜಯನಗರ ಕಾಲದ ದೇವಾಲಯವಾಗಿದೆ. ಆದರೆ ಅದರ ಅವಶೇಷಗಳು ಈಗ ಉಳಿದು ಬಂದಿರದೇ ಸ್ಥಳೀಯವಾಗಿ ಒಂದು ಪುಟ್ಟ ಗುಡಿಯಾಗಿ ಉಳಿದು ಬಂದಿದೆ. ಇದು ಗರ್ಭಗೃಹ ಹಾಗು ಸಾಂಧಾರ ಪ್ರದಕ್ಷಿಣಾ ಪಥವನ್ನು ಹೊಂದಿದೆ. ದೇವಾಲಯದ ಹೊರಭಾಗದಲ್ಲಿ ಕ್ರಿ.ಶ.೧೫೫೬ರ ವಿಜಯನಗರದ ಸದಾಶಿವರಾಯನ ಕಾಲದ ಒಂದು ಶಾಸನವಿದೆ ಹಾಗೂ ಹಸಿರು ಶಿಲೆಯಲ್ಲಿ ಕಡೆದ ರುಂಡವಿಲ್ಲದ ಒಂದು ಸ್ತ್ರೀ ಮೂರ್ತಿಶಿಲ್ಪ ಅಲ್ಲೇ ಇದೆ.

ಟಿಪ್ಪಣಿಗಳು

೧) ವಸಂತಲಕ್ಷ್ಮೀ ಕೆ., ಚಿತ್ರದುರ್ಗ ಜಿಲ್ಲೆಯ ಕಲ್ಯಾಣ ಚಾಲುಕ್ಯರ ದೇವಾಲಯಗಳು, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್ (ಸಂ), ಪು.೧೮೩.

೨) ಅದೇ

೩) ದಯಾನಂದ ಪಾಟೀಲ್ ವಿ., ಚಿತ್ರದುರ್ಗ ಜಿಲ್ಲೆಯ ಹೊಯ್ಸಳ ವಾಸ್ತುಶಿಲ್ಪ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ .ಆರ್ (ಸಂ), ಪು.೧೯೨.

೪. ಬಾಗೂರು ಆರ್. ನಾಗರಾಜಪ್ಪ, ಹೊಸದುರ್ಗದ ಸುತ್ತ, ಪು.೪೨.

೫. ಹೊಸದುರ್ಗ ತಾಲ್ಲೂಕಿನ ಹೆಗ್ಗರೆಯ ಪಾರ್ಶ್ವನಾಥ ಬಸದಿ (ಕ್ರಿ.ಶ.೧೧೬೦), ಗಲಗೇಶ್ವರ ದೇವಾಲಯ (ಕ್ರಿ.ಶ.೧೨೩೨), ಕಲ್ಲೇಶ್ವರ ದೇವಾಲಯ (ಕ್ರಿ.ಶ.೧೨೩೨) ಗಳು ಹೊಯ್ಸಳ ಕಾಲದ್ದಾಗಿವೆ.

೬. ಎಪಿಗ್ರಾಫಿಯಾ ಕರ್ನಾಟಿಕ., ಸಂಪುಟ.೧೧, ಸಂಖ್ಯೆ.೧೨೧

೭. ಬಾಗೂರು ಆರ್. ನಾಗರಾಜಪ್ಪ, ಪೂರ್ವೋಕ್ತ, ಪು. ೩೨.

೮. ಅದೇ

೯. ವಸಂತಲಕ್ಷ್ಮೀ ಕೆ., ಪೊರ್ವೋಕ್ತ, ಪು. ೧೮೮.

೧೦. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ. ೧೧, ಸಂಖ್ಯೆ ೧೨೧

೧೧. ಅದೇ, ಸಂಖ್ಯೆ ೧೨೪

೧೨. ಬಾಗೂರು ಆರ್. ನಾಗರಾಜಪ್ಪ, ಪೂರ್ವೋಕ್ತ, ಪು. ೬೧.

೧೩. ಅದೇ

೧೪. ಅದೇ

೧೫. ಅದೇ

೧೬. ಅದೇ, ಪು.೧೦೬

೧೭. ಅದೇ, ಪು.೪೧

೧೮. ಅದೇ, ಪು.೪೨

೧೯. ಅದೇ, ಪು.೪೩

೨೦. ಅದೇ, ಪು.೪೬

ಅಧ್ಯಾಯ ೫

ಮೂರ್ತಿಶಿಲ್ಪಗಳು

೫.೧. ಶೈವ ಮೂರ್ತಿಶಿಲ್ಪಗಳು

೫.೨. ವೈಷ್ಣವ ಮೂರ್ತಿಶಿಲ್ಪಗಳು

೫.೩. ಶಾಕ್ತ ಮೂರ್ತಿಶಿಲ್ಪಗಳು

ಅಧ್ಯಾಯ ೫

ಮೂರ್ತಿಶಿಲ್ಪಗಳು

ಶಿಲ್ಪ ಎನ್ನುವ ಮಾತು ಮೊದಲು ಬಹಳ ವ್ಯಾಪಕವಾದ ಅರ್ಥವನ್ನು ಪಡೆದಿತ್ತು. ಪ್ರಸಿದ್ಧವಾದ ಅರವತ್ತನಾಲ್ಕು ಕಲೆಗಳಿಗೆಲ್ಲಾ 'ಶಿಲ್ಪ' ಎನ್ನುವ ಹೆಸರೇ ಅನ್ವಯವಾಗುತ್ತಿತ್ತು. ಮುಂದೆ ಈ ಪದದ ವ್ಯಾಪ್ತಿ ಪರಿಮಿತಿಗೊಂಡು ಶಿಲ್ಪ ಎಂದರೆ ಮೂರ್ತಿಗಳ ನಿರ್ಮಾಣ ಎಂಬ ಅರ್ಥಕ್ಕೆ ಸೀಮಿತವಾಯಿತು.[೧] ಜಗತ್ ಸೃಷ್ಟಿಯು ಯಾವಾಗ ಮೊದಲಾಯಿತೋ ಆಗಲೇ ಶಿಲ್ಪವು ಪ್ರಾರಂಭವಾಗಿದೆಯೆಂದು ವೇದವು ಹೇಳಿದೆ. ಜಗತ್ ಸೃಷ್ಟಿಯನ್ನು ಜಗತ್ ಶಿಲ್ಪ ಎಂದೂ , ಈ ಜಗತ್ತಿನ ಸೃಷ್ಟಿಕರ್ತನನ್ನು ಜಗತ್‌ಶಿಲ್ಪಿ ಎಂದು ವರ್ಣಿಸಿರುವುದುಂಟು[೨]. ಶಿಲ್ಪ ಎಂಬ ಪದವು 'ಶೀಲಸಮುದೌ' ಎಂಬ ಧಾತುವಿನಿಂದ ಉತ್ಪನ್ನವಾಗಿದೆ. ಸಮಾಧಿ ಎಂಬ ಅರ್ಥವುಳ್ಳ ಶಿಲ್ ಎಂಬ ಧಾತುವು ತಪಸ್ಸನ್ನು ಸೂಚಿಸುತ್ತದೆ.

"ಶೀಲ ಸಮುಧೌ ಶೀಲ್ಯತ ಇತಿ ಶಿಲ್ಪ" ಮನಸ್ಸು ಸಮಾಧಿ ಸ್ಥಿತಿಯಲ್ಲಿದ್ದಾಗ ರೂಪಿತವಾಗುವ ಕರಕುಶಲ ವಸ್ತುವೇ ಶಿಲ್ಪ ಎಂದೂ ಹೇಳಿರುವುದು ಶಿಲ್ಪ ಶಬ್ದದ ವ್ಯಾಪಕ ಅರ್ಥ ವಿಸ್ತಾರವನ್ನು ಈ ಹಂತದಲ್ಲಿ ಕಾಣಬಹುದು".[೩]

ಶಿಲ್ಪಂ ಕರ್ಮಕಲಾಧಿಕಂ ಎನ್ನುವುದು ಅಮರಸಿಂಹನ ಅಮರಕೋಶದ ವಿವರಣೆಯಾಗಿದೆ. ಕರ್ತೃವಿನ ಅಧಿಕ ಕೌಶಲ್ಯವನ್ನೊಳಗೊಂಡ ಕರ್ಮ ಅಥವಾ ಕ್ರಿಯೆಗೆ ಶಿಲ್ಪವೆಂದು ಹೆಸರು[೪]. ಭಾರತೀಯ ವಾಸ್ತು, ಮೂರ್ತಿ, ಚಿತ್ರಕಲೆಗಳಿಗೆ ಸಂಬಂಧಿಸಿದ ಅಧ್ಯಯನವನ್ನು ಶಿಲ್ಪಶಾಸ್ತ್ರವೆಂದು. ಗುರುತಿಸಲಾಗುತ್ತದೆ. ಕೆಲವೊಮ್ಮೆ ಶಿಲ್ಪಶಾಸ್ತ್ರವೆಂದಲ್ಲಿ ಮೂರ್ತಿ ಅಥವಾ ಪ್ರತಿಮಾ ರಚನೆ, ಅವುಗಳ ಲಕ್ಷಣವನ್ನು ವಿವರಿಸಲಾಗುತ್ತದೆ. ಮೂರ್ತಿ ಎಂಬ ಪದವು ಆ ಪದಕ್ಕೆ ಪರ್ಯಾಯವಾಗಿ ಬಳಸಿದ ಪದಗಳಾದ ಪ್ರತಿಮಾ, ಬಿಂಬ, ಪ್ರತಿಕೃತಿ, ವಿಗ್ರಹ ಮುಂತಾದ ಶಬ್ದಗಳು ಅದೊಂದು ಭೌತಿಕ ವಸ್ತು ಎಂಬಂತೆ ಅರ್ಥಕೊಡುತ್ತವೆ.[೫] ಈ ರೀತಿಯ ಮೂರ್ತಿಶಿಲ್ಪವನ್ನು ಕುರಿತು ಶಾಸ್ತ್ರೀಯ ಅಧ್ಯಯನ ಮಾಡುವುದಕ್ಕೆ ಮೂರ್ತಿಶಾಸ್ತ್ರ ಅಥವಾ ಪ್ರತಿಮಾಶಾಸ್ತ್ರವೆಂದು ಕರೆಯಲಾಗುತ್ತದೆ. ಮೂರ್ತಿಶಿಲ್ಪವನ್ನುದ್ದೇಶಿಸಿ ಶಾಸ್ತ್ರೀಯವಾಗಿ ಹೇಳುವ ಶಿಲ್ಪ ಶಾಸ್ತ್ರ ಗ್ರಂಥಗಳನೇ ಕಾಣಬಹುದು. ಅವುಗಳಲ್ಲಿ ಕಾಶ್ಯಪಶಿಲ್ಪ, ಮಾನಸಾರ, ಸಮರಾಂಗಣ

ಸೂತ್ರಧಾರ, ಶಿಲ್ಪರತ್ನಂ, ಮಯಮತಂ, ಮಯವಾಸ್ತುಶಾಸ್ತ್ರ, ವಿಶ್ವಕರ್ಮವಾಸ್ತುಶಾಸ್ತ್ರ, ಸಕಲಾಧಿಕಾರ, ಕಾಶ್ಯಪ ಸಂಹಿತೆ, ದೇವತಾ ಮೂರ್ತಿ ಲಕ್ಷಣ, ಪ್ರಾಸಾದ ಮಂಡನ, ರಾಜವಲ್ಲಭದಂತಹ ಇಪ್ಪತ್ತು ಗ್ರಂಥಗಳು ಅತೀ ಪ್ರಮುಖವಾಗಿವೆ[೬].

ಮೂರ್ತಿಶಿಲ್ಪದ ಕಲ್ಪನೆಗಳು ಭಾರತದಲ್ಲಿ ಸಿಂಧೂನಾಗರೀಕತೆಯಿಂದಲೂ ಕಂಡುಬರುತ್ತವೆ. ಪ್ರಾರಂಭದಲ್ಲಿ ರಚನೆಯಾಗಿರುವ ಗೂಳಿ ಲಿಂಗ, ಪಶುಪತಿಶಿವ, ನೃತ್ಯ ಮಾಡುವ ಸ್ತ್ರೀ ಮುಂತಾದ ಶಿಲ್ಪಗಳು ಇಂದಿಗೂ ಅಧ್ಯಯನಗಳ ಚರ್ಚೆಯಲ್ಲಿ ಸ್ಥಾನವನ್ನು ಪಡೆದಿವೆ. ಇವು ನಂತರದ ಭಾರತೀಯ ಮೂರ್ತಿಶಿಲ್ಪಗಳ ಬೆಳವಣಿಗೆಗೆ ಪ್ರೇರಕವಾದವು. ಇನ್ನೂ ವೇದಗಳ ಯುಗದಲ್ಲಿ ವಿಗ್ರಹಗಳಿಗೆ ಪ್ರಾಧನ್ಯವಿರಲಿಲ್ಲವೆಂದೂ, ಪ್ರಕೃತಿ ಶಕ್ತಿಗಳನ್ನು ಉಪಾಸಿಸಲಾಗುತ್ತಿತ್ತೆಂದೂ ಹೇಳುವುದುಂಟು, ಇದರಲ್ಲಿ ನಿಜಾಂಶವಿದ್ದರೂ ವಿಗ್ರಹಗಳಿಗೂ ಸ್ಥಾನವಿಲ್ಲದೇ ಇರಲಿಲ್ಲ. ಇಂದ್ರ, ವರುಣ, ರುದ್ರ ಮೊದಲಾದ ದೇವತೆಗಳಿಗೆ ಮನುಷ್ಯಾಕಾರದ ಕಲ್ಪನೆಯನ್ನು ಕೊಟ್ಟಿರುವುದು ಅಲ್ಲಿ ಕಾಣುತ್ತದೆ[೭]. ಚಾರಿತ್ರಿಕ ಯುಗಕ್ಕೆ ಬಂದರೆ ಅತ್ಯಂತ ಪ್ರಾಚೀನವಾದ ಶಿಲ್ಪ ಕೃತಿಗಳು ಮೌರ್ಯರ ಕಾಲದವು. ಕಲ್ಲಿನ ಸ್ತಂಭಗಳ ಮೇಲಿನ ವೃಷಭ, ಆನೆ, ಸಿಂಹ, ಕುದುರೆ ಮೊದಲಾದ ಆಕೃತಿಗಳು ಪ್ರಮುಖವಾದವು. ಮೌರ್ಯರ ಶಕ್ತಿ ಇಳಿಮುಖವಾಗುತ್ತಿದ್ದಂತೆಯೇ ಶುಂಗರು, ಕುಶಾನರು, ಕಳಿಂಗರು ಶಿಲ್ಪಕಲೆಗೆ ಆಶ್ರಯವನ್ನು ಕೊಟ್ಟರು. ಗುಪ್ತರ ಕಾಲವಂತೂ ಶಿಲ್ಪ, ಸಾಹಿತ್ಯ, ವಿಜ್ಞಾನ ಎಲ್ಲವುಗಳ ದೃಷ್ಟಿಯಿಂದಲು ಸುವರ್ಣಯುಗವೆನ್ನಬಹುದು[೮].

ಕರ್ನಾಟಕ ಚಾರಿತ್ರಿಕ ಕಾಲದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆಯನ್ನು ಗುರುತಿಸುವಾಗ ಶಾತವಾಹನರು, ಕದಂಬರು, ಗಂಗರು, ಬಾದಾಮಿಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಮೂರ್ತಿಶಿಲ್ಪದ ಬೆಳವಣಿಗೆಗೆ ವಿಶೇಷ ಪ್ರೋತ್ಸಾಹ ನೀಡಿದರು.

ಪ್ರಸ್ತುತ ಅಧ್ಯಾಯದಲ್ಲಿ ಹೊಸದುರ್ಗ ಪರಿಸರದ ಪ್ರಾಚೀನ ದೇವಾಲಯಗಳಲ್ಲಿ ವಿವಿಧ ಕಾಲಘಟ್ಟಗಳಲ್ಲಿ ನಿರ್ಮಿಸಲಾದ ಮೂರ್ತಿಶಿಲ್ಪಗಳನ್ನು ಅಧ್ಯಯನ ಮಾಡಲಾಗಿದೆ. ಈಗಾಗಲೇ ಅಧ್ಯಯನ ಮಾಡಿದಂತೆ ಹೊಸದುರ್ಗ ಪರಿಸರ ಬಹುಮುಖ್ಯವಾಗಿ ಕಲ್ಯಾಣಿ ಚಾಲುಕ್ಯರು, ಹೊಯ್ಸಳ, ವಿಜಯನಗರ ಮತ್ತು ಪಾಳೆಯಗಾರರ ಕಾಲದಲ್ಲಿ ವಿಪುಲ ಪ್ರಮಾಣದಲ್ಲಿ ದೇವಾಲಯಗಳು ನಿರ್ಮಾಣಗೊಂಡಿವೆ. ಆಯಾ ರಾಜವಂಶಗಳ ಕಾಲದಲ್ಲಿ ನಿರ್ಮಾಣಗೊಂಡ ವಾಸ್ತುಶೈಲಿಯ ದೇವಾಲಯಗಳಲ್ಲಿ ಅವರದೇ ಆದ ಮೂರ್ತಿಶಿಲ್ಪಗಳು ಬೆಳೆದುಬಂದಿವೆ. ಕಲ್ಯಾಣ ಚಾಲುಕ್ಯ ಹಾಗೂ ಹೊಯ್ಸಳ ಶೈಲಿಯ ಬಹುತೇಕ ದೇವಾಲಯಗಳನ್ನು ಹೊಸದುರ್ಗದ ನೀರಗುಂದ ಹಾಗೂ ಬಾಗೂರು ಪರಿಸರದಲ್ಲಿ ಕಾಣಬಹುದಾಗಿದ್ದು ಅವರ ಕಾಲದ

ಮೂರ್ತಿಶಿಲ್ಪಗಳು ಬಹುತೇಕ ಖಚಿತವಾಗಿವೆ. ಅವುಗಳಲ್ಲಿ ಸಿದ್ಧೇಶ್ವರ ದೇವಾಲಯದ ಚನ್ನಕೇಶವ, ವೇಣುಗೋಪಾಲ ಮೂರ್ತಿಗಳು, ಗರ್ಭಗೃಹದ ಶಿವಲಿಂಗಗಳು ಬಹುಮುಖ್ಯವಾಗಿವೆ. ಕಲ್ಲೇದೇವರಕಟ್ಟೆಯ ಕಲ್ಲೇಶ್ವರ ದೇವಾಲಯದ ಶಿವಲಿಂಗ, ವೀರಭದ್ರ, ನಂದಿ, ಗಣೇಶ ಮೂರ್ತಿಗಳು ಕಲ್ಯಾಣ ಚಾಲುಕ್ಯರ ಕಾಲದವುಗಳು ಶಿವನೇಕಟ್ಟೆಯ ಗರ್ಭಗೃಹದ ಶಿವಲಿಂಗ; ಅಂತರಾಳದ ನಂದಿ ಶಿಲ್ಪಗಳು ಅದೇ ಕಾಲದವುಗಳು ಇನ್ನೂ ಹೊಯ್ಸಳ ಕಾಲದ ಮೂರ್ತಿಶಿಲ್ಪಗಳಲ್ಲಿ ಬಹುಮುಖ್ಯವಾಗಿ ಇಲ್ಲಿನ ದೇವಾಲಯಗಳಲ್ಲಿ ಕಪ್ಪು ಮಿಶ್ರಿತ ಬಳಪದ ಕಲ್ಲು, ಹಸಿರು ಮಿಶ್ರಿತ ಬಳಪದ ಕಲ್ಲುಗಳನ್ನು ಬಳಸಿ ವಿವಿಧ ಮೂರ್ತಿಶಿಲ್ಪಗಳನ್ನು ಕಡೆಯಲಾಗಿದೆ. ಈ ಕಲ್ಲು ಸೂಕ್ಷ್ಮ ಶೈಲಿಯ ಕೆತ್ತನೆಗಳಿಗೆ ಅನುಕೂಲವಾದದ್ದರಿಂದ ಅವುಗಳನ್ನು ಮೂರ್ತಿಗಳ ನಿರ್ಮಾಣಕ್ಕೆ ಬಳಸಿಕೊಂಡರು. ಆದ್ದರಿಂದಲೇ ಹೊಯ್ಸಳ ಕಾಲದ ಮೂರ್ತಿಶಿಲ್ಪಗಳ ರಚನೆಯು ಜಗತ್ಪ್ರಸಿದ್ಧಿಯನ್ನು ಪಡೆದಿರುವುದನ್ನು ಕಾಣಬಹುದು. ದೈಹಿಕವಾಗಿ ಮೈತುಂಬಿಕೊಂಡಿರುವ ಈ ಮೂರ್ತಿಗಳು ದೇಹದ ಮೇಲೆ ವಿವಿಧ ಆಭರಣಗಳ ಅಲಂಕಾರವನ್ನು ತುಂಬಾ ಸೂಕ್ಷ್ಮವಾಗಿ ಮಾಡಿರುವುದನ್ನು ಕಾಣಬಹುದು. ಬಾಗೂರು ಪಕ್ಕದ ಚಿಕ್ಕಯ್ಯಗಟ್ಟಿ ಗ್ರಾಮದ ಈಶ್ವರ ದೇವಾಲಯದ ನವರಂಗದಲ್ಲಿರುವ ಚನ್ನಕೇಶವ, ಗಣೇಶ, ಚಾಮುಂಡೇಶ್ವರಿ, ದೇವಾಲಯದ ಹೊರಗಿರುವ ಭೈರವ ಇವುಗಳು ಹೊಯ್ಸಳ ಮೂರ್ತಿಶಿಲ್ಪಗಳ ಕಲಾಕೃತಿಗಳಾಗಿವೆ. ಸಿದ್ದಪ್ಪನ ಬೆಟ್ಟದ ಗರ್ಭಗೃಹದ ಶಿವಲಿಂಗ, ಅಂತರಾಳದ ನಂದಿ, ಗಣೇಶ, ಭೈರವ ವಿಗ್ರಹಗಳು ಅದೇ ಕಾಲದವುಗಳಾಗಿವೆ. ಬಾಗೂರಿನ ಚನ್ನಕೇಶವ ದೇವಾಲಯದ ಚನ್ನಕೇಶವ, ಅಂತರಘಟ್ಟಮ್ಮ ದೇವಾಲಯದ ರುಂಡವಿಲ್ಲದ ದೇವಿ ಮೂರ್ತಿಶಿಲ್ಪ ಇವುಗಳು ಹೊಯ್ಸಳ ಕಾಲದ ನಿರ್ಮಿತಿಗಳು ಇನ್ನು ಹಲವು ಶಿಲ್ಪಗಳು ಇದೇ ಶೈಲಿಯಲ್ಲಿವೆ.

ವಿಜಯನಗರ ಕಾಲದಲ್ಲಿ ಅವರ ಹಲವು ಆಡಳಿತ ವಿಭಾಗಗಳನ್ನು ಹೊಂದಿರುವ ಹೊಸದುರ್ಗ ಪರಿಸರದಲ್ಲಿ ಅವರ ಶೈಲಿಯ ದೇವಾಲಯಗಳಿದ್ದು, ಅವುಗಳಲ್ಲಿ ಹಲವು ಮೂರ್ತಿಶಿಲ್ಪಗಳು ವಿಜಯನಗರ ಶೈಲಿಯಲ್ಲಿವೆ. ನಂತರದ ಪಾಳೆಯಗಾರರ ಕಾಲದಲ್ಲಿಯೆ ಚಿಕ್ಕಪುಟ್ಟ ದೇವಾಲಯಗಳು ನಿರ್ಮಾಣಗೊಂಡಿದ್ದು ಅವುಗಳಲ್ಲಿ ಆಂಜನೇಯ ಮೂರ್ತಿಶಿಲ್ಪಗಳೇ ಹೆಚ್ಚು.

೫.೧ ಶೈವ ಮೂರ್ತಿಶಿಲ್ಪಗಳು :-

ಶಿವಸಂಬಂಧಿ ಮೂರ್ತಿಶಿಲ್ಪಗಳಿಗೆ ಶೈವ ಮೂರ್ತಿಶಿಲ್ಪಗಳೆಂದು ಕರೆಯಲಾಗುತ್ತದೆ. ಹೊಸದುರ್ಗ ಪರಿಸರದ ಶೈವದೇವಾಲಯಗಳಲ್ಲಿ ಶೈವ ಸಂಬಂಧಿ ಮೂರ್ತಿಶಿಲ್ಪಗಳಿವೆ. ಅವುಗಳಲ್ಲಿ ಬಹುಮುಖ್ಯವಾಗಿ ಶಿವಲಿಂಗ, ನಂದಿ, ಗಣೇಶ, ವೀರಭದ್ರ, ಭೈರವಗಳಾಗಿವೆ.

ಶಿವಲಿಂಗಗಳಲ್ಲಿ ೨ ರಿಂದ ೫ ಅಡಿಗಳ ಎತ್ತರದ ಶಿವಲಿಂಗಗಳಿವೆ. ಅವುಗಳು ಕಪ್ಪುಶಿಲೆ ಹಾಗೂ ಹಸಿರು ಮಿಶ್ರಿತ ಬಳಪದ ಶಿಲೆಗಳಲ್ಲಿ ಕಂಡರಿಸಲಾಗಿದೆ. ಚಿಕ್ಕಯ್ಯಗಟ್ಟಿ ಈಶ್ವರ ದೇವಾಲಯದ ಶಿವಲಿಂಗವು ಶಾಸನೋಕ್ತವಾಗಿದ್ದು ಅಲ್ಲೆ ಇರುವ ಕ್ರಿ.ಶ. ೧೯೪ರ ಹೊಯ್ಸಳ ಶಾಸನದಲ್ಲಿ 'ಧರ್ಮೇಶ್ವರ' ಎಂಬುದಾಗಿ ಕರೆಯಲ್ಪಟ್ಟಿದೆ.[೯] ಸುಮಾರು ೩ ಅಡಿ ಎತ್ತರದ ಪಾಣಿವಟ್ಟದ ಮೇಲೆ ಸು. ೧ಅಡಿ ಶಿವಲಿಂಗವಿದೆ. ಇದರ ಪಾಣಿವಟ್ಟವು ತ್ರಿಕೋನಾಕೃತಿಯ ಮೂಲೆಗಳಿಂದ ಕೂಡಿದ್ದು ಸುಂದರವಾಗಿದ್ದು, ಬ್ರಹ್ಮ ಭಾಗದಲ್ಲಿ ಪದ್ಮದ ಅಲಂಕರಣವಿದೆ. ನಿರಗುಂದ ಗ್ರಾಮದ ಶಿವಲಿಂಗವು ಸಹ ಶಾಸನೋಕ್ತವಾಗಿದ್ದು, ಹೊಯ್ಸಳರ ಕಾಲದ ಕ್ರಿ.ಶ. ೧೦೬೫ರ ಶಾಸನದಲ್ಲಿ ಸಿದ್ಧೇಶ್ವರ ಎಂಬುದಾಗಿ ಕರೆಯಲ್ಪಟ್ಟಿದೆ.[೧೦]. ಇದು ಸು. ೨ಅಡಿ ಪಾಣಿವಟ್ಟದ ಮೇಲೆ ೧ಅಡಿ ಶಿವಲಿಂಗವಿದೆ. ಇದರ ಪಾಣಿವಟ್ಟದ ಪೀಠವು ಪದ್ಮದ ಅಲಂಕರಣ, ಚತುರ್‌ಕೋನ ಮೂಲೆಗಳನ್ನು ಹೊಂದಿದೆ. ಇದರ ವಿಷ್ಣುಭಾಗವು ವೃತ್ತಾಕಾರವಾಗಿದೆ. ಕಲ್ಲೇದೇವರಕಟ್ಟೆಯ ಕಲ್ಲೇಶ್ವರ ದೇವಾಲಯದ ಶಿವಲಿಂಗವು ಕಲ್ಯಾಣ ಚಾಲುಕ್ಯರ ಕೊನೆಯ ಕಾಲ ಅಥವಾ ಪ್ರಾರಂಭ ಹೊಯ್ಸಳ ಕಾಲದ್ದಾಗಿದೆ.

ಕಂಗುವಳ್ಳಿಯ ಕೋಡಿ ರಾಮಲಿಂಗೇಶ್ವರ ದೇವಾಲಯದ ಶಿವಲಿಂಗ, ಭೈರವ ಬೆಟ್ಟದ ಶಿವಲಿಂಗಗಳು ಸು. ೧.೧/೨ ಅಡಿ ಎತ್ತರದವುಗಳಾಗಿದ್ದು ಗ್ರಾನೈಟ್ ಶಿಲೆಯಲ್ಲಿ ಕಡೆಯಲಾಗಿದ್ದು ಪಾಳೆಯಗಾರರ ಕಾಲದವುಗಳು. ಅದೇ ರೀತಿ ಪ್ರತಿ ಶಿವನ ದೇವಾಲಯಗಳಲ್ಲಿ ಅವನ ವಾಹನ ನಂದಿ ಇರುವುದು ಸಾಮಾನ್ಯವಾಗಿರುತ್ತದೆ. ಈ ಪರಿಸರದ ನಂದಿಗಳು ಕಲ್ಯಾಣ ಚಾಲುಕ್ಯ ಹಾಗೂ ಹೊಯ್ಸಳ ಶೈಲಿಯವುಗಳು. ಅವುಗಳಲ್ಲಿ ಅತ್ಯಂತ ಎತ್ತರದ ನಂದಿ ವಿಗ್ರಹ ಆನಿವಾಳದ ಈಶ್ವರ ದೇವಾಲಯದಲ್ಲಿದೆ. ಹೊಯ್ಸಳ ಶೈಲಿಯ ಇದು ಸು. ೫ ಅಡಿ ಎತ್ತರವಿದೆ. ಕಪ್ಪುಶಿಲೆಯ ಈ ನಂದಿ ಗಂಟೆಹಾರ, ತಲೆಗೆ ಇತರೆ ಅಲಂಕಾರಗಳನ್ನು ಮಾಡಲಾಗಿದ್ದು ಹೊಯ್ಸಳರ ಸೂಕ್ಷ್ಮಕೆತ್ತನೆಗೆ ಸಾಕ್ಷಿಯಾಗಿದೆ.

ಗಣೇಶನ ಮೂರ್ತಿಶಿಲ್ಪಗಳು ಇಲ್ಲಿನ ಶೈವ ದೇವಾಲಯಗಳಲ್ಲಿ ಹೆಚ್ಚು ಕಾಣಬಹುದು. ಅವುಗಳಲ್ಲಿ ಬಹುತೇಕ ಹೊಯ್ಸಳ ಶೈಲಿಯ ಕೆತ್ತನೆಗಳಿಂದ ಕೂಡಿವೆ. ಅವುಗಳಲ್ಲಿ ಬಹುಮುಖ್ಯವಾಗಿ ನೀರಗುಂದದ ಸಿದ್ದೇಶ್ವರ ದೇವಾಲಯದ ನವರಂಗದಲ್ಲಿರವ ಗಣೇಶ, ಚಿಕ್ಕಯ್ಯಗಟ್ಟಿಯ ಈಶ್ವರ ದೇವಾಲಯದ ಗಣೇಶಗಳನ್ನು ಹೆಸರಿಸಬಹುದಾದವುಗಳು. ಮೂಷಿಕನ ಬಿಂಬವಿರುವ ಪೀಠದಲ್ಲಿ ಲಲಿತಾಸನದಲ್ಲಿ ಕುಳಿತಿರುವ ಗಣಪನು ತನ್ನ ಕೈಗಳಲ್ಲಿ ಪರಶು, ಅಂಕುಶ, ದಂತ, ಲಡ್ಡುಪಾತ್ರೆಯನ್ನು ಹೊಂದಿದ್ದಾನೆ. ತಲೆಗೆ ಕಿರೀಟ, ಭುಜದಲ್ಲಿ ಸ್ಕಂದಮಾಲೆ, ಕೈಗಳಲ್ಲಿ ಕಡಗ, ಬಳೆ, ಕಾಲುಗಳಲ್ಲಿ ಕಾಲ್ಕಡಗ, ದೇಹದಲ್ಲಿ ಇತರೆ ಆಭರಣಗಳನ್ನು ಧರಿಸಿದ್ದಾನೆ. ಇಂತಹ ಹಲವು ಅಂಶಗಳನ್ನು ಗಣಪತಿ ಮೂರ್ತಿಶಿಲ್ಪಗಳಲ್ಲಿ ಕಾಣಬಹುದು.

ವೀರಭದ್ರ ಮೂರ್ತಿಶಿಲ್ಪಗಳು ಸಹ ಈ ಪರಿಸರದ ಶೈವ ದೇವಾಲಯಗಳಲ್ಲಿ ಕಾಣಬಹುದು. ಅವುಗಳಲ್ಲಿ ನೀರಗುಂದದ ಸಿದ್ದೇಶ್ವರ ದೇವಾಲಯದ ಹೊರಗಿರುವ ವೀರಭದ್ರ ಮೂರ್ತಿಶಿಲ್ಪ, ಕಲ್ಲೇದೇವರಕಟ್ಟೆಯ ಕಲ್ಲೇಶ್ವರ ದೇವಾಲಯದ ಎಡಭಾಗ ಗರ್ಭಗೃಹದಲ್ಲಿರುವ ವೀರಭದ್ರ ಮೂರ್ತಿಶಿಲ್ಪ, ಹೊಸದುರ್ಗ ನಗರದ ವೀರಭದ್ರ ದೇವಾಲಯದ ವೀರಭದ್ರ ಮೂರ್ತಿಶಿಲ್ಪ, ಆನಿವಾಳ ಗ್ರಾಮದ ಈಶ್ವರ ದೇವಾಲಯದ ಎಡಭಾಗದ ಗರ್ಭಗೃಹದ ವೀರಭದ್ರ ಮೂರ್ತಿಶಿಲ್ಪ ಇವುಗಳನ್ನು ಕಾಣಬಹುದು. ವೀರಭದ್ರ ಮೂರ್ತಿಶಿಲ್ಪದ ಲಕ್ಷಣದಲ್ಲಿ ನಂದಿ ಬಿಂಬವಿರುವ ಪೀಠದ ಮೇಲೆ ನಿಂತಿರುವ ವೀರಭದ್ರನು ಕಾಪಾಲ ಬೂಷಿತ ಕಿರೀಟ, ಸರ್ಪಕುಂಡಲ, ರುಂಡಗಳ ಮಾಲೆ, ಕಾಲುಗಗ್ಗರ, ಕೈಕಂಕಣ, ಯಜ್ಞೋಪವೀತ ಸಾಧನಗಳಿಂದ ಅಲಂಕೃತನಾಗಿದ್ದಾನೆ. ಕೈಗಳಲ್ಲಿ ಖಡ್ಗ, ಶೂಲ, ಬಿಲ್ಲು, ಟಂಕ ಇವುಗಳನ್ನು ಹೊಂದಿದ್ದಾನೆ. ವೀರಭದ್ರನ ಬದಿಯಲ್ಲಿ ಬಲಭಾಗದಲ್ಲಿ ಆಡಿನ ತಲೆಯ ದಕ್ಷಬ್ರಹ್ಮನ ಶಿಲ್ಪವಿದೆ. ವೀರಭದ್ರ ಮೂರ್ತಿಯ ಹಿಂಭಾಗದಲ್ಲಿ ಲತಾಸುರುಳಿಯ ಪ್ರಭಾವಳಿಯಿದ್ದು ಅದರ ಮಧ್ಯೆ ವ್ಯಾಳದ ಶಿಲ್ಪವಿದೆ.

ಅದೇ ರೀತಿ ಭೈರವನ ಮೂರ್ತಿಶಿಲ್ಪಗಳನ್ನು ಈ ಪರಿಸರದ ಶೈವ ದೇವಾಲಯಗಳಲ್ಲಿ ಕಾಣಬಹುದು. ಪ್ರಸ್ತುತ ಅಧ್ಯಯನದ ಕ್ಷೇತ್ರ ಕಾರ್ಯದಲ್ಲಿ.[೭] ಭೈರವನ ಮುರ್ತಿಶಿಲ್ಪಗಳು ದೊರೆತಿದ್ದು ಅವುಗಳು ಹೊಯ್ಸಳ ಹಾಗೂ ವಿಜಯನಗರ ಕಾಲದ ಮೂರ್ತಿಶಿಲ್ಪಗಳಾಗಿವೆ ಎಂದು ಹೇಳಬಹುದು. ಅವುಗಳಲ್ಲಿ ನೀರಗುಂದ ಸಿದ್ಧೇಶ್ವರ ದೇವಾಲಯದ ಹೊರಭಾಗದಲ್ಲಿರುವ ಭೈರವ ಹಾಗೂ ಚಿಕ್ಕಯ್ಯಗಟ್ಟಿಯ ಈಶ್ವರ ದೇವಾಲಯದ ಹಿಂಬದಿಯ ಮಂಟಪದಲ್ಲಿರುವ ಭೈರವ ಮೂರ್ತಿಶಿಲ್ಪಗಳು ಹೊಯ್ಸಳ ಶಿಲ್ಪಗಳು ಇವುಗಳನ್ನು ಹಸಿರು ಬಣ್ಣದ ಮೆದುಕಲ್ಲಿನಲ್ಲಿ ಕಂಡರಿಸಲಾಗಿದೆ. ಭೈರವ ಶಿಲ್ಪಗಳ ರಚನೆಯಲ್ಲಿ ವೃಚ್ಚಿಕ ಬಿಂಬದ ಪೀಠದ ಮೇಲೆ ನಿಂತಿರುವ ಭೈರವನು ನಗ್ನನಾಗಿದ್ದು, ತನ್ನ ಕೈಗಳಲ್ಲಿ ತ್ರಿಶೂಲ, ಖಡ್ಗ, ಢಮರು ಹಾಗೂ ರಕ್ತಒಸರುತ್ತಿರುವ ರುಂಡವನ್ನು ಹೊಂದಿರುವನು. ಒಸರುತ್ತಿರುವ ರಕ್ತವನ್ನು ನಾಯಿಯೊಂದು ನೆಕ್ಕುತ್ತಿದೆ. ಅದರ ಪಕ್ಕದಲ್ಲಿ ಇತರೆ ಶಿಲ್ಪಾವಶೇಷಗಳು ಸಹ ಇವೆ. ಈ ಮೂರ್ತಿಗೆ ಲತಾಸುರುಳಿಯ ಸೂಕ್ಷ್ಮ ಕೆತ್ತನೆಯ ಪ್ರಭಾವಳಿಯಿದೆ. ಮೇಲೆ ವ್ಯಾಳದ ಬಿಂಬವಿದೆ. ಶೈವದೇವಾಲಯಗಳಲ್ಲಿ ಭೈರವ ಮೂರ್ತಿಶಿಲ್ಪಗಳಿರುವ ಈ ಪರಿಸರದಲ್ಲಿ ಬಹುತೇಕ ಬೈರವಾರಾಧನೆ ಹಾಗೂ ನಾಥ ಸಂಪ್ರದಾಯದ ಕುರುಹುಗಳನ್ನು ಕುರಿತು ಹೇಳುತ್ತವೆ. ಹೀಗೆ ಇಲ್ಲಿನ ಹಲವು ಶೈವಮೂರ್ತಿ ಶಿಲ್ಪಗಳ ವೈವಿಧ್ಯತೆಯನ್ನು ಕಾಣಬಹುದು.

೫.೨ ವೈಷ್ಣವ ಮೂರ್ತಿಶಿಲ್ಪಗಳು

ಹೊಸದುರ್ಗ ಪರಿಸರವು ವೈಷ್ಣವ-ಶ್ರೀವೈಷ್ಣವ ಪಂಥಗಳಿಗೆ ಆಶ್ರಯವನ್ನು ಬಹುವಾಗಿ ನೀಡಲಾಗಿತ್ತು ಎಂಬುದಕ್ಕೆ ಇಲ್ಲಿರುವ ಈ ಪಂಥದ ದೇವಾಲಯಗಳು, ಮೂರ್ತಿಶಿಲ್ಪಗಳು ಇತರೆ ಶಿಲ್ಪಾವಶೇಷಗಳು ಮತ್ತು ಶಾಸಗಳೇ ಪ್ರಮುಖ ಆಧಾರಗಳಾಗಿವೆ. ಹೊಸದುರ್ಗ ಪರಿಸರದ ವೈಷ್ಣವ ಮೂರ್ತಿಶಿಲ್ಪಗಳೆಂದರೆ ಬಾಗೂರಿನ ಚನ್ನಕೇಶವ, ಕೋದಂಡರಾಮ, ಗರುಡ, ಆಳ್ವಾರರ ಶಿಲಾಮೂರ್ತಿಗಳು, ಚಿಕ್ಕಯ್ಯಗಟ್ಟಿ ಗ್ರಾಮದ ಈಶ್ವರ ದೇವಾಲಯದ ನವರಂಗದಲ್ಲಿರುವ ಚನ್ನಕೇಶವ, ನೀರಗುಂದದ ಸಿದ್ಧೇಶ್ವರ ದೇವಾಲಯದ ವೇಣುಗೋಪಾಲ ಮತ್ತು ಚನ್ನಕೇಶವ ಮೂರ್ತಿಶಿಲ್ಪಗಳು ಅದರೊಂದಿಗೆ ಪಾಳೆಯಗಾರರ ಕಾಲದ ಹಲವು ದೇವಾಲಯಗಳಲ್ಲಿ ಕಂಡು ಬಂದಿರುವ ಆಂಜನೇಯ ಮೂರ್ತಿಶಿಲ್ಪಗಳು ಇವುಗಳೆಲ್ಲ ವೈಷ್ಣವ ಸಂಬಂಧಿ ಮೂರ್ತಿಶಿಲ್ಪಗಳೆಂದು ಹೇಳಬಹುದು.

ಈ ಪರಿಸರದ ಚನ್ನಕೇಶವ ಮೂರ್ತಿಶಿಲ್ಪಗಳು ಹೊಯ್ಸಳ ಕಾಲದವುಗಳು. ಚನ್ನಕೇಶವ ಮೂರ್ತಿಶಿಲ್ಪಗಳನ್ನು ಹೊಂದಿರುವ ಚಿಕ್ಕಯ್ಯಗಟ್ಟಿ ಈಶ್ವರ ದೇವಾಲಯ ಹಾಗೂ ನೀರಗುಂದದ ಸಿದ್ಧೇಶ್ವರ ದೇವಾಲಯಗಳು ಹೊಯ್ಸಳರ ಕಾಲದ ಶಾಸನೋಕ್ತವಾಗಿವೆ.[೧೧] ಸ್ಥಾನಕ ಭಂಗಿಯಲ್ಲಿರುವ ಚನ್ನಕೇಶವನು ತನ್ನ ಕೈಗಳಲ್ಲಿ ಶಂಖ, ಚಕ್ರ, ಗಧಾ, ಪದ್ಮಗಳನ್ನು ಹೊಂದಿರುವನು. ಕಿರೀಟ, ಕೇಯೂರ, ಕಂಠಿಹಾರ, ಭುಜಬಂಧ, ಸ್ಕಂದಮಾಲೆ, ಉದರಬಂಧ, ಯಜ್ಞೋಪವಿತ, ವೈಜಯಂತಿ, ಕೈಬಳೆ, ಕಾಲ್ಗಡಗ ಮುಂತಾದವುಗಳನ್ನು ಧರಿಸಿದ್ದಾನೆ. ಸೊಂಟದ ಬಿಗಿತ ಪಾದದವರೆಗೂ ಇದೆ. ಬದಿಯಲ್ಲಿ ಶ್ರೀದೇವಿ ಮತ್ತು ಭೂದೇವಿಯರು ತ್ರಿಭಂಗಿಯಲ್ಲಿ ನಿಂತಿರುವವರು. ಮೂರ್ತಿಶಿಲ್ಪದ ಪ್ರಭಾವಳಿಯಲ್ಲಿ ಲತಾಸುರುಳಿ ಹಾಗೂ ಮಧ್ಯದಲ್ಲಿ ವ್ಯಾಳವಿದೆ. ಈ ತೆರನಾದ ಲಕ್ಷಣಗಳನ್ನು ಚನ್ನಕೇಶವನ ಮೂರ್ತಿಶಿಲ್ಪದಲ್ಲಿ ಕಾಣಬಹುದು.

ಬಾಗೂರಿನ ಚನ್ನಕೇಶವ ದೇವಾಲಯದ ಕೋದಂಡರಾಮನ ಕಂಚಿನ ಶಿಲ್ಪದ ಬಗ್ಗೆ ನೋಡಿದಾಗ ಈ ವಿಗ್ರಹವು ಸು. ೯೨.೪ ಸೆಂ.ಮೀ ಎತ್ತರವಿದ್ದು ೧೩.೬ ಸೆಂ ಮೀ. ಎತ್ತರದ ಪದ್ಮಪೀಠದ ಮೇಲೆ ತ್ರಿಭಂಗಿ ಸ್ಥಾನದಲ್ಲಿ ನಿಂತುಕೊಂಡಿದೆ. ಮೇಲಕ್ಕೆತ್ತಿದ ಎಡಗೈ ಬಿಲ್ಲು ಹಿಡಿದುಕೊಳ್ಳುವ ಮುದ್ರೆಯಲ್ಲಿದ್ದರೆ, ಬಲಗೈ ಕಟಕಾ ಮುದ್ರೆಯನ್ನು ಸೂಚಿಸುತ್ತದೆ. ರಾಮ ಕಿರೀಟ ಮುಕುಟ ಧರಿಸಿದ್ದಾನೆ. ಇದೊಂದು ಅಂಡೆಯಾಕಾರದ ಕಿರೀಟವಾಗಿದ್ದು ಇದರ ಅಗ್ರಭಾಗ ಶಂಕುವಿನಾಕೃತಿಯಲ್ಲಿದೆ. ವಿಗ್ರಹದ ತಲೆಯ ಹಿಂದೆ ಶಿರಶ್ಚಕ್ರವಿದೆ. ಇದು ಎಂಟು ದಳದ ಪದ್ಮವಿನ್ಯಾಸವನ್ನೊಳಗೊಂಡಿರುವುದು. ಚಕ್ರದ ಕೇಂದ್ರ ಭಾಗದಿಂದ ಮಟ್ಟ ಕುಚ್ಚು ತೂಗಾಡುತ್ತಿರುತ್ತದೆ. ಯಜ್ಞೋಪವೀತ ಧರಿಸಿದ್ದು ಇದು ಉದರಬಂದಕ್ಕೆ ತಾಗುತ್ತಿದೆ. ಉದರ ಬಂಧ ಸರಳವಾದ ಅಲಂಕರಣೆಯನ್ನೊಳಗೊಂಡ ಪಟ್ಟಿಯಾಗಿದ್ದು ಎದೆಯ ಕೆಳಭಾಗದಲ್ಲಿ

ಹೊಟ್ಟೆಗೆ ಸುತ್ತಿಕೊಂಡಿರುತ್ತದೆ. ಭುಜದ ಮೇಲ್ಭಾಗದಲ್ಲಿ ಸ್ಕಂದಮಾಲೆ ಎಂಬ ಆಭರಣವಿದೆ. ಸರಳವಾದ ಎಳೆಗಳಿಂದ ಕೂಡಿದ ಕಂಠೀಹಾರವಿದೆ. ಇವನ ಕಟೀಸೂತ್ರವು ಅನೇಕ ಪಟ್ಟಿಕೆಗಳಿಂದ ಕೂಡಿದೆ. ಈ ಎಲ್ಲಾ ಆಭರಣಗಳನ್ನು ಧರಿಸಿದ ಕೋದಂಡ ರಾಮನ ಹಿತಮಿತವಾದ ಅಂಗಾಂಗ ಸೌಷ್ಟವ, ಧೃಡಕಾಯ, ತುಂಬುಗಲ್ಲದ ದುಂಡು ಮುಖ, ಕಿರುನಗೆ ತುಂಬಿದ ಪುಟ್ಟ ತುಟಿ, ಚೂಪಾದ ಮೂಗು, ಕೋನಾಕೃತಿಯ ಮೃದುಗಲ್ಲ ನಿಜಕ್ಕೂ ಮನಮೋಹಕವಾಗಿವೆ. ಹಿತಮಿತವಾದರೂ ಸಾಕಷ್ಟು ವಿವರಪೂರ್ಣವಾದ ಅಲಂಕರಣೆಗಳೆಲ್ಲ ಆಕರ್ಷಕವಾಗಿವೆ. ಕಂಚು ಶಿಲ್ಪದ ಶೈಲಿಯನ್ನಾಧರಿಸಿ ಹೆಚ್.ಆರ್. ರಘುನಾಥಭಟ್ ಅವರು ಕೋದಂಡರಾಮನ ಈ ವಿಗ್ರಹ ಚೋಳರ ಕಾಲದ್ದು (೧೧-೧೨ನೆಯ ಶತಮಾನ) ಎಂದು ಹೇಳಿದ್ದಾರೆ[೧೨].

ಬಾಗೂರು ಚನ್ನಕೇಶವ ದೇವಾಲಯದ ಪ್ರಾಂಗಣದಲ್ಲಿ ಬರುವ ವೈಕುಂಠನಾರಾಯಣನ ಪುಟ್ಟಗುಡಿ ಇದೆ. ಇಲ್ಲಿನ ವೈಕುಂಠನಾರಾಯಣನ ಮೂರ್ತಿಶಿಲ್ಪವು ವೈಷ್ಣವ ಸಂಪ್ರದಾಯದಲ್ಲಿ ಬಹುಮುಖ್ಯವಾದುದಾಗಿದೆ. ಪೀಠದ ಮೇಲೆ ಇರುವ ಗರುಡನು ತನ್ನ ಭುಜದ ಮೇಲೆ ನಾರಾಯಣನನ್ನು ಹೊತ್ತಿದ್ದಾನೆ. ನಾರಾಯಣನ ಎಡತೊಡೆಯ ಮೇಲೆ ಲಕ್ಷ್ಮೀ ಕುಳಿತಿರುವಳು. ಚತುರ್ಭುಜಧಾರಿಯಾದ ನಾರಾಯಣನ ಕೈಗಳಲ್ಲಿ ಪದ್ಮ, ಚಕ್ರ, ಮೂರನೇ ಕೈಯನ್ನು ಲಕ್ಷ್ಮೀಯ ಮೇಲೆ, ನಾಲ್ಕನೆಯ ಕೈಯಲ್ಲಿ ಗಧಾ ಹಿಡಿದಿರುವನು. ನಾರಾಯಣನ ಹಿಂದಿನ ಪ್ರಭಾವಳಿಯು ಹಲವು ಅಲಂಕಾರಗಳಿಂದ ಕೂಡಿದ್ದು ಮಧ್ಯದಲ್ಲಿ ಏಳು ಹೆಡೆಯ ಸರ್ಪವಿದೆ. ಹಾರುವ ಭಂಗಿಯಲ್ಲಿರುವ ಗರುಡನು ತನ್ನ ಎರಡು ಕೈಗಳಲ್ಲಿ ನಾರಾಯಣನ ಕಾಲುಗಳನ್ನು ಹಿಡಿದಿರುವನು. ಈ ತೆರನಾದ ಶಿಲ್ಪಾದಿ ಲಕ್ಷಣಗಳನ್ನು ವೈಕುಂಠನಾರಾಯಣ ಮೂರ್ತಿಶಿಲ್ಪವು ಹೊಂದಿದೆ. ಶ್ರೀ ವೈಷ್ಣವ ದೇವಾಲಯಗಳಲ್ಲಿ ಆಳ್ವಾರರ ಶಿಲಾ ವಿಗ್ರಹಗಳನ್ನು ಪ್ರತಿಷ್ಠಾಪಿಸುವುದು ನಿಯಮಬದ್ಧವಾಗಿದ್ದು ಅದೇ ರೀತಿಯಲ್ಲಿ ಚನ್ನಕೇಶವನ ದೇವಾಲಯದ ವೈಕುಂಠ ನಾರಾಯಣನ ಪುಟ್ಟಗುಡಿಯಲ್ಲಿ ವೈಕುಂಠನಾರಾಯಣನ ಎರಡು ಬದಿಗಳಲ್ಲಿ ಸು. ೧೨ ಆಳ್ವಾರರ ಶಿಲಾಮೂರ್ತಿಗಳಿವೆ. ಆ ಆಳ್ವಾರರುಗಳೆಂದರೆ, ಪರಿಯಾಳ್ವಾರ್, ನಮ್ಮಾಳ್ವಾರ್, ಮಧುರಕವಿ ಆಳ್ವಾರ್, ಕೊರತ್ತಾಳ್ವರ್, ತಿರುಪ್ಪಾನಾಳ್ವಾರ್, ಬೂದತ್ತಾಳ್ವಾರ್, ಪೇಯಾಳ್ವಾರ್, ತಿರುಮಂಗೈ ಆಳ್ವಾರ್, ತೊಂಡರಪ್ಪೊಡಿಆಳ್ವಾರ್, ಕುಲಶೇಖರ ಆಳ್ವಾರ್, ತಿರುಮಳೈ ಸೈಯ್ಯಾಳ್ವಾರ್, ಅಂಡಾಳ್ ಮೂರ್ತಿಶಿಲ್ಪಗಳನ್ನು ಕಾಣಬಹುದು.

ನೀರಗುಂದದ ಸಿದ್ಧೇಶ್ವರ ದೇವಾಲಯದ ಎಡಭಾಗದ ಗರ್ಭಗೃಹದಲ್ಲಿ ವೇಣುಗೋಪಾಲ ಮೂರ್ತಿಶಿಲ್ಪವಿದೆ. ಪ್ರಭಾವಳಿಯ ಮಧ್ಯದಲ್ಲಿರುವ ಸಿಂಹಲಲಾಟದ ಕೆಳಗೆ ವೇಣುಗೋಪಾಲನ ಬಲಗಾಲನ್ನು ಕರ್ತರಿ ಕಾಲಾಗಿಸಿ ತ್ರಿಭಂಗಿಯಲ್ಲಿ ನಿಂತು ವೇಣುವನ್ನು ನುಡಿಸುತ್ತಿರುವಂತೆ ಇದೆ. ಆದರೆ ಮೂರ್ತಿ ಭಗ್ನಗೊಂಡಿದೆ. ಗೋಪಾಲನ ಕೊರಳಲ್ಲಿ

ಸುಂದರವಾದ ಪದಕದ ಹಾರವಿದೆ. ಕೈ ತೋಳಿನಲ್ಲಿ ಭುಜಕೀರ್ತಿ ತೋಳ್ಬಂದಿಯೂ, ಕೈಗಳಲ್ಲಿ ದಪ್ಪದಾದ ಪಟ್ಟಿಯಂತಹ ಕಡಗವಿದೆ. ಸಣ್ಣದಾದ ಕಟಿಯುಳ್ಳ ಗೋಪಾಲನ ಕಟಿಯಲ್ಲಿ ಸುಂದರವಾದ ಮಣಿಮಾಲೆಯಿಂದ ಕೂಡಿದ ಕಟೀಬಂಧವಿದ್ದು ಅದರ ಮುತ್ತಿನ ಮಾಲೆಗಳು ತೊಡೆಯನ್ನಾವರಿಸಿದೆ. ಇದು ಹೊಯ್ಸಳ ಶಿಲ್ಪ ಲಕ್ಷಣಗಳಿಂದ ಕೂಡಿದೆ.

ಇನ್ನೂ ಇಲ್ಲಿನ ಪಾಳೆಯಗಾರರ ಕಾಲದ ಹಲವು ದೇವಾಲಯಗಳು ಹನುಮಂತನ ಮೂರ್ತಿಶಿಲ್ಪಗಳನ್ನು ಹೊಂದಿವೆ. ಅವುಗಳು ಗ್ರಾನೈಟ್ ಶಿಲೆಯಲ್ಲಿ ೩ ಅಡಿಗಳಿಂದ ಹಿಡಿದು ಸು. ೧೦ ಅಡಿಗಳ ಎತ್ತರದ ಹನುಮಂತನ ಮೂರ್ತಿಶಿಲ್ಪಗಳನ್ನು ಕಾಣಬಹುದು. ಅವುಗಳಲ್ಲಿ ಬಹುಮುಖ್ಯವಾಗಿ ಕೆಲ್ಲೋಡು ಗ್ರಾಮದ ಹನುಮಂತ ಮೂರ್ತಿಶಿಲ್ಪವು ಶಾಸನೋಕ್ತವಾಗಿದೆ.[೧೩] ಬಾಗೂರಿನ ಜೀವಿಪ್ರಾಣದೇವರು, ಬೋಕಿಕೆರೆಯ ಹನುಮಂತ ದೇವರು, ಅತ್ತಿಗಟ್ಟೆಯ ಹನುಮಂತ ಮೂರ್ತಿಶಿಲ್ಪಗಳು ಬಹುಮುಖ್ಯವಾಗಿವೆ.

೫.೩. ಶಾಕ್ತ ಮೂರ್ತಿಶಿಲ್ಪಗಳು :-

ಶಕ್ತಿದೇವತೆಗಳ ಮೂರ್ತಿಶಿಲ್ಪಗಳನ್ನು ಶಾಕ್ತ ಮೂರ್ತಿಶಿಲ್ಪಗಳೆಂದು ಕರೆಯಲಾಗುವುದು. ಹೊಸದುರ್ಗ ಪರಿಸರದಲ್ಲಿ ಚಿಕ್ಕಯ್ಯಗಟ್ಟಿ ಗ್ರಾಮದ ಈಶ್ವರ ದೇವಾಲಯದ ನವರಂಗದ ಮಹಿಷಾಸುರ ಮರ್ದಿನಿ ಹಾಗೂ ಬಾಗೂರು ಅಂತರಘಟ್ಟಮ್ಮ ದೇವಾಲಯ ಹೊರಭಾಗದಲ್ಲಿರುವ ಸ್ತ್ರೀದೇವತೆಯ ಮೂರ್ತಿಶಿಲ್ಪಗಳನ್ನು ವಿಶೇಷವಾಗಿ ಕಾಣಬಹುದು.

ಇವುಗಳು ಹೊಯ್ಸಳ ಶಿಲ್ಪಾದಿಲಕ್ಷಣಗಳನ್ನು ಒಳಗೊಂಡಿದೆ. ಮಹಿಷಾಸುರಮರ್ದಿನಿ ಶಿಲ್ಪವು ಕಪ್ಪುಮಿಶ್ರಿತ ಮೆದುಗಲ್ಲಿನಲ್ಲಿ ಕಂಡರಿಸಲ್ಪಟ್ಟಿದೆ. ಅಲಿಧಹಮ ಭಂಗಿಯಲ್ಲಿ ದೇವಿಯು ಕೋಣದ ರೂಪದ ಮಹಿಷಾಸುರನ ಮೇಲೆ ತನ್ನ ಬಲಗಾಲನ್ನು ಇಟ್ಟು ತ್ರಿಶೂಲದಿಂದ ಸಂಹರಿಸುತ್ತಿರುವ ಮೂರ್ತಿಶಿಲ್ಪದ ಈ ದೃಶ್ಯದಲ್ಲಿ ಮೂರ್ತಿಯು ಹಲವು ವಿಧದಲ್ಲಿ ಭಗ್ನಗೊಂಡಿದೆ. ದೇವಿಯು ತನ್ನ ಇತರೆ ಕೈಗಳಲ್ಲಿ ಖಡ್ಗ, ಗುರಾಣಿ, ಅಂಕುಶ, ಬಿಲ್ಲು, ಬಾಣಗಳನ್ನು ಹಿಡಿದಿದ್ದಾಳೆ. ಸ್ಕಂದಮಾಲೆ, ಭುಜಬಂಧ, ಕೈಬಳೆ, ಹಾರ ಕಟೀಬಂಧ, ವೈಜಯಂತಿ ಇತರೆ ಆಭರಣಗಳನ್ನು ಸೂಕ್ಷ್ಮವಾಗಿ ಹೊಯ್ಸಳ ಶೈಲಿಯಲ್ಲಿ ಸುಂದರವಾಗಿ ಕೆತ್ತಿರುವುದು ಕಂಡುಬರುವುದು. ಇದರ ಪ್ರಭಾವಳಿಯಲ್ಲಿ ಲತಾಸುರುಳಿ, ಮಧ್ಯದಲ್ಲಿ ವ್ಯಾಳದ ಶಿಲ್ಪವಿದೆ.

ಬಾಗೂರಿನ ಅಂತರಘಟ್ಟಮ್ಮ ದೇವಾಲಯದ ಹೊರಭಾಗದಲ್ಲಿ ಹೊಯ್ಸಳ ಶೈಲಿಯ ಒಂದು ಸ್ತ್ರೀದೇವತೆಯ ಶಿಲ್ಪವಿದ್ದು, ಅದರ ರುಂಡವಿರುವುದಿಲ್ಲ. ಪೀಠದ ಮೇಲೆ ಪದ್ಮಾಸನದಲ್ಲಿರುವ ದೇವಿಯು ಕೈಗಳಲ್ಲಿ ಅಂಕುಶ, ಖಡ್ಗಗಳನ್ನು ಹಿಡಿದಿದ್ದಾಳೆ. ಇತರೆ

ಆಯುಧಗಳು ಕಂಡುಬರುವುದಿಲ್ಲ. ದೇಹದಲ್ಲಿ ಕಂಠಿಹಾರ ಸ್ಕಂದಮಾಲೆ ಭುಜಬಂಧ, ಕೈಬಳೆ, ಕಟೀಬಂಧ, ವೈಜಯಂತಿ ಮಾಲೆಯನ್ನು ಧರಿಸಿರುವುದು ಕಂಡುಬರುವುದು.

ಒಟ್ಟಿನಲ್ಲಿ ಹೊಸದುರ್ಗ ಪರಿಸರದ ದೇವಾಲಯಗಳಲ್ಲಿ ಕಾಣಬರುವ ಮೂರ್ತಿಶಿಲ್ಪಗಳು ಬಹುತೇಕವಾಗಿ ಹೊಯ್ಸಳ ಶೈಲಿಯವುಗಳಾಗಿವೆ. ಅದರೊಂದಿಗೆ ಕಲ್ಯಾಣ ಚಾಲುಕ್ಯರ ಶೈಲಿಯ ಶಿಲ್ಪಗಳು ಸಹ ಕಂಡುಬರುತ್ತವೆ. ವಿಜಯನಗರ ಮತ್ತು ಪಾಳೆಯಗಾರರ ಕಾಲದ ಮೂರ್ತಿಶಿಲ್ಪಗಳು ಅಂತಹ ಆಕರ್ಷಿತವಾಗಿಲ್ಲ ಅದರೊಂದಿಗೆ ಸೂಕ್ಷ್ಮಕೆತ್ತನೆಯು ಇಲ್ಲ. ಈ ಶಿಲ್ಪ ಶೈಲಿಗಳಲ್ಲಿ ಶೈವ, ವೈಷ್ಣವ, ಶಾಕ್ತ ಮೂರ್ತಿಶಿಲ್ಪಗಳು ನಿರ್ಮಾಣಗೊಂಡಿವೆ.

ಟಿಪ್ಪಣಿಗಳು:–

೧. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೫೨೩

೨. ಕರುಗುಂದ ಟಿ. ಪಂಕಜಾಕ್ಷ., ಶಿಲ್ಪ ಸೌಂದರ್ಯ, ಪು. ೩

೩. ಅದೇ

೪. ಜಯ್ಯಣ್ಣ ಯು., ಮೊಳಕಾಲ್ಮೂರು ತಾಲ್ಲೂಕಿನ ಪುರಾತತ್ವೀಯ ಪರಿಸರ (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಪು.೧೯೯

೫. ದತ್ತಾತ್ರೇಯ ಜಿ. ಕುಲಕರ್ಣಿ., ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು (ಅಪ್ರಕಟಿತ ಪಿ.ಹೆಚ್.ಡಿ. ಮಹಾಪ್ರಬಂಧ)., ಪು.೨೩೦

೬. ಕರುಗುಂದ ಟಿ. ಪಂಕಜಾಕ್ಷ., ಪೂರ್ವೋಕ್ತ, ಪು. ೩

೭. ತಿಪ್ಪೇರುದ್ರಸ್ವಾಮಿ ಎಚ್., ಪೂರ್ವೋಕ್ತ ಪು. ೬೨೫

೮. ಅದೇ, ಪು. ೬೨೬

೯. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ. ೧೧, ಸಂಖ್ಯೆ. ೧೨೪

೧೦. ಅದೇ, ಸಂಖ್ಯೆ. ೧೨೧

೧೧. ರಘುನಾಥ ಭಟ್ ಎಚ್.ಆರ್., ಕರ್ನಾಟಕ ಶಾಸನ ಕಲೆ, ಕೆಲವು ಸಂಶೋಧನೆಗಳು, ಪು. ೧೮೭–೧೯೧

೧೨. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ. ೧೧, ಸಂಖ್ಯೆ, ೯೨

ಅಧ್ಯಾಯ ೬
ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳು

ಅಧ್ಯಾಯ ೬

ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳು

ಪ್ರಾಚೀನ ಕಾಲದ ಚರಿತ್ರೆ ಮತ್ತು ಸಂಸ್ಕೃತಿಯನ್ನು ನಾವು ಸರಿಯಾದ ಕ್ರಮದಲ್ಲಿ ತಿಳಿದುಕೊಳ್ಳಲು ಮೊದಲು ಅವಲಂಬಿಸಬೇಕಾಗಿದ್ದು ಶಾಸನಗಳನ್ನು ಎಂದು ಹೇಳಬಹುದು. "ಇತಿಹಾಸದ ಪ್ರಮಾಣ ಭೂತವಾದ ಆಧಾರಗಳೆಂದರೆ ಶಾಸನಗಳು, ಕನ್ನಡ ಸಾಹಿತ್ಯ, ಕಲಾಕೃತಿಗಳು, ನಾಣ್ಯಗಳು, ಪರದೇಶದ ಯಾತ್ರಿಕರ ವರದಿಗಳು ಭೂಮಿಯ ಅಗೆತದಿಂದ ಹೊರಬಿದ್ದ ಅಂಶಗಳು ಇವೆಲ್ಲವೂ ಸಹಾಯಕವಾದರೂ, ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಪರಂಪರೆಯನ್ನು ತಿಳಿಯುವಂತಾದುದು ಮುಖ್ಯವಾಗಿ ಶಾಸನಗಳಿಂದಲೇ, ಇತರ ಆಧಾರಗಳು ತುಂಬಿಕೊಡಲಾರದ ಕೆಲವು ಅಂಶಗಳನ್ನು ಇಲ್ಲಿನ ಶಾಸನ ಸಂಪತ್ತು ಒದಗಿಸಿಕೊಟ್ಟಿವೆ."[೧] "ಶಾಸನವೆಂಬ ಪದವನ್ನು 'Inscription' ಎಂಬ ಆಂಗ್ಲ ಪದಕ್ಕೆ ಸಂವಾದಿಯಾಗಿ ವಿದ್ವಾಂಸರು ಬಳಸುತ್ತಾರೆ. 'Inscription'ಎಂದರೆ ಬಹುಕಾಲ ನಿಲ್ಲಬಲ್ಲ, ಶಾಶ್ವತವಾಗಿ ಉಳಿಯಬಲ್ಲ ವಸ್ತುಗಳ ಮೇಲೆ ಕೊರೆಯಲ್ಪಟ್ಟ ಬರಹ ಎಂದು ಅರ್ಥ ನೀಡುತ್ತಾರೆ."[೨] ತಾಳೇಗರಿ ಭೂರ್ಜ್ವಪತ್ರ ಕಾಗದ ಮುಂತಾದವುಗಳ ಮೇಲೆ ಕಂಡು ಬರುವ ಬರಹಗಳನ್ನು ಬಿಟ್ಟು, ಬಹುಕಾಲ ಉಳಿಯುವ ಸಾಮಗ್ರಿಯ ಮೇಲೆ ಕೆತ್ತಿರುವ ಬರಹಗಳನ್ನು ಶಾಸನಗಳೆಂದು ಸ್ಥೂಲವಾಗಿ ಕರೆಯಬಹುದು.[೩] "ಭಾರತೀಯ ಬರಹದಲ್ಲಿ ಶಾಸನ ಎಂಬ ಪದಕ್ಕೆ ವಿಶಾಲ ಅರ್ಥವನ್ನು ನೀಡುವುದರ ಸಲುವಾಗಿ ಅವುಗಳ ಆಂತರಿಕ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ವ್ಯಾಖ್ಯಾನಿಸಿದರು. ಹೀಗಾಗಿ ಶಾಸನವೆಂಬುದು ಆಜ್ಞೆ, ಪ್ರಜೆಗಳೆಲ್ಲರೂ ಪಾಲಿಸಬೇಕಾದ ಒಂದು ಸಂಹಿತೆ, ಸಂವಿಧಾನ, ನೀತಿ ನಿಯಮಗಳನ್ನು ಉಲ್ಲಂಘಿಸಿದರೆ ಶಿಕ್ಷೆಗೆ ಗುರಿಯಾಗುತ್ತಿರೆಂಬ ಎಚ್ಚರಿಕೆಯ ನೀತಿಸಂಹಿತೆಗಳು ಎಂದು ಅರ್ಥ ಪಡೆದುಕೊಂಡಿತು. ಶಾಸನಗಳಿಗೆ ಧರ್ಮಲಿಪಿಗಳೆಂದು ಕರೆಯುತ್ತಾರೆ. ಅಶೋಕನು ಹಾಕಿದ ಶಾಸನಗಳನ್ನು

ಧರ್ಮಲಿಪಿಗಳೆಂದು ಕರೆದುಕೊಂಡಿದ್ದಾನೆ. ಅಂದರೆ Inscribe ಎಂಬುದರಿಂದ ಹೊರಟ ಕೆತ್ತು, ಕೊರೆ, ಕಂಡರಿಸು ಎಂಬ ಅರ್ಥಕ್ಕಿಂತ ಭಿನ್ನವಾಗಿ ಆಡಳಿತ, ಪ್ರಭುತ್ವ, ಆಜ್ಞೆ, ಅಪ್ಪಣೆ, ಕಾನೂನು, ಕಟ್ಟಳೆ, ವಿಧಿ, ನಿಗ್ರಹ, ಹಿಡಿತ, ಶಿಲಾಲೇಖ, ತಾಮ್ರಲೇಖ, ದಾಖಲೆ, ಶಿಕ್ಷೆ, ದಂಡನೆ, ಶಾಸ್ತಿ, ಒಪ್ಪಂದ, ಕರಾರು ಎಂಬ ವ್ಯಾಪಕ ಅರ್ಥವನ್ನು ಶಾಸನ ಪಡೆದುಕೊಂಡಿತು."[೪] ಶಾಸನಗಳನ್ನು ಬಂಡೆಗಲ್ಲು, ಶಿಲೆ ಹಾಗೂ ಧಾತುಗಳಾದ ತಾಮ್ರ, ಕಬ್ಬಿಣ, ಬೆಳ್ಳಿ ಮುಂತಾದವುಗಳ ಮೇಲೆ ಕೆತ್ತುತ್ತಿದ್ದರು. ಕರ್ನಾಟಕವನ್ನೊಳಗೊಂಡಂತೆ ಭಾರತದ ತುಂಬೆಲ್ಲಾ ಅಸಂಖ್ಯಾತ ಶಾಸನಗಳು ದೊರೆತಿವೆ. ಅದರಲ್ಲೂ ಕರ್ನಾಟಕದಲ್ಲಿ ಸಿಗುವಷ್ಟು ಶಾಸನಗಳು ಭಾರತದ ಬೇರಾವ ಪ್ರಾಂತ್ಯದಲ್ಲೂ ಸಿಗುವುದಿಲ್ಲವೆಂದು ವಿದ್ವಾಂಸರ ಅಭಿಮತ[೫]. ಕರ್ನಾಟಕದಲ್ಲಿ ಮೌರ್ಯರ ಕಾಲದಿಂದ ಪಾಳೆಯಗಾರರ ನಂತರದ ಕಾಲದವರೆಗೂ ಅಪಾರ ಪ್ರಮಾಣದಲ್ಲಿ ಶಾಸನಗಳು ದೊರೆತಿವೆ ಹಾಗೂ ಬೆಳಕಿಗೆ ಬರುತ್ತಲಿವೆ. ಅವುಗಳು ಆಯಾ ಕಾಲಘಟ್ಟದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ನಿರ್ಮಿಸುವಲ್ಲಿ ತುಂಬಾ ಸಹಕಾರಿಯಾಗಿವೆ. ಇತರೆ ಶಾಸನ ಪ್ರಕಾರಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ದಾನ ಶಾಸನಗಳದೇ ಮೇಲುಗೈ. ದೇವಾಲಯಗಳಿಗೆ , ಮಠಮಾನ್ಯಗಳಿಗೆ, ಅಗ್ರಹಾರಗಳಿಗೆ, ಬ್ರಾಹ್ಮಣರು, ಪುರೋಹಿತರು ಮುಂತಾದವರಿಗೆ ದಾನಗಳನ್ನು ನೀಡುತ್ತಿದ್ದು ಅವುಗಳಿಗೆ ಸಾಕ್ಷಿಯಾಗಿ ಮುಖಂಡರಿಂದ ಬರಹವಿರುವ ಶಾಸನಗಳನ್ನು ಹಾಕಿಸುತ್ತಿದ್ದರು. ಅವುಗಳನ್ನು ದಾನಶಾಸನಗಳು ಎಂದು ಕರೆಯಲಾಗಿದೆ. ಶಿಲಾಶಾಸನಗಳ ಆಶ್ರಯದಾತರು ಧಾರ್ಮಿಕ ಕಾರ್ಯ ಚಟುವಟಿಕೆಗಳಿಂದ ದೇವಾಲಯಗಳನ್ನು ಕಟ್ಟಿಸುವುದು, ಅವುಗಳ ವ್ಯವಸ್ಥೆಗಾಗಿ ದಾನ ದತ್ತಿಗಳನ್ನು ಬಿಡುವುದು, ಮಠಗಳಿಗೆ, ಅಗ್ರಹಾರಗಳಿಗೆ, ವಿದ್ಯಾಭ್ಯಾಸಕ್ಕೆ, ಅನ್ನಸತ್ರಾದಿ ಇತ್ಯಾದಿ ಧಾರ್ಮಿಕ ಕಾರ್ಯಗಳಿಗಾಗಿ ಭೂಮಿ, ಧನ, ಧಾನ್ಯ ರೂಪಗಳಲ್ಲಿ ದಾನವನ್ನು ನೀಡುತ್ತಿದ್ದರು. ಈ ಬಗೆಯ ಕಾರ್ಯ ಚಟುವಟಿಕೆಯಿಂದ ತಮಗೆ ಪುಣ್ಯ ಸಲ್ಲುತ್ತದೆ ಎಂಬ ಭಾವನೆಯನ್ನು ಅವರು ಹೊಂದಿದ್ದರು. ಅಲ್ಲದೆ ಈ ರೀತಿಯ ಕಾರ್ಯದಿಂದ ತಾವುಗಳಿಸಿದ ಸಂಪತ್ತು ಸಾರ್ಥಕತೆಯನ್ನು ಪಡೆಯುತ್ತದೆ ಎಂಬ ಅಭಿಪ್ರಾಯವನ್ನು ಅವರು ತಳೆದಿದ್ದಿರಬಹುದು. ಇದಕ್ಕಾಗಿ ಅವುಗಳನ್ನು ತಾವು ನೀಡಿದ ದಾನದತ್ತಿಗಳ ದಾಖಲೆಗೆ ಶಾಸನಗಳನ್ನು ಹಾಕಿಸುತ್ತಿದ್ದರು ಮತ್ತು ಅದನ್ನು ಶಿಲೆಯಲ್ಲಿ ಕೊರೆಯಿಸಿ ಶಾಶ್ವತಗೊಳಿಸುತ್ತಿದ್ದರು."[೬] ದಾನ ಶಾಸನಗಳನ್ನು ಶಿಲೆಗಳ ಮೇಲೆ ಹಾಗೂ ಲೋಹಗಳ ಮೇಲೂ ಕೆತ್ತಿಸುತ್ತಿದ್ದ ಅಂಶವನ್ನು ಕಾಣಬಹುದಾಗಿದೆ. ದಾನಶಾಸನಗಳು ಒಂದು ಧಾರ್ಮಿಕ ವ್ಯವಸ್ಥೆಯ ಉದ್ಧಾರಕ್ಕೆ ಸಹಾಯಕವಾಗಿದ್ದು ಅವುಗಳು ಆರ್ಥಿಕ ವ್ಯವಸ್ಥೆಯ ಮೇಲೂ, ರಾಜ್ಯವ್ಯವಸ್ಥೆಯ

ಮೇಲೂ ಪ್ರಭಾವ ಬೀರಿದ್ದವು. ಇಂತಹ ದಾನ ಶಾಸನಗಳು ಪ್ರಾರಂಭಿಕ, ಮಧ್ಯಕಾಲೀನ ದೇವಾಲಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಕಂಡು ಬಂದಿದ್ದು ಹೀಗೆ ನೀಡಿದ ನಿರಂತರ ದಾನಗಳಿಂದಾಗಿ ದೇವಾಲಯ ಮಠಮಾನ್ಯ, ಅಗ್ರಹಾರ ವಿದ್ಯಾಕೇಂದ್ರಗಳು, ಧರ್ಮ ಛತ್ರಗಳು ಬೆಳೆದು ಬಂದಿರುವುದನ್ನು ಕಾಣಬಹುದು.

ಪ್ರಸ್ತುತ ಹೊಸದುರ್ಗ ಪರಿಸರದ ಪ್ರಾಚೀನ ದೇವಾಲಯಗಳಿಗೆ ಸಂಬಂಧಿಸಿದಂತೆ ಹಲವು ಶಾಸನಗಳು ಕಂಡುಬರುತ್ತವೆ. ಇವುಗಳು ದಾನಶಾಸನಗಳಾಗಿದ್ದು, ಹೊಯ್ಸಳ, ವಿಜಯನಗರ ಹಾಗೂ ಪಾಳೆಯಗಾರರ ಕಾಲದಲ್ಲಿ ನೀಡಿದವುಗಳಾಗಿವೆ. ಈ ಶಾಸನಗಳ ಅಧ್ಯಯನದಿಂದ ಆಯಾ ದೇವಾಲಯಗಳಿಗೆ ಸಂಬಂಧಿಸಿದ ಹಲವು ಸಂಗತಿಗಳನ್ನು ತಿಳಿಯಲು ಸಹಕಾರಿಯಾಗಿವೆ. ಹೊಸದುರ್ಗ ಪರಿಸರದ ದೇವಾಲಯಗಳನ್ನು ಅಧ್ಯಯನ ಮಾಡುವಾಗ ಗಮನಿಸಬಹುದಾದ ಬಾಗೂರಿನ ಚನ್ನಕೇಶವ ದೇವಾಲಯವು ಹೊಯ್ಸಳ ಕಾಲದ ನಿರ್ಮಿತಿಯಾಗಿದೆ.[೭] ಈ ದೇವಾಲಯಕ್ಕೆ ವಿಜಯನಗರ ಕಾಲದಲ್ಲಿ ಅವರ ಅಧೀನರಾಗಿ ಆಳುತ್ತಿದ್ದ ಪಾಳೆಯಗಾರರ ಕಾಲದಲ್ಲಿ ಹಲವು ವಿಧದಲ್ಲಿ ದಾನದತ್ತಿಗಳನ್ನು ನೀಡಿ ದೇವಾಲಯವನ್ನು ಪೋಷಿಸಿ ಉದ್ಧಾರ ಮಾಡಿರುವುದನ್ನು ಶಾಸನಗಳಿಂದ ತಿಳಿಯಬಹುದು. ಅವುಗಳಲ್ಲಿ ಮೊದಲನೆಯದಾಗಿ ಈ ದೇವಾಲಯದ ಪ್ರಾಕಾರದಲ್ಲಿರುವ ಕ್ರಿ.ಶ.೧೫೫೫ರ ಶಾಸನವು ವಿಜಯನಗರದ ವೀರಪ್ರತಾಪ ಸದಾಶಿವರಾಯನ ಕಾಲದ ಶಾಸನವಾಗಿದೆ. ಈ ಶಾಸನದಲ್ಲಿ ಸದಾಶಿವರಾಯನನ್ನು ಮಹಾರಾಯರು ಎಂದು ಸಂಭೋದಿಸಿದ್ದು ಅವನು ವಿಜಯನಗರದಲ್ಲಿ ಆಳುತ್ತಿದ್ದ ವೇಳೆಯಲ್ಲಿ ಈ ಪ್ರಾಂತ್ಯವು ಅವರ ಆಳ್ವಿಕೆಗೆ ಒಳಪಟ್ಟಿದ್ದ ಅಂಶವನ್ನು ಹೇಳುತ್ತದೆ.[೮] ವಿಜಯನಗರದ ಅಧೀನರಾಗಿ ಈ ಪರಿಸರದಲ್ಲಿ ಆಳುತ್ತಿದ್ದ ಹಡಪದ ಬೊಮ್ಮನಾಯಕನ ಮಗ ಕೃಷ್ಣಪ್ಪನಾಯಕ ಹಾಗೂ ಕೃಷ್ಣಪ್ಪನಾಯಕನ ಕಾರ್ಯಕರ್ತನಾದ ಕೊಂಡರಾಜ ಹಾಗೂ ಮತ್ತೊಬ್ಬ ವ್ಯಕ್ತಿ ಗೋಪಣ್ಣಒಡೆಯರು ಇವರುಗಳು ಸೇರಿ ಈ ದೇವಾಲಯಕ್ಕೆ ನೀಡಿದ ಹಲವು ದಾನದತ್ತಿಗಳನ್ನು ಕುರಿತು ವಿವರಿಸುತ್ತದೆ. ಈ ಶಾಸನದಲ್ಲಿ ಚನ್ನಕೇಶವನನ್ನು 'ಭಾಗ್ಯಪುರದ ಚೆನ್ನಿಗರಾಯ' ಎಂದು ಕರೆಯಲಾಗಿದೆ. ಅಂದರೆ ವಿಜಯನಗರ ಕಾಲದಲ್ಲಿ ಬಾಗೂರನ್ನು ಭಾಗ್ಯಪುರ ಎಂದು ಕರೆದಿರುವುದು ಇದರಿಂದ ವೇದ್ಯವಾಗುತ್ತದೆ. ಕೃಷ್ಣಪ್ಪನಾಯಕನು ಮಧುರೆಯ ಗ್ರಾಮ, ಅರಳಿಹಳ್ಳಿಯ ಗ್ರಾಮ, ಹಾದರಿಕಟ್ಟೆಯ ಗ್ರಾಮಗಳನ್ನು ಚೆನ್ನಿಗರಾಯನ ಅಂಗಭೋಗ, ರಂಗಭೋಗಕ್ಕೆ ದಾನ ನೀಡಿದ್ದಾನೆ. ಕೃಷ್ಣಪ್ಪನಾಯಕನ ಕಾರ್ಯಕರ್ತನಾದ ಕೊಂಡರಾಜನು ಕೃಷ್ಣಪ್ಪನಾಯಕರಿಗೆ ಪುಣ್ಯವಾಗಲೆಂದು ನಾಗೇನಹಳ್ಳಿ ಗ್ರಾಮ,

ಕೃಷ್ಣಪುರದ ಗ್ರಾಮ ಇವುಗಳನ್ನು ಚೆನ್ನಿಗರಾಯನ ನೈವೇದ್ಯಕ್ಕೆ ದಾನ ನೀಡಿರುವುದನ್ನು ಕಾಣಬಹುದು.[೯] ಇವುಗಳೊಂದಿಗೆ ಚೆನ್ನಿಗರಾಯನ ಪೂಜಾ ಕಾರ್ಯಕ್ಕೆ , ಹಾಲುಮೊಸರು, ತಾಂಬೂಲ, ಬೆಣ್ಣೆ, ತುಪ್ಪ, ಬೆಲ್ಲದ ಕಜ್ಜಾಯ, ಸಾಂಬ್ರಾಣಿ ದೂಪ ಮುಂತಾದವುಗಳಿಗೆ ಹಲವು ದಾನದತ್ತಿಗಳನ್ನು ನೀಡಿರುವುದನ್ನು ತಿಳಿಯಬಹುದು. ಶಾಸನದ ಕೊನೆಯಲ್ಲಿ ಶಾಪಾಶಯ ವಾಕ್ಯವು ಇದೆ.

ಇದೇ ಕಾಲದ ಮತ್ತೊಂದು ಶಾಸನವು ಕೃಷ್ಣಪ್ಪ ನಾಯಕನಿಗೆ ಸಂಬಂಧಿಸಿದ್ದು,[೧೦] ಕೃಷ್ಣಪ್ಪ ನಾಯಕನು ಸದಾಶಿವರಾಯನಿಗೆ ಪುಣ್ಯವಾಗಲೆಂದು ಕೃಷ್ಣ ಸಮುದ್ರ ಎಂಬ ಗ್ರಾಮವನ್ನು ಚನ್ನಿಗರಾಯನ ದೇವಾಲಯಕ್ಕೆ ದಾನ ನೀಡಿದ್ದಾನೆ. ಅಲ್ಲದೆ ತಿರುವೆಂಗಳೈಯ್ಯ, ಶಠಗೋಪಯ್ಯ, ಲಕ್ಷ್ಮಣಯ್ಯ ಎಂಬ ಮೂವರು ಸೇರಿ ಚೆನ್ನಿಗರಾಯನಿಗೆ ನಿತ್ಯಪೂಜೆ, ಪಂಚಪರ್ವ ಮೊದಲಾದ ಉತ್ಸವಾದಿಗಳಲ್ಲಿ ಸೇವೆಮಾಡತಕ್ಕದ್ದು, ಅದಕ್ಕಾಗಿ ಈ ಗ್ರಾಮವನ್ನು ಬಳುವಳಿಯಾಗಿ ನೀಡಲಾಗಿದೆ ಎಂದು ಶಾಸನದಲ್ಲಿ ಹೇಳಿದೆ.[೧೧]

ಇದೇ ದೇವಾಲಯದ ಲಕ್ಷ್ಮೀಗುಡಿಯ ರಂಗಮಂಟಪದ ನೆಲದ ಹಾಸುವಿನ ಮೇಲಿರುವ ಶಾಸನವು ಕ್ರಿ.ಶ.೧೫೭೧ರ ಕಾಲದ್ದಾಗಿದೆ.[೧೨] ಇದರಲ್ಲಿ "ಬ್ರಂಹೇಂದ್ರಾದಿ ಸುರೈಃಸೇಬ್ಯಂ ಸರ್ವಲೋಕೈಕನಾಯಕಂ ಶ್ರೀಮದ್ಬಾಗ್ಯ ಪುರಾದೀಕೇಶವಸ್ಯ ಶಾಸನಂ" ಎಂಬುದಾಗಿ ಕೇಶವವನ್ನು ಸ್ತುತಿಸಿರುವುದನ್ನು ಕಾಣಬಹುದು. ಸಂತೇಬೆನ್ನೂರು ಹನುಮನಾಯಕರ ಮಗ ರಾಜಪ್ಪನಾಯಕರೂ ತಮ್ಮ ತಂದೆ ತಾಯಿಯರಿಗೆ ಪುಣ್ಯವಾಗಬೇಕೆಂದು ಲಕ್ಷ್ಮಿದೇವಿ ಗುಡಿಯನ್ನು ಜೀರ್ಣೋದ್ಧಾರ ಮಾಡಿಸಿ ಬಾಗೂರು ಪರಿಸರದ ಕೆಲವು ಗದ್ದೆ ಭೂಮಿಯನ್ನು ದಾನವಾಗಿ ನೀಡಿರುವುದು ತಿಳಿದು ಬರುವುದು.[೧೩] ಈ ದೇವಾಲಯದ ಎದುರಿಗಿರುವ ಗರುಡಕಂಬ ಶಾಸನವು ವಿಜಯನಗರದ ಅರಸು ವೀರಪ್ರತಾಪ ಶ್ರೀ ಅಚ್ಯುತರಾಯನ ಕಾಲದ್ದಾಗಿದೆ. ಈ ಕಾಲದಲ್ಲಿ ಅಯ್ಯಪ್ಪರಸಯ್ಯನವರಿಗೆ ಪುಣ್ಯವಾಗಬೇಕೆಂದು ಅವನ ಕಾರ್ಯಕರ್ತನಾದ ವಿಶ್ವನಾಥಯ್ಯ ಎಂಬುವವನು ಈ ಗರುಡಕಂಭವನ್ನು ಸ್ಥಾಪಿಸಿರುವುದನ್ನು ಹೇಳುತ್ತದೆ.[೧೪] ಚನ್ನಕೇಶವ ದೇವಾಲಯವು ಇಷ್ಟು ಪ್ರಮಾಣದಲ್ಲಿ ದಾನದತ್ತಿಗಳನ್ನು ಪಡೆದಿರುವುದನ್ನು ಗಮನಿಸಿದಾಗ ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಈ ದೇವಾಲಯವು ಮಧ್ಯಕಾಲೀನ ಕರ್ನಾಟಕದಲ್ಲಿ ಅದರಲ್ಲೂ ವಿಜಯನಗರ ಕಾಲದಲ್ಲಿ ಹಾಗೂ ಇಲ್ಲಿ ಅವರ ಸಾಮಂತರಾಗಿ ಆಳುತ್ತಿದ್ದ ಪಾಳೆಯಗಾರರ ಕಾಲದಲ್ಲಿ ಅಪಾರ ಪ್ರಮಾಣದಲ್ಲಿ ದಾನದತ್ತಿಗಳನ್ನು ಪಡೆದು ಜೀರ್ಣೋದ್ಧಾರಗೊಂಡಿರುವುದಕ್ಕೆ

ಇಲ್ಲಿನ ಹಲವು ಶಾಸನಗಳೇ ಸಾಕ್ಷಿಗಳಾಗಿವೆ. ಅಲ್ಲದೆ ಒಂದು ವೈಷ್ಣವ ದೇವಾಲಯಕ್ಕೆ ಇಷ್ಟು ಪ್ರಮಾಣದಲ್ಲಿ ಪೋಷಣೆ ದೊರೆತಿರುವುದನ್ನು ಗಮನಿಸಿದಾಗ ಇಲ್ಲಿನ ವೈಷ್ಣವ ಧರ್ಮದ ಪ್ರಾಬಲ್ಯತೆಯನ್ನು ಗುರುತಿಸಬಹುದು. ಇದಕ್ಕೆ ಸಾಕ್ಷಿಯಾಗಿ ಇಂದಿಗೂ ಬಾಗೂರಿನಲ್ಲಿ ಸಾಕಷ್ಟು ವೈಷ್ಣವ ಧರ್ಮಿಯರು ನೆಲೆಸಿದ್ದಾರೆ.

ಇದೇ ಬಾಗೂರಿನ ಅಂತರಘಟ್ಟಮ್ಮ ದೇವಾಲಯದ ಹೊರಭಾಗದಲ್ಲಿ ಒಂದು ಶಿಲಾಶಾಸನವಿದ್ದು ಅದು ಕ್ರಿ.ಶ. ೧೫೫೬ ರಲ್ಲಿ ವಿಜಯನಗರದ ಸದಾಶಿವರಾಯನ ಕಾಲದ್ದಾಗಿದ್ದು, ಕೃಷ್ಣಪ್ಪ ನಾಯಕನು ಇಲ್ಲಿ ಆಳುವಾಗ ಅಂತರಘಟ್ಟಮ್ಮ ದೇವಾಲಯಕ್ಕೆ ಹಲವು ದಾನದತ್ತಿಗಳನ್ನು ನೀಡಿರುವುದು ತಿಳಿದು ಬರುವುದು.[೧೫]

ಹೊಯ್ಸಳ ಕಾಲದ ಬಹುಮುಖ್ಯ ಪ್ರಾಚ್ಯಾವಶೇಷಗಳನ್ನು ಹೊಂದಿರುವ ನೀರಗುಂದ ಗ್ರಾಮವು ಹೊಸದುರ್ಗ ಪರಿಸರದ ಪ್ರಮುಖ ಚಾರಿತ್ರಿಕ ಎಡೆಗಳಲ್ಲಿ ಒಂದಾಗಿದೆ. ಇಲ್ಲಿನ ಸಿದ್ಧೇಶ್ವರ ದೇವಾಲಯವು ಕಲ್ಯಾಣ ಚಾಲುಕ್ಯರ ಕೊನೆಯ ಅಥವಾ ಪ್ರಾರಂಭಿಕ ಹೊಯ್ಸಳರ ಕಾಲದ ವಾಸ್ತುಶೈಲಿಯನ್ನು ಹೊಂದಿದ್ದು ಹೊಯ್ಸಳರ ಕಾಲದಲ್ಲಿ ಹಲವು ದಾನದತ್ತಿಗಳನ್ನು ಪಡೆದಿರುವುದಕ್ಕೆ ಇಲ್ಲಿನ ಶಾಸನಗಳೇ ಆಧಾರಗಳು. ಕ್ರಿ.ಶ. ೧೦೬೫ರ ಹೊಯ್ಸಳರ ವೀರಬಲ್ಲಾಳನ ಕಾಲದ ಶಾಸನದಲ್ಲಿ ನೀರಗುಂದದ ಸಿದ್ಧೇಶ್ವರ ದೇವಾಲಯವನ್ನು 'ನಲ್ಲಸೆಟ್ಟಿ' ಎಂಬುವವನು ಜೀರ್ಣೋದ್ಧಾರ ಮಾಡಿಸಿ ಸಿದ್ಧನಾಥದೇವರ ಸೇವಕರ್ತರಾದ ಕಲ್ಯಾಣಜೀಯ, ಉಮಾಳಜೀಯ, ನಲ್ಲಜೀಯ ಈ ಮೂವರಿಗೆ ಧಾರಪೂರ್ವಕವಾಗಿ ಹಿರಿಯಕೆರೆಯ ಕೆಳಗಿನ ಗದ್ದೆ, ಕೊಂಡಜ್ಜಿ, ಆಸಂದಿ, ಬೇವಿನಹಳ್ಳಿ, ಆನೀವಾಳ, ಕುಂದೂರು ಗ್ರಾಮದ ಗದ್ದೆಗಳನ್ನು ಹಾಗೂ ಹಲವು ರೀತಿಯ ಸಂತೆಆಯಗಳನ್ನು ಬಿಟ್ಟುಕೊಟ್ಟನು.[೧೬]

ಹೊಯ್ಸಳರ ಕಾಲದ ಮತ್ತೊಂದು ಶಾಸನ ಚಿಕ್ಕಯ್ಯಗಟ್ಟೆ ಗ್ರಾಮದ ಈಶ್ವರ ದೇವಾಲಯದ ಮುಂದೆ ಇದ್ದು, ಇದರ ಕಾಲಮಾನ ಕ್ರಿ.ಶ. ೧೦೯೪ ರದ್ದಾಗಿದ್ದು ಇಲ್ಲಿನ ಈಶ್ವರ ದೇವರನ್ನು ಧರ್ಮೇಶ್ವರ ಎಂಬುದಾಗಿ ಕರೆಯಲಾಗಿದೆ.[೧೭] ಈ ಧರ್ಮೇಶ್ವರ ದೇವರಿಗೆ ಮಾವಿನಕೆರೆಯ ತೋಟವನ್ನು ಮತ್ತು ಅನೇಕ ರೀತಿಯ ಸಂತೆಯ ಸುಂಕಗಳನ್ನು ದತ್ತಿ ನೀಡಿದನೆಂದು ತಿಳಿದುಬರುವುದು.

ಹೊಸದುರ್ಗ ನಗರದ ವೀರಭದ್ರ ದೇವಾಲಯವು ಶಾಸನೋಕ್ತವಾಗಿದೆ.[೧೮] ಶಾಸನೋಕ್ತ ವಿಚಾರದಂತೆ ಕಾಮಗೇತಿ ತಿಮ್ಮಪ್ಪನ ಕಾಲದಲ್ಲಿ ಶ್ರೀವೀರಭದ್ರ ದೇವರಿಗೆ ಹಾಗೂ ಮಯಿಲಾರದೇವರಿಗೆ ಶುಕ್ಲ ಸಂವತ್ಸರದ ಕಾರ್ತಿಕ ಶು೧೪ ರಲ್ಲಿ ಕೆಲವು ಗ್ರಾಮಗಳನ್ನು ದಾನ

ನೀಡಿರುವ ಸಂಗತಿ ತಿಳಿದು ಬರುವುದು. ಮಯಿಲಾರದೇವರು ಬಹುಶಃ ಅಲ್ಲೆ ಇದ್ದ ಒಂದು ದೇವಾಲಯವಾಗಿರಬಹುದು. ಅದೇ ರೀತಿ ಕೆಲ್ಲೋಡು ಗ್ರಾಮದ ಹನುಮಂತ ದೇವಾಲಯವು ಶಾಸನೋಕ್ತವಾಗಿದ್ದು.[೧೯] ಸಂತೇಬೆನ್ನೂರ ಹನಿಮಿನಾಯ್ಕನ ಮೊಮ್ಮಗ ದಳನಾಯಕನು ಕೆಲಗೋಡಿನ ಹನುಮಂತ ದೇವರಿಗೆ ಕುರುಬರ ಹಳ್ಳಿಯನ್ನು ದಾನ ನೀಡಿರುವ ಸಂಗತಿ ತಿಳಿಯಬಹುದು. ಇಂದಿನ ಕೆಲ್ಲೋಡು ಎಂಬ ಹೆಸರು ಅಂದು ಕೆಲಗೋಡಿ ಎಂಬುದಾಗಿ ಇರುವುದನ್ನು ಶಾಸನದಿಂದ ಕಾಣಬಹುದು.

ಒಟ್ಟಾರೆ ಹೊಸದುರ್ಗ ಪರಿಸರದ ಕೆಲವು ದೇವಾಲಯಗಳು ಮಾತ್ರ ಶಾಸನಗಳನ್ನು ಹೊಂದಿವೆ. ಆ ಶಾಸನಗಳು ಸಹ ನಮಗೆ ಪೂರ್ವ ಮಾಹಿತಿಯನ್ನು ನೀಡುವಲ್ಲಿ ಸಮರ್ಥವಾಗಿಲ್ಲ. ಕೆಲವು ಕಾಲಗಳು ತೃಟಿತವಾಗಿದ್ದರೆ, ಕೆಲವು ಬಹುಮುಖ್ಯ ಸಂಗತಿಗಳು ಅಗೋಚರವಾಗಿವೆ. ಈ ಶಾಸನಗಳ ಅಧ್ಯಯನದಿಂದ ಹೊಯ್ಸಳರ ಕಾಲದಿಂದ ಪಾಳೆಯಗಾರರ ಕಾಲದವರೆಗೂ ದೇವಾಲಯಗಳಿಗೆ ಅನೇಕ ದಾನಗಳನ್ನು ನೀಡಿ ಪೋಷಿಸಿಕೊಂಡು ಬಂದಿರುವುದನ್ನು ಕಾಣಬಹುದು. ಮಧ್ಯಕಾಲೀನ ಕರ್ನಾಟಕದಲ್ಲಿ ದೇವಾಲಯಗಳು ಸಾಮಾಜಿಕ ಮತ್ತು ಧಾರ್ಮಿಕ ಕೇಂದ್ರಗಳಾಗಿ ಉಳಿದು ಬೆಳೆದು ಬರಲು ಅಂದಿನ ರಾಜಪ್ರಭುತ್ವಗಳು ಹೇರಳವಾಗಿ ನೀಡುತ್ತಿದ್ದ ದಾನ ದತ್ತಿಗಳೇ ಬಹು ಮುಖ್ಯ ಕಾರಣವಾಗಿತ್ತು.

ಟಿಪ್ಪಣಿಗಳು:

೧. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.೨೯

೨. ರವೀಂದ್ರನಾಥ ಕೆ., ಕನ್ನಡ ದಾಖಲು ಸಾಹಿತ್ಯ, ಪು. ೩೦

೩. ಚಿದಾನಂದ ಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೧೩

೪. ರವೀಂದ್ರನಾಥ ಕೆ., ಪೂರ್ವೋಕ್ತ, ಪು.೩೧

೫. ಚಿದಾನಂದ ಮೂರ್ತಿ ಎಂ., ಪೂರ್ವೋಕ್ತ, ಪು.೨೭

೬. ಪ್ರಸನ್ನ ಕುಮಾರ ಡಿ, ಕರ್ನಾಟಕಧಲ್ಲಿ ಶಿಲಾಶಾಸನ ನಿರ್ಮಾಣ ಮತ್ತು ಅದರ ಸಾಮಾಜಿಕ ಆಯಾಮಗಳು (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)., ಪು.೨೪

೭. ಬಾಗೂರು ಆರ್. ನಾಗರಾಜಪ್ಪ, ಹೊಸದುರ್ಗದ ಸುತ್ತ, ಪು.೪೨

೮. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ ೧೧, ಸಂಖ್ಯೆ ೧೧೩

೯. ಅದೇ

೧೦. ಅದೇ, ಸಂಖ್ಯೆ ೧೧೪

೧೧. ಅದೇ

೧೨. ಅದೇ, ಸಂಖ್ಯೆ ೧೧೫

೧೩. ಅದೇ

೧೪. ಅದೇ, ಸಂಖ್ಯೆ ೧೧೬

೧೫. ಅದೇ, ಸಂಖ್ಯೆ ೧೧೮

೧೬. ಅದೇ, ಸಂಖ್ಯೆ ೧೨೧

೧೭. ಅದೇ, ಸಂಖ್ಯೆ ೧೨೪

೧೮. ಅದೇ, ಸಂಖ್ಯೆ ೯೦

೧೯. ಅದೇ, ಸಂಖ್ಯೆ ೯೨

ಅಧ್ಯಾಯ ೭
ಸಮಾರೋಪ

ಅಧ್ಯಾಯ ೭

ಸಮಾರೋಪ

ದೇವಾಲಯಗಳು ಪ್ರಾಚೀನ ಕಾಲದ ಮಾನವನ ಚರಿತ್ರೆ ಮತ್ತು ಸಂಸ್ಕೃತಿಯನ್ನು ರಚಿಸಲು ಸಹಾಯಕವಾಗಬಲ್ಲ ಬಹುಮುಖ್ಯ ಪುರಾತತ್ವ ಆಕರ ಸಂಪತ್ತು. ಅವುಗಳು ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರತಿಬಿಂಬಿಸುವಲ್ಲಿ ಸಹಾಯಕಾರಿಯಾಗಿವೆ. ದೇವಾಲಯಗಳು ಮಾನವನ ಧಾರ್ಮಿಕ ಶ್ರದ್ಧೆ, ಭಕ್ತಿ, ನಂಬಿಕೆಗಳ ಪ್ರತೀಕಗಳಾಗಿ ಬೆಳೆದುಬಂದಿವೆ. ನಿಸರ್ಗದಲ್ಲಿ ಎಲ್ಲಕ್ಕಿಂತಲೂ ಮಿಗಿಲಾದ ಒಂದು ಅದ್ಭುತವಾದ ಶಕ್ತಿ ಇದೆ ಎಂದು ಅರಿತ ಮಾನವನು ಅದನ್ನೇ ದೇವರೆಂದು ಪೂಜಿಸಲು ಪ್ರಾರಂಭಿಸಿದ ಮೂರ್ತರೂಪ ನೀಡಿ ಪೂಜಿಸಲು ಪ್ರಾರಂಭಿಸಿದ ಬಳಿಕ ಅದರ ರಕ್ಷಣೆಗಾಗಿ ಭೂಮಿಯ ಮೇಲೆ ಒಂದು ವಾಸ್ತುರೂಪ ನೀಡಿದ ಇದನ್ನೇ ದೇಗುಲವಾಸ್ತು ಎಂದು ಕರೆಯಲಾಯಿತು. ಚರಿತ್ರೆಯ ರಚನೆಯಲ್ಲಿ ಸ್ಮಾರಕಗಳು ಬಹಳ ಮಹತ್ವವನ್ನು ಪಡೆದಿದ್ದು ಅವುಗಳಲ್ಲಿ ದೇವಾಲಯಗಳು ಪ್ರಭುತ್ವದ ಸ್ಮಾರಕಗಳ ಸಾಲಿಗೆ ಸೇರುತ್ತವೆ. ಅಂದು ರಾಜಪ್ರಭುತ್ವಗಳು ತಮ್ಮ ಪ್ರಭುತ್ವದ ಸಂಕೇತವಾಗಿ ಹಾಗೂ ಜನರ ಪ್ರೀತಿ, ವಿಶ್ವಾಸ, ಮನ್ನಣೆ ಗಳಿಸಲು ಧಾರ್ಮಿಕ ವ್ಯವಸ್ಥೆಯ ಹಿನ್ನಲೆಯಲ್ಲಿ ಬೃಹತ್ ಪ್ರಮಾಣದಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಕಾರಣಕರ್ತರಾದರು. ಭಾರತದಲ್ಲಿ ಮೌರ್ಯರಿಂದ ಹಿಡಿದು ಚಿಕ್ಕಪುಟ್ಟ ಅರಸುಮನೆತನಗಳು ಚಕ್ರವರ್ತಿಗಳಿಂದ ಹಿಡಿದು ಚಿಕ್ಕಪುಟ್ಟ ಅರಸು ಮನೆತನಗಳು, ಸಾಮಂತಾಧಿಕಾರಿಗಳವರೆಗೂ ದೇವಾಲಯಗಳನ್ನು ಅಭೂತಪೂರ್ವವಾಗಿ ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ಈ ಹಿನ್ನಲೆಯಲ್ಲಿ ಪ್ರಾಚೀನ ಕಾಲದಲ್ಲಿ ಅದರಲ್ಲೂ ಗುಪ್ತರ ಕಾಲದಲ್ಲಿ ಕಲ್ಲಿನಿಂದ ದೇವಾಲಯಗಳನ್ನು ನಿರ್ಮಾಣ ಮಾಡುವ ಪರಿಪಾಠ ಬೆಳೆದು ಬಂದಿತು.

ಕರ್ನಾಟಕದಲ್ಲಿ ದೇವಾಲಯ ಸಂಸ್ಕೃತಿಯತ್ತ ಗಮನ ಹರಿಸಿದಾಗ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಚಿಕ್ಕಪುಟ್ಟ ಅರಸುಮನೆತನಗಳು ಹಾಗೂ

ಪಾಳೆಯಗಾರರು ಹೀಗೆ ಪ್ರಬಲ ಮತ್ತು ಸಾಮಂತ ರಾಜಮನೆತನಗಳು ಧಾರ್ಮಿಕ ವ್ಯವಸ್ಥೆ ಮತ್ತು ದೇವಾಲಯ ಸಂಸ್ಕೃತಿಗೆ ಮಹತ್ವ ನೀಡಿರುವುದು ಅವರ ಕಾಲದ ಸ್ಮಾರಕಗಳೆ ಸಾಕ್ಷಿಗಳಾಗಿವೆ. ಪ್ರಸ್ತುತ ಅಧ್ಯಯನ "ಹೊಸದುರ್ಗ ಪರಿಸರದ ದೇವಾಲಯಗಳು" ಎಂಬುದಾಗಿದ್ದು ಈ ಪರಿಸರದ ಪ್ರಾಚೀನ ದೇವಾಲಯಗಳನ್ನು ಕುರಿತು ಅಧ್ಯಯನಿಸಲಾಗಿದೆ. ಚರಿತ್ರೆಯ ಕಣಜವೆಂದೇ ಕರೆಯಲ್ಪಡುವ ಚಿತ್ರದುರ್ಗ ಜಿಲ್ಲೆಯ ಪ್ರದೇಶವು ಚರಿತ್ರೆಯ ಸಂಶೋಧನೆಯ ದೃಷ್ಟಿಯಿಂದ ಬಹುಮುಖ್ಯವಾದದು. ಈ ಜಿಲ್ಲೆಯ ಹೊಸದುರ್ಗ ತಾಲ್ಲೂಕು ಅರೆಮಲೆನಾಡು ಭಾಗವಾಗಿದ್ದು ಮಲೆನಾಡು ಪರಿಸರದಲ್ಲಿ ಕಾಣಲ್ಪಡುವ ದೇವಾಲಯ ಸಂಸ್ಕೃತಿಯ ಸೊಗಡನ್ನು ಈ ಪರಿಸರದಲ್ಲೂ ಕಾಣಬಹುದು. ಹೊಸದುರ್ಗ ಪರಿಸರದಲ್ಲಿ ಈ ಪ್ರಮಾಣದ ದೇವಾಲಯಗಳು ಇರುವುದು ಕ್ಷೇತ್ರಕಾರ್ಯದ ಮೂಲಕ ಗುರುತಿಸಲು ಸಾಧ್ಯವಾಯಿತು. ಅದರೊಂದಿಗೆ ಈ ಮೂಲಕ ಅಜ್ಞಾತವಾದ ಹೊಸದುರ್ಗ ಪರಿಸರದ ದೇವಾಲಯಗಳನ್ನು ಬೆಳಕಿಗೆ ತರಲಾಯಿತು. ಈ ಭಾಗದಲ್ಲಿ ರಾಷ್ಟ್ರಕೂಟರ ಕಾಲದಿಂದ ಹಿಡಿದು ಪಾಳೆಯಗಾರರ ಕಾಲದವರೆಗೂ ದೇವಾಲಯಗಳು ನಿರ್ಮಾಣಗೊಳ್ಳುತ್ತಾ ಬಂದಿವೆ. ಚಾರಿತ್ರಿಕವಾಗಿ ಮೌರ್ಯರು, ಶಾತವಾಹನರು, ಕದಂಬರು, ರಾಷ್ಟ್ರಕೂಟರು, ಬಾದಾಮಿ ಚಾಲುಕ್ಯರು, ಕಲ್ಯಾಣಚಾಲುಕ್ಯರು, ನೊಳಂಬರು, ಹೊಯ್ಸಳರು, ವಿಜಯನಗರದ ಅರಸರು, ಬೂದಿಹಾಳು, ಮತ್ತೋಡು, ಸಂತೇಬೆನ್ನೂರು, ಚಿತ್ರದುರ್ಗಪಾಳೆಯಗಾರರು ಆಳಿರುವುದನ್ನು ಕಾಣಬಹುದಾಗಿದೆ. ಆದ್ದರಿಂದ ಇಲ್ಲಿನ ದೇವಾಲಯಗಳ ಅಧ್ಯಯನದಲ್ಲಿ ಆಯಾ ರಾಜಸಂತತಿಗಳ ಹಲವು ಪ್ರಭಾವವನ್ನು ಕಾಣಬಹುದಾಗಿದೆ. ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಕಲ್ಯಾಣಿ ಚಾಲುಕ್ಯ ಹೊಯ್ಸಳ ಹಾಗೂ ಪಾಳೆಯಗಾರರ ಕಾಲದ ದೇವಾಲಯಗಳೇ ಹೆಚ್ಚು ಪ್ರಮಾಣದಲ್ಲಿ ಬೆಳಕಿಗೆ ಬಂದಿವೆ. ಈ ದೇವಾಲಯಗಳನ್ನು ಪಂಥಗಳ ಆಧಾರದ ಮೇಲೆ ಶೈವ, ವೈಷ್ಣವ ಮತ್ತು ಶಾಕ್ತ ದೇವಾಲಯಗಳು ಎಂದು ವರ್ಗೀಕರಿಸಿಕೊಂಡು ಅಧ್ಯಯನ ಮಾಡಿದಾಗ ಇವುಗಳಲ್ಲಿ ಹೆಚ್ಚು ವೈಷ್ಣವ ದೇವಾಲಯಗಳೇ ಎಂದು ಗುರುತಿಸಲು ಸಾಧ್ಯವಾಯಿತು. ಸಕಲಧರ್ಮ ಪಂಥಗಳ ಪೋಷಕರಾಗಿದ್ದ ಹೊಯ್ಸಳರು ತಮ್ಮ ಆಳ್ವಿಕೆಯ ಕಾಲದಲ್ಲಿ ವೈಷ್ಣವ ಪಂಥಗಳ ಬಹುಮುಖ್ಯ ಪ್ರಾಧಾನ್ಯತೆಯನ್ನು ನೀಡಿದ್ದರು ಎಂಬುದಕ್ಕೆ ಅವರ ಕಾಲದಲ್ಲಿ ಕರ್ನಾಟಕದ ಬಹುಭಾಗಗಳಲ್ಲಿ ನಿರ್ಮಾಣಗೊಂಡಿರುವ ವೈಷ್ಣವ ದೇವಾಲಯಗಳು, ಮೂರ್ತಿಶಿಲ್ಪಗಳು ಸಾಕ್ಷಿಯಾಗಿವೆ. ಅದರಲ್ಲೂ ವಿಷ್ಣು ಹಾಗೂ ಚನ್ನಕೇಶವ ಮೂರ್ತಿಶಿಲ್ಪಗಳು ಬಹುತೇಕವಾಗಿ ದೇವಾಲಯಗಳಲ್ಲಿ ನಿರ್ಮಾಣಗೊಂಡವು. ಅದರಂತೆ ಹೊಸದುರ್ಗ ಪರಿಸರದ ಹಲವು ದೇವಾಲಯಗಳಲ್ಲಿ ಚನ್ನಕೇಶವ ಮೂರ್ತಿಶಿಲ್ಪಗಳನ್ನು ಕಾಣಬಹುದು. ಹೊಯ್ಸಳರ ಕಾಲದ ಬಾಗೂರು ಚನ್ನಕೇಶವ ದೇವಾಲಯ ಪರಿಸರವು ಬಹುಮುಖ್ಯವಾಗಿ ವೈಷ್ಣವ-ಶ್ರೀವೈಷ್ಣವ ಪಂಥಗಳ ಮುಖ್ಯ

ಪರಿಸರವಾಗಿತ್ತು ಎಂಬುದಕ್ಕೆ ಈ ದೇವಾಲಯ ಪರಿಸರದ ಹಲವು ವೈಷ್ಣವ ಮೂರ್ತಿಶಿಲ್ಪಗಳು, ಆಳ್ವಾರರ ಶಿಲಾಮೂರ್ತಿಗಳು ಹಾಗೂ ಈ ದೇವಾಲಯಕ್ಕೆ ಹೇರಳವಾಗಿ ನೀಡಿರುವ ದಾನದತ್ತಿಗಳು ಎಂದು ಹೇಳಬಹುದು. ವಿಜಯನಗರ ಕಾಲದಲ್ಲಿ ಸದಾಶಿವರಾಯ, ಅಚ್ಯುತರಾಯರ ಕಾಲದಲ್ಲಿ ಇಲ್ಲಿನ ಸಾಮಂತರ ಹೇರಳವಾಗಿ ದಾನದತ್ತಿಗಳನ್ನು ನೀಡಿರುವುದನ್ನು ದೇವಾಲಯ ಪರಿಸರದ ಶಾಸನಗಳಿಂದ ತಿಳಿದು ಬರುವುದು ಒಟ್ಟಾರೆ ಹೊಸದುರ್ಗ ಪರಿಸರದಲ್ಲಿ ವೈಷ್ಣವ-ಶ್ರೀವೈಷ್ಣವ ಪಂಥಗಳು ಬಹು ಆಚರಣೆಯಲ್ಲಿದ್ದವು. ಹೊಯ್ಸಳರ ಪ್ರೋತ್ಸಾಹದಿಂದ ಬೆಳೆದ ಈ ಪಂಥಗಳು ವಿಜಯನಗರ ಕಾಲದಲ್ಲಿ ಸದಾಶಿವರಾಯ, ಅಚ್ಯುತರಾಯನ ಕಾಲದಲ್ಲಿ ಅವರ ಸಾಮಂತಾಧಿಕಾರಿಗಳಿಂದ ಪೋಷಿಸಲ್ಪಟ್ಟವು. ವಿಜಯನಗರದ ಪಥನದ ಬಳಿಕ ಹೊಸದುರ್ಗ ಪ್ರಾಂತ್ಯದಲ್ಲಿ ಪಾಳೆಯಗಾರರು ಪ್ರಬಲರಾದರು. ಆ ವೇಳೆಯಲ್ಲಿ ಹಂಪಿಯಿಂದ ವಲಸೆ ಬಂದ ಬಹುತೇಕ ವೈಷ್ಣವ-ಶ್ರೀ ವೈಷ್ಣವ ಪಂಥದವರು ಹೊಸದುರ್ಗ ಪ್ರಾಂತ್ಯದಲ್ಲಿ ನೆಲೆಯೂರಿ ಪಾಳೆಯಗಾರರಿಂದ ಪೋಷಿಸಲ್ಪಟ್ಟರು. ಈ ಕುರಿತು ಈಗಲೂ ಈ ಪರಿಸರದಲ್ಲಿರುವ ವೈಷ್ಣವ-ಶ್ರೀವೈಷ್ಣವ ಪಂಥಿಯರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನೀಡಿದ ಮಾಹಿತಿಯಿಂದ ದೃಢಪಡಿಸಬಹುದು. ಇದಕ್ಕೆ ಪೂರಕವಾಗಿ ಈ ಪರಿಸರದಲ್ಲಿ ಪಾಳೆಯಗಾರರ ಕಾಲದಲ್ಲಿ ಹೆಚ್ಚು ಪ್ರಮಾಣದಲ್ಲಿ ನಿರ್ಮಾಣಗೊಂಡಿರುವ ಹನುಮಂತನ ದೇವಾಲಯಗಳನ್ನು ಕಾಣಬಹುದು. ಆದ್ದರಿಂದ ಇಲ್ಲಿನ ವೈಷ್ಣವ ದೇವಾಲಯಗಳ ಅಧ್ಯಯನವು ಪ್ರಸ್ತುತ ಸಂಶೋಧನೆಯ ಒಂದು ಬಹುಮುಖ್ಯ ಫಲಿತಾಂಶವಾಗಿ ಕಾಣಲು ಸಾಧ್ಯವಾಗುವುದು.

ಶೈವ ದೇವಾಲಯಗಳಲ್ಲಿ ಗಮನಿಸಬಹುದಾದ ಬಹುಮುಖ್ಯವಾದ ನೀರಗುಂದದ ಸಿದ್ದೇಶ್ವರ, ಕಲ್ಲೇದೇವರಕಟ್ಟೆಯ ಕಲ್ಲೇಶ್ವರ ಹಾಗೂ ಚಿಕ್ಕಯ್ಯಗಟ್ಟೆಯ ಈಶ್ವರ ದೇವಾಲಯಗಳು. ಇವುಗಳು ಕಲ್ಯಾಣ ಚಾಲುಕ್ಯರ ಕೊನೆಯ ಕಾಲದವುಗಳಾಗಿವೆ. ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಬಹುಸುಂದರವಾಗಿದ್ದು ಸಿದ್ದೇಶ್ವರ ಹಾಗೂ ಈಶ್ವರ ದೇವಾಲಯಗಳು ಶಾಸನೋಕ್ತವಾಗಿವೆ. ಶಾಕ್ತ ದೇವಾಲಯಗಳಲ್ಲಿ ವಿಜಯನಗರ ಕಾಲದ ಅಂತರಘಟ್ಟಮ್ಮ ಹಾಗೂ ಪಾಳೆಯಗಾರರ ಕಾಲದ ಹೊರಗಲ್ಲಮ್ಮ ದೇವಾಲಯಗಳನ್ನು ಕಾಣಬಹುದು.

ಮೂರ್ತಿಶಿಲ್ಪಗಳ ಅಧ್ಯಯನದಿಂದ ಹೊಯ್ಸಳ, ವಿಜಯನಗರ ಹಾಗೂ ಪಾಳೆಯಗಾರರ ಕಾಲದ ಮೂರ್ತಿಶಿಲ್ಪಗಳನ್ನು ಬೆಳಕಿಗೆ ತರಲು ಸಾಧ್ಯವಾಗಿದೆ. ಹೊಯ್ಸಳ ಮೂರ್ತಿಶಿಲ್ಪಗಳನ್ನು ಹಸಿರು ಬಣ್ಣದ ಬಳಪದ ಕಲ್ಲಿನಿಂದ ಕಂಡರಿಸಿದ ಮೂರ್ತಿಶಿಲ್ಪಗಳನ್ನು ಹೆಚ್ಚು ಕಾಣಬಹುದು. ಅವುಗಳಲ್ಲಿ ಬಹುಮುಖ್ಯವಾಗಿ ಚಿಕ್ಕಯ್ಯಗಟ್ಟೆಯ ಈಶ್ವರ ದೇವಾಲಯದ ಚನ್ನಕೇಶವ, ಗಣೇಶ, ಮಹಿಷಾಸುರಮರ್ದಿನಿ, ನೀರಗುಂದದ ಸಿದ್ದೇಶ್ವರ ದೇವಾಲಯದ ಭೈರವ, ಚನ್ನಕೇಶವ, ವೇಣುಗೋಪಾಲ ಮೂರ್ತಿಶಿಲ್ಪಗಳನ್ನು ಕಾಣಬಹುದಾಗಿದೆ. ಈ ಪರಿಸರದಲ್ಲಿ ೭ ಭೈರವ

ಮೂರ್ತಿಶಿಲ್ಪಗಳು ಬೆಳಕಿಗೆ ಬಂದಿದ್ದು, ಅವು ಹೊಯ್ಸಳ ಹಾಗೂ ವಿಜಯನಗರ ಕಾಲದವುಗಳಾಗಿವೆ. ಹೊಸದುರ್ಗದ ಭೈರವನಬೆಟ್ಟ ಅಥವಾ ಭೈರನಕೊಂಬೆ ಎಂದು ಕರೆಯಲ್ಪಡುವ ಇಲ್ಲಿನ ಕಾಲಭೈರವ ದೇವಾಲಯದಲ್ಲಿ ಭೈರವನ ಆರಾಧನೆಯನ್ನು ಗುರುತಿಸಬಹುದು. ಹೊಸದುರ್ಗದ ಸುತ್ತಮುತ್ತಲೂ ಇಷ್ಟು ಪ್ರಮಾಣದಲ್ಲಿ ಭೈರವ ಮೂರ್ತಿಶಿಲ್ಪಗಳು ಕಂಡು ಬಂದಿರುವುದು ಪ್ರಾಚೀನ ಕಾಲದಲ್ಲಿ ನಾಥಪಂಥ ಸಂಪ್ರದಾಯ ಇಲ್ಲಿದ್ದಿರಬಹುದು. ಕಾರಣ ಕರ್ನಾಟಕದ ನಾಥಪಂಥದ ಎಡೆಗಳಲ್ಲಿ ಚಿತ್ರದುರ್ಗ ಜಿಲ್ಲೆ ಬಹುಮುಖ್ಯವಾದ ನೆಲೆಯಾಗಿದ್ದಿತು. ಹೊಸದುರ್ಗ ಪರಿಸರದಲ್ಲಿ ಈ ಪರಿಯಾದ ಭೈರವ ಮೂರ್ತಿಶಿಲ್ಪಗಳನ್ನು ಗಮನಿಸಿದಾಗ ನಾಥಪಂಥದ ಕುರುಹುಗಳನ್ನು ಗುರುತಿಸಬಹುದು. ಈ ಸಂಗತಿಯೂ ಸಹ ಪ್ರಸ್ತುತ ಸಂಶೋಧನೆಯ ಒಂದು ಬಹುಮುಖ್ಯ ಅಂಶವಾಗಿದೆ. ಇನ್ನು ದೇವಾಲಯಗಳಿಗೆ ಸಂಬಂಧಿಸಿದಂತಹ ಶಾಸನಗಳ ಅಧ್ಯಾಯನದಿಂದ ಈ ದೇವಾಲಯಗಳಿಗೆ ಯಾವ ಯಾವ ರಾಜವಂಶಗಳ ಕಾಲದಲ್ಲಿ ದಾನದತ್ತಿಗಳನ್ನು ನೀಡಲಾಗಿತ್ತು. ಎಂಬುದನ್ನು ತಿಳಿಯಬಹುದು. ಅವುಗಳಲ್ಲಿ ಈ ಮೇಲೆ ವಿವರಿಸಿದಂತೆ ಚನ್ನಕೇಶವ ದೇವಾಲಯವು ಹೆಚ್ಚು ದಾನದತ್ತಿಗಳನ್ನು ಪಡೆದಿರುವ ದೇವಾಲಯವಾಗಿದೆ.

ಒಟ್ಟಾರೆ "ಹೊಸದುರ್ಗ ಪರಿಸರದ ದೇವಾಲಯಗಳು" ಎಂಬ ಈ ಅಧ್ಯಯನದ ಮೂಲಕ ಹೊಸದುರ್ಗ ಪರಿಸರದ ಪ್ರಾಚೀನ ದೇವಾಲಯಗಳು ಹಾಗೂ ಮೂರ್ತಿಶಿಲ್ಪಗಳನ್ನು ಬೆಳಕಿಗೆ ತರಲಾಗಿದೆ. ಅಜ್ಞಾತವಾಗಿದ್ದ ಈ ದೇವಾಲಯಗಳು ಇದೇ ಮೊದಲಬಾರಿಗೆ ವ್ಯವಸ್ಥಿತವಾದ ಅಧ್ಯಯನಕ್ಕೆ ಒಳಪಟ್ಟು ಚರ್ಚಿಸಲ್ಪಟ್ಟಿವೆ. ಶಾಸನಗಳ ಮೂಲಕ ಈ ದೇವಾಲಯಗಳು ಸಂಬಂಧಿಸಿದ ಹಲವು ಸಂಗತಿಗಳನ್ನು ಹೊರತರಲು ಸಾಧ್ಯವಾಗಿದೆ. ಆದ್ದರಿಂದ ಹೊಸದುರ್ಗ ಪರಿಸರದ ಪ್ರಾಚೀನ ದೇವಾಲಯಗಳು ಅಂದಿನ ಚರಿತ್ರೆ ಹಾಗೂ ಸಂಸ್ಕೃತಿಯ ರಚನೆಯಲ್ಲಿ ಸಕ್ರಿಯವಾಗಿ ಪಾತ್ರವಹಿಸಿವೆ.

ಅನುಬಂಧಗಳು

೧. ಗ್ರಂಥಋಣ

೨. ನಕ್ಷೆಗಳು

೩. ಛಾಯಾಚಿತ್ರಗಳು

ಅನುಬಂಧಗಳು

೧. ಗ್ರಂಥಋಣ

ಇಂಗ್ಲೀಷ್ ಗ್ರಂಥಗಳು

1. Adam Hardy., 1995, Indian Temple Architecture : Form and Transformation., Indira Gandhi National Centre for the Arts Abinav Publications.
2. George Michell (E.D.) moorti V.S. (Co)., 2001, Encyclopaedia of Indian Temple Architecture. (South India, Dravida Desa, Laterphase, C.A.D. 1289-1798), American Institute of Indian Studies, New Delhi.
3. Gopinatha Rao T.A., 1985, Elements of Hindu Iconography, Vol-1, Part-I Matilall Banarsidass, Delhi.
4. Gupta S.P., Shashi Prabha Asthana., 2002, Elements of Indian Art (Including Temple Architecture, Iconography and Iconometry), Indraprastha Museum of Art and Archaelolgy, New Delhi.
5. Rice B.L. (Ed)., 1903, Epigraphia carnatica, vol-X1 (Inscription in the chitaldroog District), Mysore Government central press, Bangalore.
6. Suryanath U. Kamth (C.Ed)., Karnataka State Gazetteer, part-I, Government of Karnataka, Bangalore.
7. Sri Sathyan B.N., 1967, Chitradurga District Gazetteer, Government press, Bangalore.
8. Suresh K.M., Temples of Karnataka, (grand plants and Elevations) vol-I : Text, Bharatiya kala prakashan, Delhi.

ಕನ್ನಡ ಗ್ರಂಥಗಳು :-

೧. ಅನಂತ ರಾಮರಾವ್ ಕೆ(ಪ್ರ.ಸಂ)., ೨೦೦೬, ಸುವರ್ಣ ಕರ್ನಾಟಕ ದರ್ಶನ (೫೦ ಸಂವತ್ಸರಗಳು), ವಿದ್ಯಾಪಬ್ಲಿಷಿಂಗ್ ಹೌಸ್, ಮಂಗಳೂರು.

೨. ಅನಂತ ರಂಗಾಚಾರ್ ಎನ್., ೧೯೮೪, ಭಾರತೀಯ ದೇವಾಲಯಗಳು ಮತ್ತು ಸಂಸ್ಕೃತಿ, ಸ್ವಚ್ಛಂದಂ ಪ್ರಕಾಶನ, ಮೈಸೂರು.

೩. ಅಪರ್ಣ ಕೂ.ಸ., ೧೯೯೯, ದೇವಾಲಯ ವಾಸ್ತುಶಿಲ್ಪ ಪರಿಚಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಕರವೀರ ಪ್ರಭು ಕ್ಯಾಲಕೊಂಡ., ೧೯೯೭, ಚಾಲುಕ್ಯ ವಾಸ್ತುಶಿಲ್ಪ ವೈಭವ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಕಲಬುರ್ಗಿ ಎಂ.ಎಂ., ೧೯೯೪, ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಕಲಬುರ್ಗಿ ಎಂ.ಎಂ., (ಸಂ)., ೧೯೯೯, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, (ಸಂಪುಟ.೧), ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ಕುರುಗುಂದ ಟಿ. ಪಂಕಜಾಕ್ಷ., ೨೦೦೬, ಶಿಲ್ಪ ಸೌಂದರ್ಯ, ಕರ್ನಾಟಕ ಶಿಲ್ಪಕಲಾ ಆಕಾಡೆಮಿ, ಬೆಂಗಳೂರು.

೮. ಕೃಷ್ಣರಾವ್ ಎಂ.ವಿ, ಕೇಶವಭಟ್ಟ, ಎಂ., ೧೯೭೦, ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

೯. ಗಿರಿಜ ಟಿ., ಚಿತ್ರದುರ್ಗ ಜಿಲ್ಲಾ ದರ್ಶಿನಿ, ರೇಖಾ ಪ್ರಕಾಶನ, ದಾವಣಗೆರೆ

೧೦. ಗೋಪಾಲ್ ಬಾ.ರಾ., ವೆಂಕಟಾಲಶಾಸ್ತ್ರಿ ಟಿ.ವಿ. (ಸಂ)., ೧೯೭೫, ಸಂಶೋಧನಾ ಲೇಖನಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೧. ಗೋಪಾಲ್ ಬಾ.ರಾ., ೧೯೮೩, ವಿಜಯನಗರದ ವಾಸ್ತುಶಿಲ್ಪ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೨. ಗೋಪಾಲ್ ಬಾ.ರಾ., ೨೦೦೩, ಕರ್ನಾಟಕದ ಕಲೆಗಳು, ವಾಸ್ತು, ಸಂಪುಟ–೪, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೧೩. ಗೋಪಾಲ್ ರಾವ್ ಎಚ್.ಎಸ್.(ಸಂ)., ೧೯೯೪, ನಾಗಾಭಿನಂದನ (ಎಂ.ಜಿ. ನಾಗರಾಜ್ ಅಭಿನಂದನಾ ಗ್ರಂಥ), ಎಂ.ಜಿ. ನಾಗರಾಜ್ ಅಭಿನಂದನಾ ಸಮಿತಿ, ಬೆಂಗಳೂರು

೧೪. ಗೋಪಾಲ್ ಆರ್. (ಸಂ)., ೨೦೦೬, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ,

೧೫. ಚಿನ್ನಸ್ವಾಮಿ ಸೋಸಲೆ ಎನ್., ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ (ವಿಜಯನಗರ, ಮೈಸೂರು, ಇಕ್ಕೆರಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೬. ಚಿದಾನಂದ ಮೂರ್ತಿ ಎಂ., ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ. ೪೫೦ ರಿಂದ ಕ್ರಿ.ಶ. ೧೧೫೦), ಸಪ್ನಬುಕ್ ಹೌಸ್, ಬೆಂಗಳೂರು.

೧೭. ತಿಪ್ಪೇರುದ್ರ ಸ್ವಾಮಿ ಎಚ್., ೨೦೦೩, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು.

೧೮. ತಿಪ್ಪೇಸ್ವಾಮಿ ಪಿ.ಆರ್(ಪ್ರ.ಸಂ)., ೧೯೯೪, ಶಿಲ್ಪಕಲಾ ಪ್ರಪಂಚ, ಕರ್ನಾಟಕ ಲಲಿತಕಲಾ ಆಕಾಡೆಮಿ, ಬೆಂಗಳೂರು.

೧೯. ನರಸಿಂಹಮೂರ್ತಿ ಎ.ವಿ., ೧೯೮೩, ಕರ್ನಾಟಕದಲ್ಲಿ ಪುರಾತತ್ವ ಶೋಧನೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೦. ನಾಯಕ ಎಚ್. ಎಂ(ಮು.ಸಂ)., ೧೯೭೯, ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಸಂಪುಟ–೭, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೧. ಪ್ರಭಾಕರ್ ಎಂ.ಎನ್., ೨೦೦೦, ದೇವಾಲಯ ವಾಸ್ತು ಚಂದ್ರಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೨. ಪುಟ್ಟಣ್ಣ ಎಂ.ಎಸ್., ೧೯೯೭, ಚಿತ್ರದುರ್ಗ ಪಾಳೆಯಗಾರರು, ಮದಕರಿ ಪ್ರಕಾಶನ, ಚಿತ್ರದುರ್ಗ

೨೩. ಬಾಗೂರು ಆರ್. ನಾಗರಾಜಪ್ಪ., ೧೯೮೪, ಹೊಸದುರ್ಗದ ಸುತ್ತ, ಅಭಿವ್ಯಕ್ತಿ ವೇದಿಕೆ, ಹೊಸದುರ್ಗ.

೨೪. ಬಾಗೂರು ಆರ್. ನಾಗರಾಜಪ್ಪ, ಬಸವರಾಜ ಶಿವಪುರ(ಸಂ)., ೧೯೯೯, ಕಲ್ಪಾದ್ರಿ (ಸ್ಮರಣ ಸಂಚಿಕೆ), ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಹೊಸದುರ್ಗ.

೨೫. ಬಾಗೂರು ಆರ್. ನಾಗರಾಜಪ್ಪ., ೨೦೦೪, ಹೊಸದುರ್ಗ ಸೀಮೆ ಜಾನಪದ, ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು.

೨೬. ಮಕಾನದಾರ ಎ.ಎಸ್., ೨೦೦೬, ಪ್ರಾಚ್ಯ ಮೌಲ್ಯ (ಜಿ.ಎಂ. ಮುಲ್ಲಾ ಅವರ ಅಭಿನಂದನ ಗ್ರಂಥ), ನಿರಂತರ ಪ್ರಕಾಶನ, ಗದಗ.

೨೭. ಮರಳು ಸಿದ್ಧಯ್ಯ ಎಚ್.ಎಂ., ೧೯೯೩, ಸಂಶೋಧನೆಯ ಹೆಜ್ಜೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೮. ಮರಿಶಾಮಾಚಾರ್ ಎನ್., ೨೦೦೦, ಭಾರತೀಯ ಶಿಲ್ಪಕಲೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

೨೯. ಮಹದೇವ ಸಿ., ೨೦೦೦, ವಿಜಯನಗರದ ಗಾರೆ ಶಿಲ್ಪ, ಪುರಾತತ್ವ ವಿಭಾಗದ ಪ್ರಕಟಣೆ–೩, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೦. ಮಹಂತೇಶ ಎನ್.ಎಸ್., ೨೦೦೮, ಚಿತ್ರದುರ್ಗದ ಕೋಟೆ ಪರಿಸರದ ದೇವಾಲಯಗಳು : ಒಂದು ಸಾಂಸ್ಕೃತಿಕ ಅಧ್ಯಯನ, ರೇಣುಕ ಪ್ರಕಾಶನ, ಚಿತ್ರದುರ್ಗ.

೩೧. ರಘುನಾಥ ಭಟ್ ಹೆಚ್.ಆರ್., ೧೯೭೭, ಕರ್ನಾಟಕ ಶಾಸನ,ಕಲೆ, ಕೆಲವು ಸಂಶೋಧನೆಗಳು., ಭಾರತೀ ಪ್ರಕಾಶನ, ಮೈಸೂರು.

೩೨. ರವೀಂದ್ರನಾಥ ಕೆ., ೨೦೦೦, ಕನ್ನಡ ದಾಖಲು ಸಾಹಿತ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೩. ರಾಜರಾಮ ಹೆಗಡೆ., ೨೦೦೧, ಲೌಕಿಕ–ಅಲೌಕಿಕ (ಭಾರತೀಯ ಇತಿಹಾಸದಲ್ಲಿ ಪ್ರಭುತ್ವ ರಚನೆ ಮತ್ತು ಮತ ಸಂಪ್ರದಾಯಗಳು), ಆನಂದ ಕಂದ ಗ್ರಂಥಮಾಲೆ, ಮಲಾಡಿಹಳ್ಳಿ

೩೪. ರಾಜಾರಾಮ ಹೆಗಡೆ, ಅಶೋಕ ಶೆಟ್ಟರ್(ಸಂ)., ೨೦೦೧, ಮಲೆ ಕರ್ನಾಟಕದ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೫. ರಾಜಶೇಖರಪ್ಪ ಬಿ., ೨೦೦೧, ದುರ್ಗಶೋಧನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೬. ರಾಜಶೇಖರಪ್ಪ ಬಿ., ೨೦೦೧, ಇತಿಹಾಸ ಕಥನ, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು

೩೭. ರಾಮಚಂದ್ರರಾವ್ ಎಸ್.ಕೆ., ೧೯೮೦, ಭಾರತದ ದೇವಾಲಯ ನೆಲೆ ಹಿನ್ನಲೆ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೩೮. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ್ ಎಂ.ವಿ(ಸಂ)., ೧೯೭೬, ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟಣಾ ಸಮಿತಿ, ಚಿತ್ರದುರ್ಗ.

೩೯. ಲಕ್ಷ್ಮಣ್ ತೆಲಗಾವಿ(ಸಂ)., ೧೯೮೯, ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

೪೦. ಲಕ್ಷ್ಮಣ್ ತೆಲಗಾವಿ(ಸಂ)., ೨೦೦೩, ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೧. ಲಕ್ಷ್ಮಣ್ ತೆಲಗಾವಿ., ೨೦೦೪, ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ ಒಂದು ಶತಮಾನ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

೪೨. ಲಕ್ಷ್ಮಣ್ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನ ಯುಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೩. ವಸಂತ ಲಕ್ಷ್ಮಿ ಕೆ. ೨೦೦೬, ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು, ಸುಮುಖ ಪ್ರಕಾಶನ, ಬೆಂಗಳೂರು.

೪೪. ವಾಸುದೇವ ಬಡಿಗೇರ(ಸಂ)., ೨೦೦೮, ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-೨, ಹಾನಗಲ್ಲು, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೫. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು(ಮ್ಯಾಸಬೇಡರ ಮೌಖಿಕ ಚರಿತ್ರೆ ಮತ್ತು ಸಂಸ್ಕೃತಿ ಅಧ್ಯಯನ), ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೬. ಶರ್ಮ ತಿ.ತಾ(ಸಂ)., ೧೯೯೯, ಚಾರಿತ್ರಿಕ ದಾಖಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೪೭. ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ)., ೧೯೭೭, ಚಂದ್ರವಳ್ಳಿ, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ.

೪೮. ಶಿವರಾಮ್ ಕಾರಂತ್ ಕೆ., ೧೯೮೩, ಕರ್ನಾಟಕದಲ್ಲಿ ಶಿಲ್ಪ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೪೯. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೦. ಶೀಲಾಕಾಂತ ಪತ್ತಾರ., ೨೦೦೬, ಬಾದಾಮಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೧. ಷೇಕ್ ಅಲಿ ಬಿ(ಪ್ರ.ಸಂ)., ಶಿವಣ್ಣ ಕೆ.ಎಸ್.(ಸಂ)., ೧೯೯೭, ಕರ್ನಾಟಕದ ಚರಿತ್ರೆ, ಸಂಪುಟ-೩, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೨. ಸುರೇಶ ಕೆ.ಎಂ, ವಾಸುದೇವ ಬಡಿಗೇರ, ಸೋಮಶೇಖರ್ ಎಸ್.ವೈ, ಮಾಡಲಗೇರಿ ಕೊಟ್ರೇಶ್., ೨೦೦೧, ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೩. ಸಿಂದಗಿ ರಾಜಶೇಖರ್., ೧೯೮೮, ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ, ಪಬ್ಲಿಕೇಷನ್ಸ್, ಧಾರವಾಡ

೫೪. ಹಿರೇಮಠ ಆರ್.ಸಿ., ೧೯೯೭, ಮಹಾಯಾತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೫. ಹುಲ್ಲೂರು ಶ್ರೀನಿವಾಸ ಜೋಯಿಸರು, ಸಿರುಮನೃಪಾಲ, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ.

೫೬. ಜ್ಞಾನಾನಂದ ಜಿ., ೨೦೦೧, ಶಿಲ್ಪಾದರ್ಶ, ಸಂಪುಟ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೭. ಜ್ಞಾನಾನಂದ ಜಿ., ೨೦೦೨, ಶಿಲ್ಪಾದರ್ಶ, ಸಂಪುಟ-೨, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೮. ಜ್ಞಾನಾನಂದ ಜಿ., ೨೦೦೬, ಶ್ರೀಕಾಶ್ಯಪ ಶಿಲ್ಪ ಶಾಸ್ತ್ರಂ, ಪೂರ್ವಾರ್ಧ (ದ್ವಿತೀಯ ಸಂಪುಟ), ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

ಲೇಖನಗಳು :-

೧. ಅಪರ್ಣ ಕೂ.ಸ., ೧೯೯೦, ದೇವಾಲಯದ ಕಂಬಗಳು ಒಂದು ಅಧ್ಯಯನ, ಇತಿಹಾಸ ದರ್ಶನ, ಸಂಪುಟ-೪, ಸೂರ್ಯನಾಥ ಯು. ಕಾಮಥ್, ಲಕ್ಷಣ್ ತೆಲಗಾವಿ(ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೨. ಅಪರ್ಣ ಕೂ.ಸ., ೧೯೯೬, ಶಾಸ್ತ್ರಗ್ರಂಥಗಳಲ್ಲಿ ನಿರೂಪಿತವಾದ ದೇವಾಲಯ ಮೇಲ್ಕಡದ ರಚನೆ, ಇತಿಹಾಸ ದರ್ಶನ, ಸಂಪುಟ-೧೧, ಸೂರ್ಯನಾಥ ಯು. ಕಾಮಥ್, ಕೃಷ್ಣಮೂರ್ತಿ ಪಿ.ವಿ.(ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು,

೩. ಅಪರ್ಣ ಕೂ.ಸ., ೧೯೯೯, ಶಾಸ್ತ್ರ ಗ್ರಂಥಗಳ ದೃಷ್ಟಿಯಲ್ಲಿ ದೇವಾಲಯದ ಪ್ರಾಕಾರ ಗೋಪುರಗಳು, ಇತಿಹಾಸ ದರ್ಶನ, ಸಂಪುಟ-೧೪, ನಾಗರಾಜ್ ಎಂ.ಜಿ, ಕೃಷ್ಣಮೂರ್ತಿ ಪಿ.ವಿ(ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು,

೪. ಅಪರ್ಣ ಕೂ.ಸ., ೧೯೯೮., ವಾಸ್ತುಶಿಲ್ಪ ಶಾಸ್ತ್ರದ ಹಿನ್ನಲೆಯಲ್ಲಿ ದೇವಾಲಯದ ಮಂಟಪಗಳು, ಇತಿಹಾಸ ದರ್ಶನ, ಸಂಪುಟ-೧೩, ನಾಗರಾಜ್ ಎಂ.ಜಿ, ಕೃಷ್ಣಮೂರ್ತಿ ಪಿ.ವಿ(ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೫. ಜೋಷಿ ಎಸ್.ಕೆ., ೨೦೦೦, ದೈವಿಕಲ್ಪನೆಯಿಂದ ದೇವಸ್ಥಾನದವರೆಗೆ ಚಿಂತನೆ, ಇತಿಹಾಸದರ್ಶನ, ಸಂಪುಟ-೧೫, ನಾಗರಾಜ ಎಂ.ಜಿ., ಕೃಷ್ಣಮೂರ್ತಿ ಪಿ.ವಿ(ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೬. ಪ್ರಭಾಕರ್ ಎಂ.ಎನ್., ೧೯೯೯, ದೇವಾಲಯಗಳಿಗೊಂದು ವರ್ಗೀಕರಣಶಾಸ್ತ್ರ, ಇತಿಹಾಸದರ್ಶನ, ಸಂಪುಟ-೧೪, ನಾಗರಾಜ ಎಂ.ಜಿ, ಕೃಷ್ಣಮೂರ್ತಿ ಪಿ.ವಿ(ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು,

೭. ರಂಗರಾಜು ನಾ.ಶಿ., ೨೦೦೭, ಚಿತ್ರದುರ್ಗ ಜಿಲ್ಲೆಯ ಹೊಯ್ಸಳ ದೇವಾಲಯಗಳು, ಹರತಿ ಜ್ಯೋತಿ (ಪಿ.ಆರ್. ತಿಪ್ಪೇಸ್ವಾಮಿ ಸಂಸ್ಮರಣ ಗ್ರಂಥ), ಪರಮೇಶ (ಸಂ), ಸಂವಹನ ಪ್ರಕಾಶನ, ಮೈಸೂರು.

೮. ಲಕ್ಷ್ಮಣ್ ತೆಲಗಾವಿ., ೧೯೮೮, ಎಪ್ಪತ್ತೇಳು ಪಾಳೆಯಗಾರರು, ಇತಿಹಾಸದರ್ಶನ, ಸಂಪುಟ-೩, ಸೂರ್ಯನಾಥ ಯು. ಕಾಮತ್, ಲಕ್ಷ್ಮಣ್ ತೆಲಗಾವಿ(ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು,

೯. ಲಕ್ಷ್ಮಣ್ ತೆಲಗಾವಿ, ೨೪-೪, ಮೇ-ಜುಲೈ-೧೯೯೯, ಹೊಸದುರ್ಗ ತಾಲ್ಲೂಕು ಇತಿಹಾಸ, ಕೆಲವು ಹೊಸ ಸಂಗತಿಗಳು, ತರಳು ಬಾಳು.

೧೦. ಲಕ್ಷ್ಮಣ್ ತೆಲಗಾವಿ., ೨೦೦೮, ಮತ್ತೋಡು ಪಾಳೆಯಗಾರ ವಂಶಜರ ಒಂದು ಪತ್ರ(೧೮೮೨), ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್, ಸಂಪುಟ-೮, ಶ್ರೀನಿವಾಸ್ ಎಂ.ವಿ(ಸಂ)., ಕರ್ನಾಟಕ ಹಿಸ್ಟರಿ ಕಾಂಗ್ರೇಸ್, ಬೆಂಗಳೂರು.

೧೧. ಶೈಲಜಾ ಎಸ್. ಹೊಸಳೇರ., ೨೦೦೫, ಬಾಗೂರು-ಬೂದಿಹಾಳು ಪಾಳೆಯಪಟ್ಟುಗಳು ಸಂಬಂಧ, ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್, ಸಂಪುಟ-೫, ಅಶೋಕ ಶೆಟ್ಟರ್ (ಸಂ), ಕರ್ನಾಟಕ ಹಿಸ್ಟರಿ ಕಾಂಗ್ರೇಸ್, ಬೆಂಗಳೂರು

೧೨. ಷಡಕ್ಷರಯ್ಯ ಮತ್ತು ಕುಮಾರ ಸ್ವಾಮಿ ಎಚ್.ಬಿ., ೨೦೦೦, ಕರ್ನಾಟಕದಲ್ಲಿ ಪಾಳೆಯಗಾರರ ಉಗಮ : ಒಂದು ಅಧ್ಯಯನ, ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್, ಸಂಪುಟ-೫, ಶ್ರೀನಿವಾಸ ಎಂ.ವಿ.(ಸಂ)., ಕರ್ನಾಟಕ ಹಿಸ್ಟರಿ ಕಾಂಗ್ರೇಸ್, ಬೆಂಗಳೂರು.

೧೩. ಸಂತೇಬೆನ್ನೂರು ಸುಮತೀಂದ್ರ ನಾಡಿಗ., ೧೯೯೮, ಸಂತೇಬೆನ್ನೂರು ಪಾಳೆಯಗಾರರು, ಇತಿಹಾಸ ದರ್ಶನ, ಸಂಪುಟ-೧೨, ನಾಗರಾಜ್ ಎಂ.ಜಿ, ಕೃಷ್ಣಮೂರ್ತಿ ಪಿ.ವಿ(ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

೧೪. ಸಂತೇಬೆನ್ನೂರು ಸುಮತೀಂದ್ರ ನಾಡಿಗ., ೧೯೯೯, ಸಂತೇಬೆನ್ನೂರು ನಾಯಕರ ಶಾಸನಗಳು, ಇತಿಹಾಸ ದರ್ಶನ, ಸಂಪುಡ-೧೪, ನಾಗರಾಜ್ ಎಂ.ಜಿ. ಕೃಷ್ಣಮೂರ್ತಿ ಪಿ.ವಿ(ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೧೫. ಸುರೇಶ್ ಬಿ., ೨೦೦೮, ಬಾಗೂರು ಚನ್ನಕೇಶವ ದೇವಾಲಯ : ಒಂದು ಅಧ್ಯಯನ, ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್, ಸಂಪುಟ-೮, ಶ್ರೀನಿವಾಸ್ ಎಂ.ವಿ(ಸಂ)., ಕರ್ನಾಟಕ ಹಿಸ್ಟರಿ ಕಾಂಗ್ರೇಸ್, ಬೆಂಗಳೂರು.

ಅಪ್ರಕಟಿತ ಸಂಶೋಧನಾ ಪ್ರಬಂಧಗಳು

೧. ಅಮರೇಶ್ ಯತಗಲ್., ೨೦೦೫, ಕರ್ನಾಟಕ ನಾಯಕ ಅರಸು ಮನೆತನಗಳ ವಿಶಿಷ್ಟ ಸಾಂಸ್ಕೃತಿಕ ಆಚರಣೆಗಳು : ಒಂದು ಚಾರಿತ್ರಿಕ ಅಧ್ಯಯನ(ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಸೂರ್ಯಕಾಂತ ಪಿ. ಕೊಕಟನೂರ., ೨೦೦೭, ಕೊಣ್ಣೂರು ಪರಿಸರದ ಪುರಾತತ್ವ(ಅಪ್ರಕಟಿತ ಎಂ.ಫಿಲ್.ನಿಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಜಯಣ್ಣ ಯು., ೨೦೦೨, ಮೊಳಕಾಲ್ಮೂರು ತಾಲ್ಲೂಕಿನ ಪುರಾತತ್ವೀಯ ಪರಿಸರ(ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ತಿಪ್ಪೇಸ್ವಾಮಿ ಎಸ್., ೨೦೦೪, ರಕ್ಷಣಾ ವಾಸ್ತುಶಿಲ್ಪ : ಚಿತ್ರದುರ್ಗ ಜಿಲ್ಲೆ(ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.


೫. ದತ್ತಾತ್ರೇಯ ಜಿ. ಕುಲಕರ್ಣಿ., ೨೦೦೬, ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು(ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.


೬. ಪ್ರಸನ್ನ ಕುಮಾರ ಡಿ., ೨೦೦೫, ಕರ್ನಾಟಕದಲ್ಲಿ ಶಿಲಾಶಾಸನ ನಿರ್ಮಾಣ ಮತ್ತು ಅದರ ಸಾಮಾಜಿಕ ಆಯಾಮಗಳು (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ.

೭. ಮಂಜುನಾಥ ಡಿ., ೨೦೦೪, ಮಧ್ಯಕಾಲದಲ್ಲಿ ದೇವಾಲಯದ ಆಶ್ರಯ ಪಾಲನೆ ಮತ್ತು ನಿರ್ವಹಣೆ ಹರಿಹರ ದೇವಾಲಯದ ಒಂದು ಅಧ್ಯಯನ, ಶಾಸನಗಳ ಆಧಾರದಿಂದ,(ಅಪ್ರಕಟಿತ ಎಂ.ಫಿಲ್. ನಿಂಬಂಧ), ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ.


೨. ನಕ್ಷೆಗಳು


ಚಿತ್ರದುರ್ಗ ಜಿಲ್ಲೆ
ಮೊಳಕಾಲ್ಮೂರು
ಚಳ್ಳಕೆರೆ
ಚಿತ್ರದುರ್ಗ
ಹೊಳಲ್ಕೆರೆ
ಹಿರಿಯೂರು
ಹೊಸದುರ್ಗ
ಹೊಸದುರ್ಗ ತಾಲ್ಲೂಕು
ಹೊಸದುರ್ಗ
ವೇದಾವತಿ ನದಿ
ಕಸಬಾ ಹೋಬಳಿ
(ಕ್ಷೇತ್ರ ಕಾರ್ಯ ಪ್ರದೇಶ)






ಚನ್ನಕೇಶವ ದೇವಾಲಯದ ತಲನಕ್ಷೆ, ಬಾಗೂರು




ಈಶ್ವರ ದೇವಾಲಯದ ತಲನಕ್ಷೆ, ಚಿಕ್ಕಯ್ಯಗಟ್ಟಿ






ರಾಮೇಶ್ವರ ದೇವಾಲಯದ ತಲನಕ್ಷೆ, ನೀರಗುಂದ






ಸಿದ್ದೇಶ್ವರ ದೇವಾಲಯದ ತಲನಕ್ಷೆ, ನೀರಗುಂದ






ಜೀವಿ ಪ್ರಾಣದೇವರ ದೇವಾಲಯದ ತಲನಕ್ಷೆ, ಬಾಗೂರು





ಕೋಡಿ ರಾಮಲಿಂಗೇಶ್ವರ ದೇವಾಲಯದ ತಲನಕ್ಷೆ, ಕಂಗುವಳ್ಳಿ





ಹನುಮಂತ ದೇವಾಲಯದ ತಲನಕ್ಷೆ, ಅತ್ತಿಗಟ್ಟ

೩. ಛಾಯಾ ಚಿತ್ರಗಳು



೧. ಸಿದ್ದೇಶ್ವರ ದೇವಾಲಯ, ನೀರಗುಂದ



೧. ಅ. ಆದಿಷ್ಠಾನ




೧. ಆ. ಭುವನೇಶ್ವರಿ



೧. ಇ. ನವರಂಗದಲ್ಲಿನ ಕಂಬ



೧. ಈ. ಮುಖ್ಯ ಗರ್ಭಗೃಹದ ಶಿವಲಿಂಗ



೧. ಉ. ಎಡಭಾಗ ಗರ್ಭಗೃಹದ ವೇಣುಗೋಪಾಲ ಮೂರ್ತಿಶಿಲ್ಪ



೧. ಊ. ಬಲಭಾಗ ಗರ್ಭಗೃಹದ ಚನ್ನಕೇಶವ ಮೂರ್ತಿಶಿಲ್ಪ



೨. ಕಲ್ಲೇಶ್ವರ ದೇವಾಲಯ, ಕಲ್ಲೇದೇವರ ಕಟ್ಟೆ



೨. ಅ. ನವರಂಗ



೨. ಆ. ನವರಂಗದಲ್ಲಿನ ಕಂಬ



೨. ಇ. ಎಡಭಾಗ ಗರ್ಭಗೃಹದ ವೀರಭದ್ರ ಮೂರ್ತಿಶಿಲ್ಪ



೨. ಈ. ನವರಂಗದಲ್ಲಿನ ಶೂಲಬ್ರಹ್ಮ ಶಿಲ್ಪ



೩. ರಾಮೇಶ್ವರ ದೇವಾಲಯ, ನೀರಗುಂದ



೩. ಅ. ತೆರದ ಸಭಾಮಂಟಪದ ಕಂಬ



೪. ಚನ್ನಕೇಶವ ದೇವಾಲಯ, ಬಾಗೂರು



೪. ಅ. ದೇವಾಲಯದ ಪ್ರಾಕಾರದ ಒಳಬಾಗ



೪. ಆ. ಲಕ್ಷ್ಮೀಗುಡಿಯ ತೆರೆದಮಂಟಪದ ಕಂಬ



೪. ಇ. ಚನ್ನಕೇಶವ ದೇವಾಲಯದ ನವರಂಗ



೪. ಈ. ಚನ್ನಕೇಶವ ಮೂರ್ತಿಶಿಲ್ಪ



೪. ಉ. ವೈಕುಂಠ ನಾರಾಯಣ
ಮೂರ್ತಿಶಿಲ್ಪ



೫೭. ಜೀವಿ ಪ್ರಾಣದೇವರ ದೇವಾಲಯ, ಬಾಗೂರು



೫೭. ಅ. ಗರ್ಭಗೃಹದ ಜೀವಿ ಪ್ರಾಣದೇವ ಮೂರ್ತಿಶಿಲ್ಪ



೬. ಕೋಡಿರಾಮಲಿಂಗೇಶ್ವರ ದೇವಾಲಯ, ಕಂಗುವಳ್ಳಿ



೬. ಅ. ನವರಂಗ



೭. ಕಲ್ಲೇದೇವರ ದೇವಾಲಯ, ಶಿವನೇಕಟ್ಟೇ



೭. ಅ. ಗರ್ಭಗೃಹದ ಶಿವಲಿಂಗ



೭. ಆ. ದೇವಾಲಯದ ಹೊರಬಾಗದಲ್ಲಿರುವ ನಂದಿ ವಿಗ್ರಹ



೮. ಹನುಮಂತ ದೇವರ ದೇವಾಲಯ, ಬೋಕಿಕೆರೆ



೬. ಹನುಮಂತ ದೇವಾಲಯ, ಅತ್ತಿಗಟ್ಟ



೬. ಅ. ಹನುಮಂತ ಮೂರ್ತಿಶಿಲ್ಪ



೧೦. ಈಶ್ವರ ದೇವಾಲಯ, ಚಿಕ್ಕಯ್ಯಗಟ್ಟಿ




೧೦. ಅ. ನವರಂಗ



೧೦. ಆ. ನವರಂಗದಲ್ಲಿನ ಕಂಬ



೧೦. ಇ. ಗರ್ಭಗೃಹದ ಶಿವಲಿಂಗ



೧೦. ಈ. ನವರಂಗದಲ್ಲಿನ ಚನ್ನಕೇಶವ ಮೂರ್ತಿಶಿಲ್ಪ



೧೦. ಉ. ದೇವಾಲಯದ ಹೊರಬಾಗದಲ್ಲಿರುವ ಭೈರವ ಮೂರ್ತಿಶಿಲ್ಪ



೧೧. ಈಶ್ವರ ದೇವಾಲಯ, ಆನಿವಾಳ



೧೧. ಅ. ಗರ್ಭಗೃಹದ ಶಿವಲಿಂಗ



೧೨. ಭೈರವ ದೇವಾಲಯ, ಭೈರವನ ಬೆಟ್ಟ, ಹೊಸದುರ್ಗ



೧೨. ಅ. ಗರ್ಭಗೃಹದಲ್ಲಿರುವ ಭೈರವ ಮೂರ್ತಿಶಿಲ್ಪ